ಬೈರಹಳ್ಳಿ ಸರ್ವೆ



ಗೊರೂರು ರಾಮಸ್ವಾಮಿ ಅಯ್ಯಂಗಾರ್

ಬೈಲಹಳ್ಳಿ ಸರ್ವೆ

ಗೊರೂರು ರಾಮಸ್ವಾಮಿ ಅಯ್ಯಂಗಾರ್

ಐಬಿಎಚ್ ಪ್ರಕಾಶನ
ಗಾಂಧಿನಗರ, ಬೆಂಗಳೂರು-9

BYLAHALLI SURVEY: A Humorous Essays by Gorur Ramaswamy
Iyengar Published by G. K. Ananthram for IBH Prakashana,
Gandhinagar, Bangalore—560 009.

1981

ಬೆಲೆ : ರೂ. 6-00

ಪ್ರಕಾಶಕರು :
ಜಿ. ಕೆ. ಅನಂತರಾವ್
ಐಬಿಎಚ್ ಪ್ರಕಾಶನ,
ಗಾಂಧಿನಗರ, ಬೆಂಗಳೂರು-560 009

ಮುದ್ರಕರು :
ಫ. ಶಿ. ಭಾಂಡಗೆ
ತ್ವರಿತ ಮುದ್ರಣ
ಗಂಗಾಪೂರಪೇಟ, ಗದಗ-582 101

೧

ನಮ್ಮ ಊರು ಜೋಡಿದಾರರು ತಮ್ಮ ಮನೆ ಬಾಗಿಲು ಜಗುಲಿಯ ಮೇಲೆ ಎಲೆ ಅಡಿಕೆ ಅಗಿಯುತ್ತಾ ಕುಳಿತಿದ್ದರು. ಜೋಡಿದಾರರಿಗೆ ಎಲೆ, ಅಡಿಕೆಯನ್ನು ಕಂಡರೆ ಇಷ್ಟ. ಆಹಾರವಿಲ್ಲದಿದ್ದ ದಿನ ಅದು ಆಹಾರ; ಆಹಾರ ಹೆಚ್ಚಾದ ದಿನ ಅದು ಮದ್ದು. ಅವರಿಗೆ ನಿತ್ಯ ಅರ್ಧಕಟ್ಟು ವಿಳ್ಳೆದೆಲೆ ಬೇಕಾಗುತ್ತಿದ್ದಿತು. "ಬ್ರಾಹ್ಮಣಾರ್ಥ" ಮಾಡಿದ ದಿನದಲ್ಲಿಯಂತೂ ಒಂದು ಕಟ್ಟು–ರಾತ್ರಿ ಊಟವಿಲ್ಲದುದರಿಂದ.ಅದರ ಬದಲಿಗೆ ಅರ್ಧಕಟ್ಟು. ಆ ದಿನ ನಾನೂ ಜೋಡಿದಾರರೂ ನಮ್ಮೂರ ಶಿಂಗ್ಲಾಚಾರಿಯ ಮನೆಯಲ್ಲಿ ಶ್ರಾದ್ಧದ ದಿವಸ ಮೊದಲ ಪಂಕ್ತಿಗೆ ಊಟಮಾಡಿ, ಜೋಡಿದಾರರ ಮನೆಯ ಜಗುಲಿಯ ಮೇಲೆ ಮಾತನಾಡುತ್ತಾ ಕುಳಿತಿದ್ದೆವು. ಜತೆಯಲ್ಲಿ ನಾಣಿಯೂ ಇದ್ದನು. ನಾಣಿಯು ಪದ್ಧತಿಯಂತೆ ಜೋಡಿದಾರರ ಮಗ್ಗಲಲ್ಲಿ ಕುಳಿತು ಬಹಳ ಬಿರುಸಿನಿಂದಲೂ ಉತ್ಸಾಹದಿಂದಲೂ ಎಲೆಗೆ ಸುಣ್ಣವನ್ನು ಹಾಕಿ ಮಡಿಸಿಕೊಡುತ್ತಿದ್ದನು. ಆಗಾಗ ಎಡ ಅಂಗೈಗೆ ಸುಣ್ಣವನ್ನು ಹಚ್ಚಿಕೊಂಡು ಅದರ ಮೇಲೆ ಹೊಗೆಸೊಪ್ಪನ್ನು ತೀಡಿ ಜೋಡಿದಾರರಿಗೆ ಕೊಡುತ್ತಿದ್ದನು. ಜೋಡಿದಾರರು ಮಾತನಾಡುತ್ತಾ ಮಧ್ಯೆ ಮಧ್ಯೆ ಹೊಗೆಸೊಪ್ಪಿನ ರಸವು ದಾರಿ ತಪ್ಪಿ ಗಂಟಲಿನೊಳಕ್ಕೆ ಹೋದಾಗ ಪದೇ ಪದೇ ಕೆಮ್ಮುತ್ತಿದ್ದರು. ಅದನ್ನು ನೋಡಿ ನಾಣಿಯು ಮನಸ್ಸಿನಲ್ಲೇ ನಗುತ್ತಿದ್ದನು. ಜೋಡಿದಾರರು ಮಾತಿನ ಜ್ಞಾನದಲ್ಲಿ ಮುವ್ವತ್ತು ನಲವತ್ತು ಎಲೆಗಳನ್ನು ಆಗಲೇ ಅಗಿದಿದ್ದರು. ಮತ್ತೂ ಮತ್ತೂ ನಾಣಿಯ ಕಡೆ ಕೈ ನೀಡುತ್ತಲೇ ಇದ್ದರು. ನಾಣಿಯ ಮುಂದೆ ಇದ್ದ ಎಲೆಗಳೆಲ್ಲ ಮುಗಿದುವು. ಜೋಡಿದಾರರು "ಅಲ್ಲಯ್ಯ ನಾಣಿ, ಬೈಲಹಳ್ಳಿಯನ್ನಂತೂ ಕೊಂಡುಕೊಂಡದ್ದಾಯಿತು. ಅದನ್ನು ಸರ್ವೆಮಾಡಿಸಿಯಾದರೂ ಕ್ರಮಪಡಿಸೋಣವೆಂದರೆ ಸರ್ಕಾರದವರು ಇದುವರೆಗೆ ಮೋಜಿನಿದಾರರನ್ನೂ ಕಳುಹಿಸಲಿಲ್ಲ. ಬಿತ್ತನೆಯ ಕಾಲ ಬೇರೆ ಬರ್ತಾ ಇದೆ. ಮೋಜಿನಿದಾರರು ಯಾವತ್ತು ಬರುತ್ತಾರೋ ಗೊತ್ತಿಲ್ಲ" ಎಂದರು. ನಾಣಿಯು "ಇವತ್ತು ನಾಳೆ ಇಂಡಾರ್ಸ್ಸು ಬರಬಹುದು, ಯಜಮಾನರೇ" ಎಂದನು. ಜೋಡಿದಾರರು "ಬೈಲಹಳ್ಳಿಗೆ ಏನಾದರೂ ಇಂಡಾರ್ಸ್ಸು ಬಂದಿದೆಯೋ ಎಂದರೆ ಪಟೇಲನೂ ಬರಲಿಲ್ಲ. ನಾಳೆ ಸರ್ವೆ ಆಫೀಸಿಗೆ ಇನ್ನೊಂದು ಕಾಗದವನ್ನಾದರೂ ಬರೆಯಬೇಕು" ಎಂದರು.

ನಾಣಿಯು "ಎಲೆ ಮುಗಿಯಿತು. ಇನ್ನು ಸ್ವಲ್ಪ ಒಳಗಿನಿಂದ ತರಿಸಲೇ, ಯಜಮಾನರೇ" ಎಂದನು. ಜೋಡಿದಾರರು "ಹುಂ, ತರಿಸು, ಬ್ರಾಹ್ಮಣಾರ್ಥ ಮಾಡಿದ ದಿನವಂತೂ ಎಷ್ಟು ಎಲೆ ಅಗಿದರೂ ಬಾಯಾರಿಕೆ ಬೇರೆ ಕಡಿಮೆಯಾಗುವಂತೆ ಇಲ್ಲ" ಎಂದರು. ಅನಂತರ ನನ್ನ ಕಡೆ ನೋಡಿ "ನೀವೆಲ್ಲ ಸಾಮಾನ್ಯ ವಲ್ಲವಯ್ಯ. ನಿಮ್ಮನ್ನು ಕಂಡರೆ ಬಹಳ ಎಚ್ಚರಿಕೆಯಿಂದ ಇರಬೇಕು. ಬೆಳಿಗ್ಗೆ ಶಿಂಗ್ಲಾಚಾರಿಯು ಅಂಗಡಿಯಲ್ಲಿ ಸಾಮಾನನ್ನು ಕೊಂಡುದನ್ನು ಕಂಡುದರಿಂದ ಇಷ್ಟೆಲ್ಲ ವಿನೋದ ಮಾಡಿಬಿಟ್ಟೆ" ಎಂದರು. ನಾಣಿಯೂ ನಕ್ಕನು. ಜೋಡಿದಾರರೂ ನಕ್ಕರು. ನನಗೂ ಬಹಳ ನಗು ಬಂತು. ನಮ್ಮ ನಗುವಿಗೆ ಆ ಮಧ್ಯಾಹ್ನ ನಡೆದಿದ್ದ ಈ ಮುಂದಲ ಸಂಗತಿಯು ಕಾರಣವಾಗಿತ್ತು—ಜೋಡಿದಾರರು ಸ್ವಲ್ಪ ದೊಡ್ಡ ಹೊಟ್ಟೆಯವರು. ಅವರಿಗೆ ಉಪವಾಸ ಮಾಡುವುದಾಗಲೀ ಅಥವಾ ಒಂದು ಹೊತ್ತು ಊಟ ಮಾಡುವುದಾಗಲೀ ಬಹಳ ಕಷ್ಟ ಕೊಡುವ ಸಾಧನೆಗಳಾಗಿದ್ದುವು. ಆದರೂ ಅವರು ಪ್ರತಿ ಏಕಾದಶಿಯ ದಿವಸವೂ ಉಪವಾಸ ಮಾಡದೇ ಇರುತ್ತಿರಲಿಲ್ಲ. ಅವರಿಗೆ ಏಕಾದಶಿಯ ರಾತ್ರಿ ಹಸಿವೆಯ ಬಾಧೆಯಿಂದ ನಿದ್ರೆ ಬರುತ್ತಿರಲಿಲ್ಲ. ಏಕಾದಶಿಯ ದಿನ ಅರ್ಧರಾತ್ರಿಗೇ ಅವರು ಎದ್ದು ಮನೆಯವರನ್ನೆಲ್ಲ ಎಬ್ಬಿಸಿ ಅಡಿಗೆ ಮಾಡಿಸಿ, ದೇವರ ಪೂಜೆ ಮಾಡಿ, ರಾತ್ರಿ ರಾತ್ರಿಯೂ ಮನೆಯವರೂ ತಾವೂ ತೂಗಾಡಿಸುತ್ತಾ ಕುಳಿತಿದ್ದು ದ್ವಾದಶಿಯ ತಿಥಿಯು ಬಂದ ಕೂಡಲೆ ಸಾಧ್ಯವಾದಷ್ಟು ಬೇಗ ಊಟಮಾಡುತ್ತಿದ್ದರು. ನಮ್ಮ ಊರಿನಲ್ಲಿ ಎಲ್ಲಾದರೂ ಅರ್ಧರಾತ್ರಿಯಲ್ಲಿ ಗಂಟೆಯ ಸದ್ದು ಕೇಳಿಸಿದರೆ ಅದು ಜೋಡಿದಾರರು ಮಾಡುತ್ತಿರುವ ದೇವರ ಪೂಜೆಯೆಂದು ಕೂಡಲೆ ಗೊತ್ತಾಗುವುದು.

ಜೋಡಿದಾರರು ಶ್ರಾದ್ಧದಲ್ಲಿ ಬ್ರಾಹ್ಮಣಾರ್ಥ ಮಾಡಿದರೂ ಅವರಿಗೆ ಇದೇ ಕಷ್ಟವುಂಟಾಗುತ್ತಿದ್ದಿತು. ಶ್ರಾದ್ಧದ ಮಂತ್ರದಲ್ಲಿಯೇನೋ ಬ್ರಾಹ್ಮಣರು ರಾತ್ರಿ ಹಸಿವಾಗದಂತೆ ಊಟಮಾಡಬೇಕೆಂದು ಹೇಳಿದೆ. ಕೆಲವರು ರಾತ್ರಿ ಯಾಕೆ ಮರು ದಿವಸವೂ ಹಸಿವಾಗದಂತೆ ಊಟಮಾಡುತ್ತಾರೆ. ನಮ್ಮ ಸ್ನೇಹಿತ ಭಟ್ಟನಿಗೆ ಜ್ವರ ಬಂದು ನಿತ್ರಾಣವಾಗಿತ್ತಲ್ಲ, ಆಗ ನಾವೆಲ್ಲಾ ಬೇಡವೆಂದರೂ ಕೇಳದೆ ಏಳು ಎಂಟು ಬ್ರಾಹ್ಮಣಾರ್ಥ ಹೊಡೆದ. ಅಲ್ಲಿ ಸಿಕ್ಕಿದ ತುಪ್ಪದ ದೊನ್ನೆಗಳೇನು, ವಡೆಗಳೇನು, ಯಾವ ಟಾನಿಕ್ಕೂ ಅವುಗಳಿಗೆ ಸಮಾನವಾಗುವುದಿಲ್ಲ. ಭಟ್ಟನು ಬ್ರಾಹ್ಮಣಾರ್ಥವನ್ನು ಮಾಡಿ ಕುದುರೆಯಂತಾದನು. ಅಲ್ಲಿಂದೀಚೆಗೆ ಅವನಿಗೆ ಜ್ವರ ಬಂದಾಗ 'ಶ್ರಾದ್ಧದ ತುಪ್ಪದ ದೊನ್ನೆ ಸಿಕ್ಕಿದರೆ ಆ ಜ್ವರವು ಮಾಯವಾಗು

ವುದೆಂದು' ನಾಣಿ ಹೇಳುತ್ತಾನೆ. ನಮ್ಮೂರ ಮೇಷ್ಟ್ರು ದಿನ ಬಿಟ್ಟು ದಿನ ತಿಂಗಳಿಗೆ ಹನ್ನೆರಡು ಹದಿನೈದು ಶ್ರಾದ್ಧದ ಊಟ ಹೊಡೆಯುತ್ತಿದ್ದರು. ಆ ತುಪ್ಪ ವಡೆಗಳ ಜೋರು ಹೆಚ್ಚಾಗಿ ಅರವತ್ತನೆಯ ವಯಸ್ಸಿನಲ್ಲಿ ಕೂಡ ದಿವಸಕ್ಕೆ ೩೦ ತೆಂಗಿನ ಮರಗಳನ್ನು ಹತ್ತಿ ಕಾಯಿಗಳನ್ನು ಉದುರಿಸುತ್ತಿದ್ದರು. ಆದರೆ ನಮ್ಮ ಜೋಡಿದಾರರು ಈ ತರಗತಿಗೆ ಸೇರಿದವರಾಗಿರಲಿಲ್ಲ.

ಜೋಡಿದಾರರು ಹಿಂದೆ ಎಷ್ಟೋ ಸಲ ಶ್ರಾದ್ಧದಲ್ಲಿ ಊಟಮಾಡಿ ಚಿತ್ರಹಿಂಸೆ ಅನುಭವಿಸಿದ್ದರು. ಒಂದು ಸಲವಂತೂ ರಾತ್ರಿ ಅಸಾಧ್ಯವಾದ ಹಸಿವೆಯಾಗಿ ಒಂದು ಕಟ್ಟು ವೀಳೆದೆಲೆ ಮತ್ತು ಅರ್ಧಸೇರು ಅಡಿಕೆಯನ್ನು ಅಗಿದು ನುಂಗಿದ್ದರು. (ಎಲೆ ಅಡಿಕೆಗೆ ನಿಯಮವಿಲ್ಲ. ಶ್ರಾದ್ಧದಲ್ಲಿ ಮೊದಲ ಸಾಲಿನಲ್ಲಿ ಊಟ ಮಾಡಿದ ಮೇಲೂ ಅದನ್ನು "ತಿನ್ನಬಹುದು") ಆಮೇಲೆ ಬೇಕಾದ್ದಾದರೂ ಮತ್ತೆ ಬ್ರಾಹ್ಮಣಾರ್ಥ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದರು. ಆದರೆ ಪ್ರತಿಜ್ಞೆಗಳನ್ನು ಮಾಡುವುದು ಎಷ್ಟು ಸುಲಭವೋ ಅವುಗಳಂತೆ ಆಚರಿಸುವುದು ಅಷ್ಟು ಸುಲಭವಲ್ಲ. ಅಲ್ಲದೆ ಶ್ರಾದ್ಧ ಮಾಡುವವನು 'ಶ್ರಾದ್ಧದಲ್ಲಿ ಇದ್ದು ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕೆಂದು' ಪ್ರಾರ್ಥಿಸಿದರೆ 'ಆಗೋದಿಲ್ಲ' ಎನ್ನುವುದು ಬ್ರಾಹ್ಮಣಿಕೆಯಲ್ಲ. ಆದುದರಿಂದ ಆ ದಿವಸ ಶಿಂಗ್ಲಾಚಾರಿಯು ಪ್ರಾರ್ಥಿಸಿದಾಗ ನಾನೂ, ಇಷ್ಟವಿಲ್ಲದಿದ್ದರೂ ಜೋಡಿದಾರರೂ ಅವನ ಮನೆಯಲ್ಲಿ ಶ್ರಾದ್ಧದ ಬ್ರಾಹ್ಮಣಾರ್ಥಕ್ಕೆ ಇರಲು ಒಪ್ಪಿಕೊಂಡೆವು.

ಶಿಂಗ್ಲಾಚಾರಿಯು ಮನೆಯಲ್ಲಿ ಬ್ರಾಹ್ಮಣಾರ್ಥಕ್ಕೆ ಇರಬೇಕಾದರೆ ಸ್ವಲ್ಪ ಧೈರ್ಯವೇ ಇರಬೇಕು. ಶಿಂಗ್ಲಾಚಾರಿ ಎಲ್ಲಾದರಲ್ಲೂ ಬಹಳ ಹಿಡಿತ. ಶ್ರಾದ್ಧದ ದಿವಸ, ಬ್ರಾಹ್ಮಣರಿಗೆ ಬಡಿಸುವುದರಲ್ಲೂ, ಅಡಿಗೆ ಮಾಡಿಸುವುದರಲ್ಲೂ ಅವನ ಹಿಡಿತವು ಕಡಿಮೆಯಾವುದಾದರೂ ಪೂರ್ತಾ ಮರೆಯಾಗುವುದಿಲ್ಲ. ನಮ್ಮ ಊರಿನಲ್ಲಿ ದೇವಸ್ಥಾನದಲ್ಲಿ ಮಂಗಳಾರತಿ ಆದ ಮೇಲೆ ದೇವರ ಪ್ರಸಾದ (ಹೂವಲ್ಲ) ವಿನಿಯೋಗವಾಗಬೇಕಾದರೆ ಶಿಂಗ್ಲಾಚಾರಿ ಬಂದೇ ತೀರಬೇಕು. ಒಂದೇ ಕಾಸಿನ ಸಕ್ಕರೆಯನ್ನು ಸಾವಿರ ಜನಕ್ಕಾದರೂ ಶಿಂಗ್ಲಾಚಾರಿ ಹಂಚುತ್ತಾನೆ.

ಶಿಂಗ್ಲಾಚಾರಿಯು ಮನೆಯು ಬ್ರಾಹ್ಮಣಾರ್ಥ ಇಷ್ಟರಮಟ್ಟಿಗೆ ಎನ್ನುವುದು ನನಗೆ ಗೊತ್ತಿದ್ದಿತು. ಆದರೆ ಜೋಡಿದಾರರಿಗೆ ಆ ವಿಚಾರವೆಲ್ಲಾ ತಿಳಿದಿರಲಿಲ್ಲ. ಶ್ರಾದ್ಧದ ದಿವಸ ಬೆಳಿಗ್ಗೆ ನಾನು ಅಂಗಡಿಗೆ ಹೋಗಿದ್ದಾಗ ಶಿಂಗ್ಲಾಚಾರಿಯು ಅಲ್ಲಿದ್ದನು. ಶಿಂಗ್ಲಾಚಾರಿಯು ಅರ್ಧಸೇರು ಉದ್ದು, ಒಂದು ಪಾವು ರವೆ, ಒಂದಾಣೆ ಬೆಲ್ಲ ಇವುಗಳನ್ನೆಲ್ಲಾ ತೆಗೆದುಕೊಳ್ಳುತ್ತಿದ್ದನು. ನಾನು ಅವನನ್ನು

ಕುರಿತು "ಏನಯ್ಯ ಅರ್ಧಸೇರು ಉದ್ದು ಯಾತಕ್ಕೆ ?" ಎಂದೆ. ಶಿಂಗ್ಲಾಚಾರಿಯು "ಇದೇನಯ್ಯ ಶ್ರಾದ್ಧಕ್ಕೆ ಪೂರ್ವ ಪಂಕ್ತಿಗೆ ಆಹ್ವಾನಿತ ಬ್ರಾಹ್ಮಣನಾಗಿ ಉದ್ದು ಯಾತಕ್ಕೆ ಎಂದು ಕೇಳುತ್ತೀಯೆ ? ಮರೆತು ಕಾಫಿಗೀಫಿ ಕುಡಿದುಬಿಟ್ಟೆಯೇನಯ್ಯ" ಎಂಬುದಾಗಿ ಸ್ವಲ್ಪ ಗಾಬರಿಯಿಂದ ಕೇಳಿದನು. ನಾನು 'ಕಾಫಿ ಕುಡಿದಿಲ್ಲವಯ್ಯ ಅದಕ್ಕೆ ಬೆಳಗ್ಗಿನಿಂದ ಹೇಗೆ ಹೇಗೊ ಆಗುತ್ತಿದೆ. ಆದರೆ ಅರ್ಧಸೇರು ಉದ್ದು ಒಂದಾಣೆ ಬೆಲ್ಲದಲ್ಲಿ ನೀನು ಶ್ರಾದ್ಧಮಾಡಿದರೆ ನಮಗೆ ಚೆನ್ನಾಗಿಯೇ ಹೊಟ್ಟೆ ತುಂಬುತ್ತೆ" ಎಂದೆನು. ಶಿಂಗ್ಲಾಚಾರಿಯು 'ಎಲ್ಲಾ ಕಂಡಿದೀನಿ ಬಾರೊ, ತಿಂಗಳಿಗೆ ಮೂರು ಶ್ರಾದ್ಧ ಬರ್ತಿದ್ರೆ, ನಾನು ಎಲ್ಲಿಂದಲೋ ಮಾಡೋದು. ನೀನು ಮಹಾ ತಿನ್ನೋದು ಅಷ್ಟರಲ್ಲೇ ಇದೆ. ಅರ್ಧಸೇರು ಉದ್ದಿಗೆ ಹನ್ನೆರಡು ವಡೆ ಆಗುತ್ತೆ. ನಿನಗೆ ನಾಲ್ಕು, ಜೋಡಿದಾರರಿಗೆ ನಾಲ್ಕು, ಮನೆಗೆ ನಾಲ್ಕು. ಸಾಕು ಸಾಕು. ನಾಲ್ಕು ವಡೆಗಳಿಗಿಂತ ಹೆಚ್ಚಾಗಿ ತಿನ್ನೋದಕ್ಕೆ ನಿಮ್ಮಂತಹ ಕೈಲಿ ಹರಿಯದವರ ಹಣೇಲಿ ಬರೆದಿಲ್ಲ" ಎಂದು ಹೇಳಿಕೊಂಡು ಹೊರಟುಹೋದನು.

ಆ ದಿವಸ ಹೋಮ, ಹವನ, ಎಲ್ಲಾ ಮುಗಿದು ಬ್ರಾಹ್ಮಣರು ಊಟಕ್ಕೆ ಕುಳಿತುಕೊಳ್ಳುವ ಹೊತ್ತಿಗೆ ಎರಡು ಗಂಟೆಯಾಯಿತು. ಶಿಂಗ್ಲಾಚಾರಿಯು ಶ್ರಾದ್ಧದ ಪದ್ಧತಿಯಂತೆ ಮಾಡಿದ ಅಡಿಗೆಗಳನ್ನೆಲ್ಲಾ ಮೊದಲೆ ಎಲೆಗಳಿಗೆ ಬಡಿಸಿ ಮಂತ್ರವನ್ನು ಪಠಿಸಿ "ರಾತ್ರಿ ಹಸಿವಾಗದ ಹಾಗೆ ಊಟ ಮಾಡಬೇಕೆಂದು" ಪ್ರಾರ್ಥಿಸಿದನು. ಊಟಕ್ಕೆ ಪ್ರಾರಂಭಿಸಿದನಂತರ ನಾನು ಎಲೆಯಲ್ಲಿದ್ದ ಎರಡು ವಡೆಗಳನ್ನು ಮೊದಲು ತಿಂದೆನು. ಜೋಡಿದಾರರ ಎಲೆಯಲ್ಲಿ ಎರಡು ಇತ್ತು. ಒಟ್ಟು ನಾಲ್ಕು ಆಯಿತು. ಇನ್ನು ಉಳಿದಿರುವುದು ಎಂಟು ಎಂಬುದಾಗಿ ಲೆಕ್ಕ ಹಾಕಿಕೊಂಡೆನು. ಊಟಕ್ಕೆ ಪ್ರಾರಂಭಿಸಿದುದೇ ಹೊತ್ತಾದುದರಿಂದ ಜೋಡಿದಾರರು ನಿಧಾನವಾಗಿ ಆಯಾಸದಿಂದ ಊಟ ಮಾಡುತ್ತಿದ್ದರು. ನಾನು ಎಲೆಯಲ್ಲಿದ್ದ ಅನ್ನವನ್ನು ಬೇಗ ಬೇಗ ಮುಗಿಸಿದೆ. ಶಿಂಗ್ಲಾಚಾರಿಯು ಮತ್ತೆರಡು ವಡೆಗಳನ್ನು ತಂದು ಹಾಕಿದನು. ನಾನು ಅದರ ಕೆಲಸವನ್ನೂ ಪೂರೈಸಿದೆ. ಶಿಂಗ್ಲಾಚಾರಿಯು "ಸ್ವಾಮಿಗೆ (ನಾವು ಸ್ನೇಹಿತರಾದುದರಿಂದ ಉಳಿದ ಕಾಲದಲ್ಲಿ ನೀನು, ನಾನು ಎಂದು ಮಾತನಾಡುತ್ತಿದ್ದರೂ, ಶ್ರಾದ್ಧದ ದಿವಸ ನಾವು ಪಿತೃಗಳ ಸ್ಥಾನದಲ್ಲಿ ಕುಳಿತಿದ್ದುದರಿಂದ ಶಿಂಗ್ಲಾಚಾರಿಯು ನನ್ನನ್ನು ತಾವು ಸ್ವಾಮಿಗಳು ಎಂದೇ ಕರೆಯಬೇಕಾಗಿದ್ದಿತು) ಮತ್ತೇನಾದರೂ ಇಷ್ಟವೆ ?" ಎಂದು ಕೇಳಿದನು. ನಾನು "ವಡೆ ತೆಗೆದುಕೊಂಡು ಬನ್ನಿ, ಸ್ವಾಮಿ" ಎಂದೆ. ಶಿಂಗ್ಲಾಚಾರಿಯು ಮತ್ತೆರಡು ವಡೆಗಳನ್ನು ತಂದು ಹಾಕಿದನು. ನನಗೆ ಅದರಿಂದಲೂ ತೃಪ್ತಿ

ಯಾಗಲಿಲ್ಲ. ಆಗ ಶಿಂಗ್ಲಾಚಾರಿಯು ಒಳಕ್ಕೆ ಹೋಗಿ ಉಳಿದಿದ್ದ ನಾಲ್ಕು ವಡೆಗಳನ್ನೂ ತಂದು ಹಾಕಿದನು. ನಾನು ಮನಸ್ಸಿನಲ್ಲಿ ಲೆಕ್ಕಮಾಡಿ ನೋಡಿದೆ. ಜೋಡಿದಾರರ ಎಲೆಯಲ್ಲಿ ಇದ್ದದ್ದು ಎರಡು, ನಾನು ತಿಂದಿದ್ದುದು ಹತ್ತು–ಒಟ್ಟು ಹನ್ನೆರಡು. ಅನಂತರ ಶಿಂಗ್ಲಾಚಾರಿಯು ಮುಖವನ್ನು ನೋಡಿದೆ. ಶಿಂಗ್ಲಾಚಾರಿಯು, ಮತ್ತೆ ಇವನು ಎಲ್ಲಿ ವಡೆ ಕೇಳುತ್ತಾನೋ ಎಂದು ಗಾಬರಿಗೊಂಡಿದ್ದನು. ಇನ್ನು ವಡೆಗಳು ಒಳಗೆ ಇರಲಾರವೆಂದು ನನಗೆ ಅವನ ಮುಖವನ್ನು ನೋಡಿದೊಡನೆಯೇ ನಂಬಿಕೆಯಾಯಿತು. ಆದರೂ ಅನುಮಾನವನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ "ಇನ್ನೊಂದು ವಡೆ" ಎಂದೆ. ಶಿಂಗ್ಲಾಚಾರಿಯು ಸ್ವಲ್ಪ ಬೆಚ್ಚಿಬಿದ್ದು ನನ್ನ ಮಾತು ಕೇಳಿಸದವನಂತೆ ಸುಮ್ಮನಿದ್ದನು.

ಒಂದು ಗಳಿಗೆಯ ನಂತರ ಶಿಂಗ್ಲಾಚಾರಿಯು ಜೋಡಿದಾರರನ್ನು "ತಮಗೆ ಏನಾದರೂ ಇಷ್ಟವೇ ?" ಎಂಬುದಾಗಿ ಕೇಳಿದನು. ಜೋಡಿದಾರರು ವಡೆಯನ್ನು ಕೇಳುವುದಿಲ್ಲವೆಂದು ಅವನಿಗೆ ಚೆನ್ನಾಗಿ ನಂಬಿಕೆಯಾಗಿದ್ದಿತು. ಯಾಕೆಂದರೆ ಎಲೆಯಲ್ಲಿದ್ದ ಎರಡು ವಡೆಗಳನ್ನೇ ಅವರು ಬಹಳ ಕಷ್ಟಪಟ್ಟು ತಿಂದಿದ್ದರು. ಶಿಂಗ್ಲಾಚಾರಿಯ ಮಾತನ್ನು ಕೇಳಿ ಜೋಡಿದಾರರು "ಬೇಡಯ್ಯ ಮಹಾರಾಯಾ, ಬಹಳ ಸಂಕಟವಾಗಿದೆ. ಎಲೆಯಲ್ಲಿರುವುದನ್ನು ಮುಗಿಸಿದರೆ ಸಾಕಾಗಿದೆ" ಎಂದರು. ನನಗೆ ನಾನು ಮಾಡಿದ ತಂತ್ರವೆಲ್ಲಾ ಕೆಟ್ಟುಹೋಯಿತಲ್ಲಾ ಎನ್ನಿಸಿತು. ಆದರೂ ಒಂದು ಕೈ ನೋಡೋಣವೆಂದು "ಹಾಗಲ್ಲ ಯಜಮಾನರೆ, ಈಗ ಹೊಟ್ಟೆ ತುಂಬಿದಂತೆ ತೋರಿದರೂ ಇನ್ನೊಂದು ಗಳಿಗೆಗೆ ಹಸಿವಾಗುತ್ತೆ. ಊಟ ಹೊತ್ತಾದ ಆಯಾಸದಿಂದ ನಿಮಗೆ ಹಾಗೆ ತೋರುತ್ತೆ. ನಾನು ನೋಡಿ. ಹೊಟ್ಟೆ ತುಂಬಿತೆಂದು ತೋರಿದರೂ ಒಂದು ವಡೆ ಕಂಡೂ ಕಂಡೂ ಹೆಚ್ಚಾಗಿ 'ಹಾಕಿದೆ.' ನಾಳೆ ಇಷ್ಟು ಹೊತ್ತಿನವರೆಗೆ ಹಸಿದುಕೊಂಡಿರಬೇಕಲ್ಲ, ಯಜಮಾನರೆ" ಎಂದೆ. ಹಸಿವಿನ ಮಾತನ್ನು ಕೇಳಿ ಜೋಡಿದಾರರಿಗೆ ಗಾಬರಿಯಾಯಿತು. ಅವರು "ನೀನು ಹೇಳುವುದು ನಿಶ್ಚಯ" ಎಂದರು. ನಮ್ಮ ಮಾತನ್ನು ಕೇಳುತ್ತಿದ್ದ ಶಿಂಗ್ಲಾಚಾರಿಯು ಕಾತರನಾಗಿ "ಒಂದು ರವೆ ಉಂಡೆ ಸ್ವೀಕರಿಸಬಹುದಲ್ಲಾ ಸ್ವಾಮಿನ್" ಎಂದು ಕೇಳಿದನು. ಜೋಡಿದಾರರು 'ರವೆ ಉಂಡೆ ಬೇಡಯ್ಯ. ಮುಂಡೇದು ಬೇಗ ಜೀರ್ಣವಾಗೋದಿಲ್ಲ. ಒಂದು ವಡೆಯನ್ನೇ ತೆಗೆದುಕೊಂಡು ಬಾ' ಎಂದರು. ಶಿಂಗ್ಲಾಚಾರಿಯು ಒಳಕ್ಕೆ ಹೋದನು ಬರಿಯ ಕೈಯಲ್ಲೇ ಹೊರಕ್ಕೆ ಬಂದನು. ಜೋಡಿದಾರರು ಅವನನ್ನು ನೋಡದೆಯೇ "ಒಂದೇ ಚೂರು ಸಾಕಯ್ಯ, ರಾಮುವಿನ ಬಲವಂತಕ್ಕೆ ತಿನ್ನುತ್ತೇನೆ. ಹೊಟ್ಟೆ

ತುಂಬಿಹೋಯಿತು" ಎಂದರು. ಶಿಂಗ್ಲಾಚಾರಿಯು ಉದ್ದಕ್ಕೂ ದಣ್ಣಕ್ಕಿ "ಕ್ಷಮಿಸಬೇಕು ಸ್ವಾಮಿ. ಇನ್ನು ನನ್ನಿಂದ ಸಾಧ್ಯವಿಲ್ಲ" ಎಂದನು.

ಅದೇ ವಿಚಾರವನ್ನೇ ಕುರಿತು ನಾವು ಮಾತನಾಡುತ್ತಾ ನಗುತ್ತಿರುವಾಗ ಬೈಲಹಳ್ಳಿ ಪಟೇಲ್ ಸುಬ್ಬೇಗೌಡನು ಬರುತ್ತಿರುವುದು ದೂರದಲ್ಲಿ ಕಂಡಿತು. ಪಟೇಲ್ ಸುಬ್ಬೇಗೌಡನಿಗೆ ಹೆಂಡವು ಎಷ್ಟರಮಟ್ಟಿಗೆ ಮೈಗೆ ಒಗ್ಗಿದ್ದಿತೆಂದರೆ ಎಷ್ಟು ಕುಡಿದರೂ ಅವನಿಗೆ ಪ್ರಜ್ಞೆಯೇ ತಪ್ಪುತ್ತಿರಲಿಲ್ಲ. ಸುಬ್ಬೇಗೌಡ ಶಕ್ತನಾಗಿ ಕುದುರೆಯ ಹಾಗಿದ್ದಾನೆ. ಚೆನ್ನಾಗಿ ಬೇಸಾಯ ಮಾಡುತ್ತಾನೆ. ಪ್ರಾಮಾಣಿಕನೂ ಹೌದು. ಆದರೆ ಜೋಡಿದಾರರ ಎದುರಿಗೆ ಮಾತ್ರ ಯಾವಾಗಲೂ ಯಾವುದಾದರೂ ರೋಗವಿದ್ದೇ ಇದೆಯೆಂದು ಹೇಳುತ್ತಾನೆ. ಬೈಲಹಳ್ಳಿ ದೇವಸ್ಥಾನದ ಹಿಂದೆಯೇ ಪಟೇಲನ ಮನೆ. ಜೋಡಿದಾರರು ದೇವಸ್ಥಾನದಲ್ಲಿ ಹೋಗಿ ಕುಳಿತುಕೊಂಡಾಗ, ಪಟೇಲನು ಮನೆಯಲ್ಲಿ ಮಾರೀಚನಂತೆ ಕೂಗಾಡುತ್ತಿರುವುದು ಕೇಳಿಸುತ್ತದೆ. ಅವರು ಪಟೇಲನು ಬರಬೇಕೆಂದು ಹೇಳಿ ಕಳುಹಿಸಿದರೆ, ಸುಬ್ಬೇಗೌಡನು ನರಳುತ್ತಾ 'ಎಂಟು ದಿವ್ಸದಿಂದ ಜರ ಸಳಿ. ಹಾಸಿಗೆಗೆ ಬೆನ್ನ ಅಂಟಿಸಿ ಮಲಗಿದ್ದೆ. ಈಗ ದಣಿಗ್ಳು ಕರಸೋ ಹೊತ್ತಿಗೆ ಮಾತ ಮೀರಲಾರ್ದೆ ನರಳ್ಕೊಂಡೇ ಬಂದೆ' ಎಂದು ಹೇಳುತ್ತಾ ಕುಳಿತುಕೊಳ್ಳುತ್ತಿದ್ದನು. ಕೆಲವು ವೇಳೆ ಕೈಯಲ್ಲಿ ದೊಣ್ಣೆಯನ್ನು ಹಿಡಿದುಕೊಂಡು ದನಗಳನ್ನು ಓಡಿಸುತ್ತಾ ಅವುಗಳಷ್ಟೇ ವೇಗವಾಗಿ ತಾನೂ ಓಡುತ್ತಿರುವಾಗ ದೂರದಲ್ಲೆಲ್ಲಾದರೂ ಜೋಡಿದಾರರು ಕಣ್ಣಿಗೆ ಬಿದ್ದರೆ ಆ ಕೋಲನ್ನೇ ಊರಿಕೊಂಡು ಕುಂಟುತ್ತಾ ಅವರ ಕಡೆಗೆ ಬರುತ್ತಿದ್ದನು. ಈಗ ಸುಬ್ಬೇಗೌಡನು ಹೆಂಡವನ್ನು ಕುಡಿದು ಮತ್ತನಾಗಿ ಬರುತ್ತಿದ್ದವನು ಜಗಲಿಯ ಮೇಲೆ ಕುಳಿತಿದ್ದ ಜೋಡಿದಾರರನ್ನು ದೂರದಿಂದಲೇ ಕಂಡು ಹೆಂಡದ ಅಮಲಿನಲ್ಲಿದ್ದರೂ ತಾನು ಅವರೆದುರಿಗೆ ವಹಿಸಬೇಕಾದ ಪಾತ್ರವನ್ನು ಮರೆಯದೆ ಕೋಲನ್ನು ಊರಿಕೊಂಡು ನಿಧಾನವಾಗಿ ಬರಲು ಪ್ರಾರಂಭಿಸಿದನು. ಸೂಕ್ಷ್ಮದೃಷ್ಟಿಯುಳ್ಳ ನಾಣಿಗೆ ಅವನು ಹೆಂಡವನ್ನು ಕುಡಿದಿರುವುದು ಗೊತ್ತಾಗದೆ ಇರಲಿಲ್ಲ. ಅವನು ಸಣ್ಣ ದನಿಯಲ್ಲಿ

"ಕುಡ್ದವ್ನೆ ಬುಡ್ಡಿ ಹೆಂಡ
ದಟ್ಟಿ ದುಡ್ಡೆಲ್ಲಾ ದಂಡ
ಪಡ್ಕಾನೆ ಗಿವನೆ ಮಿಂಡ
ನಂಗೊತ್ತು ಭಾರಿ ಭಂಡ

ಎಂದನು. ಜೋಡಿದಾರರು "ಏನು" ಎಂದರು. ನಾಣಿಯು ಜೋಡಿದಾರರ

ಎದುರಿಗೆ ಪ್ರಾಸದೊಂದಿಗೆ ಮಾತನಾಡುವ ಪದ್ಧತಿಯನ್ನು ಇಟ್ಟುಕೊಂಡಿಲ್ಲ ವಾದುದರಿಂದ "ಏನೋ ಶ್ಲೋಕ ಹೇಳ್ತಾ ಇದ್ದೆ, ಯಜಮಾನರೆ" ಎಂದನು.

ಪಟೇಲನು ಬಂದು ಜೋಡಿದಾರರಿಗೆ ಕೈಮುಗಿದು ದಟ್ಟಿಗೆ ಕೈಹಾಕಿ ಏನನ್ನೊ ಹುಡುಕಲು ಪ್ರಾರಂಭಿಸಿದನು. ಅವನು ಹುಡುಕುತ್ತಿದ್ದುದು ಎಷ್ಟು ಹೊತ್ತಾದರೂ ಅವನಿಗೆ ಸಿಕ್ಕಲಿಲ್ಲ. ಅನಂತರ ಪಟೇಲನು ದಟ್ಟಿಯ ಒಂದು ಕಡೆ ಯನ್ನು ಬಿಚ್ಚಿ ಕೊಡವಿದನು. ಅದರೊಳಗಿಂದ ಒಂದು ಲಕೋಟೆ ಕೆಳಗೆ ಬಿತ್ತು. ಸುಬ್ಬೇಗೌಡನು ಹೆಂಡವನ್ನು ಕುಡಿಯುತ್ತಿದ್ದಾಗ ಹೆಂಡವು ಅವನ ದಟ್ಟಿಯೊಳಕ್ಕೆ ಚೆಲ್ಲಿ ಲಕೋಟೆಯು ಒದ್ದೆಯಾಗಿದ್ದಿತು. ಸುಬ್ಬೇಗೌಡನು ಆ ಒದ್ದೆಯ ಕಾಗದ ವನ್ನು ಜೋಡಿದಾರರ ಕೈಗೆ ಕೊಟ್ಟನು. ಜೋಡಿದಾರರು ಅದನ್ನು ಕೈಯಲ್ಲಿ ತೆಗೆದುಕೊಂಡು "ಇದೇನು ಪ್ರಾರಬ್ಧ. ಈವತ್ತು ಬ್ರಾಹ್ಮಣಾರ್ಥ ಬೇರೆ ಮಾಡಿ ದ್ದೇನೆ" ಎಂದು ಗೊಣಗುಟ್ಟಿದರು. ಸುಬ್ಬೇಗೌಡನು "ಕಾಜಿಗದ ಮೇಲೆ ದಾರೀಲೆ ಮಳೆಹನಿ ಬಿದ್ದಯ್ತೆ ಅಷ್ಟೆ" ಎಂದನು. ಜೋಡಿದಾರರು "ಇವತ್ತು ಮಳೆ ಎಲ್ಲಿ ಬಂತು" ಎಂದುಕೊಂಡು "ಅದೇನು ತೆಗೆದುಕೊಂಡು ಓದಿಹೇಳಯ್ಯ" ಎಂಬುದಾಗಿ ನನಗೆ ಹೇಳಿದರು. ನಾನು ಕೆಳಗೆ ಬಿದ್ದಿದ್ದ ಕಾಗದವನ್ನು ತೆಗೆದು ಬಿಚ್ಚಿನೋಡಿದೆ. ಆ ಕಾಗದದಲ್ಲಿ ಏನೋ ಬರೆದಿದ್ದಿತೆಂಬುದು ನಿಶ್ಚಯ. ಆದರೆ ಹೆಂಡವು ಬಿದ್ದು ಬರವಣಿಗೆಯೆಲ್ಲಾ ಕಲಸಿಹೋಗಿದ್ದುದರಿಂದ ನನಗೆ ಅದನ್ನು ಓದಲು ಸಾಧ್ಯವಿರಲಿಲ್ಲ. ಹೇಗೆ ಹೇಗೆ ನೋಡಿದರೂ ಅಕ್ಷರಗಳು ಕಲಸಿಕೊಂಡು ಮಬ್ಬಾಗಿ ಕಾಣುತ್ತಿದ್ದುವೇ ಹೊರತು ಒಂದಕ್ಷರವಾಗಲಿ ಸ್ಪಷ್ಟವಾಗಿ ಕಾಣು ತ್ತಿರಲಿಲ್ಲ.

ಜೋಡಿದಾರರು "ಯಾಕಯ್ಯ ನಿನಗೂ ಕನ್ನಡಕ ಬೇಕೇನಯ್ಯ. ಈಗಿನ ಕಾಲದ ಹುಡುಗರಿಗಂತೂ ಮುವ್ವತ್ತು ವರ್ಷಕ್ಕೇ ಕನ್ನಡಕ ಬೇಕಾಗುತ್ತೆ" ಎಂದರು. ನಾನು "ಅಲ್ಲ ಯಜಮಾನರೆ, ಇದೇನು ಬರೆದಿದೆಯೋ ಓದುವುದಕ್ಕೇ ಗೊತ್ತಾಗುವುದಿಲ್ಲ" ಎಂದೆ. ಜೋಡಿದಾರರು "ಆ ತಾಲ್ಲೂಕು ಕಛೇಯವರ ಬರವಣಿಗೆ ಗೊತ್ತಾಗಬೇಕಾದರೆ ಬಹಳ ಕಷ್ಟ ಇದೆಯಯ್ಯ. ಆ ದಿವಸ ತಾಲ್ಲೂಕು ಕಛೇರಿಯ ಹೆಡ್ ಮುನ್‌ಷಿಯವರು ಇಲ್ಲಿಗೆ ಬಂದಿದ್ದರಲ್ಲ, ಬೆಂಗಳೂರಿಗೆ ಸರ್ವೆ ಆಫೀಸಿಗೆ ಒಂದು ಅರ್ಜಿ ಬರೆದುಕೊಡಿ" ಎಂದು ಅವರನ್ನು ಕೇಳಿದೆ. ನಾಣಿಯು "ಬೇಡಿ ಬೇಡಿ. ಅವರಿಗೆ ಬೆಂಗಳೂರಿಗೆ ಹೋಗುವುದಕ್ಕೆ ಆಗುವುದಿಲ್ಲ" ಎಂದನು. ನಾನು "ಅವರು ಹೋಗಬೇಕಾದುದಿಲ್ಲವಯ್ಯ. ಸುಮ್ಮನೆ ಒಂದು ಅರ್ಜಿ ಬರೆದು

ಕೊಡಲಿ” ಎಂದೆ. ಆಗ ನಾಣಿಯು ‘ಸ್ವಾಮಿ, ಇವರು ಅರ್ಜಿ ಬರೆದರೆ ಅದನ್ನು ಓದುವುದಕ್ಕೆ ಇವರೇ ಬೆಂಗಳೂರಿಗೆ ಹೋಗಬೇಕು. ಇವರ ಅಕ್ಷರ ಇವರಿಗೆ ತಿಳಿಯುವುದೇ ಹೊರತು ಮತ್ತಾರಿಗೂ ತಿಳಿಯುವುದಿಲ್ಲ. ಆದುದರಿಂದ ನಾವೇ ಹೇಗಾದರೂ ಮಾಡಿ ಅರ್ಜಿ ಬರೆಯೋಣ’ ಎಂದ. ಸಮಾಚಾರ ಹೀಗಿದೆಯಯ್ಯ ತಾಲ್ಲುಕು ಕಛೇರಿಯವರ ಬರಹ. ನೀನಿನ್ನೂ ಹುಡುಗ. ಆ ಬರಹ ನಿನಗೆ ತಿಳಿಯುವುದಿಲ್ಲ. ಇಲ್ಲಿ ತೆಗೆದುಕೊಂಡು ಬಾ” ಎಂದರು.

ನಾನು ಕಾಗದವನ್ನು ಜೋಡಿದಾರರಿಗೆ ಹಿಂದಕ್ಕೆ ಕೊಟ್ಟೆ. ಅವರು ಕನ್ನಡಕವನ್ನು ಹಾಕಿಕೊಂಡು ಅದನ್ನು ನೋಡಿದರು. ಅವರಿಗೂ ಬರಿಯ ಶಾಯಿಯ ಹೊರತು ಮತ್ತೇನೂ ಕಾಣಲಿಲ್ಲ. ಅವರು ಕನ್ನಡಕವನ್ನು ಎಷ್ಟು ಸಲ ಪಂಚೆಯಿಂದ ತಿಕ್ಕಿದರೂ ಪ್ರಯೋಜನವಾಗಲಿಲ್ಲ. ಜೋಡಿದಾರರು ಪಟೇಲ್ ಸುಬ್ಬೇಗೌಡನನ್ನು “ಈ ಕಾಗದ ನಿನಗೆ ಎಲ್ಲಿಂದ ಬಂತು” ಎಂದು ಕೇಳಿದನು. ಪಟೇಲನು ಹೆಂಡದ ತೊದಲು ನುಡಿಯಲ್ಲಿ ‘ಆಫೀಸಿನಿಂದ’ ಎಂದನು. ಜೋಡಿದಾರರು ಯಾವ ಆಫೀಸಿನಿಂದ ಎಂದು ಕೇಳಿದರು. ಪಟೇಲನು ‘ಕಛೇರಿಯಿಂದ’ ಎಂದನು. ಜೋಡಿದಾರರು ನನ್ನೊಂದಿಗೆ “ನಾವು ಇವನನ್ನು ಕೇಳುವುದು ಪ್ರಯೋಜನವಿಲ್ಲ. ಟಪಾಲ್ ಮನೆಗೆ ಹೋಗಿ ಇವನಿಗೆ ಎಲ್ಲಿಂದ ಕಾಗದ ಬಂದಿತೆಂಬುದನ್ನು ತಿಳಿದುಕೊಂಡು ಬಾ” ಎಂಬುದಾಗಿ ಹೇಳಿದರು.

ಆ ವೇಳೆಗೆ ಸರಿಯಾಗಿ ಆವತ್ತಿನ ಟಪಾಲು ಕಾಗದಗಳನ್ನು ಹಂಚುತ್ತಾ, ಪೋಸ್ಟುಮಾಸ್ಟರು ಊರ ಸುತ್ತಾ ಬಂದರು. ಜೋಡಿದಾರರಿಗೂ ಒಂದು ಸರ್ಕಾರಿ ಕವರು ಬಂದಿದ್ದಿತು. ಅದನ್ನು ನೋಡಿದ ಕೂಡಲೆ ಸುಬ್ಬೇಗೌಡನು “ನನಗೆ ಬಂದ ಕಾಜಿಗಾನೂ ಹಿಂಗೆ ಇತ್ತು” ಎಂದನು. ಸುಬ್ಬೇಗೌಡನಿಗೆ ಬಂದಿದ್ದ ಕಾಗದವು ತಾಲ್ಲೂಕು ಕಛೇರಿಯಿಂದ ಬಂದುದೆಂದು ಪೋಸ್ಟುಮಾಸ್ಟರೂ ಹೇಳಿದರು. ಆ ಕಾಗದವನ್ನೇ ಪಟೇಲನು ಹೆಂಡದಲ್ಲಿ ಅದ್ದಿ ಅವರಿಗೆ ತೋರಿಸಿದುದು.

ಜೋಡಿದಾರರು ತಮಗೆ ಬಂದಿದ್ದ ಕಾಗದವನ್ನು ಬಿಚ್ಚಿ ಓದಿದರು. ಬೈಲಹಳ್ಳಿ ಗ್ರಾಮವನ್ನು ಅಳೆದು ಖಾತೆಪಟ್ಟಿ ವುುಂತಾದುವನ್ನೆಲ್ಲ ಮಾಡಿಕೊಡಲು ಸರ್ಕಾರದವರು ಒಬ್ಬ ಮೋಜಿನಿದಾರರನ್ನು ಎರಡು ಮೂರು ದಿನಗಳಲ್ಲಿ ಕಳುಹಿಸುವವರಾಗಿದ್ದರು. ಹೆಸರಿಗೆ ಮಾತ್ರ ಪಟೇಲನೆನಿಸಿಕೊಂಡಿದ್ದ ಸುಬ್ಬೇಗೌಡನಿಗೂ ಒಂದು ಇಂಡಾರ್ಸು ಬಂದಿತ್ತು.

೨

ಈ ಕತೆಯನ್ನು ನಾವು ಬರೆಯುತ್ತಿರುವ ಕಾಲಕ್ಕೆ ನಮ್ಮ ಕಡೆ ಎಲ್ಲೆಲ್ಲು

ಮೋಜಿನಿದಾರರ ತಿರುಗಾಟ ಹೆಚ್ಚಾಗಿತ್ತು. ಸರ್ಕಾರದವರು ಭೂಮಿಯನ್ನು ಮತ್ತೆ ಅಳೆಸಿ ಕಂದಾಯಗಳನ್ನು ನಿಷ್ಕರ್ಷೆ ಮಾಡುವುದಕ್ಕಾಗಿ ಮೋಜಿನಿದಾರರನ್ನು ನಿಯಮಿಸಿದ್ದರು. ಅವರು ಅರ್ಧ ಕನ್ನಡವನ್ನೂ ಅರ್ಧ ಮರಾಠಿಯನ್ನೂ ಬೆರೆಸಿ ಮಾತನಾಡುತ್ತಾ "ದೋನಾಣೆ ಚಾರಾಣೆ" ಎಂದು ಹೇಳಿಕೊಂಡು ಲೆಕ್ಕಗಳನ್ನು ಬರೆಯುತ್ತಾ ಹೊರಗಿನ ಪ್ರಪಂಚದೊಂದಿಗೆ ಸಂಬಂಧವೇ ಇಲ್ಲದಿದ್ದ ಹಳ್ಳಿಯ ಜನರಿಗೆ ಹೊಸ ಉತ್ಸಾಹವನ್ನೂ ಚಟುವಟಿಕೆಯನ್ನೂ ಉಂಟು ಮಾಡುತ್ತಿದ್ದರು. ಆಗಿನ ಕಾಲದಲ್ಲಿ ನಮ್ಮ ಹಳ್ಳಿಗಳನ್ನು ಅಳೆಯುವುದಕ್ಕೆ ಬರುತ್ತಿದ್ದ ಮೋಜಿನಿದಾರರುಗಳು ಸಾಮಾನ್ಯವಾಗಿ ಧಾರವಾಡದ ಕಡೆಯವರೇ ಆಗಿರುತ್ತಿದ್ದರು. ಅವರು ಆಡುತ್ತಿದ್ದ ಮಾತಿನ ಸರಣಿ, ಆ ಮಾತಿನಲ್ಲಿ ಅವರು ತೋರಿಸುತ್ತಿದ್ದ ಒಂದು ವಿಧವಾದ ಗಂಡಸುತನ, ಅವರ ನಿಂಬೆಕಾಯಿ ಕುಣಿಸಲು ತಕ್ಕಂತಿದ್ದ ಮೀಸೆ, ಇವುಗಳೆಲ್ಲಾ ಹಳ್ಳಿಯವರಿಗೆ ಬಹಳ ಕೌತುಕವನ್ನು ಉಂಟು ಮಾಡಿದ್ದುವು.

ಆಗ ಯಾವ ಹಳ್ಳಿಯಲ್ಲಿ, ಎಲ್ಲಿ ನೋಡಿದರೂ ಸರ್ವೆಯ (ಭೂಮಿಯನ್ನು ಅಳೆಯುವ) ಮಾತೇ ಮಾತಾಗಿತ್ತು. ಶಂಕು, ಸರಪಣಿ, ಬಾಂದು, ಬಾವುಟ ಮೊದಲಾದುವುಗಳ ಲೆಕ್ಕ ಹಳ್ಳಿಯವರಿಗೆಲ್ಲಾ ಗೊತ್ತಾಗಿದ್ದಿತು. ರೈತರನೇಕರು ಹಿಂದೆ ಮುವ್ವತ್ತು ವರ್ಷಗಳ ಕೆಳಗೆ ನಡೆದ ಸರ್ವೆಯ ವಿಚಾರದಲ್ಲಿ ತಮ್ಮ ಅನುಭವವನ್ನು ಹೇಳುತ್ತಿದ್ದರು. ಮುವ್ವತ್ತು ವರ್ಷಕ್ಕೊಂದು ಸಲ ನಡೆಯುವ ಎರಡು ಸರ್ವೆಗಳನ್ನು ನೋಡಿದ್ದ ಮುದುಕರು ನಮ್ಮ ಊರಿನಲ್ಲಿ ಅನೇಕರಿದ್ದಾರೆ. ಅವರು "ನಮ್ಕಾಲ್ಕೆ ಎರಡು ಸರ್ವೆ ಬಂದೊ. ಎರಡು ಸಲಾನೂ ಕಂದಾಯ ಹೆಚ್ಚಾಯ್ತು; ಈಗ ಮೂರನೆ ಸಲ ಬಂದಯ್ತೆ" ಎಂದು ಗೊಣಗುಟ್ಟುತ್ತಿದ್ದರು.

ಬೈಲಹಳ್ಳಿ ನಮ್ಮ ಊರಿನಿಂದ ಪೂರ್ವಕ್ಕೆ ಏಳು ಮೈಲಿ ದೂರದಲ್ಲಿದೆ. ಅದೂ ಕೂಡ ಮಲೆನಾಡೇ ಆದರೂ ನಮ್ಮ ಹಳ್ಳಿಯವರು ಅದನ್ನು ಬಯಲುಸೀಮೆಯೆಂದು ಕರೆಯುತ್ತಾರೆ. ಬೈಲಹಳ್ಳಿಯವರು ನಮ್ಮ ಊರನ್ನು ಮಲೆನಾಡೆಂದೂ, ನಮ್ಮ ಊರಿನವರು ನಮಗಿಂತ ಒಂದು ಮೈಲಿ ಪಶ್ಚಿಮದಲ್ಲಿ ಇರುವವರನ್ನು ಮಲೆನಾಡಿನವರೆಂದೂ ಕರೆಯುತ್ತಾರೆ. ನಮ್ಮ ಊರಿಗಿಂತ ಸ್ವಲ್ಪ ಪಶ್ಚಿಮದಲ್ಲಿ ಇರುವವರು ನಮ್ಮ ಊರನ್ನೆ ಬಯಲುಸೀಮೆಯೆಂದೂ ಕರೆಯುವುದು ವಾಡಿಕೆಯಾಗಿದೆ. ವಾಸ್ತವವಾಗಿ ಬೈಲಹಳ್ಳಿ ಮಲೆನಾಡಿನಲ್ಲೆ ಇದ್ದರೂ ಕೆಲವು ವಿಚಿತ್ರ ಸನ್ನಿವೇಶಗಳಿಂದ ಅದರಲ್ಲಿ ಮಲೆನಾಡಿನ ಲಕ್ಷಣಗಳು ಯಾವುವೂ ಇಲ್ಲದೆ ಅದು ಬಯಲುಸೀಮೆಯ ಬೆಂಗಾಡಾಗಿದೆ.

ಬೈಲಹಳ್ಳಿಯನ್ನು ನಮ್ಮೂರು ಜೋಡಿದಾರರು ಈಗ ಕೆಲವು ವರ್ಷಗಳ ಹಿಂದೆ ಕೊಂಡುಕೊಂಡರು. ಅದಕ್ಕಿಂತ ಮುಂಚೆ ಆ ಗ್ರಾಮವು ನಮ್ಮೂರು ದೊಡ್ಡ ಮನೆ ಶಾಮಯ್ಯಂಗಾರ್ಯರಿಗೆ ಸೇರಿದ್ದಿತು. ಆ ಗ್ರಾಮವನ್ನು ಶಾಮಯ್ಯಂಗಾರ್ರ ಪೂರ್ವಿಕರಿಗೆ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರು ಇನಾಮ್ತಿ ಹಾಕಿ ಕೊಟ್ಟಿದ್ದರಂತೆ. ಆ ಗ್ರಾಮವನ್ನು ಅವರಿಗೆ ಕೊಟ್ಟುದರಿಂದ ಕೃಷ್ಣರಾಜ ಒಡೆಯರಿಗೆ, ಸರ್ಕಾರಕ್ಕೆ ಬರತಕ್ಕ ಆದಾಯವೇನೂ ಕಡಮೆಯಾಗಲಿಲ್ಲ. ಯಾತಕ್ಕೆಂದರೆ ಬೈಲಹಳ್ಳಿ ಹೆಸರಿಗೆ ತಕ್ಕಂತೆ ಬೋರೆಯ ಮೇಲೆ ತಮಟೆ ಅಗಲದ ನಾಲ್ಕು ಹೊಲಗಳ ತುಂಡುಗಳುಳ್ಳ ಹಳ್ಳಿ. ಅಲ್ಲಿ ತರಿ ಜಮೀನು ಸ್ವಲ್ಪವೂ ಇಲ್ಲ. ಜನವಸತಿ ಕಡಮೆ. ಕುಡಿಯುವ ನೀರಿಗೇ ತಾಪತ್ರಯ. ಹಳ್ಳಿಯು ಬೋರೆಯ ಮೇಲೆ ಎತ್ತರದಲ್ಲಿ ಇರುವುದರಿಂದ ಅದಕ್ಕೆ ಸೇರಿದ ಹಳ್ಳವಾಗಲಿ, ಕೆರೆಯಾಗಲಿ ಇರುವುದಿಲ್ಲ. ಸಮೀಪದ ಹಳ್ಳಿಗೆ ಸೇರಿದಂತೆ ಒಂದು ಕೆರೆ ಇದೆ. ಅದು ಸರ್ಕಾರಿ ಗ್ರಾಮ. ಬೈಲಹಳ್ಳಿಯವರು ಬೇಸಿಗೆ ಕಾಲದಲ್ಲಿ ಕುಡಿಯುವುದಕ್ಕೆ ಆ ಕೆರೆಯ ನೀರನ್ನೇ ಉಪಯೋಗಿಸಬೇಕಾಗಿದೆ. ಇದರಿಂದ ಆ ಸರ್ಕಾರಿ ಹಳ್ಳಿಯ ಶ್ಯಾನುಭೋಗನಿಗೂ, ಬೈಲಹಳ್ಳಿ ರೈತರಿಗೂ, ವಾಗ್ವಾದ ತಪ್ಪಿಯೇ ಇರಲಿಲ್ಲ. ಒಂದು ಸಲ ಬೈಲಹಳ್ಳಿ ರೈತರ ಹೆಂಗಸರು ಕೆರೆಯಿಂದ ನೀರು ತಂದು ಸಗಣಿಯನ್ನು ಕಲಸಿ ಹೊಲಗಳ ಬದುವಿನಲ್ಲಿ ಬೆರಣಿ ತಟ್ಟುತ್ತಿದ್ದರು. ಶ್ಯಾನುಭೋಗರು ಅಲ್ಲಿಗೆ ಬಂದು "ಸರ್ಕಾರಿ ನೀರನ್ನು ಉಪಯೋಗಿಸಬೇಡಿ. ಇದು ನಿಮ್ಮ ಊರಿಗೆ ಸೇರಿದುದಲ್ಲ. ಜುಲ್ಮಾನೆ ಹಾಕಿಸುತ್ತೇನೆ" ಎಂದು ಗದರಿಸಿದರು. ರೈತರ ಹೆಂಗಸರು "ಹೊಳೆ ನೀರಿಗೆ ದೊಣೆ ನಾಯ್ಕನ ಅಪ್ಪಣೆಯೆ ?" ಎಂದುಕೊಂಡು ಶ್ಯಾನುಭೋಗರನ್ನು ಸಗಣಿಯ ಉಂಡೆಗಳಿಂದ ಒಪ್ಪಿದರು. ಶ್ಯಾನುಭೋಗರು ಪುಳ್ಳಾರು. ಸಾಲದುದಕ್ಕೆ ಎದುರು ಪಕ್ಷದವರು ಸ್ತ್ರೀಯರು, ಒಕ್ಕಲಿಗರು; ಅವರ ಆಯುಧ ಸಗಣಿ–ಇದನ್ನೆಲ್ಲಾ ನೋಡಿ ಸುಮ್ಮನಿರುವುದೇ ಸೂಕ್ತವೆಂದು ಅವರು ಮಾತನಾಡದೆ ಹೊರಟು ಹೋದರು. ಅಲ್ಲಿಂದ ಈಚೆಗೆ ಶ್ಯಾನುಭೋಗರು ಬೈಲಹಳ್ಳಿ ರೈತರನ್ನು ಸರ್ಕಾರದ ನೀರು ಎನ್ನುವ ನೆಪದಿಂದ ಹೆದರಿಸುತ್ತಿಲ್ಲ.

ಬೈಲಹಳ್ಳಿಯಂತಹ ಉಪಯೋಗವಿಲ್ಲದ ಗ್ರಾಮವು ದೊಡ್ಡಮನೆ ಶಾಮೈಯ್ಯಂಗಾರ್ರ ವಂಶದವರಿಗೆ ದೊರೆಯುವುದಕ್ಕೆ ಆ ಗ್ರಾಮವನ್ನು ಜೋಡಿಯಾಗಿ ಪಡೆದ ಆ ವಂಶದ ಮೂಲಪುರುಷರು ಕಾರಣವೇ ಹೊರತು ಮಹಾರಾಜರ ದಯೆ ಕಡಿಮೆಯಾಗಿದ್ದಿತೆಂದಲ್ಲ. ಶಾಮಯ್ಯಂಗಾರ್ರ ಮುತ್ತಜ್ಜಂದಿರು

ನರಸಿಂಹಾಚಾರ್ಯರಿಗೆ ಆ ಗ್ರಾಮವು ಜೋಡಿಯಾಗಿ ದೊರೆಯಿತೆಂದು ಸರ್ಕಾರಿ ಲೆಕ್ಕಗಳಲ್ಲಿ ಇದೆ. ನಮ್ಮ ಊರಿನವರು ಈ ನರಸಿಂಹಾಚಾರ್ಯರನ್ನು ಕುರಿತು 'ನರಸಯ್ಯ' ಎಂದು ಹೇಳುವುದೇ ವಾಡಿಕೆ. ಮುಮ್ಮಡಿ ಕೃಷ್ಣರಾಜ ಒಡೆಯರು ಅರಮನೆಯನ್ನು ಕಟ್ಟಿಸುತ್ತಿರುವಾಗ, ನರಸಯ್ಯನವರು, ರಾಜಭಕ್ತಿ ಪ್ರೇರಿತರಾಗಿ ನಮ್ಮ ಮಲೆನಾಡಿನಿಂದ ದೊಡ್ಡ ದೊಡ್ಡ ಮರದ ದಿಮ್ಮಿಗಳನ್ನು ಸಾಗಿಸಿಕೊಂಡು ಹೋಗಿ ಮಹಾರಾಜರಿಗೆ ಒಪ್ಪಿಸಿದರು. ಮಹಾರಾಜರು ಸಂತುಷ್ಟರಾಗಿ "ನಿಮಗೆ ಏನು ಬೇಕು ?" ಎಂದು ಕೇಳಿದರು. ನರಸಿಂಹಯ್ಯನವರು ಬಹಳ ವೈದಿಕರು. ನಿತ್ಯ ನೈಮಿತ್ತಿಕ ಕರ್ಮಗಳನ್ನೂ ವ್ರತಾದಿಗಳನ್ನೂ ಚಾಚೂ ತಪ್ಪದೆ ಮಾಡುತ್ತಿದ್ದವರು. ಆ ಕರ್ಮಗಳಿಗೆಲ್ಲ ಅವರಿಗೆ ದರ್ಭೆ ಅಗತ್ಯವಾಗಿ ಬೇಕಾಗಿದ್ದಿತು. ಅರಮನೆಗೆ ಮರದ ದಿಮ್ಮಿಗಳನ್ನು ಸಾಗಿಸುವಾಗ ದಾರಿಯಲ್ಲಿ ಬೈಲಹಳ್ಳಿಯಲ್ಲಿ ಒಂದು ಹೊಲದ ಬೇಲಿಯಲ್ಲಿ ಬೇಕಾದಂತೆ ದರ್ಭೆ ಬೆಳೆದಿದ್ದುದನ್ನು ಅವರು ನೋಡಿದ್ದರು. ವೈದಿಕ ಕರ್ಮಗಳಿಗೆ ಬೇಕಾದ ದರ್ಭೆಗಾಗಿ ಹೊಲದ ಯಜಮಾನನಾದ ರೈತನನ್ನು ಯಾಚಿಸಲು ಅವರಿಗೆ ಇಷ್ಟವಿರಲಿಲ್ಲ. ಆ ದಾರಿಯಲ್ಲಿ ಹೋಗುವಾಗ ಅನೇಕಸಲ 'ಈ ಹೊಲವು ನನ್ನದಾದರೆ' ಎಂದುಕೊಂಡಿದ್ದರು. ಮಹಾರಾಜರು "ಏನು ಬೇಕು ?" ಎಂದು ಕೇಳಿದಕೂಡಲೆ ನರಸಯ್ಯನವರು "ಬೈಲಹಳ್ಳಿಯ ಊರ ಮುಂದಲ ಹೊಲ ಅಪ್ಪಣೆಯಾಗಬೇಕು" ಎಂದರು. ಮಹಾರಾಜರಿಗೆ ಕತೆಯೆಲ್ಲಾ ತಿಳಿಯಿತು. ಅವರು ನಗುತ್ತಾ "ಬೈಲಹಳ್ಳಿಯನ್ನು ನಿಮಗೆ ಜೋಡಿ ಹಾಕಿ ಕೊಟ್ಟಿದ್ದೇನೆ" ಎಂದು ಹೇಳಿದರು. ನರಸಯ್ಯನವರು ಊರಿಗೆ ಬಂದ ಮೇಲೆ ನಮ್ಮವರೆಲ್ಲಾ ಅವರನ್ನು ಚೆನ್ನಾಗಿ ಹಾಸ್ಯಮಾಡಿ "ಮಹಾರಾಜರು ಪ್ರಸನ್ನರಾಗಿದ್ದಾಗ ಯಾವುದಾದರೂ ಫಲವತ್ತಾದ ದೊಡ್ಡ ಗ್ರಾಮವನ್ನು ತೆಗೆದುಕೊಳ್ಳಬಾರದಾಗಿತ್ತೆ. ಶುದ್ಧ ವೈದಿಕ ಗೊಡ್ಡು" ಎಂಬುದಾಗಿ ಹಾಸ್ಯಮಾಡಿದರು. ನರಸಯ್ಯನವರು "ನನಗೆ ಬೇಕಾಗಿದ್ದುದು ದರ್ಭೆ ಹುಲ್ಲು. ದೊಡ್ಡ ಗ್ರಾಮವಲ್ಲ. ಮಹಾರಾಜರು ಕೃಪೆಮಾಡಿ ಗ್ರಾಮವನ್ನೇ ಕೊಟ್ಟರು" ಎಂದರು.

ನಮ್ಮ ಊರಿನ ಕೆಲವರು 'ಬುದ್ಧಿಹೀನತೆ' ಎಂದು ಕರೆಯುತ್ತಿರುವ ನರಸಯ್ಯನವರ ಈ ಸ್ವಭಾವ ಅವರ ವಂಶದವರಿಗೆಲ್ಲ ಬಂದಿತ್ತು. ಒಂದುಸಲ ಮುಮ್ಮಡಿ ಕೃಷ್ಣರಾಜ ಒಡೆಯರ ಸವಾರಿ ನಮ್ಮ ಊರ ಹತ್ತಿರಕ್ಕೆ ದಯಮಾಡಿಸಿತ್ತಂತೆ. ಆಗ ನಮ್ಮೂರ ಬಳಿ ಮಹಾರಾಜರು ಹೇಮಾವತಿ ನದಿಯನ್ನು ದಾಟಬೇಕಾಯಿತು. ಆಗ ಮಹಾರಾಜರಿಗೂ ಅವರ ಪರಿವಾರದವರಿಗೂ

ನಲವತ್ತು ಗಾಡಿಗಳು ಬೇಕಾದುವಂತೆ. ಮಹಾರಾಜರ ಸೇವೆ ಮಾಡಲು ಅವಕಾಶ ಸಿಕ್ಕಿತಲ್ಲಾ ಎಂಬುದಾಗಿ ರೈತರು ತಮ್ಮ ತಮ್ಮ ಗಾಡಿಗಳನ್ನು ಚೆನ್ನಾಗಿ ಅಲಂಕಾರ ಮಾಡಿ ಅವುಗಳನ್ನು ಮಹಾರಾಜರಿಗೂ ಅವರ ಪರಿವಾರದವರಿಗೂ ಸಿದ್ಧಮಾಡಿದರು. ಮಹಾರಾಜರಿಗೆ ನಲವತ್ತು ಗಾಡಿಗಳು ಮಾತ್ರ ಬೇಕಾಗಿದ್ದರೂ ನದಿಯ ತೀರಕ್ಕೆ ನಾನೂರು ಗಾಡಿಗಳು ಬಂದವಂತೆ. ನಲವತ್ತು ಗಾಡಿಗಳನ್ನು ಹೂಡಿಸಿ ಮಹಾರಾಜರು ನರಸಯ್ಯನವರ ತಮ್ಮ ವೆಂಕಟರಾಯರ * ಗಾಡಿಯಲ್ಲಿ ಕುಳಿತು ಹೊಳೆ ದಾಟುವುದಕ್ಕೆ ಪ್ರಾರಂಭಿಸಿದರು. ನದಿಯಲ್ಲಿ ಮರಳು ಬಹಳವಾಗಿದ್ದಿತು. ಹೊಳೆಯಲ್ಲಿ ಅರ್ಧದಾರಿಗೆ ಹೋಗುವ ಹೊತ್ತಿಗೆ ಎತ್ತುಗಳೆಲ್ಲಾ ಸೋತು ಹೋದವು. ಮಹಾರಾಜರು ಕುಳಿತಿದ್ದ ಗಾಡಿಯ ಎತ್ತುಗಳು ಮಾತ್ರ ಗಾಡಿಯನ್ನು ಸರಾಗವಾಗಿ ಎಳೆದುಕೊಂಡು ಎದುರು ದಡವನ್ನು ಸೇರಿದುವು. ಮಹಾರಾಜರು ಸಂತುಷ್ಟರಾಗಿ ವೆಂಕಟರಾಯರನ್ನು ಕುರಿತು "ಎತ್ತುಗಳನ್ನು ಚೆನ್ನಾಗಿ ಸಾಕಿದ್ದೀರಿ. ನಿಮಗೇನು ಮರ್ಯಾದೆ ಮಾಡಿ ನಮ್ಮ ಸಂತೋಷವನ್ನು ವ್ಯಕ್ತಪಡಿಸಲಿ" ಎಂಬುದಾಗಿ ಕೇಳಿದರು. ವೆಂಕಟರಾಯರು "ನಮ್ಮೂರ ದೇವಸ್ಥಾನದಲ್ಲಿ ಮೊದಲು ತೀರ್ಥ ಅಪ್ಪಣೆಯಾಗಬೇಕು" ಎಂದರು. ಮಹಾರಾಜರು "ಆಗಲಿ" ಎಂದು ಅಪ್ಪಣೆ ಮಾಡಿದರು. ನಮ್ಮ ಊರಿನಲ್ಲಿ ಇವತ್ತಿಗೂ ವೆಂಕಟರಾಯರ ವಂಶದವರಿಗೇ ಮೊದಲ ತೀರ್ಥ ಸಲ್ಲುತ್ತಿದೆ. ಅವರನ್ನು ಕೂಡ ನಮ್ಮೂರು ವಿವೇಕಿಗಳು "ಇವರಿಗೆ ಬುದ್ಧಿಯಿಲ್ಲ. ಮಹಾರಾಜರ ಬಳಿ ಎಲ್ಲಾ ಬಿಟ್ಟು ನೀರಿಗೆ ಕೈ ಒಡ್ಡಿದರು. ವೈದಿಕಜಾಡ್ಯ" ಎಂದು ಹಾಸ್ಯಮಾಡುತ್ತಿದ್ದಾರೆ.

* * * *

ಬೈಲಹಳ್ಳಿಯಲ್ಲಿ ಇರುವ ಮನೆಗಳು ಮುವ್ವತ್ತು. ಹುಲ್ಲಿನ ಮನೆಗಳು ಇಪ್ಪತ್ತಾರು. ಹಂಚಿನ ಮನೆಗಳು ಮೂರು. ಉಳಿದ ಒಂದು ಮನೆಗೆ ಹೆಂಚೂ ಇಲ್ಲ, ಹುಲ್ಲೂ ಇಲ್ಲ. ಅದು ಬರಿಯ ನಾಲ್ಕು ಗೋಡೆಗಳ ನಿವೇಶನವೂ ಅಲ್ಲ. ಹುಲ್ಲಿನ ಸೂರು ಯಾವಾಗಲೋ ಹೋಗಿಬಿಟ್ಟಿದೆ. ಆ ಮನೆ ಕಾಳಿಯದು. ಕಾಳಿಯು ಒಂದು ಹಳೆಯ ಗಾಡಿ ಕಮಾನನ್ನು ಆ ನಾಲ್ಕು ಗೋಡೆಗಳಿಂದ ಕೂಡಿದ ಆವರಣದಲ್ಲಿ ಇಟ್ಟುಕೊಂಡು ಅದರಲ್ಲಿ ವಾಸಮಾಡುತ್ತಾಳೆ. ಬೇಸಿಗೆ ಕಾಲದಲ್ಲಿ ಅವಳು ಕಮಾನಿನ ಹೊರಗಡೆ ಅಡಿಗೆ ಮಾಡಿಕೊಳ್ಳುತ್ತಾಳೆ. ಆದರೆ ಮಳೆಗಾಲದಲ್ಲಿ ಮನೆ ನೀರೆಲ್ಲಾ ಕಮಾನಿನ ಮೂಲಕ ಒಳಕ್ಕೆ ನುಗ್ಗುವಾಗ

* ಇವರ ಹೆಸರು ವೆಂಕಟಾಚಾರ್ ಎಂದು. ಆದರೆ ನಮ್ಮ ಊರಿನವರು ಅವರನ್ನು ವೆಂಕಟರಾಯರು ಎಂದೇ ಕರೆಯುತ್ತಿದ್ದರು.

ಅವಳೆಲ್ಲಿ ಅಡಿಗೆ ಮಾಡಿಕೊಳ್ಳುತ್ತಾಳೊ ದೇವರೇ ಬಲ್ಲ ! ಗಾಡಿಯ ಕಮಾನಿಗೆ ಯಾವತ್ತು ಬೆಂಕಿಯ ಕಿಡಿ ತಗಲಿ ಅದು ಉರಿದು ಬೂದಿಯಾಗುತ್ತದೊ ಎಂಬುದಾಗಿ ನನಗೆ ಹೆದರಿಕೆಯುಂಟಾಗಿದೆ.

ಈ ಚಿಕ್ಕ ಗ್ರಾಮಕ್ಕೂ, ಹಿಂದೆ ಹೇಳಿದಂತೆ ಒಬ್ಬ ಪಟೇಲನು ಇದ್ದಾನೆ. ಅವನನ್ನು ಸರ್ಕಾರದವರು ಪಟೇಲಿಗೆ ನಿಯಮಿಸಿಲ್ಲ. ಸರ್ಕಾರದ ಪೋಟಿಗೆಯಾಗಲಿ ಪಟೇಲಿಯ ಇನಾಂ ಜಮೀನಾಗಲಿ ಅವನಿಗೆ ಇಲ್ಲ. ಅವನನ್ನು ಗ್ರಾಮಸ್ಥರೂ, ಜೋಡಿದಾರರೂ ಪಟೇಲನೆಂದು ನಿಯಮಿಸಿಕೊಂಡು ಗೌರವಿಸುತ್ತಿದ್ದಾರೆ. ಬೈಲಹಳ್ಳಿಯಿಂದ ಒಂದು ಕಡೆಗೆ ಮಾತ್ರ ಮೂರು ಮೈಲಿ ದೂರದಲ್ಲಿ ರಸ್ತೆ ಇದೆ. ಉಳಿದ ಕಡೆಗಳಲ್ಲಿ ಹತ್ತು ಮೈಲಿ ಹೋದರೂ ರಸ್ತೆ ಸಿಗುವಂತೆ ಇಲ್ಲ. ಈ ಗ್ರಾಮಕ್ಕೆ ಸರ್ಕಾರಿ ಅಧಿಕಾರಿಗಳು ತಲೆ ಹಾಕಿದುದನ್ನೇ ಯಾರೂ ಕಾಣರು. ಅಮಲ್ದಾರರಂತೂ ಯಾವಾಗಲೂ ಅಲ್ಲಿಗೆ ಬರಲಿಲ್ಲ. ಶೇಕದಾರರು ಮಾತ್ರ ಎರಡು ಸಲ ಬಂದಿದ್ದರಂತೆ. ಬೈಲಹಳ್ಳಿಯವರಿಗೆ ಹೊರಗಿನ ಪ್ರಪಂಚದಲ್ಲಿ ಏನು ನಡೆಯುತ್ತಿದೆ ಎಂಬುವುದೊಂದೂ ಗೊತ್ತಾಗುವುದಿಲ್ಲ. ಅವರು ಕೂಪ ಕೂರ್ಮಗಳಂತೆ; ತಮ್ಮಲ್ಲಿ ತಾವು ತೃಪ್ತರಾಗಿದ್ದಾರೆ.

ಬೈಲಹಳ್ಳಿಯಲ್ಲಿ ಮುವ್ವತ್ತು ಮನೆಗಳಿದ್ದರೂ ಒಬ್ಬನಿಗೂ 'ಬರಾವು' ಬಾರದು. ಸರ್ಕಾರದವರು ಆ ಗ್ರಾಮಕ್ಕೆ 'ಇಸ್ಕೂಲನ್ನು' ಕೊಟ್ಟಿಲ್ಲ. ತಾವೇ ಒಬ್ಬ ಉಪಾಧ್ಯಾಯನನ್ನು ಇಟ್ಟುಕೊಂಡು ಓದಿಸುವುದಕ್ಕೆ ಊರಿನವರಿಗೆ ಯಾರಿಗೂ ಬೇಕಿಲ್ಲ. ಮತ್ತು ಹಣದ ಬಲವಿಲ್ಲ. ಬೆಳೆಯುವ ನಾಲ್ಕು ಕಾಳು ರಾಗಿಯಲ್ಲಿ ರೈತರು ಹೇಗೊ ಸಂಸಾರ ನೀಗಿಸಿಕೊಂಡು ಹೋಗುತ್ತಾರೆ. ಬೈಲಹಳ್ಳಿಯ ಹೆಂಗಸರು ಬಹಳ ಕಷ್ಟ ಜೀವಿಗಳು. ಅವರಿಲ್ಲದಿದ್ದರೆ ಗಂಡಸರ ಬಾಳು ನಾಯಿಬಾಳು. ರೈತನು "ಮೇಣಿಯ ಮೇಲೆ ಕೈಯಿಟ್ಟು" ಉಳುವ ಕೆಲಸವನ್ನು ಮಾತ್ರ ಮಾಡುತ್ತಾನೆ. ಉಳಿದ ಎಲ್ಲಾ ಕೆಲಸವನ್ನೂ ಅವನ ಮನೆಯ ಹೆಂಗಸೇ ಮಾಡುತ್ತಾಳೆ. ಕೆರೆಯಿಂದ ನೀರು ಹೊರುವುದು, ಬೆಳಗಿನ ಜಾವ ಎದ್ದು ರಾಗಿ ಬೀಸುವುದು, ಸಗಣಿಯನ್ನೂ, ಕಸವನ್ನೂ ಎತ್ತಿಕೊಂಡು ಹೋಗಿ ಮನೆಯಿಂದ ದೂರವಾಗಿರುವ ಹೊಲದ ಬದುವಿನ ತಿಪ್ಪೆಗೆ ಸುರಿಯುವುದು, ಗಿಡದಿಂದ* ಅಡಿಗೆಗೆ ಬೇಕಾದ ಸೌದೆಯನ್ನೂ, ಪುರಲೆಯನ್ನೂ ಆಯ್ದುಕೊಂಡು ಬರುವುದು, ಹೊಲಕ್ಕೆ ಹಿಟ್ಟನ್ನು ತೆಗೆದುಕೊಂಡು ಹೋಗಿ ಗಂಡನಿಗೆ ಬಡಿಸುವುದು, ಹೊಲದಲ್ಲಿ ಕಳೆ ಕಿತ್ತು ಹುಲ್ಲನ್ನು ಮನೆಗೆ ಹೊತ್ತುಕೊಂಡು ಬರುವುದು, ವಾರಕ್ಕೊಮ್ಮೆ

* ಕಾಡು.

ನಾಲ್ಕು ಐದು ಮೈಲಿ ದೂರವಿರುವ ಸಂತೆಗೆ ನಡೆದುಕೊಂಡು ಹೋಗಿ ಮನೆಗೆ ಬೇಕಾದ ಉಪ್ಪು, ಮೆಣಸಿನಕಾಯಿ, ಎಲೆ, ಅಡಿಕೆ, ಹೊಗೆಸೊಪ್ಪು, ಸೀಮೆ ಎಣ್ಣೆ ಮುಂತಾದ ಸಾಮಾನುಗಳನ್ನು ತರುವುದು—ಇವೇ ಮೊದಲಾದ ಎಷ್ಟೋ ಕೆಲಸ ಗಳನ್ನು ರೈತರ ಹೆಂಗಸರು ಮಾಡುತ್ತಾರೆ. ಬೈಲಹಳ್ಳಿಯಲ್ಲಿ ಹೆಂಗಸರ ದರ್ಬಾರೇ ಹೆಚ್ಚು. ಗಂಡಸಿನ ಮುಖದಲ್ಲಿ ಬಡತನವೂ, ನಿರುತ್ಸಾಹವೂ, ಅತೃಪ್ತಿಯೂ ಸುರಿಯುತ್ತಿದ್ದರೂ ಹೆಂಗಸರು ಇದ್ದದ್ದರಲ್ಲಿ ಗೆಲುವಾಗಿ ಹಾಡುತ್ತಾ, ನಗುತ್ತಾ ಒಳ್ಳೊಳ್ಳೆಯ ಬಣ್ಣದ ಬಟ್ಟೆಗಳನ್ನು ಧರಿಸಿಕೊಂಡು ಆ ಹಾಳು ಊರಿಗೆ ಸ್ವಲ್ಪ ಕಳೆಯನ್ನು ತಂದಿದ್ದಾರೆ.

ಒಂದು ಗ್ರಾಮದಲ್ಲಿ ಜೋಡಿದಾರರೆಂದರೆ ಮಹಾರಾಜರ ಹಾಗೆ. ಪ್ರಜೆಗಳ ಕಷ್ಟ ಸುಖಗಳೆಲ್ಲಾ ಅವರ ಆಧೀನದಲ್ಲಿರುತ್ತವೆ. ಬೈಲಹಳ್ಳಿ ಹತ್ತೊಂಬತ್ತನೆಯ ಶತಮಾನದ ಕೊನೆಯವರೆಗೆ ಬಹಳ ಸುಸ್ಥಿತಿಯಲ್ಲಿಯೇ ಇದ್ದಿತು. ಶಾಮ ಯ್ಯಂಗಾರ್ರ ತಂದೆಯವರು ಆಗ ಹಳ್ಳಿಯಲ್ಲಿಯೇ ಇದ್ದುಕೊಂಡು ರೈತರ ಕಷ್ಟ ಸುಖಗಳಲ್ಲಿ ಭಾಗಿಗಳಾಗಿ ಸಹಾನುಭೂತಿಯನ್ನು ತೋರಿಸಿ ಕಂದಾಯ ಮುಂತಾ ದುವನ್ನು ಅವರಿಂದ ಕಡಮೆಯಾಗಿಯೇ ವಸೂಲ್ಮಾಡುತ್ತಾ ರೈತರಿಗೆ ತಂದೆಯೋ ಪಾದಿಯಲ್ಲಿ ಇದ್ದರು. ಅವರು ಬದುಕಿರುವವರೆಗೆ ರೈತರಿಗೆ ಯಾವ ವಿಧವಾದ ಕಷ್ಟವೂ ಹೆಚ್ಚಾಗಿ ತೋರಿರಲಿಲ್ಲ. ಅವರು ೧೯೦೧ ನೇ ಇಸವಿಯಲ್ಲಿ ಸ್ವರ್ಗಸ್ಥ ರಾದರು. ಅವರ ಮಕ್ಕಳು ಶ್ಯಾಮಯ್ಯಂಗಾರ್ರು ಬೆಂಗಳೂರಿನಲ್ಲಿ ಸರ್ಕಾರಿ ಚಾಕರಿಗೆ ಸೇರಿದರು. ಬೆಂಗಳೂರಿನಲ್ಲಿದ್ದ ಜೋಡಿದಾರರಿಗೂ ಹಳ್ಳಿಯಲ್ಲಿದ್ದ ಅವರ ರೈತರಿಗೂ ಪರಿಚಯವೇ ಇರಲಿಲ್ಲ. ತಮ್ಮ ರೈತರನ್ನು ಜೋಡಿದಾರರು ವರುಷಕ್ಕೆ ಒಂದು ಸಲ ಕೂಡ ನೋಡುತ್ತಿರಲಿಲ್ಲ. ತಮಗೆ ಬರಬೇಕಾದ ಕಂದಾಯ ಮುಂತಾದ ಉತ್ಪತ್ತಿಯನ್ನು ಮಾತ್ರ ನಿರ್ದಯದಿಂದ ವಸೂಲ್ಮಾಡಿ ಕೊಂಡು ಹೋಗುತ್ತಿದ್ದರು. ಕೆಲವು ವೇಳೆ ಆ ವಸೂಲಿಯ ಕೆಲಸವನ್ನೂ ಸಹ ತಮಗೆ ಬೇಕಾದವರಿಗೆ ವಹಿಸುತ್ತಿದ್ದರು. ಅಂಥವರು ಕಠಿಣರಾಗಿ ರೈತರನ್ನು ಸದೆಬಡಿದು ಅವರಿಂದ ಒಂದಕ್ಕೆ ಹತ್ತಾಗಿ ವಸೂಲ್ಮಾಡಿ ಬೆಂಗಳೂರಿನಲ್ಲಿದ್ದ ಜೋಡಿದಾರರಿಗೆ ಕೊಡಬೇಕಾದುದನ್ನು ಕೊಟ್ಟು ಉಳಿದುದನ್ನು ತಾವು ನುಂಗು ತ್ತಿದ್ದರು. ಬೆಂಗಳೂರಿನಲ್ಲಿ ಜೋಡಿದಾರರಿಗೆ ಆ ವಸೂಲಿ ಕ್ರಮವೇ ಸುಖವಾಗಿ ತೋರಿತು. ಬರಬೇಕಾದ ಹಣವು ಕುಳಿತಲ್ಲಿಗೆ ಬರುತ್ತಿದ್ದಿತು. ಜೋಡಿ ಗ್ರಾಮದ ತಮ್ಮ ಯಜಮಾನ್ಯವನ್ನು ಅವರು ತಮಗೆ ಬರುತ್ತಿದ್ದ ದುಡ್ಡಿನಿಂದ ಅಳೆಯು ತ್ತಿದ್ದರೇ ಹೊರತು “ಇದು ನಮ್ಮ ಗ್ರಾಮ. ಇಲ್ಲಿ ಇರುವವರು ನಮ್ಮ ರೈತರು.

ಇವರ ಸುಖ ನಾವು ನೋಡಿಕೊಳ್ಳಬೇಕು" ಎಂಬ ಭಾವನೆಯೇ ಅವರಿಗೆ ಇದ್ದಂತೆ ತೋರಲಿಲ್ಲ. ಅವರಿಂದ ನಿಯಮಿಸಲ್ಪಟ್ಟ 'ಪೂಟ್‌ಚಾರಕರು' ರೈತರಿಂದ ಕಂದಾಯವನ್ನು ಒಂದಕ್ಕೆ ಎರಡಾಗಿ ವಸೂಲ್ಮಾಡಿ ರೈತರನ್ನು ಸಣ್ಣಗೆ ಮಾಡಿದರು.

"ನಮ್ಮ ಜೋಡಿದಾರರು ನಮ್ಮ ತಂದೆ, ನಮ್ಮ ಧಣಿ, ನಮ್ಮ ದೊರೆ" ಎಂಬ ಭಾವನೆಯಿದ್ದ ರೈತರಿಗೆ ಬೆಂಗಳೂರಿನಲ್ಲಿ ನಿಂತ ಜೋಡಿದಾರರ ಆಚರಣೆಯನ್ನು ಕಂಡು ಬಹಳ ಅಸಮಾಧಾನವಾಯಿತು. ಜೋಡಿದಾರರಿಂದ ನಿಯಮಿಸಲ್ಪಟ್ಟಿದ್ದ ನೌಕರರು ಅವರನ್ನು ಬಹಳ ಹಿಂಸಿಸುತ್ತಿದ್ದರು. ಪುಂಡರಾದ ಕೆಲವು ರೈತರು ಆ ನೌಕರರನ್ನು ಹಿಡಿದು ಹೊಡೆದುದರಿಂದ ಪರಿಸ್ಥಿತಿಯು ಬಹಳ ಕಠಿಣವಾಗಿತ್ತು. ಆ ಅನಿವಾರ್ಯಗಳನ್ನು ರೈತರು ಯಾರಲ್ಲೂ ಹೇಳಿಕೊಳ್ಳುವಂತೆ ಇರಲಿಲ್ಲ. ಜೋಡಿ ಗ್ರಾಮದಲ್ಲಿ ರೈತರಿಗೆ ಖಾತೆ, ಕಂದಾಯ, ಪಟ್ಟೆ ಮುಂತಾದ ಲೆಕ್ಕಗಳಾವುವೂ ಸರಿಯಾಗಿರುವುದಿಲ್ಲ. ರೈತನಿಗೆ ಜೋಡಿದಾರರಲ್ಲಿ ಪ್ರೇಮವೂ ಅವರು ತನಗೆ ಮೋಸ ಮಾಡುವುದಿಲ್ಲವೆಂಬ ನಂಬಿಕೆಯೂ ಇರುವವರೆಗೆ ಎಲ್ಲಾ ಸರಿಹೋಗುತ್ತದೆ. ಆ ನಂಬಿಕೆ ಅವನಿಗೆ ತಪ್ಪಿದರೆ ಜೋಡಿದಾರರಿಗೂ ಅವನಿಗೂ ಮನಸ್ತಾಪವುಂಟಾಗುತ್ತದೆ.

ತನ್ನ ಗ್ರಾಮದ ರೈತರನ್ನು ಪರಸ್ಥಳದಿಂದ ಆಳುವುದು ಯಾರಿಂದಲೂ ಸಾಧ್ಯವಿಲ್ಲ. ಕೆಲವು ದಿವಸಗಳೊಳಗಾಗಿ ಬೈಲಹಳ್ಳಿಯ ರೈತರಿಗೆ ತಮ್ಮ ಯಜಮಾನ ಶಾಮಯ್ಯಂಗಾರ್ಯರಲ್ಲಿದ್ದ ಪ್ರೇಮವೂ, ಗೌರವವೂ ಹಾಳಾಗಿ ಅವರ ಕೈಯಿಂದ ಹೇಗಾದರೂ ತಪ್ಪಿಸಿಕೊಳ್ಳಬೇಕೆಂಬ ಆಸೆಯುಂಟಾಯಿತು. ರೈತರೆಲ್ಲಾ ಒಟ್ಟಾಗಿ ನಮ್ಮೂರ ಜೋಡಿದಾರರ ಬಳಿಗೆ ಬಂದು ಬೈಲಹಳ್ಳಿಯನ್ನು ನಮ್ಮ ಜೋಡಿದಾರರು ಕೊಳ್ಳಬೇಕೆಂದೂ, ಗ್ರಾಮವು ಶಾಮಯ್ಯಂಗಾರ್ರ ನೌಕರರ ಕೈಲಿದ್ದರೆ ಹಾಳಾಗುವುದರಲ್ಲಿ ಸಂದೇಹವಿಲ್ಲವೆಂದೂ, ಶಾಮಯ್ಯಂಗಾರ್ಯರಿಗೆ ದುಡ್ಡು ಮಾತ್ರ ಬೇಕಾದುದರಿಂದ ಅವರು ಗ್ರಾಮವನ್ನು ಸಂತೋಷದಿಂದ ಮಾರುವರೆಂದೂ ಹೇಳಿಕೊಂಡರು. ನಮ್ಮ ಊರ ಜೋಡಿದಾರರಿಗೆ ಬೈಲಹಳ್ಳಿಯ ಮೇಲೂ ಅಲ್ಲಿಯ ರೈತರ ಮೇಲೂ ಅಷ್ಟೊಂದು ಮಮತೆಯಿಲ್ಲದಿದ್ದರೂ ರೈತರಿಗೆ ಸಹಾಯವಾದೀತೆಂದು ಒಪ್ಪಿಕೊಂಡರು. ಶಾಮಯ್ಯಂಗಾರ್ರು ಸಂತೋಷದಿಂದಲೇ ಗ್ರಾಮವನ್ನು ನಮ್ಮ ಜೋಡಿದಾರರಿಗೆ ಮಾರಿದರು. ಸರ್ಕಾರದವರು ನಮ್ಮ ಊರು ಪ್ರಾಂತ್ಯದಲ್ಲಿ ಅದೇ ಕಾಲದಲ್ಲಿ 'ರಿಸರ್ವೆ'ಯನ್ನು ಪ್ರಾರಂಭಿಸಿದುದರಿಂದ ನಮ್ಮ ಊರು ಜೋಡಿದಾರರು ಬೈಲಹಳ್ಳಿಯನ್ನೂ ಸರ್ವೆ ಮಾಡಿಸಿ

ಅಲ್ಲಿಯ ಲೆಕ್ಕ ಪತ್ರಗಳನ್ನು ಕ್ರಮಪಡಿಸಿಕೊಡಬೇಕೆಂದು ಸರ್ಕಾರಕ್ಕೆ ಬರೆದು ಕೊಂಡಿದ್ದರು. ಈಗ ಬಂದಿದ್ದ 'ಇಂಡಾರ್ಸುಮೆಂಟು' ಅದರ ಫಲವಾಗಿದ್ದಿತು.

ಜೋಡಿದಾರರಿಗೆ ಅಮಲ್ದಾರರಿಂದ ಬಂದ 'ಆರ್ಡರಿನಲ್ಲಿ' ಮೋಜಿನಿ ದಾರರು ಬರುತ್ತಾರೆಂದು ಬರೆದಿದ್ದಿತೇ ಹೊರತು ಯಾವ ದಿವಸ ಯಾರು ಬರು ತ್ತಾರೆ ಎಂಬ ವಿಚಾರಗಳು ಅದರಲ್ಲಿ ಇರಲಿಲ್ಲ. ಆದರೂ ಮೋಜಿನಿದಾರರು ಮೊದಲು ನಮ್ಮ ಊರಿಗೆ ಬಂದು ಎರಡು ಮೂರು ದಿವಸ ಸುಧಾರಿಸಿಕೊಂಡು ಅನಂತರ ಬೈಲಹಳ್ಳಿಗೆ ಹೋಗಬಹುದೆಂದು ತಿಳಿದು ಜೋಡಿದಾರರು, ಓಲೆಗರಿ ಪುಸ್ತಕಗಳೂ ತಿರುಪ ಕೊಡೆಗಳೂ, ನಾಮದ ಗೆಡ್ಡೆಗಳೂ ತುಂಬಿದ್ದ ಒಂದು ಕೊಠಡಿಯನ್ನು ಧೂಳು ಹೊಡೆಸಿ, ಅವರಿಗಾಗಿ ಸಿದ್ಧಮಾಡಿದ್ದರು. ಮೋಜಿನಿ ದಾರರು ಈ ದಿವಸ ನಾಳೆ ಬರಬಹುದೆಂದು ಅದೇ ನಿರೀಕ್ಷಣೆಯಲ್ಲಿದ್ದರು. ನಾಲ್ಕು ಐದು ದಿನಗಳ ನಂತರ ಒಂದು ಬೆಳಿಗ್ಗೆ ಆರು ಗಂಟೆಗೆ ಮೋಜಿನಿದಾರರೂ ಅವರ ಸ್ನೇಹಿತರೊಬ್ಬರೂ ನಮ್ಮ ಊರಿಗೆ ಹತ್ತು ಮೈಲಿ ಇರುವ ಮಾವಿನಕೆರೆ ಸ್ಟೇಷನ್ನಿನಿಂದ ನಡೆದುಕೊಂಡುಬಂದರು.

ಜೋಡಿದಾರರ ಮನೆಯ ಮುಂದೆ ದೇವಸ್ಥಾನವಿದೆ. ಸ್ವಲ್ಪ ಬಿಸಿಲು ಹತ್ತಿದ ಕೂಡಲೇ ಮೋಜಿನಿದಾರರೂ ಅವರ ಜತೆಯಲ್ಲಿ ಬಂದಿದ್ದ ಅವರ ಸ್ನೇಹಿತರೂ ದೇವಸ್ಥಾನದ ಮುಂದೆ ಬಿಸಿಲಿನಲ್ಲಿ ಕುಳಿತು ತಮ್ಮ ಬಟ್ಟೆಗಳಲ್ಲಿ ಜೇನುಹುಳುಗಳ ಮುಳ್ಳುಗಳಂತೆ ಸೇರಿಕೊಂಡಿದ್ದ ಪಾಪಾಸು ಕಳ್ಳಿಯ ಮುಳ್ಳು ಗಳನ್ನೆಲ್ಲಾ ಆಯುತ್ತಿದ್ದರು. ಮಧ್ಯೆಮಧ್ಯೆ ಮೋಜಿನಿದಾರರು ತಮ್ಮ ದೇಹಕ್ಕೆ ಚುಚ್ಚಿಕೊಂಡಿದ್ದ ಪಾಪಾಸು ಕಳ್ಳಿಯ ಮುಳ್ಳುಗಳನ್ನು ಕೀಳುತ್ತಿದ್ದರು. ಆಗಿನ ಅವರ ಮುಖಭಾವವು ಬಹಳ ವಿನೋದಕರವಾಗಿತ್ತು.

ಆ ಮೋಜಿನಿದಾರರು ತಮ್ಮ ಕಸಬಿನವರಿಗೆ ಗೌರವ ತರುವವನಾಗಿರಲಿಲ್ಲ. ಅವರು ಮುಖದಲ್ಲಿ ಉಪ್ಪಿಲ್ಲದ ಸಪ್ಪೆ ಮನುಷ್ಯರಾಗಿದ್ದರು. ಅವರಿಗೆ ಗಟ್ಟಿ ಯಾಗಿ ಮಾತನಾಡುವುದಕ್ಕೆ ಕೂಡ ತ್ರಾಣವಿರಲಿಲ್ಲ. ಅವರ ವಯಸ್ಸು ನಲ ವತ್ತಕ್ಕೆ ಮೀರಿರಲಿಲ್ಲ. ಆದರೆ ಸಂಸಾರ ತಾಪತ್ರಯದಲ್ಲಿ ಬೆಂದು ಬಳಲಿದ್ದ ಅವರು ಮುದುಕನಂತೆಯೇ ತೋರುತ್ತಿದ್ದರು. ಅವರಿಗೆ ಸರ್ಕಾರಿ ಅಧಿಕಾರಿಗಳಿಗೆ ಸಹಜವಾಗಿ ಇರಬೇಕಾದ ಜಬರದಸ್ತೂ ದರ್ಪವೂ ಇರಲಿಲ್ಲ. ಅವರು ಸೋಮಾರಿ, ಹೇಡಿ, ಕೊಳಕ, ಕೈಯಲ್ಲಿ ಹರಿಯುವವರು ಎಂಬುದು ನೋಡಿದ ಕೂಡಲೆ ಗೊತ್ತಾಗುತ್ತಿದ್ದಿತು.

ಆದರೆ ಅವರ ಜತೆಯಲ್ಲಿ ಅವರ ಸಹಾಯಕ್ಕೆ ಬಂದಿದ್ದವನು ಬಹಳ ರಸಿಕ.

ಅವನ ವಯಸ್ಸು ಇಪ್ಪತ್ತೈದು ಇಪ್ಪತ್ತಾರಕ್ಕೆ ಮೀರಿರಲಿಲ್ಲ. ಅವನು ಕಾಯ ಪುಷ್ಟಿಯುಳ್ಳವನಾಗಿಯೂ ಶಕ್ತನಾಗಿಯೂ ಇದ್ದನು. ನಾನು ಅವನನ್ನು "ಬಟ್ಟೆ ಯಲ್ಲಿ ಅಷ್ಟು ಮುಳ್ಳು ಹೇಗೆ ಸೇರಿತು?" ಎಂದು ಕೇಳಿದೆ. ಮೋಜಿನಿದಾರರೇ "ಮುಳ್ಳಿನ ಮೇಲೆ ಕಾಣದೆ ಬಟ್ಟೆಗಳನ್ನು ಒಣಗಿಸಿದ್ದೆವು" ಎಂದರು. ಈ ಉತ್ತರದಿಂದ ನನಗೆ ಸಮಾಧಾನವಾಗಲಿಲ್ಲ. ಮೋಜಿನಿದಾರರು ಏನನ್ನೋ ಮುಚ್ಚಲು ಪ್ರಯತ್ನಿಸುತ್ತಿರುವರೆಂಬುದು ಗೊತ್ತಾಯಿತು. ಮತ್ತು ಕೃಷ್ಣಪ್ಪನು (ಮೋಜಿನಿದಾರರ ಜತೆಯಲ್ಲಿ ಬಂದಿದ್ದ ಅವರ ಸ್ನೇಹಿತ) ಮೋಜಿನಿದಾರರ ಮಾತುಗಳನ್ನು ಕೇಳಿ ನಗುತ್ತಿದ್ದನು. ವಿಚಾರವೇನೊ ನಡೆದಿದೆ ಎಂದುಕೊಂಡು ನಾನು "ಇಲ್ಲಿ ಪಾಪಾಸ್ ಕಳ್ಳಿ ಮುಳ್ಳೆ ಇಲ್ಲವಲ್ಲಾ" ಎಂದೆ. ಮೋಜಿನಿದಾರರು ಹೆಚ್ಚು ಹೊತ್ತು ನಿಲ್ಲಲು ಇಷ್ಟಪಡದೆ "ಯಾಕೆ ಇಲ್ಲ. ಇದೆ ಇದೆ" ಎಂದುಕೊಂಡು ಒಳಕ್ಕೆ ಹೊರಟುಹೋದರು. ಕೃಷ್ಣಪ್ಪನು ಅವರು ಹೋದನಂತರ ನಗುತ್ತಾ "ಸ್ವಾಮಿ, ನಾವು ನೆನ್ನೆ ರಾತ್ರಿ ಪಟ್ಟಪಾಡು ಯಾವ ನಾಯಿಗೂ ಬೇಡ. ಕಾಡು ಕೊಂಪೇಲಿರೊ ಈ ಹಾಳು ಹಳ್ಳಿ ಕಂಡುಹಿಡಿಯಬೇಕಾದರೆ ನಮ್ಮ ಪ್ರಾಣವೇ ಹೋಯಿತು" ಎಂದನು. ನಾಣಿಯು, "ಅಯ್ಯೋ ಪಾಪ ಅಲ್ಲವೆ. ನೀವು ಹೊಸ ಬರು. ರಾತ್ರಿ ಹೊತ್ತು, ಈ ಹಳ್ಳಿಗೆ ರಸ್ತೆ ಬೇರೆ ಇಲ್ಲ. ಆದರೆ ನೀವು ರಾತ್ರಿ ಯಾಕೆ ಬಂದಿರಿ. ಹಗಲು ಹೊತ್ತು ಬರಬಹುದಾಗಿತ್ತಲ್ಲ. ಮೋಜಿನಿದಾರರು ಬಹಳ ಸೋತಂತೆ ಕಾಣುತ್ತಾರೆ" ಎಂದನು. ಆಗ ಕೃಷ್ಣಪ್ಪನು "ಆ ಸಮಾಚಾರ ಎಲ್ಲಾ ಬಹಳ ಇದೆ. ಆದರೂ ನೆನ್ನೆ ನಾವು ಪಟ್ಟ ಅವಸ್ಥೆ ಒಂದೆರಡು ಮಾತಿನಲ್ಲಿ ಹೇಳುತ್ತೇನೆ, ಕೇಳಿ" ಎಂದನು.

"ನಾವು ಮೊನ್ನೆ ರಾತ್ರಿ ಬೆಂಗಳೂರಿನಿಂದ ಹೊರಟು ಅರಸೀಕೆರೆ ರೈಲು ಹತ್ತಿ ಬೆಳಗಿನ ಹೊತ್ತಿಗೆ ಇಲ್ಲಿಗೆ ಬರಬೇಕೆಂದು ಬೆಂಗಳೂರು ರೈಲು ಸ್ಟೇಷನ್ನಿಗೆ ಬಂದೆವು. ಮೋಜಿನಿದಾರರಿಗೆ ಪಾಪ ನಶ್ಯದ ಭ್ರಮೆ ಹೆಚ್ಚು. ನನಗೂ ನಶ್ಯದ ಭ್ರಮೆ ಅನ್ನಿ. ಪುಡಿನಶ್ಯದಲ್ಲಿ ಸಾರವಿಲ್ಲದುದರಿಂದ ಮಡ್ಡಿ ನಶ್ಯವನ್ನೆ ಹಾಕಿಕೊ ಳ್ಳುವ ಪದ್ಧತಿ ಇಟ್ಟಿದ್ದೇನೆ. ಮೋಜಿನಿದಾರರು ಸ್ಟೇಷನ್ನಿನಲ್ಲಿ ಸೊಂಟಕ್ಕೆ ಕೈಹಾಕಿ ನೋಡಿದರು. ಸುಣ್ಣ ಮರೆತು ಬಂದಿದ್ದರು. ಏನು ಮಾಡುವುದು? ಸುಣ್ಣ ಇಲ್ಲ ದಿರುವಾಗ ನಶ್ಯ ಹಾಕುವ ಭ್ರಮೆ ಜಾಸ್ತಿ. ಬೆಂಕಿಕಡ್ಡಿ ಇಲ್ಲದಿರುವಾಗ ಬೀಡಿ ಸೇದೋ ಭ್ರಮೆ ಹೆಚ್ಚು. ಮೋಜಿನಿದಾರರು ಯಾರಲ್ಲಿಯಾದರೂ ಸುಣ್ಣ ವಿದೆಯೇ ಎಂಬುದಾಗಿ ಸುತ್ತಾ ನೋಡಿದರು. ಆದರೆ ಯಾರಲ್ಲಿಯೂ ಇದ್ದಂತೆ ತೋರಲಿಲ್ಲ. ಗೂಡ್ಸ್‌ಷೆಡ್ಡಿನ ಬಳಿ ಒಬ್ಬರು ಐಯ್ಯಂಗಾರು ನಿಂತಿದ್ದರು. ಅವ

ರನ್ನು ನೋಡಿದ ಕೂಡಲೇ ಅವರು ನಶ್ಯ ಹಾಕುವವರೆಂದು ಮೋಜಿನಿದಾರರಿಗೆ ಗೊತ್ತಾಯಿತು. ಆ ವಿಷಯ ಮನಸ್ಸಿಗೆ ಹೊಳೆದ ಕೂಡಲೆ ನನಗೂ ಬಹಳ ಆನಂದವಾಯಿತು. ರೈಲು ಹೊರಡುವುದಕ್ಕೆ ಎರಡು ಮೂರು ನಿಮಿಷವಿತ್ತು. ಆದರೆ ಆ ರೈಲು ಪ್ರತಿದಿನವೂ ಐದು ಅಥವಾ ಹತ್ತು ನಿಮಿಷ ಸಾವಕಾಶವಾಗಿ ಹೊರಡುತ್ತಿದ್ದಿತು. ನಮಗೆ ರೈಲು ಹೊರಟು ಹೋಗುವುದೆಂದು ಗಾಬರಿಯಾಗ ಲಿಲ್ಲ. ನಾನು ಸಾಮಾನುಗಳ ಬಳಿ ನಿಂತಿದ್ದು ಮೋಜಿನಿದಾರರನ್ನು ಸುಣ್ಣಕ್ಕೆ ಐಯ್ಯಂಗಾರ್ರ ಬಳಿಗೆ ಕಳುಹಿಸಿದೆ.

ಸುಣ್ಣವನ್ನು ಕೇಳಿದಕೂಡಲೆ ಐಯ್ಯಂಗಾರ್ರು ಧಾರಾಳವಾಗಿ ಸೊಂಟದಿಂದ ತೆಗೆದುಕೊಟ್ಟು 'ಇಲ್ಲೆ ನಶ್ಯಮಾಡಿ' ಎಂದರು. ಮೋಜಿನಿದಾರರಿಗೆ ರೈಲು ಎಲ್ಲಿ ಹೊರಟು ಹೋಗುವುದೊ ಎಂಬ ಗಾಬರಿ ವಿಶೇಷವಾಗಿತ್ತು. ಅವರು ರೈಲು ಕಡೆ ನೋಡುತ್ತಾ 'ಇಲ್ಲ ಸ್ವಾಮಿ ಹೊತ್ತಾಯ್ತು. ರೈಲು ಇನ್ನೇನು ಹೊರಟಿತು' ಎಂದರು. ಐಯ್ಯಂಗಾರ್ರು "ಏನೂ ಇಲ್ಲ ಸ್ವಾಮಿ. ಆ ರೈಲು ಇನ್ನೂ ಅರ್ಧ ಗಂಟೆ ನಿಲ್ಲುತ್ತೆ. ಗುಂಟ್ಕಲ್ ರೈಲು ಬರದೆ ಇದೆಲ್ಲಿ ಹೊರಡುತ್ತೆ ? ಇಲ್ಲೆ ನಿಂತ್ಕೊಂಡು ನೋಡ್ತಾ ಇದ್ದೇವಲ್ಲ. ಫಸ್ಟ್‌ಬೆಲ್, ಸೆಕೆಂಡ್‌ಬೆಲ್, ಥರ್ಡ್‌ಬೆಲ್ ಎಲ್ಲಾ ಆಗಬೇಡವೆ. ಗಾರ್ಡು ಶಿಳ್ಳು ಊದಬೇಡವೆ ? ಈ ರೈಲು ಹೊರಟ ಮೇಲೆ ಕೂಡ ಓಡಿಹೋಗಿ ಹಿಡಿಯಬಹುದು. ದಾರೀಲಿ ಹೋಗ್ತಾ ಇರೋವಾಗ ಇಳಿದು ಹತ್ತಬಹುದು. ಜೋರಾಗಿ ಹೋಗುವುದರಲ್ಲಿ ಮದರಾಸು ರೈಲು ಸ್ವಾಮಿ. ಮದರಾಸಿನಿಂದ ಅರಕೋಣಂಗೆ ಹೋಗುವ ರೈಲಿನಲ್ಲಿ ಕೂತರೆ ಸರಿ ಯಾದ ರೈಲು ಎಷ್ಟು ವೇಗವಾಗಿ ಹೋಗುವುದೆಂಬುದು ಗೊತ್ತಾಗುತ್ತೆ" ಎಂದರು.

ಮೋಜಿನಿದಾರರಿಗೆ ರೈಲು ಎಲ್ಲಿ ಹೊರಟುಹೋಗುತ್ತೊ ಎನ್ನುವ ಗಾಬರಿಯಿದ್ದರೂ ಸುಣ್ಣದ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಐಯ್ಯಂಗಾರ್ರ ಮಾತಿಗೆ ಹು ಹು ಎನ್ನುತ್ತಿದ್ದರು. ನಾವು ಮೊದಲು ಸ್ಟೇಷನ್ನಿಗೆ ಬಂದಾಗಲೆ ಮೊದಲನೆ ಗಂಟೆ ಆಗಿತ್ತು. ಮೋಜಿನಿದಾರರು ನಶ್ಯವನ್ನು ಪುಡಿಮಾಡಿ ಕೈಮೇಲೆ ಹರಡಿ ಕೊಂಡು ಅದನ್ನು ಅಲ್ಲಾಡಿಸುತ್ತಾ ತೂರುತ್ತಿರುವಾಗ ಇನ್ನೊಂದು ಗಂಟೆ ಆಯಿತು. ಗಾರ್ಡು ಕೂಡಲೆ ಶಿಳ್ಳು ಊದಿದನು. ರೈಲು ಸಕಾಲದಲ್ಲಿ ಹೊರಟಿತು.

ರೈಲು ಹೊರಟುದನ್ನು ಕಂಡು ನಾನು ಕೂಗಿಕೊಂಡೆ. ಮೋಜಿನಿದಾರರು ಓಡಿಬಂದರು. ನಮಗೆ ರೈಲು ಸಿಕ್ಕುವ ಹಾಗೆ ಇತ್ತು. ಆದರೆ 'ಟಿಕೆಟ್ ಕಲೆಕ್ಟರ್' ನಮಗೆ ರೈಲು ಹತ್ತಲು ಅವಕಾಶವನ್ನು ಕೊಡಲಿಲ್ಲ. ನಾವಿಬ್ಬರೂ

ನಿರಾಶರಾಗಿ ರೈಲಿನ ಕಡೆ ನೋಡುತ್ತಾ ನಿಂತುಕೊಂಡೆವು. ಐಯ್ಯಂಗಾರ್‍ರು ಮೋಜಿನಿದಾರರು ಅವಸರದಲ್ಲಿ ತಮ್ಮ ಕೈಗೆ ಹಾಕಿದ್ದ ಬಿಸಿ ನಶ್ಯವನ್ನು ನಿಧಾನವಾಗಿ ಸೇದುತ್ತಾ ನಿಂತಿದ್ದರು.

ಆಗ ನಾವು ನಮ್ಮ ನಮ್ಮ ಮನೆಗಳಿಗೆ ಹೋಗಿ ಮರುದಿವಸ ಬೆಳಿಗ್ಗೆ ಅಂದರೆ ನೆನ್ನೆ ಬೆಳಿಗ್ಗೆ ಸ್ಟೇಷನ್ನಿಗೆ ಬಂದೆವು. ಆಗ ಮತ್ತೊಂದು ರೈಲು ಈ ಕಡೆಗೆ ಹೊರಡುವದಾಗಿದ್ದಿತು. ಏಳುವರೆ ಗಂಟೆಗೆ ಹೊರಡಬೇಕಾದ ಆ ರೈಲು ಐದು ನಿಮಿಷ ನಿಧಾನವಾಗಿ ಹೊರಟಿತು. ಆಗ ಮೋಜಿನಿದಾರರು "ಹಾಳಾದ್ದು ರೈಲು ನೆನ್ನೆ ಎರಡು ನಿಮಿಷಗಳಾದರೂ 'ಲೇಟ್' ಆಗಿ ಹೊರಡಬಾರದಾಗಿತ್ತೆ ? ಆಗ ನಮಗೆ ತಪ್ಪುತ್ತಲೇ ಇರಲಿಲ್ಲ" ಎಂಬುದಾಗಿ ಅನೇಕ ಸಲ ಹೇಳಿದರು. ಅಂತೂ ಅರಸೀಕೆರೆಯಲ್ಲಿ ರೈಲನ್ನು ಬದಲಾಯಿಸಿ ರಾತ್ರಿ ಹತ್ತುವರೆ ಗಂಟೆಗೆ ಮಾವಿನಕೆರೆಯಲ್ಲಿ ಕಣ್ಣನ್ನು ತಿಕ್ಕಿಕೊಳ್ಳುತ್ತಾ ರೈಲಿನಿಂದ ಕೆಳಕ್ಕೆ ಇಳಿದೆವು.

ನಾವು ಮಾವಿನಕೆರೆಗೆ ಬಂದಾಗ ರಾತ್ರಿ ಬಹಳ ಕತ್ತಲೆಯಾಗಿತ್ತು. ಮುಂದಕ್ಕೆ ದಾರಿ ಕಾಣುತ್ತಿರಲಿಲ್ಲ. ಹಾಸನದಿಂದ ಬೈಲಹಳ್ಳಿಯು ಎಂಟು ಮೈಲಿ ದೂರವೆಂದೂ, ದಾರಿಯು ಸರಿಯಾಗಿಲ್ಲವೆಂದೂ, ಉದ್ದಕ್ಕೂ ಕಲ್ಲು ಮುಳ್ಳು ಹೆಂಟೆಗಳು ತುಂಬಿರುವುದೆಂದೂ ಕೇಳಿದ್ದೆವು. ನಮ್ಮ ಬಳಿ ಒಂದು ದೀಪವೂ ಇರಲಿಲ್ಲ. ಸ್ಟೇಷನ್ ಮಾಸ್ತರನ್ನು 'ಒಂದು ದೀಪ ಕೊಡಿ' ಎಂಬುದಾಗಿ ಕೇಳಿದೆವು. ಅವರು ಇಲ್ಲೆ ಮಲಗಿದ್ದು ಬೆಳಿಗ್ಗೆ ಮುಂದಕ್ಕೆ ಹೊರಡಿ. ಈ ರಾತ್ರಿ ನಿಮಗೆ ಊರು ಸಿಕ್ಕುವುದಿಲ್ಲ ಎಂದು ಹೇಳಿದರು. ಮೋಜಿನಿದಾರರೂ 'ಸ್ಟೇಷನ್ನಿನಲ್ಲಿಯೇ ಮಲಗಿದ್ದು ಬೆಳಿಗ್ಗೆ ಹೊರಡೋಣ' ಎಂದು ಹೇಳಿದರು. ನಾನೂ ಸುಮ್ಮನೆ ಇದ್ದಿದ್ದರೆ ಚೆನ್ನಾಗಿತ್ತು. ಮೈಕೊಬ್ಬಿನಿಂದ "ಈಗಲೆ ಹೋಗೋಣ. ಯಾಕೆ ಹೆದರ್ತೀರಿ. ದೀಪ ಇಲ್ದಿದ್ರೆ ಬೇಡ. ಸ್ವಲ್ಪ ಹೊತ್ತು ನಡೆದ ಮೇಲೆ ಕಣ್ಣು ಕತ್ತಲೆಯೊಂದಿಗೆ ಹೊಂದಿಕೊಂಡು ಸರಿಹೋಗುತ್ತೆ. ಬೆಳಕು ಕಾಣುತ್ತೆ. ರಸ್ತೆ ಇಲ್ಲದಿದ್ದರೆ ಬೇಡ. ಬೈಲಹಳ್ಳಿ ಯಾವ ದಿಕ್ಕಿನಲ್ಲಿದೆಯೋ ಆ ನೇರದಲ್ಲಿ ನೆಟ್ಟಗೆ ಹೋದರೆ ಆಯಿತು. ಬನ್ನಿ ಎಂದೆ. ಮೋಜಿನಿದಾರರು 'ಲೊ, ಹೆಡ್ಡನಾದರು ದೊಡ್ಡವನು ವಾಸಿ. ನಾನು ಹೇಳಿದ ಹಾಗೆ ಕೇಳು, ಸುಖವುಂಟು' ಎಂದರು. ನಾನು ಕೇಳದೆ ಹೊರಟೇಬಿಟ್ಟೆ. ಮೋಜಿನಿದಾರರು 'ನೀನು ಇನ್ನೂ ಹುಡುಗ. ನಿನಗೆ ಅನುಭವವಾಗಲಿ' ಎಂದು ಹೇಳಿ ಇಷ್ಟವಿಲ್ಲದಿದ್ದರೂ ನನ್ನಯಲ್ಲಿ ಹೊರಟೇಬಿಟ್ಟರು.

ನಾವು ಒಂದು ಗಂಟೆ ನಡೆದು ಒಂದು ಹಳ್ಳಿಯ ಸಮೀಪಕ್ಕೆ ಬಂದೆವು.

ಅಲ್ಲಿಂದ ನಮಗೆ ಮದ್ದಳೆ ತಾಳ ಏಕನಾದ ಮುಂತಾದುವುಗಳ ಧ್ವನಿ ಕೇಳಿಸಿತು. ಕತ್ತಲೆಯಲ್ಲಿ ಕಾಣದಿದ್ದರೂ ಧ್ವನಿ ಬರುತ್ತಿದ್ದ ಕಡೆಗೆ ಹೊರಟೆವು. ಅದೊಂದು ಇಪ್ಪತ್ತೈದು ಮುವ್ವತ್ತು ಮನೆಗಳಿದ್ದ ಆದಿಕರ್ನಾಟಕರ ಕೇರಿ. ಜನರು ಊರಿನ ಮಧ್ಯದ ಚಾವಡಿಯಲ್ಲಿ ಸೇರಿಕೊಂಡು ಯಕ್ಷಗಾನದ ಆಟವನ್ನು ಅಭ್ಯಾಸಮಾಡುತ್ತಿದ್ದರು. ನಾವಿಬ್ಬರೂ ಅದು 'ಹೊಲಗೇರಿ' ಎಂಬುದು ತಿಳಿಯದೆ ಧೈರ್ಯವಾಗಿ ಆ ಮನೆಯ ಬಳಿಗೆ ಹೋಗಿ 'ಬೈಲಹಳ್ಳಿಗೆ ದಾರಿ ಯಾವುದಯ್ಯ' ಎಂಬುದಾಗಿ ಕೂಗಿದೆವು. ಆದಿಕರ್ನಾಟಕರೆಲ್ಲಾ 'ಅಯ್ಗೊಳು ಹಟ್ಟಿಗೆ ಬಂದವ್ರೆ, ಹಿಡ್ಕೊಳಿರ್ಲಾ' ಎಂಬುದಾಗಿ ಹೇಳಿಕೊಂಡು ಎದ್ದರು. ನಾವು ಆದಿಕರ್ನಾಟಕರ ಕೇರಿಗೆ ಬಂದಿದ್ದೆವೆಂದು ಆಗ ಗೊತ್ತಾಯಿತು. ನಾವು ತತ್‌ಕ್ಷಣ ಓಡುವುದಕ್ಕೆ ಪ್ರಾರಂಭಿಸಿದೆವು. ನಮ್ಮನ್ನು ಅಟ್ಟಿಸಿಕೊಂಡು ಆದಿಕರ್ನಾಟಕರೂ ಹಿಂದೆ ಬಂದರು. ಸ್ವಲ್ಪ ದೂರ ಓಡುವುದರೊಳಗಾಗಿ ಎದುರಿಗೆ ಒಂದಾಳುದ್ದದ ಒಂದು ಬೇಲಿ ಅಡ್ಡ ಬಂತು. ಬೇರೆ ಕಾದದಲ್ಲಾಗಿದ್ದಿದ್ದರೆ ಬೇಲಿ ಹಾರುವುದಕ್ಕೆ ನಮಗೆ ಹೇಗೂ ಸಾಧ್ಯವಾಗುತ್ತಿರಲಿಲ್ಲ. ಆದರೆ ಆಗ ಮಾತ್ರ ಗಾಬರಿಯಿಂದ ಒಂದೇ ನೆಗತಕ್ಕೆ ಆಂಜನೇಯಗಳಂತೆ ಅದನ್ನು ಹಾರಿಬಿಟ್ಟೆವು. ನಮ್ಮ ಬಟ್ಟೆಗಳಲ್ಲಿ ಅಂಟಿಕೊಂಡಿರುವ ಮುಳ್ಳುಗಳೆಲ್ಲಾ ಆ ಬೇಲಿಯವೆ.

ಆದಿಕರ್ನಾಟಕರಿಗೆ ನಮ್ಮಷ್ಟು ಗಾಬರಿ ಇರಲಿಲ್ಲವಾಗಿ ಅವರು ಬೇಲಿಯನ್ನು ಹಾರಲಾರದೆ ಅಲ್ಲೆ ನಿಂತರು. ಅದನ್ನು ಕಂಡು ನಮಗೆ ಸ್ವಲ್ಪ ಧೈರ್ಯ ಬಂದಿತು. ನಾವಿಬ್ಬರೂ ವೇಗವನ್ನು ಕಡಿಮೆಮಾಡಿದೆವು. ಮೋಜಿನಿದಾರರು 'ಅಲ್ಲಯ್ಯ, ದಾರಿ ಕೇಳಿದರೆ ಈ ರಾತ್ರೀಲಿ ನಮ್ಮನ್ನ ಹುಚ್ಚು ನಾಯಿಗಳನ್ನು ಅಟ್ಟಿಸಿಕೊಂಡು ಬಂದಂತೆ ಅಟ್ಟಿಸಿಕೊಂಡು ಬರ್ತೀರಾ?' ಎಂದರು. ನಿಮ್ಮ ಊರು ಜೋಡಿದಾರರು ಎಲ್ಲೆಲ್ಲೂ ಹೆಸರಾಗಿದ್ದಾರೆ ಸ್ವಾಮಿ, ಅವರ ಹೆಸರು ಕೇಳಿದ ಕೂಡಲೆ ಆದಿಕರ್ನಾಟಕರು ಮೆತ್ತಗಾದರು.ಅವರಲ್ಲಿ ಮುಂದಾಳಾದ ಒಬ್ಬನು 'ಯಾರಾದ್ರು ಹೋಗಿ ದಾರಿ ತೋರಿಸಿ ಬನ್ರಪ್ಪ. ದಣಿಗೊಳ್ಗೆ ತಿಳಿದ್ರೆ ಸಿಟ್ಟು ಮಾಡ್ತಾರು. ನೀನೇ ಹೋಗ್ಬಾರೊ ಕೆಂಚ' ಎಂದನು. ಮೋಜಿನಿದಾರರು 'ನಾವು ಹೋಗೋದೆ ಬೈಲಹಳ್ಳಿ ಜೋಡಿದಾರರನ್ನ ಕಾಣೋದಕ್ಕೆ. ಇದೆಲ್ಲಾ ತಿಳಿದ್ರೆ ಅವರು ಎಷ್ಟು ನೊಂದ್ಕೊತಾರೊ' ಎಂದರು. ಆದಿಕರ್ನಾಟಕರ ಕೆಂಚನು 'ಬಿಡ್ರಪ್ಪ ನಾನೇ ಕರ್ಕೊಂಡ್ಹೋಗಿ ದಾರಿ ತೋರಿಸಿ ಬರ್ತೀನಿ. ಕೆಂಚ ಕರ್ಕೊಂಡು ಬಂದ ಅಂತ ದಣಿಗಳ್ಗೆ ಅಷ್ಟೆ ಮಾಡೋದ್ನ ಮರಿಬೇಡಿ' ಎಂದನು. ಮೋಜಿನಿದಾರರು ನನ್ನೊಂದಿಗೆ ತಪ್ಪು ತಪ್ಪು ಇಂಗ್ಲಿಷಿನಲ್ಲಿ 'ಬೇಲಿ ಹಾರಿದ್ರು ಚಿಂತೆ ಇಲ್ಲ. ಈ

ಕತ್ತಲೇಲಿ ದಾರಿ ತೋರಿಸೋನೊಬ್ಬ ಸಿಕ್ಕಿದನಲ್ಲ' ಎಂದರು. ಮೂರು ಜನವೂ ಮುಂದೆ ಹೊರಟೆವು.

ಕೆಂಚನ ಸಮಾಚಾರ ಕೇಳಿ ಸ್ವಾಮಿ. ಅವನು ನಮ್ಮ ಗ್ರಹಚಾರಕ್ಕೆ ದೊಡ್ಡ ಕುಡುಕ. ನೆನ್ನೆ ರಾತ್ರಿಯಂತೂ ಕಂಠಪೂರ್ತಿಯಾಗಿ ಕುಡಿದಿದ್ದ. ಮತ್ತಿನಿಂದ ನಿಲ್ಲಲಾರದೆ ತೂರಿಯಾಡುತ್ತಿದ್ದ. ಹೆಂಡದ ಅಮಲಿನಲ್ಲಿ ಅವನಿಗೆ ಸರಿಯಾದ ದಾರಿ ತಿಳಿಯಲಿಲ್ಲ. ಅವನು ಮನಸ್ಸಿಗೆ ತೋರಿದಂತೆ ಹಾಡುತ್ತಾ,ಎಡವಿ ಬೀಳುತ್ತಾ ಎಡಕ್ಕೂ, ಬಲಕ್ಕೂ, ತೂರಾಡಿಕೊಂಡು ನಡೆಯುತ್ತಿದ್ದ. ಬೈಲಹಳ್ಳಿಗೆ ದಾರಿಯಾವುದೆಂದು ನಾವು ಅವನನ್ನು ಎಂಟು ಹತ್ತು ಸಲ ಕೇಳಿದುದು ವ್ಯರ್ಥವಾಯಿತು.

"ನಾಲ್ಕು ಹೆಜ್ಜೆ ನಡೆಯುವುದರೊಳಗಾಗಿ ಕೆಂಚನಿಗೆ ಹೆಂಡದ ಅಮಲು ಮತ್ತಷ್ಟು ಏರಿ ಅವನು ದಾರಿಯಲ್ಲಿದ್ದ ಮರದ ಕೆಳಗೆ ಮಲಗಿ ಗೊರಕೆ ಹೊಡೆಯಲು ಪ್ರಾರಂಭಿಸಿದನು. ಅವನನ್ನು ಎಬ್ಬಿಸಲು ನಾವಿಬ್ಬರೂ ಪಟ್ಟ ಪ್ರಯತ್ನವೆಲ್ಲಾ ವ್ಯರ್ಥವಾಯಿತು. ಮೋಜಿನಿದಾರರ ಮನಸ್ಸು ಮೃದುವಾದುದರಿಂದ ಅವರು, 'ಪಾಪ, ಕಾಡಿನಲ್ಲಿ ಒಬ್ಬನನ್ನೆ ಬಿಡುವುದೇ' ಎಂದು ಸ್ವಲ್ಪ ಹಿಂದು ಮುಂದೆ ನೋಡಿದರು. ಅಂತೂ ಕೆಂಚನನ್ನು ಅಲ್ಲಿಯೆ ಬಿಟ್ಟು ನಾವಿಬ್ಬರೇ ಮುಂದೆ ಹೊರಟೆವು. ಸ್ವಲ್ಪದೂರ ಬರುವುದರೊಳಗಾಗಿ ಅಲ್ಲೊಂದು ಚಿಕ್ಕ ದೇವಾಲಯವು ಕಣ್ಣಿಗೆ ಬಿದ್ದಿತು. ನಾವಿಬ್ಬರೂ ಆ ದೇವಾಲಯವನ್ನೆ ಗುರುತಾಗಿ ಇಟ್ಟುಕೊಂಡು ಹೊರಟೆವು. ನಾವು ದೇವಾಲಯದಿಂದ ಒಂದು ದಿಕ್ಕಿಗೆ ಸುಮಾರು ಮೂರು ಮೈಲಿ ನಡೆದು ಒಂದು ಕಡೆ ನಿಂತೆವು. ಅಲ್ಲಿ ಮತ್ತೆ ಅದೇ ದೇವಾಲಯವೆ ಕಣ್ಣಿಗೆ ಬಿದ್ದಿತು. ಹೀಗೆ ನೆನ್ನೆ ರಾತ್ರಿ ಆ ದೇವಾಲಯಕ್ಕೆ ನಾವು ನಾಲ್ಕು ಸಲ ಸುತ್ತಿ ಸುತ್ತಿ ಬಂದೆವು. ಮಾವಿನಕೆರೆಯಿಂದ ಈ ಊರು ಏಳು ಎಂಟು ಮೈಲಿ ಇರಬಹುದು. ಆದರೆ ನಾವು ನೆನ್ನೆ ರಾತ್ರಿಯೆಲ್ಲಾ ನಡೆದೆವು. ಏನ್ನು ಕಡಮೆ ಎಂದರೂ ಇಪ್ಪತ್ತು ಇಪ್ಪತ್ತೈದು ಮೈಲಿ ಸುತ್ತಿದ್ದೇವೆ. ಹೀಗೆ ಬೆಳಗಿನ ಜಾವದವರೆಗೆ ಸುತ್ತಿದಮೇಲೆ ನಾವು ಇನ್ನೂ ದೇವಸ್ಥಾನದ ಬಳಿಯೇ ದಾರಿ ತಿಳಿಯದೆ ನಿಂತಿದ್ದಾಗ ದೂರದಲ್ಲಿ ಈ ಊರು ಕಾಣಿಸಿತು. ಇಲ್ಲಿಗೆ ಬರಬೇಕೆಂದು ನಮಗೆ ಮೊದಲು ಉದ್ದೇಶವಿರಲಿಲ್ಲ. ಆದರೆ ಊರನ್ನು ಕಂಡಕೂಡಲೆ ಈ ಕಡೆ ಹೊರಟೆವು. ವಿಚಾರಿಸಿದುದರಲ್ಲಿ ಇದು ನಿಮ್ಮೂರೆಂದು ಗೊತ್ತಾಯಿತು."

ಕೃಷ್ಣಪ್ಪನ ಮಾತುಗಳನ್ನು ಕೇಳಿ ನನಗೂ ನಾಣಿಗೂ ಬಹಳ ನಗು

ಬಂದಿತು. ನಾಣಿಯು "ನೀವು ಸಾಮಾನ್ಯರಲ್ಲ, ಸ್ವಾಮಿ. ಈ ಪ್ರಾಂತ್ಯದವರು ನಿಮ್ಮನ್ನು ಜಾಗ್ರತೆ ಮರೆಯುವಂತೆ ಇಲ್ಲ" ಎಂದನು. ಆ ವೇಳೆಗೆ ಮೋಜಿನಿದಾರರು ಹೊರಕ್ಕೆ ಬಂದರು. ನಾಣಿಯು—

ನುಗ್ಗಿದ್ರಿ ಹೊಲೆಯಂದು ಹಟ್ಟಿ
ಹರ್‍ಕೊಂಡ್ರಿ ಉಟ್ಟಿದ್ದು ದಟ್ಟಿ
ಹೊರಳಿದ್ರಿ ಮುಳ್ಳಿನ ಮಟ್ಟಿ
ನೀವೇ ಬಾರಿ ಜಟ್ಟಿ

ಎಂದನು. ಇದನ್ನು ಕೇಳಿ ಮೋಜಿನಿದಾರರಿಗೆ ಬಹಳ ಆಶ್ಚರ್ಯವಾಯಿತು. ಅವರು "ಇದಾವ ಬುಕ್ಕಿನದು ಸ್ವಾಮಿ, ಪದ್ಯ?" ಎಂದರು. ಅವರಿಗೆ ನಾಣಿ ಯಾವ ಮಾತನಾಡಿದರೂ ಅದೊಂದು ಬಗೆಯ ಪದ್ಯವೇ ಎಂಬುದು ಗೊತ್ತಿರಲಿಲ್ಲ. ಪದ್ಯವನ್ನು ಯಾವುದೊ ಬುಕ್ಕಿನಿಂದಲೇ ತೆಗೆದು ಹಾಡಬೇಕು. ಅದು ರಾಮಾಯಣ ಭಾರತಕ್ಕೆ ಸಂಬಂಧಪಟ್ಟುದೆ ಆಗಿರಬೇಕು ಎಂದು ತಿಳಿದುಕೊಂಡಿದ್ದ ಅವರು ನಾಣಿಯು ನಿಂತಲ್ಲಿ ಯಾರಿಗೂ ತಿಳಿಯದೆ ಗುಟ್ಟಾಗಿದ್ದ, ತಾವು ಬೇಲಿ ಹಾರಿದ ವಿಷಯದ ಮೇಲೆ ಕವನಮಾಡಿದುದನ್ನು ಕೇಳಿ, ಬೆಪ್ಪಾದರು. ನಾಣಿಯ ಸ್ವಭಾವವೇ ಹೀಗೆ ಎಂದು ನಾನು ಅವರಿಗೆ ತಿಳಿಸಿದೆ. ನಾಣಿಯು ಹೇಳಿದ ಪದವು ಒಂದೇ ಗಳಿಗೆಯಲ್ಲಿ ನಮ್ಮೂರ ಹುಡುಗರ ಬಾಯಿಗೆ ಹತ್ತಿಹೋಯಿತು. ದಿವಸಕ್ಕೆ ಅಂತಹ ನೂರಾರು ಪ್ರಾಸಗಳನ್ನು ಸರಿಯಾಗಿಯೊ ತಪ್ಪಾಗಿಯೊ ಅರ್ಥದೊಂದಿಗೋ ಅರ್ಥವಿಲ್ಲದೆಯೋ ಕಟ್ಟುತ್ತಿದ್ದ ನಾಣಿಯೇನೊ ಅದನ್ನು ಮರೆತುಬಿಟ್ಟನು. ಆದರೆ ಹುಡುಗರು ಮರೆಯಲಿಲ್ಲ.

ಮೋಜಿನಿದಾರರು ನಮ್ಮ ಊರಿನಲ್ಲಿ ಇರುವವರೆಗೆ ಬೀದಿಬೀದಿಯಲ್ಲಿ ಹುಡುಗರು

ನುಗ್ಗಿದ್ರಿ ಹೊಲೆಯಂದು ಹಟ್ಟಿ
ಹರ್‍ಕೊಂಡ್ರಿ ಉಟ್ಟಿದ್ದು ದಟ್ಟಿ
ಹೊರಳಿದ್ರಿ ಮುಳ್ಳಿನ ಮಟ್ಟಿ
ನೀವೇ ಬಾರಿ ಜಟ್ಟಿ

ಎಂದು ಹಾಡುತ್ತಿದ್ದರು.

ಆ ಮಧ್ಯಾಹ್ನ ಊಟವಾದನಂತರ ಜೋಡಿದಾರರೂ ನಾನೂ ನಾಣಿಯೂ ಮೋಜಿನಿದಾರರೊಂದಿಗೆ ಸರ್ವೆಯ ವಿಚಾರವನ್ನು ಕುರಿತು ಚರ್ಚಿಸುತ್ತಾ ಕುಳಿತಿದ್ದೆವು. ನಮ್ಮೂರ ಅಂಗಡಿಗೆ ಎಲೆ, ಅಡಿಕೆ ಕೊಳ್ಳಲು ಬಂದಿದ್ದ ಬೈಲಹಳ್ಳಿ

ಪಟೇಲನೂ ಆ ವೇಳೆಗೆ ಅಲ್ಲಿಗೆ ಬಂದನು. ಮೋಜಿನಿದಾರರು ಬಂದ ಸಮಾಚಾರ ವನ್ನು ಜೋಡಿದಾರರು ಪಟೇಲನಿಗೆ ಹೇಳಿ ಗ್ರಾಮವನ್ನು ಅಳೆಯಲು ಅವರಿಗೆ ಎಲ್ಲಾ ಅನುಕೂಲಗಳನ್ನು ಒದಗಿಸಿಕೊಡಬೇಕೆಂದು ಸೂಚಿಸಿದರು. ಸುಬ್ಬೇ ಗೌಡನು ಸ್ವಲ್ಪಹೊತ್ತು ಯೋಚಿಸಿ "ಸ್ವಾಮಿ, ಇದು ಬಿತ್ತನೆಯ ಕಾಲ. ರೈತರಿಗೆ ಬಿಡುವಿಲ್ಲ. ವಣೆಗಳು ಪೈರು ಕಟಾವಾದ ಮೇಲೆ ಬಂದರೆ ರೈತರೆಲ್ಲ ಸರ್ಕಾರದ ಹುಕುಂನಂತೆ ನಡೆಯಲು ಸಿದ್ಧರಾಗಿರುತ್ತಾರೆ" ಎಂದನು. ಅನಂತರ ಮೋಜಿನಿ ದಾರರೊಂದಿಗೆ ಜೋಡಿದಾರರು ಚರ್ಚೆ ನಡೆಸಿ ವಿರಾಮವಿಲ್ಲದ ಕಾಲದಲ್ಲಿ ರೈತ ರಿಗೆ ಹಿಂಸೆ ಕೊಡಬಾರದೆಂದೂ ಪೈರು ಕಟಾವಾದ ಮೇಲೆ ಬರಬೇಕೆಂದೂ ತೀರ್ಮಾನಿಸಿದರು. ಸುಬ್ಬೇಗೌಡನು ಮಾತ್ರ ನಾಣಿಯೊಂದಿಗೆ ಗುಟ್ಟಾಗಿ "ಮೋಜಿನಿದಾರ್ರು, ಉಪಯೋಗಿಲ್ಲ, ಪುಳ್ಳಾರು, ಇಜಾರ, ಬೂಟಿಸು, ಕೆಂಪು ತಲೆಯೋಸ ತೋಪಿ ಇವುಗಳನ್ನೆಲ್ಲಾ ಹಾಕಿಕೊಂಡು ಜರ್ಬಾಗಿ ಬಂದಿದ್ರೆ ರೈತ್ರು ಹೆದರಿಕೊಳ್ಳೋರು. ಇವರು ನಮ್ಮೂರ ಪೂಜಾರಿ ಹಂಗೆ ದಟ್ಟಿ ಸುತ್ಕೊಂಡು ಮೆತ್ತಗವ್ರೆ. ಇವರ್ನ ಕರ್ಕೊಂಡು ಹೋದ್ರೆ ನಮ್ಮ ರೈತರು ಸುತರಾಂ ಬಗ್ಗೋ ಕಿಲ್ಲ. ಇವರು ಆಫೀಸ್‌ನಲ್ಲಿ ಬಿಳಿ ಕಾಜಿಗದ ಮೇಲೆ ಕಪ್ಪು ಹಚ್ಚೋಕೆ ಲಾಯಕ್ಕು. ಮೋಜಿನಿದಾರ್ರು ಮೀಸೆ ಕೂಡ ಬಿಟ್ಟಿಲ್ವಲ್ಲ. ಮುಂದಲ ಸಲ ಸ್ವಲ್ಪ ಜೋರಾದ ಆಫೀಸರ್ನ ಕರತನ್ನಿ ಸ್ವಾಮಿ" ಎಂದನು. ಅಂತೂ ಮೋಜಿನಿದಾರರು ಇನ್ನೂ ಸ್ವಲ್ಪ ಹೆಚ್ಚು ಜೋರಾಗಿದ್ದಿದ್ದರೆ ಆಗಲೇ ಪೈರು ಕಟಾವಿನ ಕಾಲವಾಗಿ ದ್ದರೂ ಸರ್ವೆ ನಡೆಸಬಹುದಾಗಿದ್ದಿತೆಂತಲೂ, ಅವರ ಜರ್ಬಿನ ಅಭಾವವೇ ತನಗೆ ನಿರುತ್ಸಾಹವನ್ನು ಉಂಟುಮಾಡಿತೆಂಬುದೂ ಸುಬ್ಬೇಗೌಡನ ಅಭಿಪ್ರಾಯ ವಾಗಿತ್ತು.

ಮೋಜಿನಿದಾರರು ಮರುದಿವಸವೇ ಬೆಂಗಳೂರಿಗೆ ಹೊರಡಬೇಕೆಂದು ಇಷ್ಟಪಟ್ಟರು. ಜೋಡಿದಾರರು ಅವರನ್ನು ಬಲಾತ್ಕರಿಸಿ ತಮ್ಮ ಮನೆಯಲ್ಲಿ ಹದಿನೈದು ದಿವಸ ಇಟ್ಟುಕೊಂಡು ಆತಿಥ್ಯಮಾಡಿದರು. ನಾಣಿಯು ಅವರ ಬಟ್ಟೆಗಳನ್ನು ನಿತ್ಯ ನದಿಯಲ್ಲಿ ಒಗೆದುಕೊಡುತ್ತಿದ್ದನು. ಇದರಿಂದ ಮೋಜಿನಿ ದಾರರ ಬಟ್ಟೆಗಳು ಹಿಂದೆಂದೂ ಆಗದಷ್ಟು ಬೆಳ್ಳಗಾದವು. ನಮ್ಮ ಹುಡುಗರು "ಸದ್ಯ ಮೋಜಿನಿದಾರ್ರು ನಮ್ಮೂರಿಗೆ ಬಂದುದರಿಂದ ಅವರ ಬಟ್ಟೆಗಳೆಲ್ಲಾ ಬೆಳ್ಳ ಗಾದವು. ಅವರು ಬೆಂಗಳೂರಿಗೆ ಹೋಗುವಾಗ ಒಂದು ಡಜನ್ ಸಾಬೂನು ಗಳನ್ನು ಇನಾಮಾಗಿ ಕೊಟ್ಟು ಕಳುಹಿಸಿಬಿಡಿ. ಇಲ್ಲದಿದ್ದರೆ ಅಲ್ಲಿಗೆ ಹೋದ

ಕೂಡಲೆ ಅವರ ಬಟ್ಟೆಗಳು ಮತ್ತೆ ನೀಲಮೇಘದ ಬಣ್ಣಕ್ಕೆ ತಿರುಗುತ್ತವೆ" ಎಂಬುದಾಗಿ ಹಾಸ್ಯಮಾಡುತ್ತಿದ್ದರು. ಅಂತೂ ಮೋಜಿನಿದಾರರು ನಮ್ಮೂರಿನಲ್ಲಿ ಒಟ್ಟು ಹದಿನೈದು ದಿನಗಳಿದ್ದರು.

ಒಂದು ದಿನ ಮೋಜಿನಿದಾರರು "ಅರ್ಧ ಸೇರು ರಾಗಿ ತರಿಸಯ್ಯ. ಅಷ್ಟು ರಾಗಿ ಶಾಯಿಯನ್ನಾದರೂ ಮಾಡಿಕೊಂಡು ಹೋಗೋಣ" ಎಂದರು. ನಾಣಿಯು "ರಾಗಿ ಶಾಯಿ ಯಾಕೆ ಸ್ವಾಮಿ. ಒಳ್ಳೆ ಶಾಯಿ ಪುಡಿ ಇದೆ. ಅದನ್ನೇ ಕೊಡುತ್ತೇನೆ" ಎಂದನು. ಮೋಜಿನಿದಾರರು "ಹಾಗಲ್ಲಯ್ಯ ಸರ್ವೆ ಲೆಕ್ಕಗಳನ್ನೆಲ್ಲಾ ರಾಗಿ ಶಾಯಿಯಲ್ಲಿಯೇ ಬರೆಯಬೇಕೆಂದು ಆಫೀಸಿನಲ್ಲಿ ತೀರ್ಮಾನವಾಗಿದೆ. ಈ ಶಾಯಿಯಲ್ಲಿ ಲೆಕ್ಕ ಬರೆದರೆ ಅದನ್ನು ಸುಲಭವಾಗಿ ಅಳಿಸಿ ಮತ್ತೆ ಬರೆದುಕೊಳ್ಳಲು ಅವಕಾಶವಿದೆ. ನಾವು ಲೆಕ್ಕಗಳನ್ನೆಲ್ಲಾ ರಾಗಿ ಶಾಯಿಯಲ್ಲಿಯೇ ಬರೆಯಬೇಕೆಂದು ಆಫೀಸಿನಿಂದ ಹುಕುಂ ಆಗಿದೆ" ಎಂದರು.

ಈ ಮೋಜಿನಿದಾರರು ಲೆಕ್ಕ ಪತ್ರಗಳನ್ನು ಮುಗಿಸಿದನಂತರ ತಮ್ಮ ಮೇಲಿನ ಅಧಿಕಾರಿಗಳಿಗೆ ಕೆಲವು ಕಾಗದಗಳನ್ನು ಬರೆಯಬೇಕಾಯಿತು. ಎರಡು ಕಾಗದಗಳನ್ನು ಒಟ್ಟಾಗಿ ಸೇರಿಸಬೇಕಾದರೆ ಮೋಜಿನಿದಾರರು ಅದನ್ನು ಸೂಜಿ ದಾರದಿಂದ ಹೊಲೆಯುತ್ತಿದ್ದರೇ ಹೊರತು ಏನಾದರೂ ಗುಂಡುಸೂಜಿಯನ್ನು ಉಪಯೋಗಿಸುತ್ತಿರಲಿಲ್ಲ. ಆ ದಿವಸ ಅವರು ನಾಣಿಗೆ "ಸ್ವಲ್ಪ ಸೂಜಿ ದಾರ ಕೊಡಿ ಸ್ವಾಮಿ, ಈ ಕಾಗದಗಳನ್ನು ಹೊಲಿಯಬೇಕಾಗಿದೆ" ಎಂದರು. ನಾಣಿಯು ಒಳಗೆ ಹೋಗಿ ಎರಡು ಮೂರು ಗುಂಡುಸೂಜಿಗಳನ್ನು ತಂದನು. ಮೋಜಿನಿದಾರರು "ಗುಂಡುಸೂಜಿ ಕೂಡದಯ್ಯ. ಆಫೀಸಿನ ರೂಲ್ಸುಗಳು ಹಳ್ಳಿಯಲ್ಲಿ ಕುಳಿತಿರುವ ನಿಮಗೆ ಹೇಗೆ ಗೊತ್ತಾಗಬೇಕು. ಒಂದು ಸಲ ನಮ್ಮ ಸಾಹೇಬರ ಕೈಗೆ ಇಂತಹ ಗುಂಡು ಸೂಜಿಯೊಂದರ ತುದಿಯು ಚುಚ್ಚಿಕೊಂಡುದರಿಂದ ಈಚೆಗೆ ಯಾರೂ ಗುಂಡುಸೂಜಿಯನ್ನು ಉಪಯೋಗಿಸಕೂಡದೆಂದು ಸೂಜಿ ದಾರದಿಂದಲೇ ಹೊಲೆಯಬೇಕೆಂದೂ ಸರ್ಕಾರದವರು ಸರ್ಕ್ಯುಲರ್ ಹೊರಡಿಸಿದ್ದಾರೆ" ಎಂದರು. ನಾಣಿಯು "ನನಗೆ ಅದು ತಿಳಿದಿರಲಿಲ್ಲ. ಸರಿ ಸರಿ. ಆಫೀಸಿನ ಅಪ್ಪಣೆಯಂತೆ ನಡೆಯಬೇಕಾದುದು ನ್ಯಾಯ" ಎಂದು ಹೇಳಿ ಸೂಜಿ ದಾರವನ್ನು ತಂದುಕೊಟ್ಟನು.

ಈ ಮೋಜಿನಿದಾರರು ಬಹಳ ವೈದಿಕರಾಗಿದ್ದರು. ಅವರಿಗೆ ರಾಮಾಯಣ ಭಾರತ ಭಾಗವತ ಮುಂತಾದುವುಗಳಲ್ಲಿ ಬಹಳ ಶ್ರದ್ಧೆಯೂ ಅವುಗಳನ್ನು ವ್ಯಾಸಂಗಮಾಡುವುದರಲ್ಲಿ ಹೆಚ್ಚು ಉತ್ಸಾಹವೂ ಇದ್ದುವು. "ಶಶಿರೇಖೆಗೂ

ಘಟೋತ್ಕಜನಿಗೂ ಸಂಬಂಧವೇನು ? ರಾಮಾಯಣದಲ್ಲಿ ಹನುಮಂತ ಲಂಕೆಯನ್ನು ಪ್ರವೇಶಿಸಿದಾಗ ರಾಕ್ಷಸರೆಲ್ಲಾ ಮಲಗಿದ್ದರೆಂದು ಹೇಳಿದೆಯಲ್ಲ. ರಾಕ್ಷಸರು ನಿಶಾಚರರಲ್ಲವೆ ? ಅವರಿಗೆ ರಾತ್ರಿಯೇ ಹಗಲಿನಂತೆ ಅಲ್ಲವೆ? ರಾತ್ರಿ ಅವರೆಲ್ಲಾ ಎಚ್ಚರವಾಗಿರಬೇಕಲ್ಲ, ಯಾಕೆ ಮಲಗಿದ್ದರು ? ಲಕ್ಷ್ಮಣ ರಾಮನ ಜತೇಲಿ, ಹತ್ತು ವರ್ಷದಿಂದ ಹೆಂಡತಿ ಬಿಟ್ಟು ಕಾಡಿನಲ್ಲಿ ಅಲೀತಾ ಇದ್ದನಲ್ಲ. ಅವನ ಎದುರಿಗೆ ರಾಮ ಅಂತಹ ವಿರಹ ವ್ಯಥೆ ತೋರಿಸಿದ್ದು ದೌರ್ಬಲ್ಯವಲ್ಲವೆ?" ಇವೇ ಮುಂತಾದ ಅನೇಕ ಪ್ರಶ್ನೆಗಳನ್ನು ಅವರು ತಮಗೆ ಬುದ್ಧಿ ಬಂದಂದಿನಿಂದ ಕಂಡಕಂಡವರನ್ನೆಲ್ಲಾ ಕೇಳುತ್ತಿದ್ದರು. ಅವರಿಗೆ ಯಾರೂ ಸಮರ್ಪಕವಾದ ಉತ್ತರವನ್ನು ಕೊಟ್ಟಿರಲಿಲ್ಲ. ನಮ್ಮ ಊರಿನಲ್ಲಿಯೂ ಅವರ ಪ್ರಶ್ನೆಗಳಿಗೆ ಯಾರೂ ಸಮಂಜಸವಾದ ಉತ್ತರವನ್ನು ಕೊಡಲು ಶಕ್ತರಾಗಿರಲಿಲ್ಲ. ಮೋಜಿನಿದಾರರ ಲೆಕ್ಕ ಪತ್ರಗಳು ಹದಿನೈದು ದಿವಸಗಳೊಳಗೆ ಮುಗಿದುಹೋದುವು. ಅವರು ನಮ್ಮೂರು ಬಿಟ್ಟು ಬೆಂಗಳೂರಿಗೆ ಹೊರಟುಹೋದರು.

೩

ಅವರು ಹೊರಟುಹೋದ ಇಪ್ಪತ್ತು ದಿನಗಳೊಳಗಾಗಿ ಮತ್ತೊಬ್ಬ ಮೋಜಿನಿದಾರರು ಬಂದರು. ಎರಡನೆಯ ಸಲ ಬಂದ ಇಸಮು ಬಹು ಜೋರಾದ ಆಸಾಮಿ. ಅವರನ್ನು ನೋಡಿದ ಕೂಡಲೆ ಯಾರಿಗಾದರೂ ಭಯವುಂಟಾಗುತ್ತಿದ್ದಿತು. ಪುಷ್ಟವಾದ ದೇಹ, ಶಕ್ತಿಯು ಉಕ್ಕಿ ಬರುತ್ತಿದ್ದ ಅಂಗಾಂಗಗಳು, ಮುಖದ ಮೇಲೆ ತೋರುತ್ತಿದ್ದ ಒಂದು ಬಗೆಯ ಜಬರ್ು ಇವುಗಳನ್ನೆಲ್ಲಾ ನೋಡಿ ಪಟೇಲ್ ಸುಬ್ಬೇಗೌಡನಿಗೆ ಬಹಳ ಸಂತೋಷವಾಯಿತು. ಸುಬ್ಬೇಗೌಡನು ಜೋಡಿದಾರರೊಂದಿಗೆ "ಈ ಸಲ ಸರ್ವೆ ನಡಿತದೆ. ಈ ಹೊಸ ಸಾಹೇಬರನ್ನು ನೋಡಿದ ಕೂಡಲೇ ರೈತರೆಲ್ಲಾ ಹೆದರಿಕೊಂಡು ಒತ್ತಾಸೆ ಆಗ್ತಾರೆ" ಎಂದನು.

ಹೊಸದಾಗಿ ಬಂದಿದ್ದ ಅಧಿಕಾರಿಯ ಹೆಸರು ವಿನಾಯಕರಾಯ. ರೈತರು ಅವರನ್ನು ಸಾಹೇಬರೆಂದು ಕರೆಯುತ್ತಿದ್ದರು. ನಾಣಿಯು ಅವರನ್ನು 'ರಾಯರು' ಎನ್ನುತ್ತಿದ್ದನು. ರಾಯರು ಷರಾಯಿ ಕೋಟುಗಳನ್ನು ಧರಿಸುತ್ತಿದ್ದರು. ಬಿಸಲಿಗೆ ತಲೆ ಮರೆಯಾಗಿರಲೆಂದು ಫರಂಗಿಯವರ 'ಹ್ಯಾಟ' ನ್ನು ಧರಿಸುತ್ತಿದ್ದರು.

ಅವರ ಬಳಿ ಗಡಿಯಾರ, ಫೌಂಟೆನ್‌ಪೇನಾ, ಕ್ಯಾಂಪುಕಾಟು' ಮುಂತಾದುವು ಗಳೆಲ್ಲ ಇದ್ದವು. ಸಾಹೇಬರ ಕೈಕಾಲುಗಳು ಕುಳ್ಳ, ಹೊಟ್ಟೆ ಮುಂದಕ್ಕೆ ಬಂದಿದ್ದರೂ, ಅವರ ದೇಹದಲ್ಲಿ ಒಂದು ಬಗೆಯ ಗಾಂಭೀರ್ಯವೂ ಮುಖದಲ್ಲಿ ಒಂದು ವಿಧವಾದ ಗತ್ತೂ ಇದ್ದುವು. ಎಲ್ಲದಕ್ಕಿಂತ ಹೆಚ್ಚಾಗಿ ಪಟೇಲನಿಗೆ ಸಾಹೇಬರಲ್ಲಿ ಮೆಚ್ಚಿಕೆಯಾಗಿ ತೋರಿದುದು ಅವರ ಮೀಸೆ. ಸಾಹೇಬರ ಮೀಸೆ ಯನ್ನು ವರ್ಣಿಸುವುದಕ್ಕೆ ಆದಿಶೇಷನಿಗೂ ಅಸಾಧ್ಯವಾಗಿತ್ತು. ಮೀಸೆಯ ಮೇಲೆ ನಿಂಬೆಯ ಹಣ್ಣನ್ನು ಕುಣಿಸುವುದೇ ಮೀಸೆಯ ಪ್ರಾಶಸ್ತ್ಯದ ತುದಿ ಎಂದು ತಿಳಿ ದಿರುವವರನ್ನು ನೋಡಿ ಸಾಹೇಬರು "ಅದೇನು ಮಹಾ" ಎನ್ನುತ್ತಿದ್ದರು. ನಮ್ಮೂರು ಪಂಚಾಯ್ತಿಗೆ ಒಂದು ಸಲ ಅಧ್ಯಕ್ಷರಾಗಿ ಮೀಸೆ ಸುಬ್ಬರಾಯರನ್ನು ಚುನಾಯಿಸಿದಾಗ ನಮ್ಮ ಊರು ವಿನೋದಗಾರರು "ನಮ್ಮ ಪಂಚಾಯ್ತಿಗೆ ಸುಬ್ಬರಾಯರನ್ನು ಆರಿಸಿದುದು ಅನುಕೂಲವಾಯಿತಪ್ಪ. ಈ ದುಡ್ಡಿಲ್ಲದ ಕಾಲದಲ್ಲಿ ಪಂಚಾಯ್ತಿಗೆ ಪರಕೆ ಕೊಳ್ಳೋಕೆ ಗತಿ ಇಲ್ಲದಿದ್ರೆ ಈ ಮೀಸೆಗಳನ್ನು ಕೆಲವು ಕಾಲ ಉಪಯೋಗಿಸಬಹುದು" ಎಂದಿದ್ದರು. ಸಾಹೇಬರ ಮೀಸೆಯನ್ನು ಕಂಡು ಇಂತಹ ಸುಬ್ಬರಾಯರೂ ಕೂಡ ತಮ್ಮನ್ನು ಮೀರಿಸಿದ ಪ್ರತಿಕಕ್ಷಿಯೊಬ್ಬ ನಿರುವನೆಂದು ಬೆದರಿದರು. ಸಾಹೇಬರು ಊಟ ಮಾಡುವಾಗಲೂ ಕಾಫಿ ಕುಡಿಯುವಾಗಲೂ ಪ್ರತಿಯೊಂದು ತುತ್ತಿಗೂ, ಪ್ರತಿಯೊಂದು ಗುಟಕಿಗೂ, ಒಂದೊಂದು ಸಲ ಮುಂಗೈಯಿಂದ ಮೀಸೆಯನ್ನು ಹಿಂದಕ್ಕೆ ನೂಕಿಕೊಳ್ಳಬೇಕಾ ಗುತ್ತಿದ್ದಿತು. ಮೀಸೆಯ ಬೆಳವಣಿಗೆಗೆ ಅದು ಕೊನೆ ಎಂಬುದನ್ನು ಸುಬ್ಬರಾಯರು ಕೂಡ ಒಪ್ಪಬೇಕಾಯಿತು. ಸಾಹೇಬರೇನೊ ತಮ್ಮ ಮೀಸೆಯಿಂದ ತೃಪ್ತರಾಗಿರ ಲಿಲ್ಲ. ಅವರು ನನ್ನೊಂದಿಗೆ "ಇದೇನು ಮಹಾ. ಈಗ ಒಂದು ವರ್ಷದಲ್ಲಿ ನಮ್ಮ ತಾಯಿ ಸ್ವರ್ಗಸ್ಥರಾದರು. ಆಗ ಮೀಸೆ 'ಇಳಿಸಿ ಬಿಟ್ಟೆ.' ಅದಕ್ಕಿಂತ ಮುಂಚೆ ನನ್ನ ಮುಖದಲ್ಲಿ ಕಣ್ಣು ಮೂಗು ಎಲ್ಲಿದೆ ಎಂಬುದನ್ನು ಪತ್ತೆ ಮಾಡು ವುದಕ್ಕೆ ಕೂಡ ಸಾಧ್ಯವಿರಲಿಲ್ಲ. ಇನ್ನು ಆ ಕಾಲ ಹೋಯಿತು. ಮತ್ತೆ ಹಾಗೆ ಬೆಳೆಯುವುದಿಲ್ಲ" ಎಂಬುದಾಗಿ ನಿಟ್ಟುಸಿರು ಬಿಟ್ಟರು. ಅದನ್ನು ಕೇಳಿಯಂತೂ ಸುಬ್ಬರಾಯರು ಮಂಕಾಗಿ ತಲೆಯಲ್ಲಾಡಿಸಿದರು.

ಸಾಹೇಬರು ಒಂದು ಬಗೆಯಿಂದ ಲೌಕಿಕರೂ ಒಂದು ಬಗೆಯಿಂದ ವೈದಿಕರೂ ಆಗಿದ್ದರು. ಪ್ರತಿನಿತ್ಯ ಬೆಳಿಗ್ಗೆ ಸ್ನಾನವಾದ ಮೇಲೆ ಯಾವುದೋ ಮರಾಠಿ ಪುಸ್ತಕದಿಂದ ೨೦-೩೦ ನಿಮಿಷಗಳ ಕಾಲ ದೇವರ ಪ್ರಾರ್ಥನೆಯನ್ನು ಮಾಡುತ್ತಿದ್ದರು. ದೇವರ ಪ್ರಾರ್ಥನೆಗಿಂತ ಮುಂಚೆ ಅವರು ಕಾಫಿ ಕುಡಿಯು

ತ್ತಿರಲಿಲ್ಲ. ಆದರೆ ದೇವರ ಪ್ರಾರ್ಥನೆ ಮುಗಿದ ಕೂಡಲೆ ಮೊದಲು ಒಂದು ಸಿಗರೇಟನ್ನು ಸೇದುತ್ತಿದ್ದರು. ರಂಗಸಾಮಿಯು "ದೇವರ ಪ್ರಾರ್ಥನೆಯಾದ ಮೇಲೆ ಕಾಫಿ ಕುಡಿದು ಆಮೇಲೆ ಸಿಗರೇಟನ್ನು ಸೇದಬಾರದೇ ?" ಮೊದಲೇ ಸಿಗರೇಟನ್ನು ಯಾಕೆ ಸೇದಬೇಕು ಅದೂ ಪೂಜೆಗೆ ಸೇರಿದುದೇ" ಎಂದು ಕೇಳುತ್ತಿದ್ದನು. ಸಾಹೇಬರು ರಂಗಸಾಮಿಯ ಆ ಪ್ರಶ್ನೆಗೆ ಉತ್ತರ ಕೊಡುತ್ತಿರಲಿಲ್ಲವಾದರೂ "ಸಿಗರೇಟನ್ನು ನಾನು ಸೇದುವುದು ಪೂಜೆಯ ಅಂಗವಾಗಿ ಅಲ್ಲ. ಛಳಿಗೋಸ್ಕರ ಸೇದುತ್ತಿದ್ದೇನೆ" ಎಂದು ಉತ್ತರ ಕೊಡುತ್ತಿದ್ದರು.

ಸಾಹೇಬರಿಗೆ ತಮಗೆ ತಿಳಿಯದ ವಿಚಾರವೇ ಇಲ್ಲವೆಂಬ ಭಾವನೆ ಬಲವಾಗಿತ್ತು. ಅವರು ಸ್ವಲ್ಪ ಹಳೆಯ ಕಾಲದವರಾದುದರಿಂದ ಎಷ್ಟೋ ಹಳೆಯ ಅಭಿಪ್ರಾಯಗಳನ್ನು ಹೊಸವೆಂದೇ ಹೇಳುತ್ತಿದ್ದರು. ಅವು ಹಳೆಯ ಅಭಿಪ್ರಾಯಗಳೆಂಬುದಾಗಲಿ ತಮಗೆ ಕೆಲವು ವಿಷಯಗಳು ಗೊತ್ತಿಲ್ಲವೆಂಬುದಾಗಲಿ ಅವರಿಗೆ ತಿಳಿದೇ ಇರಲಿಲ್ಲ. ಅವರ ಮನಸ್ಸಿನ ಬೆಳವಣಿಗೆ ನಿಂತು ಎಷ್ಟೋ ವರ್ಷಗಳಾಗಿತ್ತು. ಅವರಿಗೆ ಏನು ಕಾರಣದಿಂದಲೋ ಬೈಲಹಳ್ಳಿಯಲ್ಲಿ ಇದ್ದಕ್ಕಿದ್ದಂತೆ ಒಳ್ಳೆ ಕುತೂಹಲವುಂಟಾಯಿತು. ಅವರು ಬೈಲಹಳ್ಳಿಗೆ ಬಂದ ದಿನವೆ ರಂಗಸಾಮಿಯೊಂದಿಗೆ "ನನಗೆ ಆಫೀಸ್ ಕುರ್ಚಿ ಮೇಲೆ ಕೂತು ಲೆಕ್ಕಾ ಬರೆದು ಸ್ವಲ್ಪ ಕಾಲದಿಂದ ಬೇಜಾರಾಗಿತ್ತು. ಈ ಹಳ್ಳಿ ನೋಡಿದ ಕೂಡಲೆ ಆ ಬೇಜಾರೆಲ್ಲಾ ಹೋಯ್ತು. ನನ್ನ ಬಾಲ್ಯವೆಲ್ಲಾ ನನಗೆ ಈಗ ಜ್ಞಾಪಕ ಬರ್‍ತಾ ಇದೆ. ನನ್ನ ಕೆಲ್ಸಾ ಈ ಊರಲ್ಲಿ ಸಮರ್ಪಕವಾಗಿ ನಡ್ಯೊ ಶಕುನ, ಮನೋಬಲ ಎಲ್ಲಾ ನನಗೆ ಇದೆ" ಎಂಬುದಾಗಿ ಹೇಳಿ ಬೈಲಹಳ್ಳಿಯ ಊರಮುಂದಲ ಹನುಮಂತರಾಯನಿಗೆ "ನಮ್ಮಪ್ಪ, ಸರ್ವೆ ಪೂರ್ತಿಯಾಗಿ ಸಮರ್ಪಕವಾಗಿ ನಡೆಸು" ಎಂಬುದಾಗಿ ಅಡ್ಡ ಬಿದ್ದರು.

ಬೈಲಹಳ್ಳಿಗೆ ನಾವು ಹೊರಟಾಗ ಜೋಡಿದಾರರ ಹಿರಿಯ ಮಗ ರಂಗಸಾಮಿಯೂ ನಮ್ಮೊಂದಿಗೆ ಬಂದನು. ರಂಗಸಾಮಿಯ ವಿಚಾರ ನೀವು ಸ್ವಲ್ಪ ತಿಳಿಯಬೇಕು.

ರಂಗಸಾಮಿ ಜೋಡಿದಾರರ ಹಿರಿಯಮಗ. ಅವನನ್ನು ನಮ್ಮೂರಿನವರು ಪ್ರಚಂಡನೆಂದು ಕರೆಯುತ್ತಾರೆ. ರಂಗಸಾಮಿಗೆ ವಯಸ್ಸು ಮುವ್ವತ್ತು ಆಗಿದ್ದಿತು. ಅವನು ತನಗೆ ಸಂಗೀತದಲ್ಲಿ ಅಭಿರುಚಿ ಹೆಚ್ಚೆಂದು ಹೇಳಿಕೊಳ್ಳುತ್ತಿದ್ದನು. ಮೂರು ನಾಲ್ಕು ವರ್ಷ ತಂಜಾವೂರು ಕಡೆ ಹೋಗಿ ಕೊಳಲನ್ನು ಕಲಿಯಲು ಪ್ರಯತ್ನಪಟ್ಟು ಕೊಳಲಿಗೆ ತಾಳ ಬೇಕೆ ಬೇಡವೆ ಎಂಬ ವಿಚಾರದಲ್ಲಿ ತನಗೂ ಗುರುಗಳಿಗೂ ಭಿನ್ನಾಭಿಪ್ರಾಯವುಂಟಾದುದರಿಂದ ತನ್ನ ಸಂಗೀತ ವ್ಯಾಸಂಗವನ್ನು ಮುಗಿಸವೆ

ಹಿಂದಿರುಗಿ ಬಂದಿದ್ದನು. ಆದರೂ ನಮ್ಮೂರಿನಲ್ಲಿ ಅನೇಕರು ಅವನನ್ನು ಗಾ॰ವಿ॰ಬಿ (ಗಾನವಿಶಾರದ ಬಿಡಾರದ ಕೃಷ್ಣಪ್ಪ) ನೆಂದು ಕರೆಯುತ್ತಿದ್ದರು. ನಮ್ಮೂರಿಗೆ ಗಾವಿಬಿಗೆ ಸಂಗೀತದಲ್ಲಿ ಎಷ್ಟರಮಟ್ಟಿನ ನಿಪುಣತೆಯಿದ್ದಿತೆಂದರೆ, ಒಂದು ಸಲ ನಮ್ಮೂರ ರಥೋತ್ಸವಕ್ಕೆ ಮಹಾರಾಜರಿಂದ ಬಹುಮಾನವನ್ನು ಪಡೆದಿದ್ದ ಮೈಸೂರಿನ ಒಳ್ಳೆಯ ಓಲಗದವರು ಬಂದಿದ್ದಾಗ ಅವರು ಊದುತ್ತಿದ್ದ ಓಲಗವನ್ನು ನೋಡಿ ಗಾವಿಬಿಯು "ಏನಯ್ಯ, ಅವನು ಓಲಗವನ್ನು ಹಿಡಿದುಕೊಂಡು ಅಷ್ಟರಮಟ್ಟಿಗೆ ತಲೆ ಅಲ್ಲಾಡಿಸಿದರೂ ಓಲಗ ಕೈಯಿಂದಲೂ ಬಾಯಿಂದಲೂ ಕೆಳಕ್ಕೆ ಬೀಳುವುದೇ ಇಲ್ಲವಲ್ಲ. ಚೆನ್ನಾಗಿಯೇ ಊದುತ್ತಾನೆ, ಸಂದೇಹವಿಲ್ಲ" ಎಂದಿದ್ದನು.

ರಂಗಸಾಮಿ ಒಳ್ಳೆಯ ಆರಂಭಗಾರ. ಜೋಡಿದಾರರ ಮನೆ ತೋಟದ ವ್ಯವಸಾಯವೆಲ್ಲಾ ಅವನ ಕೈಯಲ್ಲೇ ಇದೆ. ಅವನು ತೋಟದಲ್ಲಿ ಬಾಳೆ, ತೆಂಗು, ಕಿತ್ತಲೆ, ಅಡಿಕೆ, ಮಾದಲ ಮುಂತಾದ ಫಲಗಳನ್ನೆಲ್ಲಾ ಬೆಳೆಯುತ್ತಾನೆ. ೫೦೦-೬೦೦ ಗುಣಿ ವಿಳ್ಳೆಯ ಹಂಬನ್ನು ಹಾಕಿದ್ದಾನೆ. ಕಟ್ಟು ಮಸ್ತಾದ ಆಳು. ಕೂಲಿ ಆಳುಗಳಿಗಿಂತ ಹೆಚ್ಚಾಗಿಯೆ ಕೆಲಸಮಾಡುತ್ತಾನೆ. ಆಗಾಗ್ಗೆ ತೋಟದಲ್ಲಿಯೇ ಮಲಗುತ್ತಾನೆ. ನಮ್ಮ ಮಲೆನಾಡಿನಲ್ಲಿ ತೋಟದಲ್ಲಿ ಮಲಗುವುದೆಂದರೆ ಅದೇ ಒಂದು ಅದ್ಭುತ ಕಾರ್ಯ. ಆ ಸೊಳ್ಳೆಗಳ ಕಡಿತವನ್ನು ತಡೆಯಬೇಕಾದರೆ ಅವನ್ನು ಸೃಷ್ಟಿಸಿದ ಬ್ರಹ್ಮನಿಗೂ ಕೂಡ ಸಾಧ್ಯವಿಲ್ಲ. ರಂಗಸಾಮಿಯು ನಿರ್ಯೋಚನೆಯಿಂದ ಅಲ್ಲಿ ಮಲಗಿ ನಿದ್ರೆಮಾಡುತ್ತಾನೆ. ಅವನನ್ನು ಕಡಿದ ಸೊಳ್ಳೆಗಳು ತತ್‌ಕ್ಷಣ ಅಲ್ಲೆ ಸತ್ತು ಬೀಳುತ್ತವೆಂದು ಪ್ರತೀತಿ.

ರಂಗಸಾಮಿಗೆ ಮೊದಲು ತೋಟದಲ್ಲಿ ಮಲಗುವ ಅಭ್ಯಾಸ ಉಂಟಾದದ್ದು ಈ ರೀತಿ. ಮೊದಮೊದಲು ನಮ್ಮೂರ ತೋಟಗಳಲ್ಲಿ ಬಹುಮಟ್ಟಿಗೆ ಕಳವು ನಡೆಯುತ್ತಿದ್ದಿತು. ನಮ್ಮೂರಿನಲ್ಲಿ ಕೆಲವು ಪ್ರಾಮಾಣಿಕರು "ರಾತ್ರಿ ಹೊತ್ತು ಕನ್ನಾ ಹಾಕಿ ಒಳಗೆ ನುಗ್ಗಿ ಕದ್ದರೆ ಅದು ಕಳವೆಂದು ತಿಳಿದಿದ್ದಾರೆಯೇ ಹೊರತು, ಎಲ್ಲೊ ದಾರಿಯಲ್ಲಿ ಹೋಗುತ್ತಿರುವಾಗ ತೋಟದೊಳಕ್ಕೆ ಹೋಗಿ ಹತ್ತೊ ನೂರೊ ವೀಳೆದೆಲೆಯನ್ನೊ, ಬಾಯಾರಿಕೆಯಾದಾಗ ಹತ್ತಿಪ್ಪತ್ತು ಎಳನೀರನ್ನೊ, ಕಿತ್ತಲೆ ಹಣ್ಣುಗಳನ್ನೊ ಕುಯ್ದು ಉಪಯೋಗಿಸಿಕೊಂಡರೆ ಅದು ಕಳವೆಂದು ಅವರು ಒಪ್ಪುವುದಿಲ್ಲ. ಹಾಗೆಯೇ ಹಣವನ್ನು ಸಾಲ ತೆಗೆದುಕೊಂಡು ಪತ್ರ ಬರೆದು ಕೊಟ್ಟು ಕೋರ್ಟಿನಲ್ಲಿ ದಾವಾ ಆದಾವ ಅಲ್ಲಿ "ನನಗೆ ಹಣ ಕೊಟ್ಟದ್ದೆ ಸುಳ್ಳು. ಸುಮ್ಮನೆ ಪತ್ರ ಬರೆದುಕೊಟ್ಟೆ. ಅಥವ ಪತ್ರವನ್ನೆ ಬರೆದುಕೊಡಲಿಲ್ಲ.

ಅದು ಬರಿಯ ಫೋರ್ಜರಿ" ಎಂದರೆ ಮಾತ್ರ ಅದು ಮೋಸವೆನ್ನುತ್ತಾರೆಯೇ ಹೊರತು ಸುಮ್ಮನೆ ಕೈ ಸಾಲ ಎಂಟೋ, ಹತ್ತೋ ರೂಪಾಯಿಗಳನ್ನು ತೆಗೆದು ಕೊಂಡು ಅದನ್ನು ಹಿಂದಕ್ಕೆ ಕೊಡದೆ ತಪ್ಪಿದ ಮಾತ್ರಕ್ಕೆ ಅಂತಹ ಅಲ್ಪವಾದ ಮರೆವು ಮೋಸವೆಂದು ಅವರು ಎಂದಿಗೂ ಒಪ್ಪುವುದಿಲ್ಲ. ಈ ವಿಧವಾದ ಅಭಿಪ್ರಾಯದ ಜನರು ನಮ್ಮೂರಿನಲ್ಲಿ ಅನೇಕರಿರುವುದರಿಂದ ತೋಟದಲ್ಲಿ ಪೈರು ಆಗಾಗ್ಗೆ ಕಣ್ಣಿಗೆ ಕಾಣದೆ ಮರೆಯಾಗುತ್ತಿದ್ದಿತು. ಕೆಲವರು ತೋಟಕ್ಕೆ ಬರುವಾಗಲೇ "ರಂಗಪ್ಪನವರೇ" ಎಂದು ಕೂಗುತ್ತಾ ಬಂದು, ರಂಗಸಾಮಿ ಇದ್ದರೆ 'ಸುಮ್ಮನೆ ಬಂದೆ' ಎಂದು ಹೇಳುತ್ತಾ, ಇಲ್ಲದಿದ್ದರೆ ಕೈಗೆ ಸಿಕ್ಕಿದುದನ್ನು ಎತ್ತಿಕೊಂಡು ಹೋಗುತ್ತಾ ಇದ್ದರು. ಈಚೆಗೆ ರಂಗಸಾಮಿ ತೋಟಕ್ಕೆ ಹೋಗಲು ಪ್ರಾರಂಭಿಸಿದ ಮೇಲೆ ಈ ಕಳವು ಸ್ವಲ್ಪ ಕಡಮೆಯಾಗಿದೆ. ಆಗ ರಂಗಸಾಮಿ ತೋಟದಲ್ಲಿಯೇ ನಿತ್ಯ ಮಲಗುತ್ತಿದ್ದನು. ಮೊದ ಮೊದಲು ಸೊಳ್ಳೆಯ ಕಡಿತ ದಿಂದ ಮೈ ಚುಮ ಚುಮ ಎಂದು ನಿದ್ರೆ ಬರುವುದೇ ಅಸಾಧ್ಯವಾಯಿತು. ಮಲೆ ಸೀಮೆಯ ಜೋಗು ನೆಲ, ಬಾಳೆ, ವಿಳ್ಳೆದೆಲೆ ಮುಂತಾದ ಪೈರಿನ ಸುತ್ತ ಯಾವಾ ಗಲೂ ಹರಿಯುತ್ತಿರುವ ನೀರಿನಿಂದ ಉಂಟಾದ ಶೈತ್ಯ. ಅಂತಹ ಸ್ಥಳಗಳಲ್ಲಿ ಸೊಳ್ಳೆಗಳನ್ನು ಕೇಳಬೇಕೆ ? ಸಂಗೀತಗಾರನಾದ ಗಾವಿಬಿಯು ಅವುಗಳ ಶ್ರುತಿ ಯೊಡನೆ ತನ್ನ ಧ್ವನಿಯನ್ನು ಸೇರಿಸಿ ಹಾಡುತ್ತಾ ರಾತ್ರಿಯ ಬೇಸರಿಕೆಯನ್ನು ಕಳೆದುಕೊಳ್ಳುತ್ತಿದ್ದನು. ಅರ್ಧ ರಾತ್ರಿಯಲ್ಲಿ ಎದ್ದು ಒಂದು ಸಲ ಬಂದೂಕ ವನ್ನು ಆಕಾಶದ ಕಡೆಗೆ ಹಾರಿಸುತ್ತಿದ್ದನು. ಇದರಿಂದ ಬರಬರುತ್ತಾ ಎಲ್ಲರಿಗೂ ಭಯವುಂಟಾಗತೊಡಗಿತು. ಜನರು ರಂಗಸಾಮಿಯ ತೋಟದ ಕಡೆಗೆ ತಲೆ ಹಾಕುವುದನ್ನೇ ಬಿಟ್ಟರು. ಈಚೆಗೆ ರಂಗಸಾಮಿ ತೋಟದಲ್ಲಿ ಮಲಗುತ್ತಿಲ್ಲ. ಅಲ್ಲೊಂದು ಗುಡಿಸಲನ್ನು ಹಾಕಿ ಅದರ ನಡುವೆ ಒಂದು ಕೊಂಟನಿಟ್ಟು, ಅದಕ್ಕೆ ಒಂದು ಕಂಬಳಿಯನ್ನು ಹೊದೆಸಿ ಮನುಷ್ಯನ ಆಕೃತಿಯಲ್ಲಿ ಕಾಣುವಂತೆ ಮಾಡಿ ಅರ್ಧ ರಾತ್ರಿಯಲ್ಲಿ ಆಗಾಗ್ಗೆ ಒಂದೊಂದು ಸಲ ಹೋಗಿ ಬಂದೂಕವನ್ನು ಹಾರಿ ಸುತ್ತಾನೆ. ಇದರಿಂದ ಕಳ್ಳತನವು ಪೂರ್ತಿಯಾಗಿ ನಿಂತುಹೋಗಿದೆ.

ರಂಗಸಾಮಿ ಬಹಳ ಒರಟ. ಯಾವುದಕ್ಕೂ ಹೆದರುವವನಲ್ಲ. ಅವನ ಒರಟುತನದ ಒಂದೆರಡು ಉದಾಹರಣೆಗಳನ್ನು ಕೇಳಿದರೆ ಅವನ ಸ್ವಭಾವ ಎಂತ ಹುದೆಂಬುದು ನಿಮಗೆ ಚೆನ್ನಾಗಿ ಗೊತ್ತಾಗುತ್ತದೆ. ರಂಗಸಾಮಿಯು ಬೆಳಿಗ್ಗೆ ಎದ್ದ ನಂತರ ಒಂದು ಕರಿಯ ಕಂಬಳಿಯನ್ನು ಹೊದೆದುಕೊಂಡು ತೋಟಕ್ಕೆ ಹೋಗು ತ್ತಾನೆ. ಒಂದೊಂದು ಸಲ ಅದೇ ಕಂಬಳಿಯನ್ನು ಹೊದೆದುಕೊಂಡು ತೋಟ

ದಿಂದ ಹಳ್ಳಿಗಳಿಗೂ, ಒಂದೆರಡು ಸಲ ಹಾಸನದ ಮುನಸೀಫ್ ಕೋರ್ಟಿಗೂ ಹೋಗಿದ್ದಾನೆ. ಒಂದು ಸಲ ರಂಗಸಾಮಿಯ ಮನೆಗೆ ಅವನ ಸ್ನೇಹಿತನೊಬ್ಬನು ಬಂದಿದ್ದನು. ಅವನು ಹೊರಡುವ ಮಧ್ಯಾಹ್ನ ಊಟದ ಕಾಲವಾಗಿದ್ದುದರಿಂದ ರಂಗಸಾಮಿಯು ಅವನನ್ನು "ಊಟಮಾಡಿಕೊಂಡು ಹೊರಡಯ್ಯ" ಎಂದು ಹೇಳಿದನು. ಸ್ನೇಹಿತರು ಹೊತ್ತಾಗುತ್ತದೆ ಎಂದು ಒಪ್ಪಲಿಲ್ಲ. ರಂಗಸಾಮಿಯು ಎರಡು ಮೂರು ಸಲ ಒಳ್ಳೆಯ ವಿನಯದಿಂದ ಹೇಳಿದನು. ಕೊನೆಗೆ ಕೋಪದಿಂದ "ಊಟಮಾಡ್ಕೊಂಡು ಹೋಗ್ತಿಯೊ ಇಲ್ವೊ—ಮಗನೆ" ಎಂಬುದಾಗಿ ಕಣ್ಣನ್ನು ಕೆರಳಿಸಿದನು. ಸ್ನೇಹಿತನಿಗೆ ಗಾಬರಿಯಾಯಿತು. ಎಲ್ಲಾದರು ಏಟು ಬಿದ್ದೀತೆಂಬ ಭಯವುಂಟಾಯಿತು. ಅವನು ಮಾತನಾಡದೆ ಒಪ್ಪಿಕೊಂಡು ಸುಮ್ಮನಾದನು.

ಇಂತಹ ವಿಚಿತ್ರ ಸ್ವಭಾವದ ರಂಗಸಾಮಿಯು ನಮ್ಮ ಜತೆಯಲ್ಲಿದ್ದರೆ ನಮಗೆ ಹೊತ್ತು ಬೇಗ ಹೋಗುವುದೆಂದೂ ಕೆಲಸದ ಕಷ್ಟ ಅಷ್ಟೊಂದು ತೋರುವುದಿಲ್ಲವೆಂದೂ ನಾಣಿಯು ನನಗೆ ಸೂಚಿಸಿದನು. ರಂಗಸಾಮಿಯೂ ಉತ್ಸಾಹದಿಂದ, ನಮ್ಮೂರ ವ್ಯಾಸ್ಕೊಡಗಾಮನ ಅಂಗಡಿಗೆ ಹೋಗಿ ಹಳ್ಳಿಯಲ್ಲಿ ಅಡಿಗೆಗೆ ಬೇಕಾದ ಸಾಮಾನುಗಳನ್ನೆಲ್ಲಾ ಎರಡು ಆಳುಗಳ ತಲೆಯ ಮೇಲೆ ಹೊರಿಸಿಕೊಂಡು ಬಂದನು. ಆ ಮಧ್ಯಾಹ್ನ ನಾವೆಲ್ಲಾ ನಮ್ಮೂರನ್ನು ಬಿಟ್ಟು ಬೈಲಹಳ್ಳಿಯನ್ನು ಸೇರಿದೆವು. ನಾಣಿಯು ದಾರಿಯುದ್ದಕ್ಕೂ

ಬಂದ್ರು ಮೋಜಿನಿದಾರ್ರು
ಶಂಕು ಸರಪಣಿ ತಯ್ಯಾರ್ರು
ಆಳ್ಕೋಕೆ ಬನ್ನಿ ಎಲ್ಲಾರು
ಬೇಡ ಯಾರ್ದು ಪುಕಾರು

ಎಂದು ಹಾಡುತ್ತಿದ್ದನು. ನಮ್ಮ ಜತೆಯಲ್ಲಿ ಸಾಮಾನುಗಳನ್ನು ಹೊತ್ತುಕೊಂಡು ಬರುತ್ತಿದ್ದ ಆಳುಗಳೂ ಕೂಡ ಆ ಪದವನ್ನು ಹಾಡಿಕೊಳ್ಳುತ್ತಿದ್ದರು.

೪

ನಾವು ಬೈಲಹಳ್ಳಿಯ ಊರು ಬಾಗಿಲಿಗೆ ಬಂದ ಕೂಡಲೆ ಜನರೆಲ್ಲಾ ಮೋಜಿನಿದಾರರನ್ನು ನೋಡಲು ನೆರೆದರು. ಹುಡುಗರೆಲ್ಲಾ ಊರುಬಾಗಿಲಿನ ಅರಳಿಮರದ ಹತ್ತಿರ ಇಣುಕಿನೋಡಲು ಪ್ರಾರಂಭಿಸಿದರು. ಊರುಬಾಗಿಲಿನ

ತಿಪ್ಪೆಯಲ್ಲಿ ಮೂರು ಜನ ರೈತರು ಕೆಲಸಮಾಡುತ್ತಿದ್ದರು. ಅವರು ಗೊಬ್ಬರವನ್ನು ಗಾಡಿಗೆ ತುಂಬುತ್ತಿದ್ದರು. ಕರಗಿದ್ದ ಗೊಬ್ಬರದಿಂದ ವಾಸನೆ ಬರುತ್ತಿದ್ದಿತು. ಹ್ಯಾಟು ಬೂಟು ಹಾಕಿಕೊಂಡಿದ್ದ ವ್ಯಕ್ತಿಯನ್ನು ರೈತರು ಅದುವರೆಗೆ ನೋಡಿಯೇ ಇರಲಿಲ್ಲ. ಅವರು ಗೊಬ್ಬರದ ಕೆಲಸವನ್ನು ಅಲ್ಲಿಗೇ ಬಿಟ್ಟು ಮೋಜಿನಿದಾರರ ಕಡೆ ನೋಡುತ್ತಾ ನಿಂತುಕೊಂಡರು. ಅವರ ಕಾಲಿನಿಂದ ಗೊಬ್ಬರದ ರಸ ಕೆಳಕ್ಕೆ ಸೋರುತ್ತಿದ್ದಿತು. ಕೆರೆಯಿಂದ ಆರು ಏಳು ಜನ ಹೆಂಗಸರು ತಲೆಗಳ ಮೇಲೆ ಗಡಿಗೆಗಳಲ್ಲಿ ನೀರು ಹೊತ್ತುಕೊಂಡು ಬರುತ್ತಿದ್ದವರು ಮೋಜಿನಿದಾರರನ್ನು ಕಂಡು, ನೋಡುತ್ತಾ ಅಲ್ಲೆ ನಿಂತರು. ಊರೊಳಗಿನಿಂದ ಗೊಬ್ಬರದ ಮಂಕರಿಗಳನ್ನು ಹೊತ್ತುಕೊಂಡು ಹೊಲಕ್ಕೆ ಹೋಗುತ್ತಿದ್ದ ಐದು ಜನ ಹೆಂಗಸರು ಮಂಕರಿಗಳನ್ನು ತಲೆಯ ಮೇಲೆ ಇಟ್ಟುಕೊಂಡು ಮೋಜಿನಿದಾರರನ್ನು ನೋಡುತ್ತಾ ನಿಂತುಕೊಂಡರು. ಆರೇಳು ಹೆಂಗಸರು ತಲೆಯ ಮೇಲೆ ಗಂಡಂದಿರಿಗೆ ಕುಕ್ಕೆಯಲ್ಲಿ ಹಿಟ್ಟನ್ನೂ ಕೈಯಲ್ಲಿ ಚೆಂಬಿನಲ್ಲಿ ನೀರನ್ನೂ ತೆಗೆದುಕೊಂಡು ಹೊರಟಿದ್ದವರು ಮುಂದಕ್ಕೆ ಹೋಗದೆ ಮೋಜಿನಿದಾರರನ್ನು ನೋಡುತ್ತಾ ನಿಂತುಬಿಟ್ಟರು. ನಾವು ಹೋದಾಗ ಊರಿನಲ್ಲಿ ಎಲ್ಲೂ ಹೆಚ್ಚಾಗಿ ಗಂಡಸರ ಸುಳಿವು ಕಾಣಲಿಲ್ಲ. ಎಲ್ಲೆಲ್ಲೂ ಹೆಂಗಸರೇ ತೋರುತ್ತಿದ್ದರು. ಮೋಜಿನಿದಾರರು "ನೋಡ್ರಯ್ಯ, ಹೆಂಗಸರು ಎಷ್ಟು ಪುಷ್ಟರಾಗಿ ಮೈತುಂಬಿಕೊಂಡು ಗಟ್ಟಿಗಡತವಾಗಿದ್ದಾರೆ. ಆದರೆ ನಮ್ಮ ಬ್ರಾಹ್ಮಣರ ಹೆಂಗಸರನ್ನು ನೋಡಿ, ಎಲ್ಲಾ ಚೀಕಲು. ಒಂದಾಗಲಿ ಪುಷ್ಟವಾಗಿರುವುದಿಲ್ಲ. ಅವರಿಗೆ ಬೆಳೆಯುವುದಕ್ಕೆ ನಾವು ಅವಕಾಶವನ್ನೆ ಕೊಡುವುದಿಲ್ಲವಯ್ಯ. ಬಾಲ್ಯವಿವಾಹವನ್ನು ತಪ್ಪಿಸಿ ಬಿಡಬೇಕು. ಪಟ್ಟಣದಲ್ಲಿರುವವರ ಅವಸ್ಥೆಯೂ ಅಷ್ಟೆ" ಎಂದರು. ನಾಣಿಯು "ರೈತರ ಹೆಂಗಸರೇನೊ ಪುಷ್ಟವಾಗಿದ್ದಾರೆ; ಆದರೆ ಇದು ದರಿದ್ರ ಗ್ರಾಮ. ಹೊಟ್ಟೆತುಂಬ ರಾಗಿ ಕೂಡ ದೊರೆಯುವುದಿಲ್ಲ. ಗಾಳಿ ಬೆಳಕೇ ಇವರ ಆಹಾರ" ಎಂದನು.

ನಾವು ಬೈಲಹಳ್ಳಿ ಊರಮುಂದಲ ಆಂಜನೇಯನ ದೇವಸ್ಥಾನದಲ್ಲಿ ಇಳಿದುಕೊಂಡೆವು. ಅದೇ ದೇವಾಲಯದ ಹಿಂದಲ ಬೀದಿಯಲ್ಲೇ ಮೋಜಿನಿದಾರರಿಗೆ ಒಂದು ಮನೆ ಮಾಡಿಕೊಟ್ಟೆವು. ನಾಲ್ಕು ಜನಕ್ಕೂ ಊಟ, ಕಾಫಿ, ತಿಂಡಿ ದೇವಸ್ಥಾನದಲ್ಲೆ ನಡೆಯುತ್ತಿದ್ದಿತು. ನಾನೂ, ನಾಣಿಯೂ ಅಡಿಗೆ ಮಾಡುತ್ತಿದ್ದೆವು.

ಬೈಲಹಳ್ಳಿ ಚಿಕ್ಕದಾದರೂ ಅಲ್ಲಿ ಚಿನ್ನ ಬೆಳ್ಳಿ ಕೆಲಸಮಾಡುವ ಒಬ್ಬ ಆಚಾರಿ

ಇದ್ದಾನೆ. ರೈತರ "ಹಿಟ್ಟಿನ ಮಡಕೆ ಲೊಡಗುಟ್ಟುತ್ತಿದ್ದರೂ" ಆಚಾರಿಯ ಮನೆಯಲ್ಲಿ ಕೊಟಕೊಟ ಶಬ್ದ ನಡೆಯುತ್ತಲೇ ಇರುತ್ತದೆ. ಮದುವೆಯ ಕಾಲದಲ್ಲಿಯಂತೂ ಅವನಿಗೆ ಒಂದು ಗಳಿಗೆಯೂ ವಿರಾಮವಿರುವುದಿಲ್ಲ. ಅಕ್ಕಸಾಲೆಯ ಸಂಪಾದನೆಯೂ ಚೆನ್ನಾಗಿಯೇ ಇರುವಂತೆ ತೋರುತ್ತದೆ. ಅವನು ದುರ್ಬಲರಾದ ಮೂರು ಮಂದಿಯನ್ನು ತನ್ನ ಸಹಾಯಕ್ಕೆ ಇಟ್ಟುಕೊಂಡಿದ್ದಾನೆ. ಅವರ ಪೈಕಿ ಇಬ್ಬರು ಕುಂಟರು. ಒಬ್ಬನು ಕುಳ್ಳ. ಆಚಾರಿಗೆ ಕುಳಿತುಕೊಂಡು ಕೆಲಸ ಮಾಡುವುದೇ ಮುಖ್ಯವಾದುದರಿಂದ ಅವನ ಕೆಲಸಕ್ಕೆ ಕುಂಟರಿಂದಲೂ ಕುಳ್ಳರಿಂದಲೂ ಏನೂ ತೊಂದರೆಯಿಲ್ಲ.

ದೇವಸ್ಥಾನದ ಮಗ್ಗುಲಲ್ಲಿರುವುದು ಕಮ್ಮಾರ ಸುಬ್ಬಾಚಾರಿಯ ಮನೆ. ಈ ಮನೆಯಲ್ಲಿ ಯಾವಾಗಲೂ ಧೂಳೂ ಹೊಗೆಯೂ ತುಂಬಿರುತ್ತದೆ. ಸೂರ್ಯನ ಬೆಳಕು ಮನೆಯೊಳಕ್ಕೆ ನುಗ್ಗಿದಂತೆಯೇ ತೋರುವುದಿಲ್ಲ. ವ್ಯವಸಾಯವೇ ಮುಖ್ಯ ಕಸಬಾಗಿ ಉಳ್ಳ ಬೈಲಹಳ್ಳಿಯಲ್ಲಿ ಕಮ್ಮಾರನ ಕೆಲಸ ಬಹಳ ಪ್ರಾಮುಖ್ಯವಾದುದು. ಅವನಿಗೆ ಒಂದು ಗಳಿಗೆಯೂ ಬಿಡುವು ಸಿಕ್ಕುವುದಿಲ್ಲ. ಸುಬ್ಬಾಚಾರಿಗೆ ಕಬ್ಬಿಣ ಬಡಿಯುವುದರ ಜತೆಗೆ ಸ್ವಲ್ಪ ಮೃದಂಗ ಮತ್ತು ಪಿಟೀಲು ಬಾರಿಸುವುದೂ ತಿಳಿದಿದೆ. ಸುಬ್ಬಾಚಾರಿ ಹೆಂಡಕುಡುಕ. ಅವನಿಗೆ ಎಂಟು ಜನ ಮಕ್ಕಳಿದ್ದಾರೆ. ಅವರಲ್ಲೆಲ್ಲಾ ಅವನ ಒಂಬತ್ತು ವರುಷದ ಹೆಣ್ಣು ಹುಡುಗಿ ಬಹಳ ಚೆಲುವಾಗಿದ್ದಾಳೆ. ಆ ಹುಡುಗಿ ಊರಿನಲ್ಲಿರುವ ತನ್ನ ವಯಸ್ಸಿನ ಎಲ್ಲಾ ಹುಡುಗ ಹುಡುಗಿಯರ ಮೇಲೂ ಪ್ರಭುತ್ವವನ್ನು ನಡೆಸಿಕೊಂಡು ಅವರನ್ನು ಕುಣಿಸಿ, ಅವರಿಗೆ ಬೇಕಾದಂತೆ ತಿಂಡಿಗಳನ್ನು ಕೊಟ್ಟು ಆಟವಾಡಿಸುತ್ತಾಳೆ. ಬೈಲಹಳ್ಳಿಗೆ ಅವಳೇ ರಾಣಿ. ಅವಳು ಪ್ರತಿದಿನವೂ ಬೆಳಗಾದ ಕೂಡಲೆ ಜತೆಯ ಜತೆಯ ಹುಡುಗ ಹುಡುಗಿಯರನ್ನೆಲ್ಲಾ ಸೇರಿಸಿಕೊಂಡು ಕಾಡಿಗೆ ಹೋಗಿ ಬಗೆ ಬಗೆಯ ಹೂವುಗಳನ್ನು ಆರಿಸಿಕೊಂಡು ಅವುಗಳನ್ನೆಲ್ಲಾ ಕಟ್ಟಿ ಮಾಲೆ ಮಾಡಿ ತಂದು ತನ್ನ ಮನೆಯ ಕರುವಿನ ಕತ್ತಿಗೆ ಹಾಕುತ್ತಾಳೆ. ಕಮ್ಮಾರನ ಹೊಗೆ ತುಂಬಿದ ಕತ್ತಲೆ ಮನೆಗೂ, ಬೈಲಹಳ್ಳಿಗೂ ಆ ಹುಡುಗಿ ಬೆಳಕಾಗಿದ್ದಾಳೆ.

ಬೈಲಹಳ್ಳಿಯಲ್ಲಿ ಸುಬ್ಬಾಚಾರಿಯ ಮಗಳಿಗೆ ಸರಿಸಮಾನವಾದುದು ಅವಳ ನಾಯಿ. ಮನುಷ್ಯರ ಮೇಲೆ ಆ ಹುಡುಗಿಯ ಅಧಿಕಾರ ಹೇಗೊ ನಾಯಿಗಳ ಮೇಲೆ ಆ ನಾಯಿಯ ಪ್ರಭುತ್ವ ಹಾಗೆ. ಆ ನಾಯಿಯ ಬುದ್ಧಿವಂತಿಕೆ ಚಟುವಟಿಕೆ ಮತ್ತು ಚುರುಕು ಆಶ್ಚರ್ಯಕರವಾಗಿದೆ. ಆ ನಾಯಿಗೆ ಬೈಲಹಳ್ಳಿಯವರು ಸಿಂಗನೆಂದು ಹೆಸರಿಟ್ಟಿದ್ದಾರೆ. ಸುಬ್ಬಾಚಾರಿಗೆ ಎಂಟು ಮಕ್ಕಳಿದ್ದರೂ ಸಿಂಗನಿಗೆ

ಆ ಒಂದು ಹುಡುಗಿಯಲ್ಲಿ ಮಾತ್ರ ಬಳಕೆ ಹೆಚ್ಚು. ಆ ನಾಯಿಗೆ ಪಟಿಂಗರನ್ನೂ, ಕೊಳಕರನ್ನೂ, ಕಳ್ಳರನ್ನೂ ಕಂಡರೆ ಸೇರುವುದಿಲ್ಲ. ಬೈಲಹಳ್ಳಿಯಲ್ಲಿ ಕಳ್ಳರನ್ನೂ ಪಟಿಂಗರನ್ನೂ ಕಂಡರೆ ನಾಯಿಯು ಬಗಳುತ್ತದೆ. ನಾಯಿಯು ಈ ವಿಚಿತ್ರವಾದ ಬುದ್ಧಿಯಿಂದ ಸುಬ್ಬಾಚಾರಿಯ ಮನೆಗೆ ನೇಗಿಲು ಮುಂತಾದ ವ್ಯವಸಾಯದ ಸಾಮಾನುಗಳನ್ನು ಮಾಡಿಸಿಕೊಳ್ಳುವುದಕ್ಕೆ, ಹೋಗುವುದಕ್ಕೆ ಕೂಡ ಅನೇಕರಿಗೆ ಅವಕಾಶವಿಲ್ಲದುದಾಗಿದೆ. ಪಟೇಲ ಸುಬ್ಬೇಗೌಡನ ಹೊಲದ ಬದುವಿನಲ್ಲಿದ್ದ ತೆಂಗಿನ ಮರದಲ್ಲಿ ಒಂದು ದಿನ ಎಳನೀರು ಕಳವಾಯಿತು. ಸುಬ್ಬೇಗೌಡ ಕೂಗಾಡುತ್ತಾ ಊರಿಗೆ ಬಂದು ಊರಿನ ಹುಡುಗರನ್ನೆಲ್ಲಾ ಕರೆಸಿ ವಿಚಾರಣೆ ನಡೆಸಿದನು. ಆದರೆ ಆ ದಿನ ಬೆಳಿಗ್ಗೆ ಸುಬ್ಬೇಗೌಡನ ಹದಿನೈದು ವಯಸ್ಸಿನ ಎರಡನೆ ಮಗ ಕಾಳನೆ ಮೂರು–ನಾಲ್ಕು ಜನ ದನಕಾಯುವ ಹುಡುಗರನ್ನು ಜತೆಯಲ್ಲಿ ಸೇರಿಸಿಕೊಂಡು ತಂದೆಯ ಮರದ ಎಳನೀರನ್ನು ಉದುರಿಸಿ ಅವರಿಗೆಲ್ಲಾ ಆತಿಥ್ಯವನ್ನು ನಡೆಸಿದ್ದನು. ಪಟೇಲ್ ಸುಬ್ಬೇಗೌಡನು ಕೈಯಲ್ಲಿ ದೊಣ್ಣೆಯನ್ನು ಹಿಡಿದುಕೊಂಡು ಭಯಂಕರವಾದ ಧ್ವನಿಯಲ್ಲಿ 'ಯಾರು ನನ್ನ ತೋಟದಲ್ಲಿ ಎಳನೀರು ಕೆಡವಿದರು. ಒಳ್ಳೆ ಮಾತಿನಲ್ಲಿ ಹೇಳಿ, ಬಿಟ್ಟುಬಿಡುತ್ತೇನೆ. ಇಲ್ದಿದ್ರೆ ನಿಮ್ಮ ಕೈಲೆಲ್ಲಾ ತೆಂಗಿನಕಾಯಿ ಮುಟ್ಟಿಸಿ ಪತ್ತೆಮಾಡುತ್ತೇನೆ. ಆಮೇಲೆ ತೆಂಗಿನಕಾಯಿ ಫಲ ಗೊತ್ತೆ ಇದೆ. ಹೊಟ್ಟೆ ಊದುತ್ತೆ. ವಾಂತಿ ಮಾಡ್ಕೊಂಡು ಸಾಯ್ತೀರಿ' ಎಂಬುದಾಗಿ ಗದರಿಸಿದನು. ಹುಡುಗಳು ಹೆದರಿ ಮಾತನಾಡದೆ ಸುಮ್ಮನೆ ನಿಂತಿದ್ದರು. ಸುಬ್ಬೇಗೌಡನು ಆಚಾರಿಯ ನಾಯಿಯನ್ನು ಕರೆದು ಅದರ ಬೆನ್ನನ್ನು ತಟ್ಟಿ 'ಕಳ್ಳನನ್ನು ಹಿಡ್ಕೊಡೊ' ಎಂದನು. ನಾಯಿಯು ಕೂಡಲೆ ಕಾಳನ ಬಳಿಗೆ ಹೋಗಿ ಅವನ ಅಂಗಿಯ ತುದಿಯನ್ನು ಹಿಡಿದು ಎಳೆಯತೊಡಗಿತು.

ಸುಬ್ಬಾಚಾರಿ ಹೆಂಡಕುಡಕನೆಂದು ಹೇಳಿದೆವಷ್ಟೆ. ಅವನು ವಾರಕ್ಕೆ ಎರಡು ಸಲವಾದರೂ ನಮ್ಮ ಊರಿಗೆ ಹೆಂಡವನ್ನು ಕುಡಿಯಲು ಬಂದೇ ಬರುತ್ತಾನೆ. ಆದರೆ ಅವನಲ್ಲಿ ಒಂದು ವಿಶೇಷ. ಅವನು ಹೆಂಡವನ್ನು ಕುಡಿಯುವುದಕ್ಕೆ ಹೋಗುತ್ತಾನೆಂಬುದು ಯಾರಿಗೂ ಗೊತ್ತಾಗುವುದಿಲ್ಲ. ಅವನು ಉಳಿದ ಅನಾಗರಿಕ ಕುಡುಕರಂತೆ ಕೈಯ್ಯಲ್ಲಿ ಹೆಂಡದ ಬುರುಡೆಯನ್ನಾಗಲಿ, ಸೀಸೆಯನ್ನಾಗಲಿ ಹಿಡಿದುಕೊಂಡು ಹೋಗಿ ಕುಡಿಯುವುದಿಲ್ಲ. ಪಡ್ಕಾನೆ ಬಳಿಯಲ್ಲಿಯೆ ಯಾರದಾದರೂ ಸ್ನೇಹಿತರ ಬುರುಡೆ ತೆಗೆದುಕೊಂಡು ತಲೆಗೆ ಮುಸುಕು ಹಾಕಿಕೊಂಡು ಬೇಲಿ ಮರೆಯಲ್ಲಿ ಕುಳಿತು ಕುಡಿದು ಮನೆಗೆ ಬರುತ್ತಾನೆ.

ತಾನು ಕುಡಿಯುವುದು ಇತರರಿಗೆ ತಿಳಿಯಕೂಡದೆಂದು ಸುಬ್ಬಾಚಾರಿ

ಎಷ್ಟು ಪ್ರಯತ್ನಪಟ್ಟರೂ ಅದು ತಿಳಿದೇ ತಿಳಿಯುತ್ತದೆ. ಬೈಲಹಳ್ಳಿಯ ಕುಡುಕರ ಹೊಡೆದಾಟಗಳಲ್ಲೆಲ್ಲಾ ಅವನು ಸೇರಿಯೇ ಸೇರುತ್ತಾನೆ. ಕುಡಿತದ ಅಮಲಿನಿಂದ ತಾನೇ ಎಷ್ಟೋ ಇಲ್ಲದ ವ್ಯಾಜ್ಯಗಳನ್ನು ಪ್ರಾರಂಭಿಸಿ ಏಟುಗಳನ್ನು ತಿನ್ನುತ್ತಾನೆ. ಎಷ್ಟೋ ರಾತ್ರಿ ಜ್ಞಾನ ತಪ್ಪಿ ನಮ್ಮ ಊರು ಬೀದಿಗಳಲ್ಲಿ ಬಿದ್ದಿದ್ದು ಮರುದಿವಸ ಬೆಳಿಗ್ಗೆ ಬೈಲಹಳ್ಳಿಗೆ ಹೋಗಿದ್ದಾನೆ.

ಎಂಟು ಮಕ್ಕಳ ದೊಡ್ಡ ಸಂಸಾರಿ ನಿತ್ಯ ಕುಡಿಯುತ್ತಿದ್ದರೆ ಅವನು ಪೂರೈಸುವುದುಂಟೆ? ಮನೆಯಲ್ಲಿ ಅವನಿಗೂ ಅವನ ಹೆಂಡತಿಗೂ ನಿತ್ಯ ವಾಗ್ವಾದ ನಡೆಯುತ್ತಲೇ ಇರುತ್ತದೆ. ಸುಬ್ಬಾಚಾರಿ, ಹೆಂಡತಿ ಬೈದರೂ ಬೈಯಿಸಿಕೊಂಡು ಹೆಚ್ಚು ಚರ್ಚೆಮಾಡದೆ ವಿಧೇಯನಾಗಿರುತ್ತಾನೆ.

ಬೈಲಹಳ್ಳಿ ಪಟೇಲನ ಹೆಸರು ಹಂಚಿನಮನೆ ಸುಬ್ಬೇಗೌಡನೆಂದು ಹೇಳಿದೆನಷ್ಟೆ. ಹಂಚಿನಮನೆ ಎಂಬ ಹೆಸರು ಆ ಹಳ್ಳಿಯವರು ಸುಬ್ಬೇಗೌಡನ ಅಜ್ಜನಿಗೆ ಕೊಟ್ಟುದು. ಆ ಕಾಲದಲ್ಲಿ ಊರಿನಲ್ಲಿ ಬರಿಯ ಹುಲ್ಲಿನ ಮನೆಗಳೇ ಇದ್ದುವಂತೆ. ಸುಬ್ಬೇಗೌಡನ ಅಜ್ಜ ಮೊದಲು ಹಂಚಿನ ಮನೆಯನ್ನು ಕಟ್ಟಿದುದರಿಂದ ಅವನಿಗೆ ಹಂಚಿನಮನೆ ವೆಂಕಟೇಗೌಡನೆಂದೇ ಹೆಸರಾಯಿತು. ಈಚೆಗೆ ಇನ್ನೂ ಇಬ್ಬರು ಹಂಚಿನ ಮನೆಗಳನ್ನು ಕಟ್ಟಿದ್ದಾರೆ. ಆದರೆ ಅವರ ಹೆಸರ ಹಿಂದೆ ಯಾವ ಬಿರುದೂ ಸೇರಿಲ್ಲ. ಪಟೇಲ್ ಸುಬ್ಬೇಗೌಡನಿಗೆ 'ಬರಾವು' ಬಾರದು. ಅವನ ಅಪ್ಪ, ಅಜ್ಜ ಯಾರೂ ಬರಾವ್ ಕಂಡಿರಲಿಲ್ಲ. ಅವನು ತನ್ನ ಮನೆಯಲ್ಲಿ ತಗಡಿನ ಒಂದು 'ಸಂದೂಕದಲ್ಲಿ' ಅನೇಕ ಕಾಗದಗಳನ್ನು ಕಟ್ಟಿ ತುರುಕಿದ್ದಾನೆ. ಆ ಕಾಗದಗಳೂ ಅದಕ್ಕೆ ಕಟ್ಟಿರುವ ಬಟ್ಟೆಯೂ ಆ 'ಸಂದೂಕವೂ' ಅವನ ಅಜ್ಜನ ಕಾಲದಿಂದ ಬಂದವುಗಳು. ಸುಬ್ಬೇಗೌಡ ಆ ಪೆಟ್ಟಿಗೆಯ ಮುಚ್ಚಳವನ್ನು ತೆಗೆದೂ ಇಲ್ಲ. ಆ ಕಾಗದದ ಗಂಟಿನ ಮೇಲೆ ಕಟ್ಟಿರುವ ಬಟ್ಟೆಯನ್ನು ಬಿಚ್ಚಿಯೂ ಇಲ್ಲ. ಪ್ರತಿ ಶನಿವಾರವೂ 'ತಾನ' ಮಾಡಿ ದೇವರ ಪೂಜೆ ಮಾಡುವಾಗ ಆ ಸಂದೂಕಕ್ಕೂ ಒಂದು ಸಲ ಅಡ್ಡಬಿದ್ದು ಮಂಗಳಾರತಿ ಮಾಡುತ್ತಾನೆ. ಆ ಸಂದೂಕದಲ್ಲಿ 'ಪಟೇಲಿಕೆಯ ರಿಕಾರೊಟು' ಇದೆಯೆಂದೂ ಇನ್ನೂ ತನ್ನ ಮನೆತನದ ಅನೇಕ ಲೆಕ್ಕಾಚಾರಗಳಿವೆಯೆಂದೂ ಹೇಳುತ್ತಾನೆ. ಆ ಗಂಟನ್ನು ಬಿಚ್ಚಿ ಕಾಗದಗಳನ್ನು ನೋಡಲು ಒಂದು ಸಲ ಕೊಡೆಂದು ನಾನು ಎಷ್ಟು ಬಾರಿ ಕೇಳಿದರೂ ಅವನು ಬೇರೆ ಕೊಡಲಿಲ್ಲ.

ಸುಬ್ಬೇಗೌಡನನ್ನು ಬಿಟ್ಟರೆ ಬೈಲಹಳ್ಳಿಯಲ್ಲಿ ಮುಖಂಡರಾದವರು ಕುರಿತಿಮ್ಮ, ವೇಷ್ಟಿಕುಬ್ಬ, ಇಂಜನ್ ಯಾಲಕ್ಕ, ಫಾರಿನ್ ಕಂಟ್ರಿ ಮತ್ತು ಬ್ಲಾಕ್

ಬರ್ಡ್ ಮುಂತಾದವರು. ಇವರೆಲ್ಲರೂ ಒಂದಿಲ್ಲೊಂದು ರೀತಿಯಿಂದ ಬೈಲಹಳ್ಳಿಯಲ್ಲಿ ಪ್ರಸಿದ್ಧರಾಗಿದ್ದಾರೆ. ಕುರಿ ತಿಮ್ಮ ಎತ್ತರವಾಗಿ ಕರ್ರಗೆ ಪುಷ್ಟನಾಗಿದ್ದಾನೆ. ಅವನನ್ನು ನೋಡಿದರೆ ಯಾರಿಗಾದರೂ ಭಯವುಂಟಾಗುತ್ತದೆ. ಅವನಿಗೆ ಕುರಿ ತಿಮ್ಮನೆಂದು ! ಹೆಸರು ಬರಲು ಸರಿಯಾದ ಕಾರಣ ಗೊತ್ತಿಲ್ಲ. ಪಟೇಲ ಸುಬ್ಬೇಗೌಡನು ಈ ಎರಡು ಮೂರು ಕಾರಣಗಳನ್ನು ಹೇಳುತ್ತಾನೆ. ಮೊದಲನೆಯದು ಕುರಿತಿಮ್ಮನು ನೆರೆಹಳ್ಳಿಯ ಯಾರದೊ ಕುರಿಯನ್ನು ರಾತ್ರಿ ಕಾಲದಲ್ಲಿ ಕೊಂದು ತಿಂದುಬಿಟ್ಟನಂತೆ ! ಎರಡನೆಯ ಕಾರಣವು ತಿಮ್ಮನು ನೋಡುವುದಕ್ಕೆ ಯಾವಾಗಲೂ ಕುರಿಯಂತೆ ಕಾಣುತ್ತಾನೆ, ಕರ್ರಗಿದ್ದಾನೆ, ಗಡ್ಡವನ್ನೂ ತಲೆಕೂದಲನ್ನೂ ವರ್ಷಕ್ಕೆ ಒಂದು ಸಲವಾದರೂ ಕ್ಷೌರಮಾಡಿಸುತ್ತಾನೋ ಇಲ್ಲವೊ ! ಅಂತೂ ಯಾವಾಗಲೂ ಮುಖದ ಮೇಲೆ ಕರಿಯ ಕೂದಲಿನ ಕಂತೆ ಇದ್ದೇ ಇರುತ್ತದೆ. ಕುರಿ ತಿಮ್ಮನಿಗೆ ಮೆಲ್ಲನೆ ಮಾತನಾಡುವುದಕ್ಕೇ ಬಾರದು. ಅವನು ಮಾತನಾಡುವುದು ಜಗಳ ಮಾಡುವ ಹಾಗೆ. ಕುರಿಯ ತುಪಟದಿಂದ ಯಾವಾಗಲೂ ಕದರಿನಲ್ಲಿ ಸೂಲುತ್ತಿರುತ್ತಾನೆ. ಕುರಿ ತಿಮ್ಮನೆಂದು ಕರೆಯುವುದರಿಂದ ಅವನಿಗೆ ಕೋಪವಾಗಲಿ, ಅಸಮಾಧಾನವಾಗಲಿ ಉಂಟಾಗುವಂತೆ ತೋರುವುದಿಲ್ಲ.

ವೇಷ್ಟಿ ಕುಜ್ಜನ ನಿಜವಾದ ಹೆಸರು ಕಾಸೆ ಗಿಡ್ಡನೆಂದು. ಬೈಲಹಳ್ಳಿಯಲ್ಲಿ ಎಲ್ಲರೂ ದಟ್ಟಿ ಉಡುವುದೇ ಪದ್ಧತಿ. ಆ ದಟ್ಟಿ ಎನ್ನುವುದು ಒಂದೂವರೆ ಮೊಳ ಅಗಲವಾಗಿ ಐದು ಮೊಳ ಉದ್ದವಾಗಿರುವ ಬಟ್ಟೆಯ ಚೂರು. ಈ ಐದು ಮೊಳದ ಪೈಕಿ ನಾಲ್ಕು ಮೊಳವನ್ನು ಒಂದು ಗೇಣು ಅಗಲಕ್ಕೆ ಮಡಿಸಿ ಸೊಂಟಕ್ಕೆ ಸುತ್ತಿಕೊಂಡು ಉಳಿದ ಒಂದು ಮೊಳವನ್ನು ಕೋಚಾಗಿ ಮುಂಡಿಯವರಿಗೆ ಬರುವಂತೆ ನೇತು ಬಿಟ್ಟು ಉಡುತ್ತಾರೆ. ನಮ್ಮ ಹಳ್ಳಿಯ ರೈತರೆಲ್ಲಾ ಉಟ್ಟುಕೊಳ್ಳುವುದು ಇಂತಹ ದಟ್ಟಿಯೆ. ಆದರೆ ಬೈಲಹಳ್ಳಿಯ ಗಿಡ್ಡನು ಮಾತ್ರ ಈಗ ಹತ್ತು ವರ್ಷಗಳ ಕೆಳಗೆ ಒಂದು ದಿನ ಇದ್ದಕ್ಕಿದ್ದಂತೆ ಕಾಸೆ ಹಾಕಿ ಪಂಚೆ ಉಡಲು ಪ್ರಾರಂಭಿಸಿದನು. ರೈತ ಹಳ್ಳಿಯಲ್ಲಿ, ಅದರಲ್ಲೂ ಬೈಲಹಳ್ಳಿಯಲ್ಲಿ, ಕಾಸೆ ಹಾಕಿ ಪಂಚೆ ಉಡುವುದು ಬಹಳ ಅಪರೂಪದ ವಿಚಾರ. ಆದುದರಿಂದ ಜನರು ಗಿಡ್ಡನನ್ನು ಕಾಸೆ ಗಿಡ್ಡನೆಂದು ಕರೆಯಲು ಪ್ರಾರಂಭಿಸಿದರು. ಆದರೆ ಗಿಡ್ಡನಿಗೆ ತನ್ನನ್ನು ಕಾಸೆ ಗಿಡ್ಡನೆಂದು ಕರೆದರೆ ಕೋಪ ಬರುತ್ತಿತ್ತು. "ಅಯ್ನೋರೊಳು ಮಾತ್ರ ಕಾಸೆ ಹಾಕ್ಬೌದು; ನಾ ಹಾಕೊಕಾಗೊಲ್ವ" ಎಂಬುದಾಗಿ ಅವನು ಕೇಳಿದ್ದನು. ಆದುದರಿಂದ ನಮ್ಮ ಊರಿನ ಜನರು ಅವನ ಹೆಸರನ್ನು ಒಂದು ತರಹೆಯ ಸಂಸ್ಕೃತಕ್ಕೆ ತಿರುಗಿಸಿ 'ವೇಷ್ಟಿಕುಜ್ಜ'ನೆಂದು ಕರೆಯತೊಡಗಿದರು. ಗಿಡ್ಡನೇನೊ ಕುಜ್ಜಾಗಿಲ್ಲ.

ಆದರೂ ಅವನಿಗೆ ಬೇರೆ ಹೆಸರಾವುದೂ ನಮ್ಮ ಊರಿನವರಿಗೆ ತೋರದುದರಿಂದ ಆ ಹೆಸರೇ ಇನ್ನೂ ನಿಂತಿದೆ.

ಕಾಸೆ ಗಿಡ್ಡ ಬಹಳ ವಾಚಾಳಿ. ದೇವರು, ಪ್ರಪಂಚ ನಶ್ವರ, ವೇದಾಂತ ಮುಂತಾದ ವಿಚಾರಗಳನ್ನೆಲ್ಲಾ ಕುರಿತು ಅವನು ಆಗಾಗ್ಗೆ ಉಪನ್ಯಾಸ ಮಾಡುತ್ತಾನೆ. ಅವನಿಗೆ ಬರಾವು ಬಾರದಿದ್ದರೂ ಅನುಭವಾಮೃತದ ಪದ್ಯ ಒಂದೆರಡನ್ನು ಗಟ್ಟಿಮಾಡಿಕೊಂಡು ಹೇಳುತ್ತಿರುತ್ತಾನೆ. ಕಾಸೆ ಗಿಡ್ಡ ಬಹಳ ಸೋಮಾರಿ. ಕೆಲಸ ಮಾಡುವುದಕ್ಕಿಂತ ಕುಳಿತುಕೊಂಡು ಹರಟೆ ಹೊಡೆಯುವುದರಲ್ಲಿಯೇ ಅವನಿಗೆ ಉತ್ಸಾಹ ಹೆಚ್ಚು. ಅವನು ಇದ್ದ ಕಡೆ ಇಬ್ಬರು ಮುವ್ವರು ಸೋಮಾರಿಗಳು ಇದ್ದೇ ಇರುತ್ತಾರೆ.

ಕಾಸೆ ಗಿಡ್ಡನಿಗೆ ಕಾಲು ಸ್ವಲ್ಪ ಕುಂಟು. ಬೈಲಹಳ್ಳಿಯಲ್ಲಿ ಅವನನ್ನು ಕಂಡರೆ ಆಗದವರು ಕುಂಟ ಕಾಸೆ ಗಿಡ್ಡನೆನ್ನುತ್ತಾರೆ. ಆ ಹೊಸ ವಿಶೇಷಣ ಅವನ ಹೆಸರಿಗೆ ಬಂದದ್ದು ಈ ರೀತಿ. ಹಿಂದೆ ಒಂದು ಸಲ ಬೈಲಹಳ್ಳಿಗೆ 'ಬುಂಡೆ ಬೆಸ್ತರು' ಬಂದರು. ಬುಂಡೆ ಬೆಸ್ತರೂ, ಹಾವಾಡಿಗರೂ, ಹಂದಿ ಜೋಗಿಗಳೂ ಬಂದರೆ ಊರಿನಲ್ಲಿ ಕಳ್ಳತನ ನಡೆಯುವುದು ಖಂಡಿತ, ಆ ಸಲವೂ ಬುಂಡೆ ಬೆಸ್ತರು ಬಂದ ಮೇಲೆ ಕಳ್ಳತನವು ನಿಧಾನವಾಗಿ ಪ್ರಾರಂಭವಾಯಿತು. ಮೊದಮೊದಲು ಕೋಳಿ, ಹಂದಿಮರಿ ಹೋಗುತ್ತಿದ್ದುದು ಅನಂತರ ಕಾಳು, ಬಟ್ಟೆ ಮೊದಲಾದುವುಗಳಿಗೆ ಪ್ರಾರಂಭವಾಯಿತು. ಪಟೇಲ ಸುಬ್ಬೇಗೌಡನ ಮಾಸಿದ ಹಳೆಯ ಜರಿರುಮಾಲನ್ನು ಅಗಸರ ಮಲ್ಲಯ್ಯನು ಕೆರೆಯ ಏರಿಯಮೇಲೆ ಒಣಗಿಸಿ ತೂಗಡಿಸುತ್ತಿದ್ದಾಗ ಬುಂಡೆ ಬೆಸ್ತರು ಅದನ್ನು ಹಾರಿಸಿಬಿಟ್ಟರು. ಪಟೇಲನು ಹಾರಾಡಿ ಕೂಗಾಡಿದುದೊಂದೂ ಪ್ರಯೋಜನವಾಗಲಿಲ್ಲ. ಒಂದು ದಿನ ಬುಂಡೆ ಬೆಸ್ತರು ಕಾಸೆ ಗಿಡ್ಡನ ಒಂದು ಕುರಿಯನ್ನು ಕದ್ದರು. ಆ ಕುರಿ ಗಿಡ್ಡನಿಗೂ ಅವನ ಹೆಂಡತಿಗೂ ಬಹಳ ಪ್ರಿಯವಾಗಿತ್ತು. ಆ ಕಳವನ್ನು ಕಂಡು ಕಾಸೆ ಗಿಡ್ಡನಿಗೆ ಬಹಳ ಕೋಪವುಂಟಾಯಿತು. ಸಾಲದುದಕ್ಕೆ ಕುರಿಯನ್ನು ಕದ್ದ ದಿನವೇ ಬೆಸ್ತರು ಬೈಲಹಳ್ಳಿಯನ್ನು ಬಿಟ್ಟು ಹೊರಟಿರುವರೆಂದು ತಿಳಿಯಿತು. ಕಾಸೆ ಗಿಡ್ಡನು ಗಾಬರಿಯಿಂದ ಬಾಗಿಲಿನಲ್ಲಿ ಮೇಯುತ್ತಿದ್ದ ಕೆಂಗನ ಸಂತೆ ವ್ಯಾಪಾರದ ತಟ್ಟನ್ನು ಹತ್ತಿಕೊಂಡು ಬುಂಡೆ ಬೆಸ್ತರು ಇಳಿದುಕೊಂಡಿದ್ದ ಕಡೆಗೆ ಹೊರಟನು. ಊರ ಮುಂದಲ ದೇವಸ್ಥಾನದ ಮುಂದೆ ಹರಡಿದ್ದ ಕಲ್ಲುಗಳನ್ನು ಜಾರಿ ಕುದುರೆಯು ಬಿದ್ದುಬಿಟ್ಟಿತು. ಕಾಸೆ ಗಿಡ್ಡನೂ ಬಿದ್ದು ಕಾಲು ಮುರಿದುಕೊಂಡನು. ಬೆಸ್ತರು ತಮ್ಮ ಕತ್ತೆಗಳ ಮೇಲೆ ಸಾಮಾನುಗಳನ್ನು ಹೇರಿಕೊಂಡು ಬಿದ್ದಿದ್ದ ಗಿಡ್ಡನನ್ನು

ನೋಡಿ ನಗುತ್ತಾ ಹೊರಟು ಹೋದರು. ಬುಂಡೆ ಬೆಸ್ತರು ಕದ್ದುಕೊಂಡು ಹೋದುದಕ್ಕೆ ಪ್ರತಿಯಾಗಿ ಸುಬ್ಬೇಗೌಡನೇನೊ ಬೇರೆ ರುಮಾಲನ್ನು ಕೊಂಡು ಕೊಂಡನು. ಕಾಸೆ ಗಿಡ್ಡನೂ, ಕಳೆದುಕೊಂಡುದಕ್ಕಿಂತ ಚೆನ್ನಾದ ಬೇರೆ ಕುರಿಯನ್ನು ಕೊಂಡುಕೊಂಡನು. ಆದರೆ ಅವನ ಮುರಿದ ಕಾಲು ಮಾತ್ರ ಹಾಗೆಯೇ ಇದೆ.

ಈ ಪ್ರಭೃತಿಗಳನ್ನೆಲ್ಲಾ ಸೇರಿಸಬೇಕಾದರೆ ಪಟೇಲನಿಗೆ ಸಾಕಾಗಿ ಹೋಯಿತು. ಫಾರಿನ್ ಕಂಟ್ರಿಯೂ, ಇಂಜನ್ ಯಾಲಕ್ಕಿಯೂ, ಕೊನೆಯಲ್ಲಿ ಬಂದರು. ಫಾರಿನ್ ಕಂಟ್ರಿ ಎನ್ನುವುದು ಪರದೇಶಿಗೌಡ ಎಂಬ ಹೆಸರಿನ ಇಂಗ್ಲಿಷ್ ತರ್ಜುಮೆ. ಹೆಸರುಗಳನ್ನು ಹೀಗೆ ಇಂಗ್ಲಿಷಿಗೂ, ಸಂಸ್ಕೃತಕ್ಕೂ ಬದಲಾಯಿಸು ವುದು ನಮ್ಮ ಊರಿನವರ ವಾಡಿಕೆ. ನಮ್ಮ ಊರ ಬಳಿ ಇರುವ ಸೆಟ್ಟಿಹಳ್ಳಿ ಸಂತೆಗೆ 'ವರ್ತಕಪಲ್ಲಿ ಜನಸ್ತೋಮ'ವೆಂದೂ ನೊಣವಿನ ಕೆರೆಗೆ 'ಮಕ್ಷಿಕತಟಾಕ'ವೆಂದೂ ನಮ್ಮವರು ಹೇಳುತ್ತಾರೆ. ಬೈಲಹಳ್ಳಿಯ ಕಪ್ಪು ಹಕ್ಕಿಗೆ ತನ್ನನ್ನು ಕಪ್ಪುಹಕ್ಕಿ ಯೆಂದು ಕರೆದರೆ ಬಹಳ ಸಿಟ್ಟು ಬರುತ್ತದೆ. ಆದುದರಿಂದ ನಮ್ಮೂರಿನವರು ಅವ ನನ್ನು ಬ್ಲಾಕ್ ಬರ್ಡ್ ಎಂದು ಕರೆಯುತ್ತಾರೆ. ಯಾಲಕ್ಕಿಗೆ ಇಂಜನ್ ಯಾಲಕ್ಕಿ ಎಂದು ಹೆಸರು ಬರಲು ಕಾರಣವು ಈ ರೀತಿ ಇದೆ. ಯಾಲಕ್ಕಿ ಬೈಲಹಳ್ಳಿಯನ್ನು ಬಿಟ್ಟು ಹೊರಕ್ಕೇ ಹೋದವನಲ್ಲ. ಅವನು ಒಂದು ಸಲ ಹಾಸನಕ್ಕೆ ಹೋಗ ಬೇಕಾಯಿತು. ಅವನು ಅಲ್ಲಿಗೆ ಹೋಗಿದ್ದಾಗ ಆಗ ತಾನೆ ಹೊಸದಾಗಿ ಅರಸೀ ಕೆರೆಯಿಂದ ಮೈಸೂರಿಗೆ ಹಾಕಿದ್ದ ರೈಲು ಮುಗಿದು ಪರೀಕ್ಷೆಗಾಗಿ ರೈಲು ಕಂಬಿಯ ಮೇಲೆ ಒಂದು ಇಂಜನ್ ಬಿಟ್ಟು ನಡೆಸುತ್ತಿದ್ದರು. ಹುಟ್ಟಿದಂದಿನಿಂದ ರೈಲ್ವೆ ಇಂಜನನ್ನೆ ನೋಡದಿದ್ದ ಯಾಲಕ್ಕಿಗೆ ಅದನ್ನು ಕಂಡು ಮಿತಿಮೀರಿದ ಸಂತೋ ಷವೂ, ಆಶ್ಚರ್ಯವೂ ಉಂಟಾಯಿತು. ಊರಿಗೆ ಬಂದನಂತರ ಅವನು ಪದೇಪದೇ ಇಂಜನ್ನಿನಂತೆ ಕೂಗುತ್ತಿದ್ದನು. ಆ ಕೂಗು ಅವನಿಗೆ ಎಷ್ಟರಮಟ್ಟಿಗೆ ಅಭ್ಯಾಸ ವಾಗಿದ್ದಿತೆಂದರೆ, ಅದನ್ನು ಕೇಳಿದವರು ನಿಜವಾಗಿಯೂ ಸಮೀಪದಲ್ಲಿ ಇಂಜನ್ನು ಇದೆಯೆಂದು ತಿಳಿದುಕೊಳ್ಳುತ್ತಿದ್ದರು. ಆದುದರಿಂದ ಊರಿನವರು ಅವನಿಗೆ ಇಂಜನ್ ಯಾಲಕ್ಕಿ ಎಂದೇ ಹೆಸರಿಟ್ಟರು.

ಊರಿನ ಎಲ್ಲಾ ಮುಖಂಡರೂ ಅಂತೂ ಸೇರಿದನಂತರ ನಾಳೆಯು ಮೋಜಿಸಿದಾರ್ ಸಾಹೇಬರು ಜೋಡಿಗ್ರಾಮವನ್ನು ಅಳೆಯುವುದಕ್ಕೆ ಬಂದಿದ್ದಾ ರೆಂದೂ, ರೈತರೆಲ್ಲಾ ದಿವಸಕ್ಕೆ ಒಂದಾಳಿನಂತೆ ಹದಿನೈದು ದಿನ ಅಳೆಯುವುದಕ್ಕೆ ಬೇಕಾದ ಶಂಕು, ಸರಪಣಿ, ಗೂಟಗಳು, ಬಾವುಟ, ಸುಣ್ಣದ ಮಡಕೆ, ಹಾರೆ, ಪಿಕಾಸಿ ಮುಂತಾದ ಸಲಕರಣೆಗಳೊಂದಿಗೆ ಸಿದ್ಧವಾಗಿ ಬರಬೇಕೆಂದೂ ಹೇಳಿದನು.

ಮೋಜಿನಿದಾರರು ಸರ್ವೆ ನಡೆಸಲು ಬಂದಿರುವ ಸಮಾಚಾರವನ್ನು ಕೇಳಿದೊಡನೆಯೆ ರೈತರಲ್ಲಿ ಗುಜುಗುಜು ಪ್ರಾರಂಭವಾಯಿತು. ಘಾರಿನ್ ಕಂಟ್ರಿಯು "ನಮ್ಗೆ ಸರ್ವೆನೂ ಬೇಡ ಗಿರ್ವೆನೂ ಬೇಡ. ಸರ್ವೆಮಾಡಿದ್ರೆ ಜಮೀನು ಹೆಚ್ಕೋಕಿಲ್ಲ. ಇದೆಲ್ಲಾ ಜೋಡಿದಾರ್ರು ಕಂದಾಯ ಹೆಚ್ಚಿಸೋಕೆ ಮಾಡಿರೊ ಉಪಾಯ" ಎಂದನು. ಇಂಜನ್ ಯಾಲಕ್ಕಿಯು "ನಮ್ಮ ನಮ್ಮ ಜಮೀನ್ನ ನಾವೇ ಅಳೆದು ಇಷ್ಟೆ ಆರು ಉಕ್ಕಿ ನೆಲ ಆಯ್ತೆ ಅಂತ ಹೇಳ್ತೀವಿ. ನಮಗೆ ಸರಪಣಿನೂ ಬೇಡ, ನಿಶಾನೆನೂ ಬೇಡ" ಎಂದನು. ಕುರಿ ತಿಮ್ಮನು "ಜಮೀನು ಯಾಕ್ಸಾಮಿ ಅಳೆಯೋದು. ಭೂಮಿತಾಯಿ ಅಳೆಯೋದು ಪಾಪ ಸಾಮಿ. ಆಯ್ಸ ಕ್ಷೀಣಸ್ತದೆ. ಮಾಡಬಾರ್ದ ಕೆಲ್ಸ ಮಾಡಿದ್ರೆ ಆಗ್ಬಾರ್ದ ಆಯ್ತದೆ" ಎಂದನು. ಇವರ ಮಾತುಗಳನ್ನು ಕೇಳಿ ಮೋಜಿನಿದಾರರಿಗೆ ಬಹಳ ಸಿಟ್ಟು ಹತ್ತಿತು. ಅವರು ಮೀಸೆಯನ್ನು ಹುರಿಮಾಡುತ್ತಾ ಒಂದು ಸಲ ಘರ್ಜಿಸಿದರು. ನಾಣಿಯು ರೈತರ ಮನಸ್ಸಿಗೆ ಹಿಡಿಯುವಂತೆ ಬಹಳ ಚೆನ್ನಾಗಿ ಉಪನ್ಯಾಸ ಮಾಡಿದನು. ಇನ್ನು ಸ್ವಲ್ಪ ಹೊತ್ತು ಚರ್ಚೆ ನಡೆದನಂತರ ರೈತರೆಲ್ಲಾ ಸರ್ವೆಗೆ ಸಹಾಯ ಮಾಡಲು ಒಪ್ಪಿಕೊಂಡರು. ನಾಣಿಯು—

ಮನೆಗೊಂದಾಳು
ಅಳಿಬೇಕು ಪಾಳು
ಇಲ್ದಿದ್ರೆ ಗೋಳು
ನಾ ಹೇಳೋದು ಕೇಳು. —ಎಂದನು.

ರೈತರೆಲ್ಲಾ ನಕ್ಕುದನ್ನು ಕಂಡು ನಾಣಿಯು ಮತ್ತೆ—

ಈಗ್ಯಾಕೆ ನಗು
ಅಳೀಬೇಕು ಲಗು
ಅಳದ್ಮೇಲೆ ನಗು
ನಾ ಹೇಳ್ತೇನೆ ಮಗು. —ಎಂದನು.

ರೈತರೆಲ್ಲಾ ಸರದಿಯಂತೆ ಅಳೆಯುವುದಕ್ಕೆ ಬರಬೇಕೆಂದೂ ಬರದವರಿಗೆ ದಿನಕ್ಕೆ ಮೂರು ಆಣೆ ದಂಡವನ್ನು ವಿಧಿಸಬೇಕೆಂದೂ ರೈತರ ಅನುಮತಿಯಿಂದಲೇ ತೀರ್ಮಾನವಾಯಿತು.

* * * *

ಜೈಲಹಳ್ಳಿ ದೇವಸ್ಥಾನದ ಪೂಜಾರಿಯನ್ನು ಜನರು ಐನೂರು (ಅಯ್ಯನವರು ಎಂದು ಕರೆಯುತ್ತಾರೆ. ಐನೂರಿಗೆ ದೇವರ ಪೂಜೆಗಾಗಿ ಜಮೀನನ್ನು ಬಿಟ್ಟಿದ್ದಾರೆ. ಗ್ರಾಮವನ್ನು ಅಳೆಯಲು ಐನೂರು ಕೂಡ ಆಳು ಬರಬೇಕೆಂದು

ರೈತರಲ್ಲಿ ಕೆಲವರು ಹೇಳಿದರು. ಆದರೆ ಮತ್ತೆ ಕೆಲವರು ಐನೂರು ಐನೂರಾದುದ ರಿಂದ (ಪೂಜಾರಿ) ಈ ಅಳೆಯುವುದರಲ್ಲಿ ಅವನಿಗೆ ರಿಯಾಯ್ತಿಯನ್ನು ತೋರಿಸ ಬೇಕೆಂದು ವಾದಿಸಿದರು. ಐನೂರು "ನಾನು ಅಳೆಯುವುದಕ್ಕೆ ಬಂದರೆ ದೇವರಿಗೆ ಆರತಿ ಮಾಡುವವರು ಯಾರು?" ಎಂದನು. ಐನೂರು ಇನ್ನೂ ಹುಡುಗ. ವಯಸ್ಸು ಇಪ್ಪತ್ತೈದಕ್ಕೆ ಮೀರಿಲ್ಲ. ಗಟ್ಟಿ ಮುಟ್ಟಾಗಿದ್ದಾನೆ. ಮೈಬಣ್ಣ ಟಾರಿ ನಂತೆ ಕಪ್ಪು. ಬಣ್ಣದಲ್ಲಿ ಅವನು ಪೂಜೆ ಮಾಡುವ ಆಂಜನೇಯ ದೇವರಿಗೂ ಅವನಿಗೂ ವ್ಯತ್ಯಾಸ ತೋರುವುದಿಲ್ಲ. ಮುಖವೂ ಸ್ವಲ್ಪ ಅವನ ದೇವರ ಮುಖ ದಂತೆಯೇ ಇದೆ. ಅವನು ದೇವರ ಮುಂದೆ ನಿಂತು ದೇವರಿಗೆ ಮಂಗಳಾರತಿ ಮಾಡುತ್ತಿದ್ದರೆ, ಮೂಲ ದೇವರು ಎದ್ದು ನಿಂತು ತನಗೆ ತಾನೇ ಆರತಿ ಮಾಡಿ ಕೊಳ್ಳುತ್ತಿದೆಯೋ ಎಂಬಂತೆ ತೋರುತ್ತದೆ.

ಐನೂರು ತನಗೆ ಆಳನ್ನು ರಿಯಾಯ್ತಿ ಕೊಡಬೇಕೆಂದು ಕೇಳಿದ ಕೂಡಲೆ ಕೆಲವು ರೈತರು ಎದ್ದು "ರಿಯಾಯ್ತಿ ಕೊಡೋಕೆ ನಮಗೆ ಅಧಿಕಾರ ಇಲ್ಲ. ದೇವರ್ನೆ ಕೇಳೋಣ" ಎಂದರು. ಮರುದಿವಸ ಬೆಳಿಗ್ಗೆ ಪೂಜೆ ಆದಮೇಲೆ ಐನೂರು ಗ್ರಾಮಸ್ಥರನ್ನೆಲ್ಲಾ ಸೇರಿಸಿದನು. ಸ್ತ್ರೀ ಪುರುಷರು ಆದಿಯಾಗಿ ಎಲ್ಲರೂ ಐನೂರು ದೇವರನ್ನು ಪ್ರಶ್ನೆ ಕೇಳುವುದನ್ನು ನೋಡಲು ನೆರೆದಿದ್ದರು. ಎಲ್ಲರೂ ಸೇರಿದನಂತರ ಐನೂರು ದೇವರಿಗೆ ಮಂಗಳಾರತಿ ಮಾಡಿ ಕೈಮುಗಿದು ದೇವರ ಎದುರಿಗೆ ನಿಂತು ಭಕ್ತಿಯಿಂದ ಈ ರೀತಿ ಹೇಳಿದನು. "ಮಾಸ್ವಾಮಿ, ನಾನು ನಿನ್ನ 'ಶರಣ' ಸೇವಕ. ನಾನು ಅಳಿಯೋಕೆ ಆಳು ಹೋದ್ರೆ ನಿನ್ನ ಪೂಜೆ ಮಾಡೋರ್‍ಯಾರು? ನಿನ್ನ ಪೂಜೆ ನೀನು ಮಾಡಿಸಿಕೊಳ್ದೆ ಹೋದ್ರೆ ನಿನ್ನ ಮಹಿಮೆ ನಾಲ್ಕು ಹಳ್ಳಿ ದೇವರ ಎದುರಿಗೆ ಹೆಂಗೆ ಉಳೀತದೆ, ಅಳಿಯೋಕೆ ಹೋಗ್ದೆ ಇದ್ರೆ ಗ್ರಾಮಸ್ಥರು ಬಿಡೋಹಂಗಿಲ್ಲ. ಈಗೇನು ಮಾಡ್ಬೇಕು ಅನ್ನೋದು ನಂಗೆ ಗೊತ್ತಾಗಿಲ್ಲ, ನಿನ್ನ ಬಾಯಿಂದ್ಲೇ ಕೇಳಬೇಕು ಅಂತ ಗ್ರಾಮದ ಮಹಾಸ್ಯರೆಲ್ಲಾ ಇಲ್ಲಿ ನೆರೆದಿದ್ದಾರೆ. ನಾನು ಅಳಿಯೋಕೆ ಹೋಗಬೇಕಾದ್ರೆ ಬಲಗಡೆ ಕೊಡು, ಇಲ್ಲದಿದ್ದರೆ ಎಡಗಡೆ ಕೊಡು" ಎಂಬುದಾಗಿ ಪ್ರಾರ್ಥಿಸಿದನು. ನೆರೆದಿದ್ದವರೆಲ್ಲಾ ಗಟ್ಟಿಯಾಗಿ ಉಸಿರು ಸಹ ಬಿಡದೆ ದೇವರ ಕಡೆಯೇ ನೋಡುತ್ತಿದ್ದರು. ಸ್ವಲ್ಪ ಹೊತ್ತಿನೊಳಗಾಗಿ ದೇವರ ನೆತ್ತಿಯ ಮೇಲಿನಿಂದ ಹೂವು ಕೆಳಕ್ಕೆ ಬಿದ್ದಿತು.

ಅದನ್ನು ನೋಡಿ ಕೆಲವರು "ಐನೂರು ಆಳು ಬರಲೇಬೇಕು. ಮಂಡೇ ಮೇಲಿನಿಂದ ಹೂವು ಬಿತ್ತು" ಎಂದರು. ಮತ್ತೆ ಕೆಲವರು "ಐನೂರು ಬರಬೇಕಾ

ದುದಿಲ್ಲ. ಅದ್ಕೆ ಮಂಡೇಮೇಲಿನಿಂದ ಬಿತ್ತು" ಎಂದರು. ಐನೂರು "ಸ್ವಲ್ಪ ತಡೀರಿ, ದೇವರ್ನ ಮತ್ತೊಂದು ಸಲ ಕೇಳ್ಕೊತೀನಿ" ಎಂದನು. ನೆರದಿದ್ದವರೆಲ್ಲಾ 'ಹಂಗೆ ಆಗ್ಲಿ' ಎಂದರು. ಆಗ ಐನೂರು ದೇವರೊಂದಿಗೆ ಈ ರೀತಿ ಸಂಭಾಷಣೆ ನಡೆಸಿದನು. 'ಮಾಸ್ವಾಮಿ, ಮಂಡೆ ಮೇಲೆ ಹೂ ಕೊಟ್ರೆ ನಮ್ಗೆ ತಿಳಿಯೊ ದಾರಿ ಹೇಗೆ. ಇಲ್ಲಿವರೆಗೆ ನಾನಿನ್ನ ಎಷ್ಟೊ ಪ್ರಶ್ನೆ ಕೇಳಿದೆ. ಅನುಮಾನ ಸ್ವಲ್ಪವೂ ಇಲ್ದೆ ಹೇಳಿಬಿಟ್ಟೆ. ಇದರಿಂದ ಸುತ್ತಾ ನೂರು ಹಳ್ಳಿ ಇಂದ ಭಕ್ತರು ನಿನ್ನ ಸೇವೆಗೆ ಬರ್ತಾ ಇದಾರೆ. ಈ ಹತ್ತೂ ಜನಗಳ್ಗೆ ಸೇರಿದ್ಮಾತು. ಅನುಮಾನಕ್ಕೆ ದಾರಿ ಇಲ್ಲದಂತೆ ಹೇಳಿ ಬಿಡು ನಮ್ಮಪ್ಪ" ಎಂದು ಕೇಳಿಕೊಂಡು ಐದು ಆರು ಸಲ ಧಡಧಡನೆ ಅಡ್ಡಬಿದ್ದನು. ಹೂವು ಮತ್ತೆ ಮಂಡೆಯ ಮೇಲಿನಿಂದಲೇ ಕೆಳಕ್ಕೆ ಬಿತ್ತು.

ಹೀಗೆ ಎರಡು ಸಲವೂ ಅನುಮಾನಾಸ್ಪದವಾಗಿ ಹೂವು ಬಿದ್ದುದರಿಂದ ಇದನ್ನು ತೀರ್ಮಾನಿಸಬೇಕೆಂದು ಜನರೂ ಐನೂರೂ ನಾಣಿಯನ್ನು ಕೇಳಿಕೊಂಡರು. ನಾಣಿಯು ದೇವರ ಮುಂದೆ ಕಣ್ಣುಮುಚ್ಚಿಕೊಂಡು ಗಂಭೀರವಾಗಿ ಹತ್ತು ನಿಮಿಷ ಕುಳಿತಿದ್ದು ಈ ರೀತಿ ತೀರ್ಮಾನವನ್ನು ಹೇಳಿದನು. "ಐನೂರು ಆಳು ಬರಬೇಕು ಎಂದು ದೇವರ ಇಚ್ಛೆ ಇದ್ದಿದ್ದರೆ ಹೂವು ಬಲಗಡೆಯೇ ಬೀಳುತ್ತಿತ್ತು. ಬರಬಾರದೆಂದು ಇದ್ದಿದ್ದರೆ ಎಡಗಡೆಯೇ ಬೀಳುತ್ತಿತ್ತು. ಆದರೆ ದೇವರ ಮನಸ್ಸಿನಲ್ಲಿ ಎರಡೂ ಇಲ್ಲ. ಬರಬೇಕು. ಆದರೆ ಬರದೇಲೂ ಇರಬೇಕು. ಇದೇ ಅವನ ಅಭಿಪ್ರಾಯ" ಎಂದನು. ರೈತರು ತಮಗೆ ಅವನು ಹೇಳಿದುದು ತಿಳಿಯಲಿಲ್ಲವೆಂದು ತಲೆಯಲ್ಲಾಡಿಸಿದರು. ನಾಣಿಯು "ನಿಮಗೆ ನಾನು ಹೇಳುವುದು ತಿಳಿದಿಲ್ಲ. ಭಗವಂತ ಹೇಳಿದುದು ನನಗೂ ತಿಳಿದಿಲ್ಲ. ಆದರೆ ನನಗೆ ತೋರುವುದು ಹೀಗೆ. ಇದು ಗ್ರಾಮದ ಒಟ್ಟು ಕೆಲಸವಾದುದರಿಂದ ಗ್ರಾಮಸ್ಥರೆಲ್ಲಾ ಇದಕ್ಕೆ ಸೇರಲೇಬೇಕು. ಐನೂರು ಸಹ ಸೇರಲೇಬೇಕು. ಆದರೆ ಐನೂರು ನಿಮ್ಮ ಹಾಗೆ ಗಳು ಸುಣ್ಣದ ಮಡಕೆ ಬಾವುಟ ಇವುಗಳನ್ನು ಹೊತ್ತುಕೊಂಡು ತಿರುಗಾಡುವುದಕ್ಕೆ ಆಗುವುದಿಲ್ಲ. ಯಾಕೆಂದರೆ ಅವನು ಹಾಗೆ ಮಾಡಲು ಪ್ರಾರಂಭಿಸಿದರೆ ದೇವರ ಪೂಜೆ ನಿಂತುಹೋಗುತ್ತೆ. ಆದರೆ ಅವನು ಯಾವ ರೀತಿಯಲ್ಲಾದರೂ ಸರ್ವೆಗೆ ಸಹಾಯ ಮಾಡಲೇಬೇಕು. ಐನೂರು ನಮಗೆ ನಿತ್ಯ ಊಟದ ಎಲೆ ಹಚ್ಚೆ ತಂದುಕೊಡಲಿ. ಇದೇ ಭಗವಂತನ ಅಭಿಪ್ರಾಯವೆಂದು ನನ್ನ ಅಲ್ಪಬುದ್ಧಿಗೆ ತೋರುತ್ತದೆ" ಎಂದನು.

ನಾಣಿಯು ಹಾಗೆ ಹೇಳದೆ ಇದ್ದರೆ ಐನೂರಿನ ಜತೆಯಲ್ಲಿ ಕಮ್ಮಾರನೂ,

ಕಮ್ಮಾರನ ಜತೆಯಲ್ಲಿ ದಾಸಯ್ಯನೂ ನಮಗೂ ಬರುವುದಕ್ಕೆ ಆಗುವುದಿಲ್ಲ ವೆನ್ನುವ ಸಂಭವವಿದ್ದಿತು. ಅಲ್ಲದೆ ನಾಣಿಗೆ ಊಟದ ಎಲೆ ಇಲ್ಲದೆ ಫಜೀತಿ ಯಾಗಿತ್ತು. ಬೈಲಹಳ್ಳಿಯ ಒಕ್ಕಲಿಗರೆಲ್ಲಾ ಗಂಗಳಗಳಲ್ಲಿ ಊಟ ಮಾಡುತ್ತಿದ್ದು ದರಿಂದ ನಾಣಿಗೆ ಅಲ್ಲಿ ಊಟದ ಎಲೆ ದೊರಕುತ್ತಿರಲಿಲ್ಲ. ನಾಣಿಯ ತೀರ್ಮಾನ ವನ್ನು ಎಲ್ಲರೂ ಒಪ್ಪಿದರು. ಐನೂರೂ ಒಪ್ಪಿದನು. ನಾಣಿಯು ಅದೇ ದಿವಸ ಕುಳವಾಡಿಯನ್ನು ಕಳುಹಿಸಿ ಒಂದು ಚೀಲ ಮುತ್ತುಗದ ಎಲೆಯನ್ನು ಕಾಡಿನಿಂದ ತರಿಸಿ ಐನೂರಿನ ಮನೆಯಲ್ಲಿ ಹಾಕಿಸಿಬಿಟ್ಟನು. ಅಂದಿನಿಂದ ಅವನಿಗೆ ಸದ್ಯ ಊಟದ ಎಲೆಯ ಯೋಚನೆ ತಪ್ಪಿತು.

ನಾವು ಹಳ್ಳಿಗಳಿಗೆ ಹೋದರೆ ಊಟದ ಎಲೆಯದು ದೊಡ್ಡ ತಾಪತ್ರಯ. ಅಲ್ಲಿ ಹಸಿ ಮುತ್ತುಗದ ಎಲೆಗೆ ದರಿದ್ರವಿಲ್ಲ. ರೈತರಿಗಾಗಲೀ ಕುಳವಾಡಿಗಾಗಲಿ ಹೇಳಿದರೆ ತಂದು ಹಾಕುತ್ತಾರೆ. ಆದರೆ ಅದನ್ನು ಹಚ್ಚುವುದಕ್ಕೆ ಒಕ್ಕಲಿಗರಲ್ಲಿ ಯಾರಿಗೂ ಬರುವುದಿಲ್ಲ. ಐನೂರಿನ ಮನೆಯವರಿಗೆ ಮಾತ್ರ ಬರುತ್ತದೆ. ಐನೂರಾ ಗಲಿ ಅಥವಾ ಅವನ ಮನೆಯವರಾಗಲಿ ಗಂಗಳದಲ್ಲಿ ಊಟಮಾಡುವುದಿಲ್ಲ ವೆಂದಲ್ಲ. ಆದರೆ ಹಳ್ಳಿಯಲ್ಲಿ ರೈತರ ಎದುರಿಗೆ ತಮ್ಮ ದೊಡ್ಡಸ್ತಿಕೆಯನ್ನು ಉಳಿಸಿಕೊಳ್ಳಲು ಐನೂರುಗಳು ಬಹಳ ಪ್ರಯತ್ನಪಡುತ್ತಾರೆ. ಅದಕ್ಕಾಗಿ ಅವರು, ಹಚ್ಚಿದ ಎಲೆ ತಮ್ಮ ಮನೆಯಲ್ಲಿ ಇದೆಯೆಂದೂ ತಾವು ಹಚ್ಚಿದ ಎಲೆಯಲ್ಲೆ ಊಟ ಮಾಡುತ್ತೇವೆಂದೂ ಪ್ರಚಾರ ಮಾಡುತ್ತಾರೆ. ನಾಣಿಗೆ ಇದೆಲ್ಲಾ ಗೊತ್ತಿ ದ್ದಿತು. ಊಟದ ಎಲೆಗೆ ಕಡ್ಡಿಯನ್ನು ಚುಚ್ಚುವಷ್ಟು ಬೇಸರತರುವ ಕೆಲಸ ಮತ್ತಾವುದೂ ಇಲ್ಲವೆಂದು ನಾಣಿಯು ಹೇಳುತ್ತಾನೆ.

ಐನೂರು ಒಬ್ಬನಲ್ಲದೆ ಊರಮುಂದಲ ಕಾಳಿಗೂ ಅಳೆಯುವುದಕ್ಕೆ ಆಳು ಕಳುಹಿಸಲು ರಿಯಾಯ್ತಿ ದೊರೆಯಿತು. ಕಾಳಿಯು ಮನೆಯಲ್ಲಿ ಒಬ್ಬಳೇ ಇದ್ದಳು. ಅವಳಿಗೆ ಸಹಾಯಕರಾದ ಗಂಡುಮಕ್ಕಳಾಗಲಿ ಅಥವಾ ಗಂಡಾಳಾಗಲಿ ಮತ್ತಾರೂ ಇರಲಿಲ್ಲ. ಆದರೆ ಕಾಳಿಯ ಮನೆಯಲ್ಲಿ ಒಂದು ಕರುವಿನ ಹಸುವಿದ್ದಿತು. ಕಾಳಿಯು ನಿತ್ಯವೂ ಮೋಜಿನಿದಾರರ ಉಪಯೋಗಕ್ಕೆ ಒಂದು ಪಾವು ಹಾಲನ್ನು ತಂದುಕೊಡಬೇಕೆಂದೂ ಅದರ ಬೆಲೆಗೆ ಬೇರೆ ಆಳನ್ನು ನಿಯಮಿಸಿಕೊಳ್ಳಬೇಕೆಂದೂ ತೀರ್ಮಾನವಾಯಿತು. ಕಾಳಿಯು ಅದೇ ರಾತ್ರಿ ಮೊದಲ ಸಲ ಹಾಲನ್ನು ತಂದು ಕೊಟ್ಟಳು. ಆಗ ದೇವಸ್ಥಾನದಲ್ಲಿ ರಂಗಸಾಮಿಯೂ ಪಟೇಲ್ ಸುಬ್ಬೇಗೌಡನೂ ಸಾಹೇಬರೂ ಇದ್ದರು. ರಂಗಸಾಮಿಯು 'ಕಾಳಿಯನ್ನು ಹಾಲಿಗೆ ನೀರು ಸೇರಿಸಿ ದ್ದೀಯಾ' ಎಂದು ಕೇಳುತ್ತಿದ್ದನು. ಅದನ್ನು ಕೇಳಿ ಸುಬ್ಬೇಗೌಡನು "ಏ ಕಾಳಿ,

ಜೋಪಾನ. ನೀರು ಗೀರು ಹಾಕೀಯೆ. ಆಮೇಲೆ ಹಾಲು ಹಾಲಿಗೆ, ನೀರು ನೀರಿಗೆ" ಎಂದನು. ಕಾಳಿ "ಎಲ್ಲಾದ್ರೂ ಉಂಟೇಪ್ಪ" ಎಂದಳು. ಸಾಹೇಬರು ಹಾಲು ಹಾಲಿಗೆ ನೀರು ನೀರಿಗೆ ಎಂದರೆ ಏನಯ್ಯ ಎಂದರು. ಸುಬ್ಬೇಗೌಡನು "ಬುದ್ಧಿ, ಹಿಂದೆ ಇಲ್ಲಿಗೆ ಸೀನಪ್ಪನೋರ ಅಜ್ಜಂದಿರು ಬಂದು ಮೂರು ತಿಂಗಳು ಇದ್ರು. ಆಗ ಕಾಳಿಯ ತಾಯಿಯೇ ಅವರಿಗೆ ನಿತ್ಯ ಹಾಲು ಕೊಡ್ತಾ ಇದ್ಲು. ಆದರೆ ಅವಳು ನಿತ್ಯ ತಪ್ಪದೆ ಒಂದು ಪಾವು ಹಾಲಿಗೆ ಒಂದು ಪಾವು ನೀರನ್ನು ಸರಿಯಾಗಿ ಬೆರಸುತ್ತಿದ್ದಳು. ಶೀನಪ್ಪನೋರ ಅಜ್ಜಂದಿರಿಗೆ ಇದು ತಿಳೀದೆ ಇರಲಿಲ್ಲ. ಆದರೆ ಆ ಕಾಲ್ದಲ್ಲಿ ಇಲ್ಲಿ ಬೇರೆ ಯಾರ್ತಾವ್ಲೂ ಹಾಲು ಸಿಕ್ತ ಇರಲಿಲ್ಲ. ಅವರು ಕಾಳಿಯ ಹತ್ತಿರವೇ ನಿತ್ಯ ಅರ್ಧ ಸೇರು ನೀರು ಹಾಲನ್ನೇ ತೆಗೆದು ಕೊಳ್ಳುತ್ತಿದ್ದರು. ಅವರು ಇಲ್ಲಿಂದ ಹೊರಡುವ ದಿವಸ ಕಾಳಿಯ ತಾಯಿಗೆ ಹಾಲಿನ ಹಣ ಕೊಡಬೇಕಾಯಿತು. ಆಗ ಅವರು ದಿವಸಕ್ಕೆ ಅರ್ಧ ಸೇರು ಹಾಲಿನಂತೆ ಲೆಕ್ಕ ಹಾಕಿ ದುಡ್ಡನ್ನು ಸರಿಯಾಗಿ ಎರಡು ಭಾಗ ಮಾಡಿ ಎರಡು ಕೈಯಲ್ಲೂ ಒಂದೊಂದು ಭಾಗವನ್ನು ಹಿಡಿದುಕೊಂಡು ಕಾಳಿಯ ಅವ್ವನನ್ನು ಕರೆದುಕೊಂಡು ಕೆರೆಯ ಹತ್ತಿರಕ್ಕೆ ಹೋದರು. ಕೆರೆಯ ಏರಿಯಮೇಲೆ ನಿಂತುಕೊಂಡು ಕಾಳಿಯ ಅವ್ವನಿಗೆ 'ನೀನು ಹಾಲಿಗೆ ಸರಿಯಾಗಿ ಅರ್ಧ ನೀರು ಬೆರಸುತ್ತಿದ್ದೆ, ಇಲ್ಲಿ ನೋಡು. ದುಡ್ಡಿನಲ್ಲಿ ನೀರಿಗೆ ಅರ್ಧ, ಹಾಲಿಗೆ ಅರ್ಧ; ಹಾಲು ಹಾಲಿಗೆ ನೀರು ನೀರಿಗೆ' ಎಂದು ಹೇಳಿ ಕೈಯಲ್ಲಿದ್ದ ಹಣವನ್ನು ಕಾಳಿಯ ಅವ್ವನಿಗೆ ಕೊಟ್ಟು ಮತ್ತೊಂದು ಕೈನಲ್ಲಿದ್ದ ಹಣವನ್ನು ಕೆರೆಗೆ ಬಿಸಾಡಿದರು."

ಸುಬ್ಬೇಗೌಡ ಹೇಳಿದ ಕತೆ ರಾಯರ ಮನಸ್ಸಿಗೆ ಬಹಳ ಚೆನ್ನಾಗಿ ತೋರಿತು. ಕಾಳಿಯು "ಎಲ್ಲಾದ್ರು ಉಂಟೇ ದೇವ್ರು. ಹಂಗೆಲ್ಲಾ ಮಾಡಿದ್ರೆ ದೇವರು ಮೆಚ್ಚತಾನ್ಯೆ" ಎಂದಳು.

ಬೈಲಹಳ್ಳಿಯಲ್ಲಿ ಅಡಿಗೆ ಕೆಲಸವು ನಾಣಿಯ ಪಾಲಿಗೂ ರಂಗಸಾಮಿಯ ಪಾಲಿಗೂ ಬಂದಿದ್ದಿತು. ರಂಗಸಾಮಿಯು ಸ್ವಭಾವದಿಂದ ಸೋಮಾರಿಯಾದುದರಿಂದ ಊಟಮಾಡುವುದೇ ಅವನ ಕೆಲಸವಾಗಿದ್ದಿತು. ಮಧ್ಯೆ ಮಧ್ಯೆ ಕೆರೆಯಿಂದ ನೀರನ್ನು ತರುವುದು ಅವನ ಪಾಲಿಗೆ ಬದ್ದಿದ್ದಿತು. ಆಗ ಅವನು ತನಗಿಂತ ಸೋಮಾರಿಯಾದ ಮೂಡ್ಲಗಿರಿಯನ್ನು ಕೆರೆಗೆ ಕರೆದುಕೊಂಡು ಹೋಗಿ ಅವನ ಎರಡು ಕಡೆಗಳಲ್ಲಿಯೂ ಎರಡು ಬಿಂದಿಗೆಗಳಲ್ಲಿ ನೀರನ್ನು ತುಂಬಿ ಅವನಿಂದ ಹೊರಿಸಿಕೊಂಡು ಬರುತ್ತಿದ್ದನು. ಒಕ್ಕಲಿಗರ ಹೆಂಗಸರೊಂದಿಗೆ ಉಪಾಯವಾಗಿ ಮಾತನಾಡಿ ಅವರಿಂದ ಕಾಫಿಪುಡಿಯನ್ನೂ, ಮೆಣಸಿನ ಪುಡಿಯನ್ನೂ, ಕುಟ್ಟಿಸಿ

ಕೊಳ್ಳುತ್ತಿದ್ದನು. ಮೋಜಿನಿದಾರರು ಇದಕ್ಕಾಗಿ ಅವನನ್ನು ಯಾವಾಗಲೂ ಹಾಸ್ಯಮಾಡುತ್ತಿದ್ದರು.

ಇಷ್ಟಾದರೂ ಒಂದೊಂದು ದಿನ ಅನಿವಾರ್ಯವಾಗಿ ಅಡಿಗೆ ಮಾಡುವುದು ರಂಗಸಾಮಿಯ ಪಾಲಿಗೆ ಬೀಳುತ್ತಿದ್ದಿತು. ಆಗ ರಂಗಸಾಮಿಯು ಅಡಿಗೆ ಮಾಡುತ್ತಾ, ಒಲೆಯ ಮುಂದೆ ಕುಳಿತು ತನಗೆ ತೋರಿದ ದನಿಯಲ್ಲಿ ಹಾಡುತ್ತಿದ್ದನು. ಅನೇಕ ವೇಳೆ ತನ್ನ ಸಂಗೀತದಲ್ಲಿ ತಾನು ಮಗ್ನನಾಗಿ ಒಲೆಯ ಮೇಲೆ ಅಡಿಗೆಗೆ ಇಟ್ಟಿರುವುದನ್ನೇ ಮರೆತು ಹಾಡುತ್ತಾ ಕುಳಿತು ಬಿಡುತ್ತಿದ್ದನು. ಒಂದು ಸಲ ಒಲೆಯ ಮೇಲೆ ಬೆಣ್ಣೆಯನ್ನು ಕಾಯಿಸುವುದಕ್ಕೆ ಇಟ್ಟು ರಂಗಸಾಮಿಯು ಹಾಡುವುದಕ್ಕೆ ಪ್ರಾರಂಭಿಸಿದನು. ತುಪ್ಪವು ಕಾದು ಉಕ್ಕಿ ಒಲೆಗೆ ಸುರಿದು ಮಿತಿಮೀರಿ ಕಾದು ಆವಿಯಾಗಿ ಪಾತ್ರೆ ಬರಿದಾದರೂ ಕೂಡ ಅವನಿಗೆ ಅದರ ಜ್ಞಾನ ಬರಲಿಲ್ಲ. ರಂಗಸಾಮಿ ಹಾಡುವುದಕ್ಕೆ ಗಂಟಲಿಗೆ ಸರಾಗವಾಗಬೇಕೆಂದು, ನಾಣಿಯು ಕಷ್ಟಪಟ್ಟು ಶೇಖರಿಸಿದ್ದ ತೆಂಗಿನಕಾಯಿ ಕೊಬ್ಬರಿಗಳನ್ನೆಲ್ಲಾ ಮುಗಿಸಿ ಬಿಡುತ್ತಿದ್ದನು. ಅವುಗಳ ಜಿಡ್ಡು ಒಳಕ್ಕೆ ಹೋದಕೂಡಲೆ ಹೊಸ ಉತ್ಸಾಹ ದಿಂದ ಗರ್ಜಿಸಲು ಪ್ರಾರಂಭಿಸುತ್ತಿದ್ದನು. ಸಾಹೇಬರಿಗೆ ರಂಗಸಾಮಿಯ ಹಾಡು ಅಷ್ಟು ಅಹಿತವಾಗಿ ಕಾಣುತ್ತಿರಲಿಲ್ಲ. ಅವರು "ನಡಿಯಲಿ, ನಿಮ್ಮ ಹಾಡುಗಾರಿಕೆ. ನೀವು ತೆಂಗಿನಕಾಯಿ ಕೊಪ್ಪರಿಗಳನ್ನು ಪೂರೈಸುವುದರಿಂದ ಸಂಗೀತ ಸುಖವಾಗುತ್ತದೊ ಇಲ್ಲವೊ ಹೇಳಲಾರೆ. ಆದರೆ ನಿಮ್ಮ ಗಂಟಲೇನೊ ಬಲವಾಗುವುದರಲ್ಲಿ ಸಂದೇಹವಿಲ್ಲ" ಎನ್ನುತ್ತಿದ್ದರು. ರಂಗಸಾಮಿಯ ಸಂಗೀತದ ಏಕಾಗ್ರತೆಯು ಸಾಹೇಬರಿಗೆ ಊಟದ ವಿಚಾರದಲ್ಲಿ ಒಂದು ಸಲ ದೊಡ್ಡ ತೊಂದರೆ ಕೊಟ್ಟಿತು. ರಂಗಸಾಮಿಯ ಸಂಗೀತ ನಡೆಯಲಿ ಎಂಬುದಾಗಿ ಯಾವಾಗಲೂ ಹೇಳುತ್ತಿದ್ದ ಮೋಜಿನಿದಾರರು "ರಂಗಸಾಮಿಯನ್ನು ಅಡಿಗೆಗೆ ಹಾಕಬೇಡಿ. ಸಂಗೀತಕ್ಕೂ, ಅಡಿಗೆಗೂ ಒಂದಕ್ಕೊಂದಕ್ಕೆ ಸೇರುವುದಿಲ್ಲ" ಎನ್ನಬೇಕಾಯಿತು. ಏಕೆಂದರೆ ಮೊದಲ ದಿನ ಏಕಾದಶಿಯಾಗಿದ್ದುದರಿಂದಲೂ ದೇಹಾರೋಗ್ಯವು ಸ್ವಲ್ಪ ಕೆಟ್ಟಿದ್ದುದರಿಂದಲೂ ಸಾಹೇಬರು ಉಪವಾಸ ಮಾಡಿದ್ದರು. ಮರುದಿನ ಬೆಳಿಗ್ಗೆ ಹೊತ್ತಿಗೆ ಮುಂಚೆ ರಂಗಸಾಮಿಯೇ ಅಡಿಗೆ ಮಾಡಲು ಪ್ರಾರಂಭಿಸಿದನು. ಸಾಹೇಬರು ಯಾವ ಕಾರಣದಿಂದಲೊ ದ್ವಾದಶಿ ದಿವಸ ಇಂಗನ್ನು ತಿನ್ನುತ್ತಿರಲಿಲ್ಲ. ರಂಗಸಾಮಿಗೆ ನಾಣಿಯೂ ಸಾಹೇಬರೂ ಈ ವಿಚಾರವನ್ನು ಎಷ್ಟೊ ಸಲ ಹೇಳಿದ್ದರೂ ಅವನು ಸಂಗೀತದ ಜ್ಞಾನದಲ್ಲಿ ಮರೆತು ಮಾಡಿದ್ದ ಅಡಿಗೆಗಳಿಗೆಲ್ಲಾ ಒಂದೊಂದು ತೊಟ್ಟು ಇಂಗನ್ನು ತೊಟ್ಟಿಸಿಯೇ

ಬಿಟ್ಟನು. ಅನಂತರ ಎಲೆಯ ಮುಂದೆ ಕುಳಿತ ಮೇಲೆ ಸಾಹೇಬರಿಗೆ ಮತ್ತೆ ಅಡಿಗೆ ಮಾಡಬೇಕಾಯಿತು. ಅಲ್ಲಿಂದ ಈಚೆಗೆ ರಂಗಸಾಮಿಯು ಒಲೆಯ ಮುಂದೆ ಹಾಡಲು ಕುಳಿತರೆ ಸಾಹೇಬರು "ನೀವು ಅಡಿಗೆ ಸಾಮಾನುಗಳನ್ನು ಮುಟ್ಟಬೇಡಿ. ಈಚೆ ಬಂದು ಹಾಡಿ" ಎನ್ನುತ್ತಿದ್ದರು.

* * * *

ಒಂದು ಗ್ರಾಮವನ್ನಾಗಲಿ ಅಥವಾ ಒಂದು ಜಮೀನನ್ನಾಗಲಿ ಅಳೆಯ ಬೇಕಾದರೆ ಶಂಕು, ಸರಪಣಿ, ಗೂಟಗಳು, ಬಾವುಟ, ಸುಣ್ಣದ ಮಡಕೆ, ಹಾರೆ, ಪಿಕಾಸಿ ಎಲ್ಲಾ ಬೇಕಾಗುತ್ತವೆ. ಸಾಹೇಬರು ಬೆಳಗಾದ ಕೂಡಲೆ ಸ್ನಾನ ಮಾಡಿ ಕೊಂಡು ಕಾಫಿ ಕುಡಿದು ಬಿಗಿಯಾದ ಶರಾಯಿಯನ್ನೂ ಬೂಟ್ಸನ್ನೂ ಧರಿಸಿ ಹ್ಯಾಟನ್ನು ತಿಕ್ಕಿ ಧೂಳು ಹೊಡೆದು ಗೂಟಕ್ಕೆ ತಗಲಿ ಹಾಕಿ, ಎಲೆ, ಅಡಿಕೆ, ಅಗಿ ಯುತ್ತಾ ಎಲ್ಲರೂ ಬರುವುದನ್ನೇ ನಿರೀಕ್ಷಿಸುತ್ತಾ ಕ್ರೋಧಮುದ್ರೆಯಿಂದ ಕುಳಿತು ಬಿಡುತ್ತಿದ್ದರು. ಸಾಹೇಬರು ಸಾಧಾರಣವಾಗಿ ನಿದ್ರೆಯ ಕಾಲದಲ್ಲಿ ಹೊರತು ಇಪ್ಪತ್ತನಾಲ್ಕು ಗಂಟೆಗಳು ಯಾವಾಗಲೂ ಎಲೆ ಅಡಿಕೆಯನ್ನು ಅಗಿಯುತ್ತಲೇ ಇದ್ದರು. ಒಕ್ಕಲಿಗರ ಹೆಂಗಸರು ಇಟ್ಟುಕೊಳ್ಳುವ ಚೀಲದಂತೆ ಅವರೂ ಒಂದು ಎಲೆ ಅಡಿಕೆ ಚೀಲವನ್ನು ಇಟ್ಟುಕೊಂಡಿದ್ದರು. ಆದರೆ ಒಕ್ಕಲಿಗರ ಹೆಂಗಸರ ಜಿಡ್ಡು ಗಟ್ಟಿದ ಕೊಳೆ ಕೂತ ಚೀಲಕ್ಕಿಂತ ಸಾಹೇಬರ ಚೀಲವು ನೋಡುವುದಕ್ಕೆ ಚೆನ್ನಾಗಿ ದ್ದಿತು. ಅದರಲ್ಲಿ ಸಾಹೇಬರು ಚಿನ್ನದಂತೆ ಬೆಳಗಿ ಹೊಳಪಾದ ಎರಡು ಹಿತ್ತಾಳೆ ಭರಣಿಗಳನ್ನು ಇಟ್ಟಿದ್ದರು. ಒಂದು ಭರಣಿಯಲ್ಲಿ ನಯವಾದ ಸುಣ್ಣ, ಮತ್ತೊಂದ ರಲ್ಲಿ ಸುವಾಸನೆಯುಳ್ಳ ಕಾಚಿನ ಗುಳಿಗೆಗಳು. ಚೀಲದ ಇನ್ನೊಂದು ಪದರದಲ್ಲಿ ಹೊಗೆಸೊಪ್ಪು, ಮತ್ತೊಂದು ಪದರದಲ್ಲಿ ಅಡಿಕೆ, ಹೊಗೆ ಸೊಪ್ಪಿನ ವಾಸನೆ ಕಟ್ಟಿ ಅದನ್ನು ಬಹಳ ಸುವಾಸನೆಯಾಗಿ ಮಾಡಿದ್ದರು.

ಸಾಹೇಬರಿಗೆ ಎಷ್ಟು ಕಡಿಮೆ ಎಂದರೂ ದಿವಸಕ್ಕೆ ನೂರು ವೀಳೆಯದೆಲೆ ಗಳು ಬೇಕಾಗುತ್ತಿದ್ದುವು. ಸಾಹೇಬರು ಆ ರೀತಿ ಎಲೆ ಅಗಿಯುವುದನ್ನು ಕಂಡು ರಂಗಸಾಮಿಯೂ ನಿಧಾನವಾಗಿ ಪ್ರಾರಂಭಿಸಿದನು. ರಂಗಸಾಮಿಯು ಮೊದಲು ಮೊದಲು, ಎಲೆ ಹಾಕಿಕೊಳ್ಳುವುದರಿಂದ ಸಂಗೀತ ಹಾಡುವವರಿಗೆ ಬಾಯಿನ ಚುರುಕು ಕಡಿಮೆಯಾಗುತ್ತದೆಂದು ಹೇಳುತ್ತಿದ್ದವನು ಸಾಹೇಬರ ಸುವಾಸನೆ ಯುಳ್ಳ ಕಾಚಿನ ಗುಳಿಗೆಗಳನ್ನೂ ಹೊಗೆಸೊಪ್ಪನ್ನೂ ನೋಡಿ ತಾನೂ ನಿತ್ಯ ಪ್ರಾರಂಭಿಸಿಬಿಟ್ಟನು. ಇದರಿಂದ ಮೊದಲು ದಿವಸಕ್ಕೆ ಒಂದು ಕಟ್ಟು ವೀಳೆಯದೆಲೆ ವೆಚ್ಚವಿದ್ದುದು ಅನಂತರ ಎರಡು ಕಟ್ಟಿಗೆ ಪ್ರಾರಂಭವಾಯಿತು. ನನಗೆ ಎಲ್ಲಾ

ಸಂತೆಗಳಿಗೂ ವೀಳೆಯದೆಲೆಗೆ ಆಳನ್ನು ಕಳುಹಿಸುವುದೇ ಕೆಲಸವಾಯಿತು. ಬೈಲಹಳ್ಳಿಯ ಸುತ್ತಮುತ್ತಲ ಗ್ರಾಮಗಳ ತೋಟಗಳನ್ನೆಲ್ಲಾ ಆಗಾಗ್ಗೆ ವೀಳೆಯದೆಲೆಗಾಗಿ ಬೇಟೆಯಾಡಬೇಕಾಗುತ್ತಿದ್ದಿತು. ನಮ್ಮ ಆಳು ಸಂತೆಯಲ್ಲಿ ವ್ಯಾಪಾರಿಗಳ ಕಣ್ಣಿಗೆ ಬಿದ್ದ ಕೂಡಲೆ ವೀಳೆಯದೆಲೆಯ ಧಾರಣೆಯು ಏರುತ್ತಿದ್ದಿತು. ರಂಗಸಾಮಿಯಾಗಲಿ ಅಥವಾ ಸಾಹೇಬರಾಗಲಿ ಇದರಿಂದ ವಿಚಲಿತರಾಗಲಿಲ್ಲ. ಅವರ ಪಾಡಿಗೆ ಅವರು ದಿವಸಕ್ಕೆ ಇನ್ನೂರು ಎಲೆಗಳನ್ನು ಅಗಿಯುವುದರ ಕಡೆಗೆ ಮಾತ್ರ ಗಮನವನ್ನು ಕೊಡುತ್ತಿದ್ದರು. ರಂಗಸಾಮಿಯು ಹೊಗೆಸೊಪ್ಪನ್ನೂ, ಕಾಚಿನ ಪುಡಿಯನ್ನೂ ಸಾಹೇಬರಂತೆಯೇ ಅಗಿಯಲು ಪ್ರಾರಂಭಿಸಿದುದರಿಂದ, ರಾಯರಿಗೆ ಅದರ ಖರ್ಚು ಒಂದಕ್ಕೆ ಎರಡಾಯಿತು.

* * * *

ಮೂಡ್ಲಗಿರಿಗೆ ಆಗಾಗ ಕಾಫಿಯನ್ನು ಕುಡಿಯುವ ಚಪಲವುಂಟಾಗುತ್ತಿದ್ದಿತು. ಒಕ್ಕಲಿಗರಿಗೆ ಮೈಯಲ್ಲಿ ಚೆನ್ನಾಗಿಲ್ಲದಿದ್ದರೆ "ಎರಡು ಮಜ್ಜಿಗೆಯನ್ನೊ ಕಾಫಿಯನ್ನೊ" ಕುಡಿದರೆ ಅದೇ ಔಷಧಿಯಾಗುತ್ತದೆ. ನಾವು ಬೈಲಹಳ್ಳಿಯಲ್ಲಿದ್ದ ಕಾಲದಲ್ಲಿ ಮೂಡ್ಲಗಿರಿಗೆ ಆಗಾಗ 'ಜರ' ಬರುತ್ತಿದ್ದಿತು. ಅವನು "ಮೈ ಚುಮ ಚುಮ ಎನ್ತದೆ. ಎರಡು ಕಾಫಿ ನೀರು ಮಾಡಿಕೊಡಿ" ಎಂದು ಕೇಳುತ್ತಿದ್ದನು. ಮೊದಲ ದಿವಸ ರಂಗಸಾಮಿಯು ಕಾಫಿಗೆ ಸ್ವಲ್ಪ ಪುಡಿಯನ್ನು ಹಾಕಿದನು. ಮೂಡ್ಲಗಿರಿಯು "ಕಾಫಿ ವೈಸವಾಗಿಲ್ಲ. ಏನೋ ವಾಸ್ನ. ಕಹಿ ಕಹಿ. ನಿಮ್ಮ ಊರ ಶ್ಯಾನುಭೋಗರ ಮನೇಲಿ ಒಂದು ದಿವಸ ಕಾಫಿ ಕೊಡಿಸಿದ್ದರು. ಸಿಯ್ಯಾಗಿ ಬಾರಿ ವೈಸವಾಗಿತ್ತು" ಎಂದನು. ರಂಗಸಾಮಿಯು ಮಾರನೆಯ ದಿನದಿಂದ ಕಾಫಿಗೆ ಪುಡಿಯನ್ನು ಹಾಕುತ್ತಿರಲಿಲ್ಲ. ಬರಿಯ ನೀರನ್ನು ಕಾಯಿಸಿ ಅದಕ್ಕೆ ಬೆಲ್ಲವನ್ನು ಹಾಕಿ ಸ್ವಲ್ಪ ಹಾಲು ಬೆರಸಿ ಕೊಡುತ್ತಿದ್ದನು. ಮೂಡ್ಲಗಿರಿಗೆ ಒಂದು ಪಾವು, ಎರಡು ಪಾವು ಕಾಫಿಯಿಂದ ತೃಪ್ತಿಯುಂಟಾಗುತ್ತಿರಲಿಲ್ಲ. ಅವನು ಸುಮಾರು ಒಂದೂವರೆ ಸೇರು ಹಿಡಿಯುವ ಚೊಂಬಿನ ತುಂಬ ಬೆಲ್ಲದ ಕಷಾಯವನ್ನು ಮಾಡಿಸಿ ಗಂಟಲು ಸುಡುವಂತೆ ಗಟಗಟನೆ ಅದನ್ನು ಗುಟಕರಿಸಿ ತನ್ನ ಕಂಬಳಿಯನ್ನು ಹೊದೆದು ಮಲಗಿಬಿಡುತ್ತಿದ್ದನು. ಕಾಲು ಗಂಟೆಯೊಳಗಾಗಿ ಅವನ ಮೈಯು ಕಂಬಳಿಯ ಶಾಖದಿಂದಲೂ ಕಾಫಿ ಮಹಿಮೆಯಿಂದಲೂ ಚೆನ್ನಾಗಿ ಬೆವರುಕೊಳ್ಳುತ್ತಿದ್ದಿತು. ಮೂಡ್ಲಗಿರಿಯು ಕಾಫಿಯಂತಹ ವೈಸಾದ ಪದಾರ್ಥ ಯಾವುದೂ ಇಲ್ಲ ಎನ್ನುತ್ತಿದ್ದನು.

ರಂಗಸಾಮಿಯು ಸ್ವಭಾವದಿಂದ ಸ್ವಲ್ಪ ಸೋಮಾರಿ. ಸಂಗೀತ ಮತ್ತು

ಚಿತ್ರಕಲಾ ವಿಹಾರಿ. ಚಿತ್ರಕಲೆಯಲ್ಲಿಯೂ ಅವನಿಗಿದ್ದ ಅಭಿರುಚಿಯ ವಿಷಯ ನಿಮಗೆ ಹಿಂದೆಯೇ ಹೇಳಿದ್ದೇನೆ. ಬೆಳಗಾದ ಕೂಡಲೆ ಅವನೂ ಕಾಫಿ ಕುಡಿದು, ಎಲೆ ಅಡಿಕೆ ಅಗಿಯುತ್ತಾ ಸಾಹೇಬರ ಮುಂದೆ ಕುಳಿತು ಬಿಡುತ್ತಿದ್ದನು. ಕೆಲಸಕ್ಕೆ ಎಲ್ಲರನ್ನೂ ಹೊರಡಿಸುವ ಭಾರ ನಾಣಿಯ ಮೇಲೆ ಬೀಳುತ್ತಿತ್ತು. ನಾಣಿಯು ನಿತ್ಯ ಪ್ರತಿಯೊಬ್ಬ ರೈತನ ಮನೆಗೂ ಹೋಗಿ ಅವರನ್ನೆಲ್ಲಾ ಬೈದು, ಕೊನೆಗೆ ಎಲ್ಲರನ್ನೂ ಹೊರಡಿಸುತ್ತಿದ್ದನು. ನಾಣಿಗೂ ಕೂಡ ಎಷ್ಟೋ ದಿವಸ ರೈತರಿಂದ ಬೈಗಳವುಂಟಾಗುತ್ತಿದ್ದಿತು. ಆದರೆ ಅವನು ಅವುಗಳನ್ನೆಲ್ಲಾ ಗಣನೆಯಲ್ಲಿಟ್ಟಿರಲಿಲ್ಲ. ಅನಂತರ ಸುಮಾರು ಬೆಳಿಗ್ಗೆ ಎಂಟು ಗಂಟೆಯ ಹೊತ್ತಿಗೆ ಸುಣ್ಣದ ಮಡಕೆ, ಸರಪಣಿ, ಗೂಟಗಳು, ಹಾರೆ, ಪಿಕಾಸಿ, ಗುದ್ದಲಿ, ಬಾವುಟಗಳ ಈ ಮೆರವಣಿಗೆಯು ಸೈನಿಕರಂತೆ ಬಯಲಿನ ಕಡೆಗೆ ಹೊರಡುತ್ತಿದ್ದಿತು. ರೈತರಿಗೆ ಉತ್ಸಾಹವನ್ನುಂಟು ಮಾಡಲು ನಾಣಿಯು ಅವರನ್ನೆಲ್ಲಾ ಸಾಲಾಗಿ ನಿಲ್ಲಿಸಿ "ಲೈಫ್ಟ್‌ರೈಟ್ ಫಾಲ್ ಇನ್ ಮಾರ್ಚ್" ಎಂದೂ ಮುಂತಾಗಿ ದೇವಸ್ಥಾನದ ಎದುರಿಗೆ ಕೂಗುತ್ತಿದ್ದನು. ಅವನ ಅಪ್ಪಣೆಗಳನ್ನು ಕೇಳಿ ರೈತರು ತಬ್ಬಿಬ್ಬಾಗಿ ಮನಸ್ಸು ಬಂದಕಡೆ ಸುತ್ತಾ ತಿರುಗುತ್ತಿದ್ದರು. ಸುಣ್ಣದ ಮಡಕೆಯವನು ತಿರುಗುವ ಭರದಲ್ಲಿ ಸುಣ್ಣವನ್ನು ಸುತ್ತಾ ಇದ್ದವರ ಮೇಲೆ ಚೆಲ್ಲುತ್ತಿದ್ದನು. ಬಾವುಟದವನು ತಿರುಗುವಾಗ ಆ ಬಾವಟದ ಗಳವು ಎಲ್ಲರನ್ನೂ ಒಂದೇ ಏಟಿಗೆ ಬಾಗಿಸುತ್ತಿದ್ದಿತು. ಒಂದು ಸಲ ಮೂಡ್ಲಗಿರಿಯ ಕುಮಾಲಿಯು ಬಾವುಟದ ಗಳುವಿಗೆ ಸಿಕ್ಕಿಕೊಂಡು ಮೇಲಕ್ಕೆ ಹೊರಟೇಹೋಯಿತು. ಪ್ರತಿದಿನವೂ ಏಳು ಗಂಟೆಗೆ ಮುಂಚೆ ಈ ಮೆರವಣಿಗೆಯನ್ನೂ ಡ್ರಿಲ್ಲನ್ನೂ ನೋಡಲು ಹಳ್ಳಿಯ ಹೆಂಗಸರೂ, ಮಕ್ಕಳೂ ದೇವಸ್ಥಾನದ ಬಳಿ ಸೇರಿಬಿಡುತ್ತಿದ್ದರು. ಕೆರೆಗೆ ನೀರಿಗೆ ಹೊರಟಿದ್ದ ರೈತರ ಹೆಂಗಸರು ಹರವಿಗಳನ್ನು ತಲೆಯಮೇಲಿಟ್ಟುಕೊಂಡು ಎಲೆ ಅಡಿಕೆಯನ್ನು ಅಗಿಯುತ್ತಾ ತಮ್ಮ ಗಂಡಂದಿರು ತಬ್ಬಿಬ್ಬಾಗಿ ಲೈಫ್ಟ್-ರೈಟ್ ತಿರುಗುವುದನ್ನು ನೋಡಿಕೊಂಡು ನಗುತ್ತಿದ್ದರು. ಹಳ್ಳಿಯನ್ನು ಅಳೆದು ಮುಗಿಯುವವರೆಗೆ ರೈತರಿಗೆ ಈ ಡ್ರಿಲ್ಲಿನ ಉತ್ಸಾಹ ಕಡಿಮೆಯಾಗಲೇ ಇಲ್ಲ. ಜೈಲಿನಲ್ಲಿ, ಕೆಲಸಕ್ಕಾಗಿ ರೈತರಲ್ಲಿ ಯಾವುದಾದರೂ ಚರ್ಚೆ ಬಿದ್ದಾಗ, ಕೋಪವು ಮಿತಿಮೀರಿ ಕೈಗೆ ಕೈಹತ್ತುವ ಸಂದರ್ಭ ತೋರಿದಾಗ ನಾಣಿಯು ಕೂಡಲೆ "ಫಾಲ್ ಇನ್" (Fall in) ಎಂದು ಕೂಗುತ್ತಿದ್ದನು. ರೈತರು ಹೊಡೆದಾಟವನ್ನು ಅಲ್ಲಿಗೇ ನಿಲ್ಲಿಸಿ ಸಾಲಾಗಿ ಬಂದು ನಿಂತುಕೊಳ್ಳುತ್ತಿದ್ದರು. ಬರಬರುತ್ತಾ ರೈತರು ನಿತ್ಯ ಕರೆಯಿಸಿಕೊಳ್ಳುವುದನ್ನು ಬಿಟ್ಟರು. "ಫಾಲ್ ಇನ್" ಎಲ್ಲಿ ತಮಗೆ ತಪ್ಪಿ ಹೋಗುವುದೊ

ಎಂಬುದಾಗಿ ಬೇಗ ಬೇಗ ದೇವಸ್ಥಾನದ ಬಳಿಗೆ ಬರುತ್ತಿದ್ದರು. ಐವತ್ತು ವರ್ಷದ ಹನುಮನೂ ಕೂಡ ಡ್ರಿಲ್ಲನ್ನು ಸರಿಯಾಗಿ ಶಿಸ್ತಿನಿಂದಲೂ, ಉತ್ಸಾಹದಿಂದಲೂ ಮಾಡುತ್ತಿದ್ದನು. ಸರ್ವೆ ಮುಗಿಯುವವರೆಗೆ ಬೆಳಗಿನ ಈ ಡ್ರಿಲ್ಲು ಬೈಲಹಳ್ಳಿಗೆ ಒಂದು ಹಬ್ಬವೇ ಆಗಿತ್ತು. ಅರಜೀವದಲ್ಲಿ ನರಳುತ್ತಿದ್ದ ಆ ಬಡಪಾಯಿಗಳು ಅಂತಹ ಉತ್ಸವವನ್ನೂ, ವಿನೋದವನ್ನೂ, ಖುಷಿಯನ್ನೂ ಎಂದೂ ಅನುಭವ ಮಾಡಿರಲಿಲ್ಲ. ಪ್ರಾತಃಕಾಲದ ಆ ನಗುವಿನೊಂದಿಗೆ ದಿನದ ಕಷ್ಟವೆಲ್ಲವೂ ಹಗುರವಾಗಿ ತೋರುತ್ತಿದ್ದಿತು. ಸಾಹೇಬರು ನಾಣಿಯನ್ನು "ನೀನು ಗಟ್ಟಿಗ ನಯ್ಯ, ಮರಳು ಕಾಡಿನಲ್ಲಿ ಬೇಕಾದರೂ ನೀರನ್ನು ಹುಟ್ಟಿಸುತ್ತೀಯೆ. ನೀನು ಬಂದಿರುವ ಉದ್ದೇಶವೂ ನಮ್ಮ ಉದ್ದೇಶವೇ ಆದರೂ ರೈತರು ನಿನ್ನ ಮಾತನ್ನು ಉತ್ಸಾಹದಿಂದ ಕೇಳುತ್ತಾರೆ" ಎಂದರು. ನಾಣಿಯು "ಸ್ವಾಮಿ, ನನಗೆ ರೈತ ರನ್ನು ಕಂಡರೆ ಬಹಳ ವಿಶ್ವಾಸ. ಆದುದರಿಂದಲೇ ನನ್ನನ್ನು ಕಂಡರೆ ಅವರಿಗೂ ಪ್ರೀತಿ" ಎಂದನು.

* * * *

ರಾಯರು ಸಿಟ್ಟಿನ ಸ್ವಭಾವದವರಾದುದರಿಂದ ಭಯಂಕರವಾಗಿ ರಾವಣ ನಂತೆ ಕೂಗುತ್ತಿದ್ದರು. ಎಷ್ಟೋ ಮಂದಿ ರೈತರಿಗೆ "ಗಳು ಸರಿಯಾಗಿ ಹಿಡಿಯ ಲಿಲ್ಲ. ಸರಪಣಿ ಸರಿಯಾಗಿ ಎಳೆಯಲಿಲ್ಲ. ಸುಣ್ಣ ಚೆನ್ನಾಗಿ ಬಳಿಯಲಿಲ್ಲ" ಎಂಬ ಕಾರಣದಿಂದ ಬೆತ್ತದ ಏಟುಗಳು ಬೀಳುತ್ತಲೇ ಇದ್ದವು. ಒಂದು ದಿನ ಮೂಡ್ಲ ಗಿರಿಯು ಹೆಂಡತಿಯನ್ನು ಮನೆಯಲ್ಲಿ ಚೆನ್ನಾಗಿ ಹೊಡೆದಿದ್ದನು. ಅದೇ ಮಧ್ಯಾಹ್ನ ಅವನು ಸರಪಣಿ ಸರಿಯಾಗಿ ಎಳೆಯಲಿಲ್ಲವೆಂದು ಸಾಹೇಬರು ಕೈಯ ಲ್ಲಿದ್ದ ಬೆತ್ತದಿಂದ ಅವನ ಆ ದೊಡ್ಡ ದೇಹಕ್ಕೆ ನಾಲ್ಕು ಬಿಟ್ಟರು. ಸಮೀಪದ ಹೊಲದ ಬದುವಿನಲ್ಲಿ ಸಗಣಿ ತಟ್ಟುತ್ತಿದ್ದ ಅವನ ಹೆಂಡತಿಯು ನಗುತ್ತಾ ನಾಣಿ ಯೊಂದಿಗೆ "ಅವರಿಗೆ ಇನ್ನೆರಡು ಬಿಡಿ. ದಾಕ್ಷಿಣ್ಯ ಮಾಡಬೇಡಿ. ಮೈ ಕೊಬ್ಬಿದೆ" ಎಂದಳು.

ಪ್ರತಿದಿನವೂ ಸಾಯಂಕಾಲ ಸುಮಾರು ಆರೂವರೆ ಗಂಟೆಗೆ ಕೆಲಸವನ್ನು ಬಿಡುತ್ತಿದ್ದರು. ಅನಂತರ ದೇವಸ್ಥಾನಕ್ಕೆ ಹಿಂದಿರುಗಿ, ಊಟ ನಡೆದ ಮೇಲೆ ನಾಣಿಯು ಊರಿನವರನ್ನೆಲ್ಲಾ ಕೂರಿಸಿಕೊಂಡು ಅವರ ಕಷ್ಟಸುಖಗಳನ್ನೆಲ್ಲಾ ವಿಚಾರಿಸುತ್ತಿದ್ದ ಸಲ್ಲದೆ ಅವರೊಂದಿಗೆ ಅನೇಕ ವಿನೋದಗಳನ್ನು ಮಾಡುತ್ತಿದ್ದನು.

ಸರ್ವೆ ನಡೆಯುತ್ತಿದ್ದ ಕಾಲದಲ್ಲಿ ಆ ಒಂದು ತಿಂಗಳೂ ರೈತರಿಗೆಲ್ಲಾ

ದೇವಸ್ಥಾನವೇ ಮನೆಯಾಗಿತ್ತು. ಬೆಳಗಿನಿಂದ ಬೈಲಿನಲ್ಲಿ ಒಂದ ಸಮನೆ ಒಟ್ಟಾಗಿ ದುಡಿದಿದ್ದುದರಿಂದ ಉಂಟಾಗಿದ್ದ ಬಾಂಧವ್ಯ, ಸಂಧ್ಯಾಕಾಲದ ಮಬ್ಬಿನ ಶಾಂತಿ, ದೇವಸ್ಥಾನದ ನಿಶ್ಶಬ್ದವಾದ ವಾತಾವರಣ, ಉರಿಯುತ್ತಿದ್ದ ಹರಳೆಣ್ಣೆಯ ಒಂದೇ ಮಂಕಾದ ಬೆಳಕು ಇವುಗಳೆಲ್ಲಾ ನಾವೆಲ್ಲಾ ಒಂದೇ ಸಂಸಾರಕ್ಕೆ ಸೇರಿದವರೆಂಬ ಭಾವವನ್ನು ನಮ್ಮ ಮನಸ್ಸಿನಲ್ಲಿ ಮೂಡಿಸುತ್ತಿದ್ದವು. ಆ ಕಾಲದಲ್ಲಿ ಆ ವಾತಾವರಣದಲ್ಲಿ ನಾವು ಬೇರೆ, ರೈತರೆ ಬೇರೆ, ನಾವು ಜೋಡಿದಾರರು ಇವರು ಒಕ್ಕಲಿಗರು, ನಾವು ವಿದ್ಯಾವಂತರು ಇವರು ಅವಿದ್ಯಾವಂತರು, ನಾವು ಸರ್ಕಾರದ ಅಧಿಕಾರಿಗಳು ಇವರು ಏನೂ ತಿಳಿಯದ ರೈತರು ಎಂಬ ಭಾವ ನಮ್ಮ ಮನಸ್ಸಿಗೆ ಏನು ಮಾಡಿದರೂ ಹತ್ತುತ್ತಿರಲಿಲ್ಲ. ಆ ಕಾಲದಲ್ಲಿ ರೈತರು ಆಡುತ್ತಿದ್ದ ಮಾತುಗಳು, ಆ ಮಾತುಗಳಲ್ಲಿ ತೋರುತ್ತಿದ್ದ ಒಂದು ವಿಧವಾದ ಗಂಡಸುತನದ ಸರಳತೆ, ನಮ್ಮ ಹಳ್ಳಿಗಳ ಜೀವನದ ತಿರುಳು, ನಾಣಿಯೂ ಸಾಹೇಬರೂ ರೈತರಿಗೆ ಖುಷಿಯನ್ನುಂಟುಮಾಡುತ್ತಿದ್ದುದು, ಬೆಳಗಿನಿಂದ ಸಂಜೆಯವರೆಗೆ ಬಿಸಿಲಿನಲ್ಲಿ ದುಡಿದಿದ್ದ ರೈತರು ಯಾವ ಯೋಚನೆಯೂ ಇಲ್ಲದೆ, ತಾಪತ್ರಯವೂ ಇಲ್ಲದೆ, ವಿರಾಮವಾಗಿ ಕುಳಿತು ಸ್ವತಂತ್ರವಾಗಿ ಹರಟುತ್ತಿದ್ದುದು, ಇವುಗಳೆಲ್ಲಾ ನನ್ನ ಕಣ್ಣಿಗೆ ಈಗಲೂ ಕಟ್ಟಿವೆ. ಆ ಹಳ್ಳಿಗರ ಉತ್ಸಾಹವೇನು! ಅವರು ಮಾತಾಡುತ್ತಿದ್ದ ವಿಚಾರಗಳ ವಿಶಾಲತೆಯೇನು? ಅವರು ಹೇಳುತ್ತಿದ್ದ ಕತೆಗಳೇನು? ಅನುಭವಗಳೇನು? ಆ ಕತೆಗಳಿಂದ ಅವರು ಆರಿಸುತ್ತಿದ್ದ ನೀತಿಗಳೇನು? ಇವುಗಳನ್ನೆಲ್ಲಾ ನಾವು ನೋಡಿ ಮಂಕಾಗುತ್ತಿದ್ದೆವು. ಆ ರೈತರು ಅರೆಹೊಟ್ಟೆಗೆ ತಿಂದು ಕೂರೆ ತುಂಬಿದ ಚಿಂದಿ ಬಟ್ಟೆಗಳನ್ನುಟ್ಟುಕೊಂಡು, ಜ್ಞಾನಿಗಳಿಗೂ ತಿಳಿಯದ ವಿಚಾರಗಳನ್ನೆಲ್ಲಾ ಚರ್ಚೆ ಮಾಡುತ್ತಿದ್ದರು. ಆಗ ನಾವು ಕಂಡ, ಕೇಳಿದ, ಅನೇಕ ಸಂಗತಿಗಳನ್ನು ನಾನು ಒಂದು ದಿನಚರಿಯ ಪುಸ್ತಕವಂತೆ ಗುರುತು ಹಾಕಿದ್ದೆ. ಹೆಚ್ಚಾಗಿ ಅವರ ಸಂಸ್ಕೃತಿಯ ಆಳವನ್ನು ತಿಳಿಯಲು ಸಾಧಕವಾದ ಅವರ ಮಾತುಗಳನ್ನೂ ಅವರ ಕತೆಗಳನ್ನೂ, ಅವು ಎಷ್ಟೇ ಅಸಂಬದ್ಧಗಳಾಗಿ ತೋರಿದರೂ ಆಗ ಬರೆದಿಟ್ಟಿದ್ದೆ. ಅವುಗಳಲ್ಲಿ ಕೆಲವನ್ನು ಇದ್ದಿದ್ದು ಇದ್ದಂತೆ ಆರಿಸಿ ಮುಂದೆ ಬರೆದಿದ್ದೇನೆ.

೫

ಈ ಸಾಯಂಕಾಲ ಸುಬ್ಬೇಗೌಡನ ಮುಖ ಯಾಕೋ ಸ್ವಲ್ಪ ಜೋಲುಬಿದ್ದಿತ್ತು. ಕೂಡಲೇ ನಾಣಿಯು

ನಿನ್ಗೆ ಯಾಕೆ ಗೋಳು
ಇಲ್ವೆ ಮನ್ಲಿ ಕಾಳು
ಊಳು ಎಲ್ಲಾ ಪಾಳು
ಸಿಕ್ಕುತ್ತೆ ಗಂಜಿ ಹಾಲು.

ಎಂದನು. ರೈತರು "ನಮ್ಮ ನಾಣಪ್ಪನೋರು ಮಾತು ಮಾತಿಗೂ ಗಾದೆ ಪಟಕಿಸ್ತಾರೆ. ಅವರ್ಮುಂದೆ ನಮ್ಗೋಳು ಎಲ್ಲೊ ಓಡಿಹೋಯ್ತದೆ" ಎನ್ನುತ್ತಿದ್ದರು.

ನಾಣಿಯು ತನ್ನ ನಗೆಯ ಸ್ವಭಾವದಿಂದ ರೈತರಲ್ಲೂ ವಿನೋದವನ್ನು ಹುಟ್ಟಿಸುತ್ತಿದ್ದನು. ನಾಣಿಯು ಆ ಸಂಜೆಗಳಲ್ಲಿ ರಾಯರನ್ನೂ ಬೇಕಾದಂತೆ ಗೇಲಿ ಮಾಡುತ್ತಿದ್ದನು. ರಾಯರ ಮೀಸೆಯನ್ನು ಕುರಿತು ಅವನು ಎಷ್ಟೋ ಪ್ರಾಸ ಪದಗಳನ್ನು ಹಾಡಿದ್ದನು. ರಾಯರ ಸ್ವಲ್ಪ ಮುಂದಕ್ಕೆ ಬಂದಿದ್ದ ಹೊಟ್ಟೆಯೂ ಅವರ ವಿನೋದಕ್ಕೆ ವಿಷಯವಾಗಿತ್ತು. ರಾಯರ ಹೆಸರು ವಿನಾಯಕರಾವ್ ಎಂದು ಹೇಳಿದೆನಷ್ಟೆ. ನಾಣಿಯು ಒಂದು ಸಲ

ವಿನಾಯ್ಕನ ಹೊಟ್ಟೆ
ಕಡಬು ದೋಸೆ ಮೊಟ್ಟೆ
ಹೊಕ್ಲೆ ದೊಡ್ಡ ತಟ್ಟೆ
ಹೊಟ್ಟೆ ಭಾರಿ ಕಟ್ಟೆ

ಎಂದನು. ರಾಯರು "ಸದ್ಯ ನನ್ನ ಹೊಟ್ಟೆಗ್ಯಾಕಯ್ಯ ತಂದೆ" ಎಂದರು. ನಾಣಿಯು "ಇದನ್ನೆಲ್ಲಾ ನೀವು ಕೇಳಬಾರದು. ರೈತರಿಗೆ ಏನೋ ಹೇಳ್ತಾ ಇದ್ದೆ. ಹುಡುಗ ಸಮಾಚಾರ" ಎಂದನು. ರಾಯರ ಮೀಸೆಯನ್ನು ನೋಡಿ ನಾಣಿಯು

ಮುಖಕ್ಕ ಚೆಂದ ಮೀಸೆ
ಮೈಗೆ ಚೆಂದ ಕಾಸೆ
ತಿನ್ನೋಕೆ ಚಂದ ದೋಸೆ
ಬಿಡಬೇಕು ಎಲ್ಲ ಆಸೆ

ಎಂದಿದ್ದನು. ಆ ಪ್ರಾಸವನ್ನು ನೋಡಿ ರಾಯರಿಗೂ ಆನಂದವಾಗಿದ್ದಿತು. ಯಾಕೆಂದರೆ ಮೀಸೆಯಿಲ್ಲದ ಮುಖದಲ್ಲಿ ಏನೂ ಕಳೆಯಿಲ್ಲವೆನ್ನುವುದು ಅವರ ನಿಷ್ಕೃಷ್ಟವಾದ ಅಭಿಪ್ರಾಯವಾಗಿತ್ತು.

* * * *

ಮೋಜಿನಿದಾರರಿಗೆ ಹಳ್ಳಿಯ ಕೋಲಾಟವನ್ನು ನೋಡಲು ಬಹಳ ಉತ್ಸಾಹವಿತ್ತು. ಅವರು ಇವತ್ತು ನಾಣಿಯೊಂದಿಗೆ 'ಕೋಲಾಟವಾಡಿಸಯ್ಯ

ನೋಡೋಣ' ಎಂದರು.

ನಾಣಿಗೆ ಕೋಲಾಟವೂ ಆ ಆಟಕ್ಕೆ ಬೇಕಾದ ಹಾಡುಗಳೂ ಚೆನ್ನಾಗಿ ಬರುತ್ತಿದ್ದುವು. ಕೋಲಾಟದ ಪದಗಳು, ಬೀಸುವ ಕಲ್ಲಿನ ಹಾಡುಗಳು, ಗಾದಿಯ ಪದಗಳೂ ಇವುಗಳನ್ನೆಲ್ಲಾ ನಾಣಿಯು ರೈತರಿಂದ ಹೇಳಿಸುತ್ತಿದ್ದುದಲ್ಲದೆ ತಾನೂ ಹೇಳುತ್ತಿದ್ದನು. ನಾಣಿಯು ಮಾಡತಕ್ಕ ಯಾವ ಕೆಲಸವನ್ನೂ ಅರ್ಧಂಬರ್ಧ ಮಾಡುವವನಲ್ಲ. ಅವನ ಕೆಲಸವೆಲ್ಲಾ ಶಿಸ್ತು. ಅವನು ಕೋಲಾಟಗಾರರಿಗೆ ಕಟ್ಟುವುದಕ್ಕೆ ಗೆಜ್ಜೆಗಳನ್ನು ಎಲ್ಲಿಯೋ ಸಂಪಾದಿಸಿದನು. ಅವನ ಪ್ರೋತ್ಸಾಹದಲ್ಲಿ ರೈತರು ಕೋಲಾಟವನ್ನು ಒಂದೆಂದೂ ಆಡದಷ್ಟು ಚೆನ್ನಾಗಿ ಆಡಿದರು. ಆ ಹಾಡು, ಹಾಡಿಗೆ ಅನುಸರಿಸಿ ಹೋಗುತ್ತಿದ್ದ ಅವರ ಕಾಲಿನ ಗೆಜ್ಜೆಯ ಸದ್ದು, ಆ ಸದ್ದನ್ನು ಅನುಸರಿಸಿ ನಡೆಯುತ್ತಿದ್ದ ಕೋಲುಗಳ ಸದ್ದು, ಮೊದಲು ಮೊದಲು ಸಾಮಾನ್ಯವಾಗಿ ಕೋಲಿಗೆ ಕೋಲು ತಾಕುತ್ತಿದ್ದುದು, ಬರಬರುತ್ತಾ ಚಮತ್ಕಾರಕ್ಕೆ ಪ್ರಾರಂಭವಾದುದು, ಒಬ್ಬೊಬ್ಬನೂ ಒಂದೇ ಕಾಲದಲ್ಲಿ ಎಡಗಡೆಗೂ ಬಲಗಡೆಗೂ ಕೋಲನ್ನು ಆಡುತ್ತಿದ್ದುದು, ಬೆನ್ನಿನ ಹಿಂದುಗಡೆ ಕೋಲನ್ನು ಆಡುತ್ತಿದ್ದುದು, ಒಬ್ಬನ ಸಂದಿಯಲ್ಲಿ ಒಬ್ಬನು ತೂರುತ್ತಿದ್ದುದು, ಹತ್ತು ಜನರ ಕೋಲಿನ ಏಟುಗಳನ್ನು ಒಬ್ಬನೇ ಸ್ವೀಕರಿಸಿ, ಅವುಗಳಿಗೆ ಜವಾಬ್ ಕೊಡುತ್ತಿದ್ದುದು, ಇವುಗಳನ್ನೆಲ್ಲಾ ನೋಡಿ ಮೋಜಿನಿದಾರರಿಗೆ ಆಶ್ಚರ್ಯವಾಯಿತು.

ಕೋಲಾಟವು ಜಲತರಂಗದ ಹಾಗೆ; ಅದರಲ್ಲಿ ಅನೇಕ ರಸಗಳನ್ನು ತೋರಿಸಬಹುದು. ವೀರರಸ, ಸೈನಿಕರು ಯುದ್ಧಕ್ಕೆ ಹೋಗುವುದನ್ನು ಜ್ಞಾಪಕಕ್ಕೆ ತರುವಂತೆ ಕೋಲುಗಳನ್ನು ಹೊಡೆಯುವ ಕ್ರಮ, ಶೃಂಗಾರವನ್ನು ತೋರಿಸುವ ರೀತಿಯಲ್ಲಿ ಹೊಡೆಯುವ ಕ್ರಮ, ದುಃಖವನ್ನು ತೋರಿಸುವಂತೆ ನಿಧಾನವಾಗಿ ಹೊಡೆಯುವ ಕ್ರಮ, ವೇಗ, ಗಾಬರಿ, ಆರ್ಭಟ ಇವುಗಳನ್ನೆಲ್ಲಾ ಕೋಲನ್ನು ಹೊಡೆಯುವುದರಲ್ಲಿ ತೋರಿಸಬಹುದು. ಕೋಲಾಟ ಒಂದು ಗಂಟೆ ಎರಡು ಗಂಟೆ ನೋಡಿದರೆ ಬಗೆಬಗೆಯ ರಾಗಗಳ ಆಲಾಪನೆಯೊಂದಿಗೆ ಸಂಗೀತವನ್ನು ಕೇಳಿದಂತೆ ಆಗುತ್ತದೆ. ಆ ಹಾಡು, ತಾಳ ಒಂದೊಂದು ಸಲ ಒಂದೊಂದು ಬಗೆಯಾಗಿದ್ದು, ಕೋಲಾಟವೆಂಬುವುದು ಬರಿಯ ಕೋಲನ್ನು ಕುಟ್ಟುವುದೆಂದು ತಿಳಿದಿರುವವರಿಗೆ ಆಶ್ಚರ್ಯವನ್ನೂ ವಿಶ್ವಾಸವನ್ನೂ ಉಂಟುಮಾಡುತ್ತದೆ. ನಾವು ಒಂದೊಂದು ಸಲ ಕುಳಿತಾಗಲೂ ಒಂದು ಗಂಟೆ ಎರಡು ಗಂಟೆ ಅದನ್ನು ನೋಡಿ ಕೇಳಿದ್ದೇವೆ. ನಮಗೆ ಒಂದು ಸಲವಾಗಲಿ ಬೇಸರಿಕೆಯಾಗಲಿಲ್ಲ.

ಆ ರೈತರ ಚಟುವಟಿಕೆ ಏನು ! ಅವರ ಉತ್ಸಾಹವೇನು ! ಚುರುಕೇನು !

ಕೋಲಾಟದಲ್ಲಿ ಅವರು ತೋರಿಸುತ್ತಿದ್ದ ಚುರುಕು ಆಶ್ಚರ್ಯಕರವಾಗಿತ್ತು. ಅರವತ್ತೈದು ವಯಸ್ಸಿನ ಇಂಜನ್ ಯಾಲಕ್ಕಿ ಯಾವತ್ತೂ ಜನರೊಂದಿಗೆ ಹೆಚ್ಚಾಗಿ ಸೇರಿದವನು, ಕೋಲಾಟವನ್ನು ಆಡುವುದನ್ನು ಬಿಟ್ಟೇ ನಲವತ್ತು ವರ್ಷವಾಗಿದ್ದಿತು. ಅವನಿಗೂ ಉತ್ಸಾಹ ಉಂಟಾಗಿ ಅವನೂ ಆಟಕ್ಕೆ ಸೇರಿದನು. ಕೋಲಾಟದಲ್ಲಿ ಒಂದೊಂದು ತರಹದ ಹಾಡಿಗೂ ಒಂದೊಂದು ತರಹವಾಗಿ ಆಟವನ್ನು ಪ್ರಾರಂಭಿಸಿ ಒಂದೊಂದು ರೀತಿಯಿಂದ ಕೊನೆಮಾಡಬೇಕು. ಇದು ಹಳ್ಳಿಯಲ್ಲಿರುವವರಿಗೆಲ್ಲಾ ಗೊತ್ತು.

ಇವತ್ತು ಕೋಲಾಟವನ್ನು ಮೊದಲು ಈ ಪಾಡಿನಿಂದ ಪ್ರಾರಂಭಿಸಿದರು.

ಶರಣು ಶರಣುವಯ್ಯ ಗಣನಾಯ್ಕ
  ನಮ್ಮ ಕರುಣದಿಂದಲಿ ಕಾಯೊ ಗಣನಾಯ್ಕ ,
ಎಳ್ಳುಂಡೆ ಜೇನುತುಪ್ಪ ಗಣನಾಯ್ಕ
  ನಮ್ಗ ವಿದ್ಯೇವ ಕಲಿಸಯ್ಯ ಗಣನಾಯ್ಕ
ನಿಮಗೆ ಗೊನೆಮೋಗ್ಲ ಬಾಳೆಹಣ್ಣು ಗಣನಾಯ್ಕ
  ನಿಮಗೆ ಕಳಿ ಅಡ್ಕೆ ಚಿಗರೆಲೆ ಗಣನಾಯ್ಕ
ನಿಮಗೆ ವಡ್ಡ ತೆಂಗಿನಕಾಯಿ ಗಣನಾಯ್ಕ
  ನಿಮಗೆ ಕರ್ಪೂರ ಸಾಂಭ್ರಾಣಿ ಗಣನಾಯ್ಕ
ನಿಮ್ಗ ಮರ್‍ಗಾಮಲ್ಲಿಗೆ ಜಾಜಿ ಗಣನಾಯ್ಕ
  ನಿಮ್ಗ ಕೊಂಬೆ ಮೋಗ್ಲ ನಿಂಬೆಹಣ್ಣು ಗಣನಾಯ್ಕ
ಶರಣು ಶರಣುವಯ್ಯ ಗಣನಾಯ್ಕ
  ನಮ್ಮ ಕರುಣದಿಂದಲಿ ಕಾಯೊ ಗಣನಾಯ್ಕ
    ಹಾ ! ಗಣನಾಯ್ಕ

ಈ ಹಾಡನ್ನು ಹಾಡುವಾಗ ಒಂದು ಕಡೆಯವರು ಒಂದೇ ಚರಣವನ್ನೂ ಮತ್ತೊಂದು ಕಡೆಯವರು ಅದಕ್ಕೆ ಪ್ರತ್ಯುತ್ತರವಾಗಿ "ಹಾ ಗಣನಾಯ್ಕ ಎಂಬುದಷ್ಟನ್ನೇ ಮಾತ್ರವೂ ಮಾಡಿಕೊಂಡು ಕೋಲು ಹೊಡೆಯುತ್ತಾರೆ. ಕೋಲಾಟದಲ್ಲಿ

ತಂದಾನೋ ತಾನಾನಿ ತಾನು ತಾನಿ ತಂದನೋ ತಂದನೋ

ಎಂಬುದು ಪ್ರಾರಂಭದ ಪಲ್ಲವಿಯಂತಹ ಹಾಡು. ಕುಸ್ತಿ ಮಾಡಲು ಸಿದ್ಧನಾಗುತ್ತಿರುವವನು ಕೈಕಾಲುಗಳನ್ನು ಅಲ್ಲಾಡಿಸಿ ನೆಟಿಗೆ ತೆಗೆದು ತಯಾರಾಗುವಾತೆ, ಕೋಲಾಟದ ಪ್ರಾರಂಭದಲ್ಲಿ ಆಟಗಾರನು ತನ್ನ ಎರಡು ಕೋಲುಗಳನ್ನೂ ಹೊಡೆಯುತ್ತಾ ನಿಂತಲ್ಲಿಯೇ ನಿಂತಿರುವನು. ಈ ಪಲ್ಲವಿ ಸಾಧಾರಣವಾಗಿ ಬಲು ದೊಡ್ಡದು. ಅದು ಮುವ್ವತ್ತು ಸಾಲು, ನಲವತ್ತು ಸಾಲು ಇರುತ್ತದೆ. ಆಟಗಾರನು ಮನಸ್ಸಿಗೆ ತೋರಿದ ರೀತಿಯಲ್ಲಿ ಅಲ್ಲಲ್ಲಿಯೇ ಮುಂದಲ ಸಾಲುಗಳನ್ನು

ಕಟ್ಟುತ್ತಾನೆ. ಆದರೆ ತಂದನೊ ತಾನಾನಿ ಎಂಬ ಸಾಲನ್ನು ಮಾತ್ರ ಬಿಡುವುದಿಲ್ಲ.

ಕೋಲನ್ನು ಪ್ರಾರಂಭಿಸುವಲ್ಲಿ ನಿಧಾನವಾಗಿ ಹಾಕಿ ಅನಂತರ ಜೋರು ಜೋರಾಗಿ ಹೊಡೆಯುವುದಕ್ಕಾಗಿ ಈ ಹಾಡನ್ನು ಉಪಯೋಗಿಸುತ್ತಾರೆ.

ಎ–ಲ್ಲ–ವ–ನೋ–ಶಿ–ವ–ನೆ–ಲ್ಲ–ವ–ನೋ–
ಸ್ವಾ–ಮೆ–ಲ್ಲ–ವ–ನೋ–
ಗು–ರು–ವೆ–ಲ್ಲ–ವ–ನೊ

"ಎಲ್ಲವನೊ ಶಿವನೆಲ್ಲವನೊ ಸ್ವಾಮೆಲ್ಲವನೋ ಗುರುವೆಲ್ಲವನೊ"

ಇವರ ಹೊರತು ನಮ್ಮ ಕಡೆ

"ನೋಡುವಳಂದಾವ ಹೂವಿನ ಮಾಲೆಯು ಚಂದಾವಾ"

ಎಂಬ ಹಾಡೂ

"ತಂದನೋ ತಾನೋದರುಳೋ ಜಾಣ
ಅರುಳೋಮರುಳೋಡುರುಳೋ ಜಾಣ"

ಎಂಬ ಹಾಡುಗಳೂ ಬಹಳ ಮಟ್ಟಿಗೆ ಪ್ರಚಾರದಲ್ಲಿವೆ. ಕೆಲವು ಹಾಡುಗಳಲ್ಲಿ ಪ್ರಾರಂಭದಲ್ಲಿ ಎರಡು ಕೋಲುಗಳಿಂದಲೂ ಎದುರಾಳಿಯ ಕೋಲುಗಳನ್ನು ಹೊಡೆದು ಆಟವನ್ನು ಮುಂದುವರಿಸಬೇಕು. ಆಟದ ಕ್ರಮ ಸರಿಯಾಗಿ ತಿಳಿದಿದ್ದರೆ, ಅದರೊಳಗಿನ ದಾರಿಗಳನ್ನೆಲ್ಲಾ ಮುಗಿಸಿಕೊಂಡು ಆಟ ತನ್ನಷ್ಟಕ್ಕೆ ತಾನೆ ಕೊನೆಯಾಗುವುದು. ಕೆಲವು ಹಾಡುಗಳನ್ನು ಹಾಡುವಾಗ ಒಂದು ದೊಡ್ಡ ತಾಳವನ್ನೂ ಒಂದು ಚಿಕ್ಕ ತಾಳವನ್ನೂ ಹಾಕುವಂತೆ ಕೋಲುಗಳನ್ನು ಒಂದು ಸಲ ಗಟ್ಟಿಯಾಗಿಯೂ, ಒಂದು ಸಲ ನಿಧಾನವಾಗಿಯೂ ಹಾಕಬೇಕು. ಅದರ ಗತಿಗೆ ಅನುಸಾರವಾಗಿ ಗೆಜ್ಜೆ ಕಟ್ಟಿಕೊಂಡಿರತಕ್ಕ ಕಾಲನ್ನೂ ಒಂದು ಸಲ ಗಟ್ಟಿಯಾಗಿಯೂ ಒಂದು ಸಲ ಮೆತ್ತಗೂ ಬಡಿಯಬೇಕು. ಪ್ರತಿಯೊಂದು ಆಟಕ್ಕೂ ಒಂದೊಂದು ಬಂಧವಿದೆ.

ನಮ್ಮೂರು ತಥ "ಹೊಲೆಯರು" ಮುಟ್ಟಿದ ಹೊರತು ಮುಂದಕ್ಕೆ ಹೋಗುವ ಹಾಗಿಲ್ಲ. ಅವರು ಹಿಂದುಗಡೆ ದೊಡ್ಡ ದೊಡ್ಡ ತೊಲೆಗಳ ಸಹಾಯದಿಂದ ಹೆನ್ನ ಹಾಕಿದರೆ ತೇರು ಮುಂದಕ್ಕೆ ಸರಿಯುತ್ತದೆ. ಇಲ್ಲದಿದ್ದರೆ ಬೆಟ್ಟದಂತೆ ಇರುವ ತೇರು ನಿಂತಲ್ಲಿಯೆ ನಿಲ್ಲುತ್ತದೆ. ಆ ತೇರಿನ ಮೇಲೆ ನಮ್ಮೂರಿನವರು ನೂರಾರು ವರ್ಷಗಳ ಕೆಳಗೆ ಕಟ್ಟಿದ ಈ ಹಾಡು ನಮ್ಮ ಪ್ರಾಂತ್ಯದಲ್ಲೆಲ್ಲಾ ಪ್ರಚಾರದಲ್ಲಿದೆ.

ತೇರಿಗ್ಹೋಗೋಣ ಬನ್ನಿರೊ
ಸ್ವಾಮಿ ರಥಾಕ್ಹೋಗೋಣ ಬನ್ನಿರೊ

ನೋಟಕೆ ಚೆಂದ್ವಂತ ನೊಣವಿನ ಕೆರೆಯಂತೆ
ಕೋಟೆಯ ಬುಡದ ಬೇಟೆರಾಯ್ನಂತೆ ॥ ತೇರಿ...
ಅಯ್ಗೋಳ ಗುಡಿಯಲ್ಲಿ ಏನೇನು ಅಡಿಗೆ
ಊಟ ಉದ್ದು ಮತ್ತೆ ಪನಿವಾರ
ನೆನೆಯಕ್ಕಿ ನೆನೆಗಡಲೆ ಪನಿವಾರ ನಮ್ಮ
ಮುದ್ದು ಭೈರವನಾ–ಗುಡಿಯಾಗೆ ॥ ತೇರಿ...
ಹಾರುವರ ಕೇರಿಯ ತೇಗದ ತೇರು
ಯಾರ್‍ಯಾರು ನೂಕಿದ್ರು ಮಲಕೊಲ್ದು
ಯಾರ್‍ಯಾರು ನೂಕಿದ್ರು ಮಲಕದ ತೇರು
ಗೊರವೂರ ಹೊಲೆಯರು ಮುಟ್ಟಿದ್ರೆ ನಲಿಯುವ
ತೇರಿಗ್ಹೊಗೋಣ...

ಪ್ರಚಂಡನಾದ ನಾಣಿಗೆ ಈ ಹಾಡುಗಳೆಲ್ಲಾ ಬರುತ್ತವೆ. ಅವನು ತಾನೇ ಬೇಕಾವರೂ ಒಕ್ಕಲಿಗರೊಂದಿಗೆ ಸೇರಿಕೊಂಡು ಆಟವಾಡುತ್ತಾನೆ. ಮೇಲೆ ನಾನು ಹೇಳಿರುವ ಹಾಡುಗಳನ್ನೆಲ್ಲಾ ನಾಣಿ ಒಕ್ಕಲಿಗರಿಗಿಂತ ಚೆನ್ನಾಗಿಯೆ ಹಾಡುತ್ತಾನೆ. ನಾಣಿಯು ಹೇಳಿದ ಎರಡು ಹಾಡುಗಳು ನನ್ನ ಮನಸ್ಸನ್ನು ಬಿಟ್ಟುಹೋಗಿಲ್ಲ. ಅದಕ್ಕೆ ಮುಖ್ಯ ಕಾರಣ ಸಾಹೇಬರು. ನಾಣಿಯು ಹೇಳಿದ ಈ ಮುಂದಲ ಹಾಡಿಗೆ ಸಾಹೇಬರಿಗೆ, ಏನು ಮಾಡಿದರೂ ಅರ್ಥವಾಗಲಿಲ್ಲ. ಅದಕ್ಕೆ ಅರ್ಥವನ್ನು ಕಂಡು ಹಿಡಿಯುವ ಪ್ರಯತ್ನದಲ್ಲಿ ಸಾಹೇಬರಿಗೆ ಈ ಹಾಡು ಬಾಯಿಗೆ ಬಂದಿತು.

ಕೋಲು ಕೋಲೆನ್ನಿರೆ ಸದಾ ಗುರುವಿನ ಬಾಳು ಮೇಲೆನ್ನಿರೆ
ಹುಟ್ಟು ಬಂಜೆಯು ಮಗ ಹುವ್ವಿನ ಕೋಲ್ಪಿಡಿದ
ಮುಟ್ಟಿಬಾಳಿದನೆ ಮೂರ್ ಜಗವೆಲ್ಲ ॥ ರನ್ನದ
ಕೋಲು ಕೋಲೆನ್ನಿರೆ...
ಬುಟ್ಟಿಗೆ ಕಾಲಿಲ್ಲ ಗುರುವಿಗೆ ಕುಲವಿಲ್ಲ
ಇದಕೆ ಪರಿಬಂದ ಶಿವಶರಣಂಗೆ ಸಮನಿಲ್ಲ
ಕೋಲು ಕೋಲೆನ್ನಿರೆ
ಅರು ಬೆಟ್ಟವನೊಂದು ಹಾರಿತೋಂದಿರುವೆಯು
ಅದ ಕಂಡು ಸದ್ಗುರು ನಗುತ್ತಿದ್ದ ॥ ರನ್ನದ
ಕೋಲು ಕೋಲೆನ್ನಿರೆ...
ರಕ್ಕೆಯಿಲ್ಲದ ಪಕ್ಷಿ ಹಾರಿತು ಗಗನಕೆ
ಅದ ಕಂಡು ಮುರಹರ ನಗುತ್ತಿದ್ದ ॥ ಹೂವಿನ
ಕೋಲು ಕೋಲೆನ್ನಿರೆ ॥ ಸದಾ ಗುರುವಿನ ಬಾಳು ಮೇಲೆನ್ನಿರೆ

ನಾಣಿಯು "ಇದಕ್ಕೆ ಏನೂ ಅಂತ ಅರ್ಥವಿಲ್ಲ ಸ್ವಾಮಿ. ಇದೊಂದು ಅತಿಶಯೋಕ್ತಿಯ ಉದಾಹರಣೆ" ಎಂದನು. ನನಗೂ ಹಾಗೆಯೇ ತೋರಿತು. ಸಾಹೇಬರು "ಹಾಗುಂಟೇನಯ್ಯ, ಎಂದಿಗೂ ಇಲ್ಲ. ಇದರಲ್ಲಿ ಗೂಢವಾದ ವೇದಾಂತದ ಅರ್ಥವಿದೆ. ಆರು ಬೆಟ್ಟ" ಎನ್ನುವುದೇ ಅರಿಷಡ್ವರ್ಗಗಳು— 'ಹಾರಿತೊಂದಿರುವೆಯು' ಎಂದರೆ ಮನಸ್ಸು. ಬೆಟ್ಟಿಗಳೋಪಾದಿಯಲ್ಲಿರತಕ್ಕ ಅರಿಷಡ್ವರ್ಗಗಳನ್ನು ಇರುವೆಯಂತೆ ಇರುವ ಮನಸ್ಸು ಗೆದ್ದಿತೆಂದು ಅರ್ಥ" ಎಂದರು.

ನಾಣಿಯು ಎರಡನೆಯ ಪದ ಬಹಳ ಚೆನ್ನಾಗಿದ್ದುದರಿಂದ ಅದೂ ಸಾಹೇಬರಿಗೆ ಬಾಯಿಗೆ ಬಂದಿತು.

ಕೋಲಿಸು ವೈನಾಗಿ ಕೋಲೆ
    ಳಮ್ಮ ಕೋಲುಪದವ ನೀ ಕೇಳಮ್ಮ ಬಾಲೆ
ಏರಿ ಮೆಲ್ಹೋಗೊದೊಂದೆತ್ತು
    ಅದು ಕಾಲ್ಮುರ್ಕೊಂಡು ಕೆರೆಕೆಳ್ಗೆ ಬಿತ್ತು.
ಅದ ಸಾಗಾನ ಹೆಗಲ್ಮುರಿಯ ಹೊತ್ತು
    ನಮ್ಮ ಕಾಳಿ ಬೀರವ್ವಗೆ ವಜ್ರದ ನತ್ತು ॥
        ಕೋಲಿಸು ವೈನಾಗಿ ಕೋಲೆ
ಹೊಸಮನೆಗೆ ಹೋಗಿ ನೋಡು ಮಲ್ಲಿ
    ಅಲ್ಲಿ ತಲೆಮೇಲೆ ಕುಂತಯ್ತೆ ಪಲ್ಲಿ
ಅದು ಶಕುನವ ನುಡಿತೈತೆ ಮಲ್ಲಿ
    'ನಮ್ಮ ಕಾಳಿ ಬೀರವ್ವಗೆ ಬೆಳ್ಳಿಯ ಪಿಲ್ಲಿ' ॥
        ಕೋಲಿಸು ವೈನಾಗಿ ಕೋಲೆ
ಮೈಸೂರು ಸುಗರಾರ ಸಂತೆ
    ಅಲ್ಲಿ ಮಾರೋದು ಮೂಲಂಗಿ ಕಂತೆ
ನನಗೂ ನಿನಗೂ ಯಾಕದರ ಚಿಂತೆ
    ನಮ್ಮ ಕಾಳಿ ಬೀರವ್ವಗೆ ಹಣ್ ಜವನವಂತೆ ॥
        ಕೋಲಿಸು ವೈನಾಗಿ ಕೋಲೆ

ಈ ಹಾಡುಗಳನ್ನೂ ಆ ಗೆಜ್ಜೆಯ ಕುಣಿತವನ್ನೂ, ಆ ಕೋಲಿನ ಏಟುಗಳನ್ನೂ ನೋಡಿ ನೋಡಿ ನಾವು ಸಂತೋಷಪಟ್ಟುದೂ ಸಂತೋಷಪಟ್ಟುದೆ. ಪೋಜಿನಿದಾರರಂತೂ "ನಾನು ಇಂಥಾ ಆಟಾನೆ ಎಲ್ಲೂ ನೋಡಿರಲಿಲ್ಲ"ಎಂದರು.

ನಾಣಿಯು

ಆಡ್ಬೇಕು ಕೋಲಾಟ
    ಮರಿಬೇಕು ಎಲ್ಲಾ ಕಾಟ

ಒಕ್ಕಲಿಸ್ಗದೇ ಪಾಟ
ನಮ್ಗೆ ಹಾಲ್ಸಕ್ರೇ ಊಟ

ಎಂದನು. ಮೋಜಿನಿದಾರರು "ನೀನು ಖುಷಿಯಾಗಿರುವವರೆಗೆ ನಮಗೆ ನಿತ್ಯ ಹಾಲು ಸಕ್ರೆ ಊಟವೇಯ್ಯ" ಎಂದರು.

* * * *

ಇವತ್ತು ಕೋಲಾಟದ ವಿಚಾರ ಮಾತನಾಡುತ್ತಾ ಕುಳಿತಿದ್ದೆವು. ಮೋಜಿನಿದಾರರು ಸುಬ್ಬೇಗೌಡನಿಂದ ಏನೇನೋ ಕತೆ ಕೇಳುತ್ತಿದ್ದರು. ಅವರಿಗೆ ರೈತರು ಯಾವ ಯಾವ ವಿಚಾರದಲ್ಲಿ ಹೇಗೆ ಹೇಗೆ ಮಾತನಾಡಿದರೂ ಚೆನ್ನಾಗಿಯೇ ಕಾಣುತ್ತಿತ್ತು.

ಈ ಸಾಯಂಕಾಲ ಮಾತನಾಡುತ್ತಾ ಕುಳಿತಿರುವಾಗ ಕಾಮನಬಿಲ್ಲು ಆಕಾಶದಲ್ಲಿ ಬೀಸಿತ್ತು. ಸಾಹೇಬರು "ಕಾಮನಬಿಲ್ಲು ಏನು ಚೆನ್ನಾಗಿದೆ" ಎಂದರು. ಪಟೇಲ್ ಸುಬ್ಬೇಗೌಡನು "ಕಾಮನಬಿಲ್ಲೆ ಇಲ್ಲ. ಆಕಾಸ್ದಲ್ಲಿ ಹಂಗೆ ಕಾಣ್ತದೆ. ಬರಿ ಮಂಕು" ಎಂದನು. ರಾಯರು "ಇಲ್ಲಯ್ಯ, ನೀನೇನು ಬಲ್ಲೆ. ಇಲ್ವಂತೆ ಬಿಲ್ಲು, ನಿನ್ಗಂತೂ ಶಾಸ್ತ್ರ ಗೊತ್ತಿಲ್ಲ, ಪುರಾಣ ಗೊತ್ತಿಲ್ಲ. ನಮಗೆ ತಿಳೀದೆ, ಹಾಗಾದ್ರೆ ಸ್ವರ್ಗಾನೂ ಇಲ್ಲ, ನರಕಾನೂ ಇಲ್ಲ, ಇಂದ್ರನೂ ಇಲ್ಲ, ಊರ್ವಶಿಯೂ ಇಲ್ಲ, ಕಾಮಧೇನೂನೂ ಇಲ್ಲ, ನೀನೂ ಇಲ್ಲ, ನಾನೂ ಇಲ್ಲ" ಎಂದರು. ಪಟೇಲ್ ಸುಬ್ಬೇಗೌಡನು "ನಾ ಹೇಳೊ ವತ್ಗೆ ದಣಿಗ್ಳು ರೇಗ್ಬಾರದು. ನಮ್ಮಪ್ಪ ಹೇಳ್ತಿದ್ದ ಒಂದ್ಕತೆ ಕೇಳಿ. ನಮ್ಮೂರ್ರ ಅಕ್ಸಾಲೆ ಒಂದು ಕೊಳದ ಬಳಿ ನೀರ್ಕುಡ್ಯೋಕೆ ಹೋದ್ನಂತೆ. ಕೊಳದ್ಮೇಲೆ ಒಂದು ಹುಣಸೆಮರ ಇತ್ತು. ಅದರ ಮೇಲೆ ಒಂದು ಓತಿಕೇತ ಓಡ್ಯಾಡ್ತ ಇತ್ತು. ಅಕ್ಸಾಲೆ ಎರಡು ಕೈನೂ ಸೇರ್ಸಿ ಬಗ್ಸೇಲಿ ತಗೊಂಡು ನೀರ್ಕುಡೀತಾ ಇದ್ದ. ಒಂದ್ಸಲ ಬಗ್ಸೇಲಿ ನೀರ್ನ ಬಾಯ್ಹತ್ರಕ್ಕೆ ಇಟ್ಕೊಂಡು ಕುಡೀತಾ ಇರೋವಾಗ, ಮರದ ಮೇಲಿಂದ ಓತಿಕೇತದ ನೆರಳು ಅದರಲ್ಲಿ ಬಿತ್ತು. ಅದೇನು ಅಂತ ನೋಡೋಕ್ಮುಂಚೇನೆ ನೀರು ಅಕ್ಸಾಲಿ ಹೊಟ್ಟೆಗೆ ಹೊಂಟುಹೋಯ್ತು. ಅಕ್ಸಾಲೆಗೆ 'ತಾನು ಕೈಲಿ ಓತಿಕೇತ ಕಂಡೆ. ನೀರಿನ ಜತೇಲಿ ಅದು ಹೊಟ್ಟೆ ಒಳೀಕೆ ಹೋಯ್ತು' ಅಂತ ಗಾಬರಿ ಆಯ್ತು. ಓತಿಕೇತ ಹೊಟ್ಟೆಗೆ ಹೆಂಗ್ಹೋಯ್ತುದೆ ಅನ್ನೊ ಇಚಾರ್ವೆ ಅವನ್ಮನಸ್ಗೆ ಹೊಳೀಲಿಲ್ಲ. ಹೊಟ್ಟೆಗೆ ಓತಿಕೇತ ಹೋಯ್ತು ಅಂತ ಅಕ್ಸಾಲೆಗೆ ಗಾಬರ ಪತ್ಕೊಳೊತ್ಲು ಹೊಟ್ಟೆನೋವು ಸುರ್ವಾಯ್ತು. ಅವ ಊಟ ನಿದ್ರೆ ಎಲ್ಲಾ

ಬಿಟ್ಟ. ತೆಳ್ಳಗೆ ಸಾಯೊ ಹಂಗಾದ. ಎಷ್ಟು ಮದ್ದು ಕೊಟ್ರೂ ಏನೂ ಪರ್ಯೋಜನ್ನ ಆಗ್ಲಿಲ್ಲ. ಅಕ್ಸಾಲೆ ನನ್ಹೊಟ್ಟೆಗೆ ಓತಿಕೇತ ಹೊಕ್ಕಯ್ತೆ ನಾನ್ಸಾಯ್ತೀನಿ, ಈ ಪರ್ಪಂಚದಲ್ಲಿ ಇಷ್ಟೊಂದು ಪಂಡಿತ್ರು ಅವ್ರೆ, ನನ್ನ ಕಾಯ್ಲೆ ಒಬ್ಬನ ಮದ್ದಿಗೂ ಕೆಂದೋಲ್ಲ. ಓತಿಕೇತ ಹೊರೀಕೆ ಬರೊ ಹಂಗೆ ಯಾರೂ ಮದ್ದು ಕೊಡ್ಲಿಲ್ಲ' ಅಂತ ಕೊರಗೋಕೆ ಹತ್ತಿದ. ನಮ್ಮಪ್ಪ ಒಬ್ಬ ಪಂಡಿತನ್ಗೆ ಏನೊ ಉಪಾಯ ಹೇಳ್ಕೊಟ್ಟ. ನಮ್ಮಪ್ಪನೂ ಪಂಡಿತನೂ ಬೇಲಿನೆಲ್ಲಾ ಹುಡುಕಿ ಓಡಾಡಿ ಒಂದು ಓತಿಕೇತ ಹೊಡ್ದು ಕೊಂದ್ರು. ಆಮೇಲೆ ಪಂಡಿತ ಅಕ್ಕಸಾಲೆಗೆ ಚೆನ್ನಾಗಿ ವಾಂತಿಗೆ ಮದ್ದು ಕೊಟ್ಟ. ಅಕ್ಕಸಾಲೆಗೆ ಪೂರಾ ವಾಂತಿ ಹತ್ಕೊಂಡ್ತು. ವಾಂತಿ ಮಾಡಿ ಮಾಡಿ ಮಾಡಿ ಮಾಡಿ ಅವನು ಸೋತ. ಅವನ್ಗೆ ಆಯಾಸವಾಗಿ ಕಣ್ತಿರಿಗಿ ಪ್ರಗ್ಣೆ ಹೋಗೋ ಹಂಗೆ ಆಯ್ತು. ಆಗ ಪಂಡಿತ ತಾನು ಹೊಡೆದು ತಂದಿದ್ದ ಓತಿಕೇತ ವಾಂತಿಗೆ ಹಾಕಿಬಿಟ್ಟ. ಸ್ವಲ್ಪ ಪ್ರಗ್ಣೆ ಬಂದ್ಮೇಲೆ ಅಕ್ಕಸಾಲೆ ತನ್ನ ವಾಂತಿಲಿ ಓತಿಕೇತ ಬಿದ್ದದ್ದ ನೋಡ್ದ, ಆಮೇಲೆ ಒಳ್ಳೆ ಕುದುರೆ ಹಂಗೆ ಬೆಳೆದ."

"ಅಕ್ಸಾಲೆ ಓತಿಕೇತವನ್ನು ನುಂಗಿದ್ದೂ ಸುಳ್ಳು. ಕಾಮನಬಿಲ್ಲು ಆಕಾಶದಲ್ಲಿ ನಿಂತಿರುದೂ ಸುಳ್ಳು" ಎಂದನು. ನಾಣಿಯು ಚೇಷ್ಟೆಯ ದನಿಯಲ್ಲಿ "ಅವ ಸತ್ತು ಆರು ತಿಂಗಳು, ಅವ ಕೊಂದ ಮೊಲ ಈವತ್ತು ತಿಂದೊ ಅನ್ನುವ ಹಾಗೆ" ಎಂದ. ರಾಯರು "ಅಶಿಶಿಶಿ ಏನಯ್ಯ ಹಾಳು ಮಾತು" ಎಂದರು. ಸುಬ್ಬೇಗೌಡನು "ಅದ್ಕೇನು ಸಾಹೇಬರೆ, ನಾವೆಲ್ಲಾ ಕೇಳಿದ್ದೇ ಆ ಕತೆ" ಎಂದನು. ಮೋಜಿನಿದಾರರು "ಏನಯ್ಯ ಅದು ಕತೆ, ಮಾತಾಡಿದ್ದಕ್ಕೆಲ್ಲ ಒಂದು ಕಾಡು ಕತೆ. 'ಅವ ಸತ್ತು ಆರು ತಿಂಗಳು, ಅವ ಕೊಂದ ಮೊಲ ಇವತ್ತು ತಿಂದೊ' ಏನಯ್ಯ ಹಾಗಂದ್ರೆ" ಎಂದರು. ಸುಬ್ಬೇಗೌಡನು "ದಣಿಗಳ್ಗೆ ಅಷ್ಟು ಬೇಸರ್ಕೆ ಆದ್ರೆ ಆ ಮಾತ್ನ ಅಲ್ಲಿಗೆ ಬಿಟ್ಟುಬಿಡೋಣ" ಎಂದನು. ಮೋಜಿನಿದಾರರಿಗೆ ಕತೆಯನ್ನು ಕೇಳಬೇಕೆಂಬ ಕುತೂಹಲ ಕ್ಷಣಕ್ಷಣಕ್ಕೂ ಹೆಚ್ಚುತ್ತಿತ್ತು. "ಅವ ಸತ್ತು ಆರ್ತಿಂಗ್ಳು, ಸರಿಯಯ್ಯ, ಅವ ಕೊಂದ ಮೊಲ ಇವತ್ತು ತಿನ್ನೋದು ಹೇಗಯ್ಯ, ಮೊಲ ಮಾಂಸ ಆದ್ರು, ಆರು ತಿಂಗಳು ಕೆಡದೆ ನಿಲ್ಲೋದುಂಟೇನಯ್ಯ" ಎಂದರು. ಸುಬ್ಬೇಗೌಡನು "ದಣಿಗ್ಳು ಕೇಳ್ಬೇಕು. ಆ ಕತೆ ಹಿಂಗಯ್ತೆ. ಒಂದೂರಲ್ಲಿ ಒಬ್ಬ ರಾಜ ಇದ್ದ. ಅವ್ನ ಹೆಂಡತಿ ರಾಣಿ ಒಳ್ಳೆ ಚೆಂದುಳ್ಳಿ ಹುಡ್ಗಿ. ಆದ್ರೆ ಗರ್ತಿ ಅಲ್ಲ. ಅವಳ್ಗೆ ರಾಜನ್ಮೇಲೆ ಇಸ್ವಾಸ ಇರ್ಲಿಲ್ಲ. ರಾಜನ ಕುದುರೆ ತಿಕ್ಕೊನ ಮೇಲೆ ಇಸ್ವಾಸ ಇತ್ತು. ಒಂದು ದಿವಸ ರಾಜ ಬೇಟೆಗೆ ಹೋಗಿದ್ದ. ಹೋಗುವಾಗ ಕತ್ತಿ ಮರ್ತ್ಬಿಟ್ಟು

ಹೋಗಿದ್ದ. ಅದ್ನ ತರೋಕೆ ಒಬ್ಬ ಸಿಪಾಯನ್ನ ಅರಮನೆಗೆ ಅಟ್ಟಿದ. ಸಿಪಾಯಿ ಬಂದು ನೋಡ್ತಾನೆ. ರಾಣಿಯೂ ಕುದುರೆ ತಿಕ್ಕೋನೂ ಒಟ್ಟಾಗಿ ಮಾತಾಡಿ ಕೊತಾ ಇದ್ರು. ಸಿಪಾಯಿ ಧರ್ಮರಾಯನಂತ ಮನಸ. ಮಾತಾಡ್ದೆ ಹೊರಟು ಹೋದ. ಆದ್ರೆ ರಾಣಿಗೂ ಕುದ್ರೆ ತಿಕ್ಕೋನ್ಗೂ ಗಾಬ್ರಿ ಹತ್ಕೊಂಡ್ತು. ಸಿಪಾಯಿ ರಾಜನ್ಗೆ ಹೇಳ್ಬಿಟ್ರೆ ತಮ್ಕೆಲ್ಸ ಮುಗೀತು ಅಂತ ಅವರ್ಗೆ ಕೈಕಾಲು ನಡ್ಕ ಹತ್ಕೊಂಡ್ತು. ರಾಜ ಮನೆಗೆ ಬಂದ್ಮೇಲೆ ರಾಣಿ, ಸಿಪಾಯಿ ತನ್ನ ಕೆಣಕಿದ ಅಂತ ಚಾಡಿ ಹೇಳಿದ್ಲು. ರಾಜನಿಗೆ ಕೋಪ ಬಂತು. ಅವ ಪಟ್ಟಣದ ಹೆಬ್ಬಾಗಲಲ್ಲಿ ಕಲ್ಕಂಬ ನೆಡಿಸಿ ಅದಕ್ಕೆ ಸಿಪಾಯಿಯನ್ನು ನೇತ ಹಾಕಿಸಿ ಕೊಲ್ಲಿಸಿ ಬಿಟ್ಟ. ಜನ್ಗಳ್ಗೆ ಗಾಬ್ರಿ ಆಗ್ಲಿ ಅಂತ ಆ ಹೆಣ ಅಲ್ಲೆ ಆರ್ತಿಂಗ್ಳು ನೇತ್ಬಿಟ್ಟ. ಒಂದ್ದಿವ್ಸ ಬಿರ್ಗಾಳಿ ಎದ್ತು. ಹೆಣ ಆ ಕಡೆ ಇಂದ ಈ ಕಡ್ಗೂ, ಈ ಕಡೆ ಇಂದ ಆ ಕಡ್ಗೂ ತೂಗಾಡ್ತಾ ಇತ್ತು. ಆಗ ಒಂದ್ಮೊಲ ಆ ಕಡೆಯಿಂದ ಓಡ್ತಾ ಬಂತು. ಹೆಣ ನೇತ್ಹಾಕಿದ ಹಗ್ಗ ಮಳೇಲಿ ನೆಂದು ಬಿಸ್ಲಲ್ಲಿ ಒಣಗಿ ಜೀರ್ಣವಾಗಿತ್ತು. ಮೊಲ ಹೆಣದ ಹತ್ತಿರಕ್ಕೆ ಬರೊ ಹೊತ್ಗೆ ಸರಿಯಾಗಿ ಹೆಣ್ದ ಹಗ್ಗ ಕಿತ್ತು ಅದು ಮೊಲದ ಮೇಲೆ ಬಿತ್ತು. ಮೊಲ ಅಲ್ಲೆ ಸಾಯ್ತು. ರಾಜ್ನ ಕುದ್ರೆ ತಿಕ್ಕೋನು ಅದ್ನ ಅರ್ಮನೆಗೆ ತಕೊಂಡ್ಹೋದ. ರಾಣಿ ಅದ್ನ ಅಡ್ಗೆ ಮಾಡಿದ್ಲು. ಅವ ತಿನ್ತಾ ಇರೋವಾಗ "ಅವ ಸತ್ತು ಆರ್ತಿಂಗ್ಳು. ಅವ ಕೊಂದ್ಮೊಲ ಇವತ್ತು ತಿಂದೊ" ಎಂದಳು.

ಮೋಜಿನಿದಾರರು "ಪರವಾಯಿಲ್ಲ. ನಾಣಿ, ಈ ಸುಬ್ಬೇಗೌಡ ಹೇಳೋ ಕತೆಗ್ಳು ನಮಗೆ ಯಾರ್ಗೂ ತಿಳ್ದೇ ಇಲ್ಲ. ಇದ್ನೆಲ್ಲಾ ಇವ ಎಲ್ಲಿ ಕಲಿತನೊ" ಎಂದರು. ನಾಣಿಯು

ಕತೆ ಎಲ್ಲಿ ಕಲ್ಯೋದು
ಬೇಕಾದ್ರೆಲ್ಲಾ ಬುಕ್ಕೊಕ್ವೇದು
ಬರ್ತದೆ ನಿಂಗೆ ಬರಿ ಏದು
ಸುಬ್ಬನ್ಕತೆಗೆ ಇಲ್ಲಾ ಓದು

ಎಂದನು. ಸುಬ್ಬನು "ಹೌದು ಬುದ್ದಿ ಒಪ್ದೆ. ನಮ್ಮ್ಕತೆಗೆ ಯಾವ ಬುಕ್ಕೂ ಓದೋ ಹಂಗಿಲ್ಲ. ನಮ್ಮವ್ವ ಹೇಳ್ತಿದ್ದ ಕತೇನೆಲ್ಲಾ ಬರ್ಕೊಂಡಿದ್ರೆ ಹತ್ತು ಮಹಾಭಾರ್ತ ಆಗ್ತಿತ್ತು" ಎಂದನು. ಮೋಜಿನಿದಾರರು ಮೀಸೆ ತಿರುವಿಕೊಂಡು ಎಲೆ ಅಡ್ಕೆ ಅಗಿಯುತ್ತಾ "ವಿದ್ಯವೇ ಇಲ್ಲದ ಇವನು ಇಷ್ಟೊಂದು ಮಾತ್ನಾಡ್ತಾನಲ್ಲ" ಎಂದರು. ನಾಣಿಯು ಮತ್ತೆ

ಅವನ್ಗೆ ಯಾಕೆ ವಿದ್ದೆ
ನುಂಗೋದು ರಾಗಿ ಮುದ್ದೆ
ಹುದ್ದೆಗ್ಬೇಕು ವಿದ್ದೆ
ಕೊಡೋರ್ಯಾರು ಹುದ್ದೆ

ಎಂದನು.

* * * *

ಈ ದಿವಸ ಇಲ್ಲಿ ಒಂದು ಪಂಚಾಯಿತಿಯು ಸೇರಿತು. ಕಾಸೆ ಗಿಡ್ಡನ ಹೊಲಕ್ಕೆ ಕುರಿತಿಮ್ಮನು ಎತ್ತು ಪೋಲಿ ಬಿಟ್ಟಿದ್ದ. ಕಾಸೇ ಗಿಡ್ಡ ಅದನ್ನು ಕಟ್ಟಿ ಹಾಕಿ ನಮ್ಮನ್ನೆಲ್ಲಾ ಪಂಚಾಯಿತಿಗೆ ಕೂರಿಸಿದ. ಪಂಚಾಯಿತಿ ಸೇರಿದವು. ಕುರಿತಿಮ್ಮ "ನನ್ನ ಕೊಟ್ಟಿಗೆಗೆ ಬಾಗಿಲು ಇಲ್ಲ. ಹರಕೊಂಡು ಬಂದಿರಬೇಕು, ಸ್ವಾಮಿ, ಈ ಸಲ ಮಾಪ್ ಮಾಡಬೇಕು" ಎಂದ. ಸುಬ್ಬೇಗೌಡನು. "ಥೂ, ಅಯೋಗ್ಯ, ಅಧಮ, ನೀನು ಕಟ್ಟೆಹಾಕೋದು ಜನಿವಾರದಲ್ಲಿ. ಹೇಳೋರಿಲ್ಲ, ಕೇಳೋರಿಲ್ಲ. ಬಾಳೆನಾರಿನಲ್ಲಿ ಕಟ್ಟೆಹಾಕು. ಊರುಸುತ್ತ ಕಂಡಿ. ರಾತ್ರಿಯಾಗುತ್ತಲು ಪೋಲಿ. ಇದೇ ರೀತಿ ಇದ್ದರೆ ನಾವು ಪೂರೈಸೋದು ಯಾವಾಗ. ಹೋಗಲಿ ಈಗಲೂ ಸಭಾಸ್ಥಾನಕ್ಕೆ ಅಡ್ಡಬಿದ್ದು ಬೇಡಿಕೋ. ಅವರು ಹೊಟ್ಟೇಲಿ ಹಾಲು ಹಾಕಿಕೊಂಡು ನಿನ್ನನ್ನು ಕ್ಷಮಿಸಿದರೆ ಕ್ಷಮಿಸಲಿ" ಎಂದು ಹೇಳಿದನು. ಇಂಜನ್ ಯಾಲಕ್ಕಿಯು "ಈ ಸೂಳೇಮಗನಿಗೆ ರಿಯಾಯತಿ ಮಾಡಕೂಡದು. ಎತ್ತನ್ನು "ಹಲ್‌ಹಾಜ್" (ಹರಾಜು) ಮಾಡಿಬಿಡಬೇಕು. ಇವನ್ನ ಈ ದಿವಸದಿಂದ ಬೇರೆ ಇಡಿಸಬೇಕು. ಇಂಥಾರಿಗೆ ರಿಯಾಯಿತಿ ಕೊಡೋಕಾಗದು. ಐದು ರೂಪಾಯಿ ಮಡಗಲಿ" ಎಂದು ಕೂಗಿಬಿಟ್ಟನು. ಅದೇ ಮಂಜೂರಾಗಿ ಹೋಯಿತು. ಕುರಿತಿಮ್ಮನು ಬಡಿದಾಡಿದನು. ದಣ್ಣೆಕ್ಕಿದರೆ ಈ ಮೊದಲನೆಯ ಅಪರಾಧ ವಜಾ, ಎಂದಾಯಿತು. ಅಲ್ಲಿದ್ದವರು ಹಾರುವರು ನಾವು ನಾಲ್ಕು ಜನ. ನೂರಾರು ಚತುರ್ಥರು. ಒಬ್ಬ ವದನ ಕೇಶಿ. ಐದಾರು ಆದಿಕರ್ನಾಟಕರು. ಇಷ್ಟು ಜನಕ್ಕೂ ಊರಿನಲ್ಲಿ ಜೋರಾದವನೆಂದು ಹೆಸರಾದ ಕುರಿತಿಮ್ಮ ದಣ್ಣೆಕ್ಕಲು ಹಿಂಜರಿದ. ಸುಬ್ಬೇಗೌಡನು "ಮುಠ್ಠಾಳ, ಒಕ್ಕಲಿಗ ಜಾತಿಗೆ ತಿಳಿವಳಿಕೆ ಇಲ್ಲ. ಹತ್ತೂ ಜನಗೋಳ ಮಧ್ಯೆ ದೇವರು ಅವನೆ: ಇಲ್ಲಿ ಅಡ್ಡಬಿದ್ರೆ ಇವನ ಅಪ್ಪನಮನೆ ಗಂಟು ಹೋಯ್ತುಂತೆ. ಎರಡಾಣೆ ಬೇಕಾದರೆ ಯಾರ ಕಾಲಿಗಾದರೂ ಮುತ್ತಿಕ್ಕುತಾನೆ—ಮಗ ಅಡ್ಡಬೀಳಲೇಬೇಕು" ಎಂದ. ಸರಿ, ಪಂಚಾಯಿತಿದಾರರೇ ಪ್ರತಿ ಒಬ್ಬರೂ ತಮ್ಮ ತಮ್ಮ ಯೋಗ್ಯತೆಗಳನ್ನೂ ಅರ್ಹತೆ

ಗಳನ್ನೂ ಗುಣಗಳನ್ನೂ ತಾವೇ ವರ್ಣಿಸಿಕೊಳ್ಳಬೇಕಾಯಿತು. ಆದರೂ ಕುರಿ ತಿಮ್ಮ ಅಡ್ಡಬೀಳಲಿಲ್ಲ. ಅವನು "ಪಂಚಾಯಿತಿ ಎದುರಿಗೆ ತಪ್ಪನ್ನು ಒಪ್ಪಿಕೊಂಡು ಎಲೆ, ಅಡಿಕೆ ಕೊಡುವುದು ಅವಮಾನತಿ. ಹೀಗೇನಾದರೂ ನಾನು ದಣ್ಣೆಕ್ಕಿದರೆ ನಮ್ಮ ಜನರಲ್ಲಿ ನನಗೆ ಗೌರತ್ತು ಇರುವುದಿಲ್ಲ. ಆದ್ದರಿಂದ ನಾನು ಎಲೆ, ಅಡಿಕೆ ಮಡಗಿ ದಣ್ಣೆಕ್ಕುವುದಿಲ್ಲ" ಎಂದುಬಿಟ್ಟನು. ಪಂಚಾಯ್ತಿಯವರು ಅವನಿಗೆ ಐದು ರೂಪಾಯಿ ದಂಡವನ್ನು ವಿಧಿಸಿದರು. ತಿಮ್ಮ ಮನೆಗೆ ಹೋದ; ಅಲ್ಲಿ ಇದೇ ವಿಚಾರದಲ್ಲಿ ಅವನಿಗೂ ಅವನ ಹೆಂಡತಿಗೂ ವಾಗ್ವಾದವಾಯಿತು. ಹೆಂಡತಿಯು "ಉಡೋಕೆ ಎರಡು ವರಸದಿಂದ ಶಾಲೆ ಇಲ್ಲ. ಐದು ರೂಪಾಯಿ ಎಲ್ಲಿಂದ ತರ್ತೀರಿ. ಊರೋರ್ಗೆ ದಣ್ಣೆಕ್ಕಿದ್ರೆ ತಪ್ಪೇನು ? ಆವತ್ತು ಪಟೇಲ್ರೆ ದಣ್ಣೆಕ್ಕಲಿಲ್ವೆ ? ಹೋಗಿ" ಎಂದು ಚೆನ್ನಾಗಿ ಕಿವಿ ಹಿಂಡಿದಳು. ತಿಮ್ಮನಿಗೆ ಸಿಟ್ಟು ಹತ್ತಿತ್ತು. "ಏ ಯಾರ್ತಾವ ಹೇಳ್ತಿಯ. ನನ್ಗೆ ಬುದ್ದಿ ಹೇಳೋಕೆ ಬಂದ್ಯ" ಎಂದುಕೊಂಡು ಅವಳಿಗೆ ಒಂದು ಮಡಗಿದನು. ಅವನ ಹೆಂಡತಿಗೂ ಸಿಟ್ಟು ಹತ್ತಿ ಅವಳೂ ಮಗ್ಗುಲಲ್ಲಿದ್ದ ಉಳುವ ಕೋಲಿನಿಂದ ದನಗಳನ್ನು ಚಚ್ಚುವಂತೆ ತಿಮ್ಮನಿಗೆ ನಾಲ್ಕಾರು ಏಟುಗಳನ್ನು ಆವೇಶದಿಂದ ಕೊಟ್ಟುಬಿಟ್ಟಳು. ತಿಮ್ಮನ ಬೆನ್ನಿನ ಮೇಲೆ ಬಾಳೆಕಾಯಿಯಂತೆ ಬಾಸುಂಡೆ ಬಂದಿತ್ತು. ರಾತ್ರಿ ಹನ್ನೊಂದು ಗಂಟೆಗೆ ತಿಮ್ಮ ಮತ್ತೆ ಬಂದನು. ಸುಬ್ಬೇಗೌಡನ ಹೊರತು ಉಳಿದವರೆಲ್ಲಾ ಮನೆಗಳಿಗೆ ಹೊರಟುಹೋಗಿದ್ದರು. ತಿಮ್ಮ ನಡೆದ ಸಂಗತಿಯನ್ನೆಲ್ಲಾ ಹೇಳಿ ಹೊದೆದಿದ್ದ ಹಚ್ಚಡವನ್ನು ತೆಗೆದು ಬೆನ್ನಿನ ಬಾಸುಂಡೆಗಳನ್ನು ತೋರಿಸಿ ದಣ್ಣೆಕ್ಕಿದನು. ಅವನ ಜುಲ್ಮಾನೆಯೂ ವಜಾ ಆಯಿತು.

*   *   *   *

ಈ ಸಾಯಂಕಾಲ ಮೂಡ್ಲಗಿರಿಯು ದೇವಸ್ಥಾನದಲ್ಲಿ ಕುಳಿತಿದ್ದಾಗ ರಂಗ ಸಾಮಿಯನ್ನು "ಯಾಕೊ ಸ್ವಲ್ಪ ಹೊಟ್ಟೆ ಕೆರೆತ; ಎರಡು ಕಾಫಿ ನೀರು ಮಾಡಿಕೊಡಿ" ಎಂಬುದಾಗಿ ಕೇಳಿದನು. ಸಾಹೇಬರು "ಕಾಫಿ ಕುಡಿದರೆ ಹೊಟ್ಟೆ ಕೆರ್ತ ಹೋಗೋದಿಲ್ಲ, ನನ್ನ ಹತ್ತಿರ ಒಂದು ಇಂಗ್ಲಿಷ್ ಮದ್ದು ಇದೆ. ಅದನ್ನು ತೆಗೆದುಕೊಂಡರೆ ಹೊಟ್ಟೆನೋವು ಭಸ್ಮವಾಗುತ್ತೆ" ಎಂದರು. ಸುಬ್ಬೇಗೌಡನು "ಇಂಗ್ಲಿಷಿನೋರ ಮದ್ದು ನಮ್ಗೆ ಹಿಡಿಯೊಲ್ಲ ದೇವರು. ಇಂಗ್ಲಿಷಿನೋರ ಮದ್ದು ಇಂಗ್ಲಿಷಿನೋರ್ಗೆ ಹಿಡೀತವೆ. ನಮ್ಮ ದೇಸ್ಕೆ ಆ ಮದ್ದು ಭಾರಿ ತಂಪು. ನಮಗೆ ನಮ್ಮ ಅಪ್ಪ, ಅಜ್ಜನ ಕಾಲದಿಂದ ಬಂದ ಆರ್ಯವೈದ್ಯ(ಆಯುರ್ವೇದ) ಮಾತ್ರ ಹಿಡೀತದೆ" ಎಂದನು. ಸಾಹೇಬರು "ಆಯುರ್ವೇದ, ಹಕೀಮ,

ನೇಟಿವ್ ವೈದ್ಯ, ಅದು ಇದು ಅಂತ ಸುಮ್ನೇ ಕೂಗ್ತೀರಿ. ಆಯುರ್ವೇದದವರಿಗೆ–ತಲೆಗೆಲ್ಲಾ ಒಂದೇ ಸಾಸ್ರ, ಅನ್ನೊ ಹಾಗೆ. ಯಾವ ರೋಗಕ್ಕಾದರೂ ಒಂದೇ ಔಷಧಿ. ನಾಡಿ ನೋಡೋದು, ಹೊಟ್ಟೆ ಹಿಸಕೋದು, ಹೊಟ್ಟೇಲಿ ಗೆಡ್ಡೆ ಇದೆ ಅನ್ನೋದು, ಸರಿ ಕರ್‍ರಗೆ ಗುಳಿಗೆಗಳು, ಅದನ್ನು ಜೇನುತುಪ್ಪದೊಡನೆ ತಿನ್ನಬೇಕು. ಇದೇ ಔಷಧಿ. ಪಥ್ಯ, ಎಣ್ಣೆ ಕುಂಬಳಕಾಯಿ ಬೇಡ. ಎಲ್ಲರಿಗೂ ಒಂದೇ ಪಥ್ಯ. ತಲೆನೋವು, ಹೊಟ್ಟೆನೋವು, ಅಜೀರ್ಣ, ನಿಶ್ಯಕ್ತಿ ಯಾವುದಕ್ಕಾದರೂ ಗುಳಿಗೆ, ಜೇನುತುಪ್ಪ, ಇದೇಯೆ. ಆದರೆ ಇಂಗ್ಲಿಷ್ ಡಾಕ್ಟರ್ನ ನೋಡಿ ಎಂಥೆಂಥಾ ಕೆಲ್ಸ ಮಾಡ್ತಾರೆ. ಔಷಧಿಗಳನೆಲ್ಲಾ ಸೀಸೆಗಳಲ್ಲಿ ಪಸುಕ್ಲೀನಾಗಿ ಇಟ್ಟಿರ್‍ತಾರೆ. ಎಂತೆಂಥಾ ಕಾಯಿಲೆಯೂ ಅವರ ಕೈಲಿ ಗುಣವಾಗಿ ಹೋಗುತ್ತೆ” ಎಂದರು. ಸುಬ್ಬೇಗೌಡನು “ನಮ್ಮ ಜನ ಅಂತ ಮೋಡಜನ, ಆರ್‍ಯವೈದ್ಯದ ಮಹತ್ವ ಗೊತ್ತಿಲ್ಲ. ದಣಿಗಳ್ಗೆ ತಿಳೀದೆ? ನವಾಬ ಟೀಪುಸುಲ್ತಾನರ ಅರಮನೇಲಿ ಒಬ್ಬ ನೇಟಿವ್ ಪಂಡಿತ ಇದ್ದ. ಅಂತಃಪುರದ ಹೆಂಗಸರಿಗೆ ಔಷಧಿ ಕೊಡಬೇಕಾದ್ರೆ, ಹೆಂಗಸ್ರನ್ನ ನೋಡೋಕೆ ಅವನ್ನ ಬಿಡ್ತಾ ಇರ್‍ಲಿಲ್ಲ. ಆದ್ರು ಔಸ್ತಿ ಕೊಡ್ಲೇಬೇಕು. ಹೆಂಗಸರು ಕೈಗೆ ಹಗ್ಗದ ಒಂದು ತುದಿ ಕಟ್ಟಿಕೊಳ್ಳೋ ಹಾಗೆ ಹೇಳಿ ಮತ್ತೊಂದು ತುದೀನ ತಾನು ಕೈಯಲ್ಲಿ ಹಿಡಕೊಂಡು ಅದರಿಂದ್ಲೆ ನಾಡಿ ಗತಿ ಶಿಳಿದು ಔಷಧಿ ಕೊಡ್ತಾ ಇದ್ದ. ಅಂತಃಪುರದ ಸ್ತ್ರೀಯರ ರೋಗಗಳೆಲ್ಲಾ ಗುಣವಾಗ್ತಾ ಇದ್ವು. ಒಂದು ದಿನ ಭಾರಿ ಚತುರಳಾದ ಹೆಣ್ಣೊಬ್ಬಳು ‘ಪಂಡಿತ ಹುರಿ ಇಂದ ನಾಡಿಗತಿ ತಿಳಿದು ಔಷಧ ಕೊಡ್ತಾನೆ. ಇವನಿಗೆ ಮೋಸ ಪಡಿಸ್ಬೇಕು’ ಅಂತ ಒಳಗಡೆ ಒಂದು ಕೋಣನ್ನ ನಿಲ್ಲಿಸಿ ಅದರ ಕಾಲಿಗೆ ಹುರಿಯ ಒಂದು ತುದಿ ಕಟ್ಟಿ ಮತ್ತೊಂದು ತುದೀನ ಪಂಡಿತ್ನ ಕೈಗೆ ಕೊಟ್ಟಳು. ಪಂಡಿತ ಹುರೀನ ಹಿಡ್ಕೊಂಡು ಸ್ವಲ್ಪ ಹೊತ್ತು ನೋಡಿ ‘ಇದೇನು; ಕೋಣನ ನಾಡಿ ಆಡ್ತ ಇದೆಯೆಲ್ಲಾ’ ಎಂದ. ಇದರಿಂದ ಎಲ್ಲರಿಗೂ ಆಶ್ಚರ್ಯವಾಯಿತು” ಎಂದ. ರಂಗಸಾಮಿಯು ಇದೆಲ್ಲಾ ಬರಿಯ ಕತೆ. ಕತೆಗೆ ಕಾಲಿಲ್ಲ ಎಂದನು. ಸುಬ್ಬೇಗೌಡನು ತಿರಸ್ಕಾರದಿಂದ “ಸ್ವಾಮಿ, ಮತ್ತೊಂದು ವಿಚಾರ ಕೇಳಿ. ಈಗ ಮುವ್ವತ್ತು ವರ್ಷದ ಮಾತು. ಆಗ ನಮ್ಮ ಹೊಲದಲ್ಲಿ ಸೊಪ್ಪಿನ ಕಡ್ಲೆ ಬಹಳ ಭರಾಟೆಯಾಗಿ ಬೆಳೆದಿತ್ತು. ನಾನು ನಿತ್ಯ ಒಂದೊಂದು ಹೊರೆ ಕಡಲೆಕಾಯಿ ತಿನ್ನತೊಡಗಿದೆ. ಇದರಿಂದ ಮೈ ಬಾತುಕೊಂಡಿತು. ಯಾವ ಪೈಲ್ವಾನನಿಗೂ ಇಲ್ಲದಷ್ಟು ಮಟ್ಟಿಗೆ ದಪ್ಪವಾಯಿತು ನನ್ನ ತೊಡೆ. ಆದರೆ ಮೈಯ್ಯಲ್ಲಿ ಸ್ವಲ್ಪವೂ ಶಕ್ತಿಯಿರಲಿಲ್ಲ. ಆಸ್ಪತ್ರೆ ಔಷಧಿ ಒಂದು ವರ್ಷ ಕುಡಿದೆ. ಏನೂ ಕೆಂದಲಿಲ್ಲ.

ಒಬ್ಬ ನೇಟಿವ್ ಪಂಡಿತನ ಮನೆಗೆ ಹೋದೆ. ಅವ ಒಂದು ಔಷಧಿ ತೆಗೆದ. ಅದು ಸೀಮೆ ಎಣ್ಣೆ ಡಬ್ಬದ ತಳದಲ್ಲಿ ಕರ್‍ರಗೆ ಟಾರಿನಂತೆ ಅಂಟಿಕೊಂಡಿತ್ತು. 'ನಿನ್ನ ಮೈಯಲ್ಲಿ ವಾಯು, ಇನ್ನೇನೂ ಇಲ್ಲ. ಪ್ರತಿ ದಿನವೂ ಎದ್ದು ಮೊದಲಕರು ಹಸುವಿನ ಹಾಲನ್ನೆಲ್ಲಾ ಪೂರ್ಣವಾಗಿ ತೆಗೆದುಕೊ. ಎಲ್ಲಾ ಹಾಲನ್ನೂ ನೀನೇ ತೆಗೆದುಕೊಳ್ಳಬೇಕು. ಕರೆದ ಹಾಲನ್ನು ಒಲೆಯ ಮೇಲಿಟ್ಟು ಅದಕ್ಕೆ ಸ್ವಲ್ಪ ಹುಣಸೆಹಣ್ಣು ಹಾಕು. ಹಾಲು ಒಡೆಯುತ್ತೆ. ಮೇಲಿನ ಕೆನೆಯನ್ನೆಲ್ಲಾ ಚೆಲ್ಲಿ ಬಿಟ್ಟು ಉಳಿದ ತಿಳಿಗೆ ಈ ಔಷಧಿ ಹಾಕಿ ಕುಡಿ. ಹೀಗೆ ಒಂಭತ್ತು ದಿನ ಮಾಡಿದರೆ ಗುಣವಾಗುವುದು' ಎಂದು ಹೇಳಿದ. ಅದರಂತೆ ಮಾಡಿದೆ. ಒಂದು ತಿಂಗಳೊಳಗೆ ವಾಯುವೆಲ್ಲಾ ಕರಗಿ ನಿಜವಾಗಿಯೂ ಪೈಲವಾನನಂತೆಯೇ ಆದೆ" ಎಂದನು. ಮೋಜಿನಿದಾರರು "ಅದೆಲ್ಲಾ ಪೂರ್ವಕಾಲದ ಪಂಡಿತರ ಸಮಾಚಾರನಯ್ಯ. ಈಗ ಅಂತ ಪಂಡಿತರು ಇಲ್ಲ" ಎಂದರು. ಸುಬ್ಬೇಗೌಡನು "ದಣಿಗಳ ಮಾತಿಗೆ ಉತ್ತರ ಹೇಳಿದೆ ಅಂತ ಕೋಪಿಸ್ಕೊಬಾರದು. ಯಾಕಿಲ್ಲ ? ಈಗಲೂ ಅವರೆ; ಮನಸ ತಿನ್ನೋ ಪದಾರ್ಥ ನೋಡಿ. ಇವನಿಗೆ ರೋಗ ಬರ್‍ತಯ್ತೆ ಇಲ್ಲ ಅನ್ನೊದ್ನ ಹೇಳೊ ಪಂಡಿತರು ನಮ್ಮೂರ್‍ರಲ್ಲೆ ಇದ್ರು. ನಮ್ಮೂರ್‍ರಲ್ಲಿ ಹಿಂದೆ ಒಬ್ಬ ಪಂಡಿತ ಇದ್ದ. ಅವನ್ಮನೆ ಮಗ್ಗಲಲ್ಲಿ ಅವನ್ಮನ್ಗೆ ಸೇರಿದ್ಹಾಂಗೆ ನಮ್ಮ ಸಾವಕಾರ್‍ರ ಮನೆ ಇತ್ತು. ಪಂಡಿತ್ನ ಹೆಂಡ್ತಿ ಪಂಡಿತನ್ನ 'ನನಗೆ ಒಂದು ಭಂಗಾರದ ಡಾಬು' ಬೇಕು ಅಂತ ನಿತ್ಯ ಪೀಡಿಸ್ತ ಇದ್ದಳು. ಬಡಪಾಯಿ ಪಂಡಿತನಿಗೆ ಚಿನ್ನದ ಡಾಬಿಗೆ ದುಡ್ಡು ಎಲ್ಲಿಂದ ಬರಬೇಕು ? ಆಗಿನ ಕಾಲ ಏನ್ಕಾಲ ಸ್ವಾಮಿ. ಜನ ಕಾಯಿಲೆ ಬೀಳ್ತಾ ಇರ್‍ಲಿಲ್ಲ. ಎಂಭತ್ತು ತೊಂಭತ್ತು ನೂರು ವರ್ಷಗಳವರೆಗೆ ಬದುಕಿ ಅನಾಯಾಸವಾಗಿ ಸಾಯ್ತಾ ಇದ್ರು. ಕಿವಿನೋವು, ಮೂಗುನೋವು ಬಂದ್ರೆ ಜನಾ ಔಸ್ತೀನೆ ತಕೋತಾ ಇರಲಿಲ್ಲ. ದೇವರಿಗೆ ಹಣ್ಣುಕಾಯಿ ಮಾಡಿಸಿದ್ರೆ ನೋವು ಹೋಗ್ತಿತ್ತು. ಹಿಂಗಿರೋವಾಗ ಪಂಡಿತ್ನ ಹೆಂಡ್ತಿ ಅವರ್‍ಗೆ ಭಂಗಾರದ ಡಾಬು ಸಿಕ್ಕೋದೆಲ್ಲಿ ? ಸಾಹುಕಾರನ್ಗೆ ರೋಗ ಬಂದಾತೆ ಅಂತ ಪಂಡಿತ ಕಾಯ್ತಾ ಇದ್ದ.

ಒಂದು ರಾತ್ರಿ ಪಂಡಿತರು 'ಏನು ಲೋಕದಲ್ಲಿ ಯಾರ್‍ಗೂ ಖಾಯಿಲೈ ಬರೋದಿಲ್ಲವೆಲ್ಲಾ ? ಅಂಥಂಥಾ ಘನಾಂದಾರಿ ರೋಗಗಳೆಲ್ಲ ಯಾವ ಲೋಕ ಸೇರ್‍ಕೊಂಡ್ವೊ' ಎಂದು ಯೋಚಿಸುತ್ತಾ ಕುಳಿತಿದ್ದರು. ಆ ಹೊತ್ತಿಗೆ ಸಾಹುಕಾರ್‍ರು ತಮ್ಮ ಮನೇಲಿ ಊಟಕ್ಕೆ ಕೂತರು. ಅವರು ಮನೆಯಲ್ಲಿ ಆಡುತ್ತಿದ್ದ ಮಾತುಗಳು ಪಂಡಿತರ ಕಿವಿಗೆ ಕೇಳಿಸುತ್ತಿದ್ದವು. ಸಾಹುಕಾರ್‍ರು ಎಸರಿನಲ್ಲಿ ಅನ್ನ ಉಂಡ ಮೇಲೆ

ಹೆಂಡ್ತೀನ 'ಲೇ ಮೊಸರು ತೆಗೆದುಕೊಂಡು ಬಾ' ಎಂದರು. ಪಂಡಿತರು ಉತ್ಸಾಹ ದಿಂದ ತಮ್ಮ ಹೆಂಡತಿಯನ್ನು ಕರೆದು 'ಲೇ ನಿನಗೆ ಭಂಗಾರದ ಡಾಬು ಬಂತು' ಎಂದು ಹೇಳಿದರು. ಒಂದು ಗಳಿಗೆಯನಂತರ ಸಾಹುಕಾರ್‍ರು ಮತ್ತೆ ಹೆಂಡತಿ ಯನ್ನು ಕರೆದು 'ಲೇ ಒಂದು ಹೆರಳೆಕಾಯಿ ಉಪ್ಪಿನಕಾಯಿ ತೆಗೆದುಕೊಂಡು ಬಾ' ಎಂದರು. ಕೂಡಲೇ ಪಂಡಿತರು ನಿರುತ್ಸಾಹದಿಂದ ತಮ್ಮ ಹೆಂಡತಿಯನ್ನು ಕರೆದು 'ಲೇ ನಿನ್ನ ಭಂಗಾರದ ಡಾಬು ಹೋಯಿತು' ಎಂದರು."

ಸಾಹೇಬರು "ಅದೆಲ್ಲಾ ಬರಿಕತೆ ಬಿಡಯ್ಯ, ಮೊಸರು ಹಾಕ್ಕೊಂಡರೆ ರೋಗ ಬರೋದಿದ್ರೆ ನಾವೆಲ್ಲಾ ಸತ್ತು ಎಷ್ಟೋ ದಿನ ಆಗಿರಬೇಕಾಗಿತ್ತು. ನಾವು ನಿತ್ಯ ರಾತ್ರಿ ಮೊಸರು ಹಾಕ್ಕೊಂಡು ಊಟಮಾಡ್ತಾ ಇಲ್ವೆ. ನಿಮ್ಮ ಆಯುರ್ವೇ ದದಲ್ಲಿ ಇರೋದೆಲ್ಲಾ ಇಂತಾ ಕತೇನೆ. ಕತೆ ಇಂದ್ಕರೋಗ ಎಂದಿಗೂ ವಾಸಿಯಾ ಗೊಲ್ಲ" ಎಂದರು. ಸುಬ್ಬೇಗೌಡನು "ಹಾಗಲ್ಲ ದೇವರು, ನಾವು ನಿತ್ಯ ಮೊಸರು ಹಾಕ್ಕೊಂಡು ಊಟಮಾಡಿದ್ರೂ ನಮಗೆ ಸಾವು ಬಂದಿಲ್ಲ ನಿಜ. ನಮಗೆ ಅದು ಒಟ್ಟಿದೆ. ಆದರೆ ಪಂಡಿತ ಹೇಳ್ದಂಗೆ ಸಾವುಕಾರ ಮೊಸರಲ್ಲಿ ಊಟ ಮಾಡಿದ್ರೆ ಅವ ಖಂಡಿತ ಖಾಯಿಲೆ ಬೀಳ್ತಿದ್ದ. ಈಗ ನೋಡಿ; ಒಬ್ಬ ರಾಜನ ಹತ್ರ ಭಾರಿ ಸಂಬಳದ ಒಬ್ಬ ವೈದ್ಯ ಇದ್ದ. ರಾಜ ಅವನನ್ನ ಪರೀಕ್ಷೆ ಮಾಡಬೇಕು ಅಂತ 'ಮನುಷ್ಯ ಏನ್ಮಾಡಿದ್ರೆ ಸಾಯ್ತಾನೆ' ಅಂದ. ಪಂಡಿತ ರಾಜನ್ನ ಮನಸ್ಸಿನಲ್ಲಿ ಮಡಿಕೊಂಡು 'ಮನಸ ಬೆಳಗ್ಗಿಂದ ಮಧ್ಯಾನಗಂಟ ಬಿಸ್ಲಲ್ಲಿ ಹೊಲ ಉತ್ತು ರಾಗಿ ರೊಟ್ಟಿ ತಿಂದು ಮಜ್ಜಿಗೆ ಕುಡಿದ್ರೆ ಸಾಯ್ತಾನೆ' ಅಂತ ಹೇಳಿದ. ರಾಜ ಹತ್ತು ಹನ್ನೆರಡು ದಿನ ಬಿಟ್ಟು ಕುದುರೆಮೇಲೆ ಕೂತ್ಕೊಂಡು ದೇಶ ನೋಡೋಕೆ ಹಳ್ಳಿ ಕಡೆ ಹೊರಟ. ಅಲ್ಲಿ ಅನೇಕ ಕಡೆ ತಿರುಗಿದ ಮೇಲೆ ಮಧ್ಯಾಹ್ನದ ಬಿಸಿಲು ಜೋರಾದ್ದರಿಂದ ರಾಜ ಒಂದು ಮರದ ನೆರಳಿನಲ್ಲಿ ಕುದುರೆ ಬಿಟ್ಟ. ಗರಿಕೆ ಮೇಲೆ ಕೂತ್ಕೊಂಡು ದಣಿವಾರಿಸಿಕೊಳ್ಳುತ್ತಿದ್ದ. ಅವನ ಎದುರಿಗೆ ಒಬ್ಬ ಒಕ್ಕಲಿಗ ರಾಗಿ ಹೊಲವನ್ನು ಉಳುತ್ತಿದ್ದ. ಅಷ್ಟು ಹೊತ್ತಿಗೆ ಒಕ್ಕಲಿಗನಿಗೆ ಮನೆಯಿಂದ ಹಿಟ್ಟು (ಆಹಾರ) ಬಂತು. ಅವನ ಹೆಂಡತಿಯೇ ಹಿಟ್ಟನ್ನು ಒಂದು ಕುಕ್ಕೆಯಲ್ಲಿ ತಲೆಯ ಮೇಲೆ ಹೊತ್ತುಕೊಂಡು ಕೈಯಲ್ಲಿ ಒಂದು ತಂಬಿಗೆ ನೀರನ್ನು ಹಿಡಿದುಕೊಂಡು ಬಂದಿದ್ದಳು. ಒಕ್ಕಲಿಗ ಮರದ ನೆರಳಿನಲ್ಲಿ ಕುಳಿತುಕೊಂಡು ಅವಳು ತಂದಿದ್ದ ರಾಗಿ ರೊಟ್ಟಿಯನ್ನು ನಿಧಾನವಾಗಿ ಅಗಿದು ತಿಂದ. ಒಂದು ಮಡಕೆ ನೀರು ಮಜ್ಜಿಗೆಯನ್ನು ಕುಡಿದ. ಅನಂತರ ಒಂದು ಚೂರು ಗೋಟು ಅಡಕೆ ಒಂದು ಒಣಗಿದ ವಿಳ್ಳೆದೆಲೆ ಚೂರು ಬಾಯಿಗೆ ಹಾಕಿಕೊಂಡು ಅವನ್ನ ಅಗಿಯುತ್ತಾ

ತೃಪ್ತನಾಗಿ ಹೆಂಡತಿಯೊಂದಿಗೆ ಮಾತನಾಡತೊಡಗಿದ.

ರೈತ ಬೆಳಗಿನಿಂದ ಉತ್ತು ರಾಗಿ ರೊಟ್ಟಿಯನ್ನು ತಿಂದು ಮಜ್ಜಿಗೆ ಕುಡಿದಿದ್ದರಿಂದ ಅವ ಸಾಯುವುದು ಖಂಡಿತ ಅಂತ ದೊರೆ ಅವನನ್ನು ಕಾಯುತ್ತಾ 'ಇನ್ನೇನು ಈಗ ಸತ್ತಾನು, ಇನ್ನೊಂದು ಗಳಿಗೆಗೆ ಸತ್ತಾನು, ಅಂತ ಯೋಚಿಸುತ್ತಿದ್ದ. ಆದರೆ ಒಕ್ಕಲಿಗ ಸಾಯಲಿಲ್ಲ. ಅವನು ಸ್ವಲ್ಪಹೊತ್ತು ಸುಧಾರಿಸಿಕೊಂಡು ಮತ್ತೆ ಮೊದಲಿನಂತೆ ಉತ್ಸಾಹದಿಂದ ಬಿಸಿಲಿನಲ್ಲೆ ಉಳುವುದಕ್ಕೆ ಪ್ರಾರಂಭಿಸಿದ. ದೊರೆಯು ಆ ಸಾಯಂಕಾಲದವರೆಗೆ ಅಲ್ಲೇ ಇದ್ದ. ರೈತ ಸಾಯಂಕಾಲದವರೆಗೆ ಹೊಲ ಉತ್ತು ದೃಢಕಾಯನಾಗಿ ನೇಗಿಲನ್ನು ಹೊತ್ತುಕೊಂಡು ಪದಗಳನ್ನು ಹೇಳುತ್ತಾ ಮನೆಗೆ ಹೋದ.

ಮಹಾರಾಜರಿಗೆ ಕೋಪ ಬಂತು. 'ಎಲ, ನನ್ನ ಅರಮನೆಯಲ್ಲಿ ಸಾವಿರಾರು ರೂಪಾಯಿ ಸಂಬಳ ತಿನ್ನುತ್ತಿರುವ ವೈದ್ಯ ಸುಳ್ಳು ಹೇಳಿಬಿಟ್ಟನೆಲ್ಲಾ ಅವನಿಗೆ ತಕ್ಕದ್ದು ಮಾಡಿಸಬೇಕು' ಎಂದುಕೊಂಡು ಅವರು ಅರಮನೆಗೆ ಹೋಗಿ ಪಂಡಿತನಿಗೆ ತತ್‌ಕ್ಷಣ ಹೇಳಿಕಳುಹಿಸಿದರು. ಮಹಾರಾಜರ ಆರೋಗ್ಯ ಕೆಟ್ಟಿರಬಹುದೆಂದು ತಿಳಿದು ವೈದ್ಯನು ಗಾಬರಿಯಿಂದ ಅರಮನೆಗೆ ಬಂದನು. ಮಹಾರಾಜರು ಕೋಪದಿಂದ ಕಣ್ಣನ್ನು ಕೆಂಪಗೆ ಮಾಡಿಕೊಂಡು ಕುಳಿತಿದ್ದರು. ವೈದ್ಯ ಕೈಮುಗಿದುದನ್ನು ಗಣಿಸದೆ 'ನಿನ್ನ ವೈದ್ಯವೆಲ್ಲಾ ಕಾಡು ವೈದ್ಯ' ಎಂದು ಆ ಮಧ್ಯಾಹ್ನ ತಾವು ನೋಡಿದುದನ್ನೆಲ್ಲಾ ಹೇಳಿ ನನಗೆ ಈ ರೀತಿ ಸುಳ್ಳು ಹೇಳಿದ್ದಕ್ಕೆ ನಿನ್ನ ತಲೆ ತೆಗೆಸುತ್ತೇನೆ' ಎಂಬುದಾಗಿ ಗರ್ಜಿಸಿದರು. ವೈದ್ಯನು ಸ್ವಲ್ಪವೂ ಹೆದರದೆ 'ಮಹಾಸ್ವಾಮಿಯವರು ದುಡಕಬಾರದು. ಸ್ವಾಮಿಯವರ ದೇಹಸ್ಥಿತಿಗೆ ಅಪಾಯವಾವುದೆಂಬುದನ್ನು ನಾನು ಹೇಳಿದೆನೇ ಹೊರತು ರೈತ ಯಾತರಿಂದ ಸಾಯುತ್ತಾನೆಂದು ಹೇಳಲಿಲ್ಲ. ಒಂದೊಂದು ದೇಹಕ್ಕೆ ಒಂದೊಂದು ಆಹಾರ, ಒಂದೊಂದು ನೀರಿನಿಂದ ಅಪಾಯವಿದೆ. ಒಂದು ದೇಹಕ್ಕೆ ವಿಷವಾದುದೇ ಮತ್ತೊಂದು ದೇಹಕ್ಕೆ ಅಮೃತವಾಗಬಹುದು. ಈಗ ಮಹಾಸ್ವಾಮಿಯವರು ನನ್ನ ಪ್ರಾರ್ಥನೆಯನ್ನು ಲಾಲಿಸೋಣವಾಗಲಿ; ಮಹಾಸ್ವಾಮಿಯವರು ಯಾವ ಒಕ್ಕಲಿಗನನ್ನು ಪರಾಂಬರಿಸಿದರೊ ಅವನನ್ನು ಕರೆಸಿ ಅವನನ್ನು ಒಂದು ವರ್ಷ ರಾಜಭೋಗದಲ್ಲಿ ಅರಮನೆಯಲ್ಲಿ ಇಡಿಸಲಿ. ಅನಂತರ ನಾನು ಹೇಳಿದಂತೆ ಬಿಸಲಿನಲ್ಲಿ ಕೆಲಸಮಾಡಿ ರಾಗಿರೊಟ್ಟಿ ತಿಂದು ಮಜ್ಜಿಗೆ ಕುಡಿದರೆ ಅವನಿಗೆ ಅಪಾಯ ಒದಗುವುದೋ ಇಲ್ಲವೋ ಪರೀಕ್ಷಿಸಬಹುದು' ಎಂದು ಅರಿಕೆ

ಮಾಡಿದನು.

ಮಹಾರಾಜರಿಗೆ ವೈದ್ಯನ ಮಾತನ್ನು ಪೂರ್ಣವಾಗಿ ಪರೀಕ್ಷಿಸಲೇಬೇಕೆಂದು ಆಸೆಯಿತ್ತು. ಅವರು ಅದರಂತೆ ರೈತನನ್ನು ಅರಮನೆಗೆ ಕರಸಿ ಅವನನ್ನು ರಾಜ ಭೋಗದಲ್ಲಿ ಇಡಿಸಿದರು. ರೈತನಿಗೆ ಕೆಲಸಮಾಡುವ ಅಭ್ಯಾಸವೇ ಮರೆತು ಹೋಯಿತು. ಅವನ ಮೈಯ್ ಸುಖಕ್ಕೆ ಒಗ್ಗಿಕೊಂಡು ಅವನಿಗೆ ನಿಂತರೆ ಕೂತರೆ ಆಯಾಸವಾಗುತ್ತಿತ್ತು. ಅವನು ಬಿಸಲಿಗೆ ತಲೆಹಾಕದೇ ಒಂದು ವರ್ಷ ಕಾಲ ಸುಖವಾಗಿ ಅರಮನೆಯಲ್ಲಿ ಬೆಳೆದನು.

ಅನಂತರ ಒಂದು ದಿವಸ ಬೆಳಿಗ್ಗೆ ಒಂಭತ್ತು ಗಂಟೆ ಸಮಯದಲ್ಲಿ ಮಹಾ ರಾಜರು ರೈತನನ್ನು ಹೊಲ ಊಳಲು ಆಜ್ಞೆಮಾಡಿದನು. ರೈತ ಒಂದು ವರ್ಷ ದಿಂದ ಸುಖದಲ್ಲಿ ಬೆಳೆದಿದ್ದ. ಅವನು ಬಿಸಲಿಗೆ ಬಂದುದು ಅದೇ ಮೊದಲು. ಉತ್ತು ಚೆನ್ನಾಗಿ ಅಭ್ಯಾಸವಿದ್ದ ಅವನು ಬಹಳ ಉತ್ಸಾಹದಿಂದ ಬಿಸಿಲಿನಲ್ಲಿ ಮೂರುನಾಲ್ಕು ಗಂಟೆಗಳು ಉತ್ತ. ಇಂತ ಬಲವಾದ ಎತ್ತಿದ್ದರೆ ಊಟ ನಿದ್ರೆ ಬಿಟ್ಟು ಉಳುವುದೂ ಆನಂದ ಎಂದ. ಅವನಿಗೆ ಬಹಳ ಆಯಾಸವಾಗಿ ಮೈಯಲ್ಲಿ ಬೆವರು ಧಾರೆಧಾರೆಯಾಗಿ ಹರಿಯುತ್ತಿತ್ತು. ಉಳುವುದು ಮುಗಿದ ಮೇಲೆ ಅವ ನಿಗೆ ರಾಗಿಯ ರೊಟ್ಟಿಯನ್ನೂ, ಮಜ್ಜಿಗೆಯನ್ನೂ ಆಹಾರವಾಗಿ ಕೊಟ್ಟರು. ರೊಟ್ಟಿಯನ್ನು ತಿಂದು ಮಜ್ಜಿಗೆಯನ್ನು ಕುಡಿದ ಹತ್ತು ನಿಮಿಷಗಳೊಳಗಾಗಿ ಅವನು ತಲೆತಿರುಗಿ ಜ್ಞಾನತಪ್ಪಿ ನೆಲಕ್ಕೆ ಬಿದ್ದನು. ದೊರೆಯು ಬಹಳ ಗಾಬರಿ ಯಿಂದ ಪಂಡಿತನನ್ನು ಕರೆಸಿದನು. ಪಂಡಿತನು ನೋಡಿ 'ನನ್ನ ಮಾತು ಸ್ವಾಮಿ ಯವರಿಗೆ ಒಪ್ಪಿಗೆಯಾಯಿತೆ ?' ಎಂದನು. ಮಹಾರಾಜರು ಕಾತರರಾಗಿ 'ಒಪ್ಪಿಗೆ ಯಾಯಿತಯ್ಯ, ಒಪ್ಪಿಗೆಯಾಯಿತು. ಆದರೆ ಈ ಬಡಪ್ರಾಣಿಯನ್ನು ಉಳಿಸು. ಅವನನ್ನ ಕೊಂದ ಪಾಪ ನನ್ನ ತಲೆಗೆ ಕಟ್ಟಬೇಡ' ಎಂದರು. ಪಂಡಿತನು 'ಭಯ ವಿಲ್ಲ ಪ್ರಭೂ, ಅವನನ್ನು ಹೀಗೆಯೇ ಬಿಟ್ಟರೆ ಸಾಯುವುದು ಸಿದ್ಧ. ಆದರೆ ಈಗಲೇ ಅವಶ್ಯಕವಾದ ಚಿಕಿತ್ಸೆಯನ್ನು ಮಾಡಿದರೆ ಅವನು ಬದುಕಿಕೊಳ್ಳುತ್ತಾನೆ' ಎಂಬುದಾಗಿ ಹೇಳಿ ರೈತನಿಗೆ ಅವಶ್ಯಕವಾದ ಚಿಕಿತ್ಸೆಗಳನ್ನು ಮಾಡಿ ಅವನನ್ನು ಬದುಕಿಸಿದನು'—ಎಂದನು. ಮೋಜಿನಿದಾರರು "ಏನೊಪ್ಪ, ನಿಮ್ಮ ಕತೆಗಳು. ಅಂತೂ ನನಗೆ ನಮ್ಮ ಪಂಡಿತರಲ್ಲಿ ಹೆಚ್ಚು ನಂಬಿಕೆ ಇಲ್ಲ. ಆದರೆ ನಿನ್ನ ಮಾತನ್ನು ಕೇಳಿದ ಮೇಲೆ ಸ್ವಲ್ಪ ಸ್ವಲ್ಪ ಅವರನ್ನೂ ನಂಬಬೇಕೆಂದು ಕಾಣುತ್ತೆ" ಎಂದರು.

* * * *

ನೆನ್ನೆ ದಿವಸ ಮತ್ತೆ ಎರಡು ಪಂಚಾಯ್ತಿಗಳು ನಡೆದವು. ಮೊದಲನೆಯದು

ಈ ರೀತಿ—

ಈ ಊರಿನಿಂದ ನಾಲ್ಕು ಒಕ್ಕಲಿಗರು ದುಡ್ಡು ಸಂಪಾದಿಸಲು ಮಲೆಶೀಮೆಗೆ ಹೋಗಿದ್ದರು. ಒಬ್ಬ 'ಫರಂಗಿ ಸಾಬ'ನ ಬಳಿ ಕೆಲಸಕ್ಕೆ ಸೇರಿದರು. ಸಾಬ ಬಹಳ ಜರಬಾದ ಆಸಾಮಿ. ಕೆಲಸ ಒದ್ದು ತೆಗೀತಾ ಇದ್ದ. ತನ್ನ ತೋಟದಿಂದ ಒಂದು ಮೈಲಿ ದೂರದಲ್ಲಿ ದೊಡ್ಡದೊಂದು ಬಂಗಲೆ ಕಟ್ಟಿಸಿದ್ದ. ಅಲ್ಲಿಯ ರೈತರು ಅದಕ್ಕೆ ದೆವ್ವದ ಮನೆಯೆಂದು ಕರೆಯುತ್ತಿದ್ದರು. ಸಾಬ ಮೊದಲು ವಾಸವಾಗಿದ್ದ. ಆ ಮನೆಯಲ್ಲೇ ಅವನ ಹೆಂಡತಿ ಸತ್ತಿದ್ದಳು. ಸತ್ತು ದೆವ್ವವಾಗಿದ್ದಳು. ಆದುದರಿಂದ ಸಾಬ ಆ ಮನೆ ಬಿಟ್ಟು ಬೇರೆ ಮನೆಯಲ್ಲಿ ವಾಸವಾಗಿದ್ದ. ಈಗ ನಮ್ಮ ರೈತರು ಸಾಬನ ದೆವ್ವದ ಮನೆಯಲ್ಲೇ ಇಳಿಯಬೇಕಾಯಿತು. ಒಂದು ದಿವಸ ರಾತ್ರಿ ಒಂದು ಮಂಚದ ಮೇಲೆ (ಅಗಲ ಒಂದೂವರೆ ಅಡಿ ಮಾತ್ರ) ಮಲಗಿರುವಾಗ ದೆವ್ವ ಬಂದು ನಿಂಗನನ್ನು (ಇಂಜನ್ ಯಾಲಕ್ಕಿ ಮಗ) ನೂಕಿತು. ಮಂಚದ ಎರಡು ಕಡೆಗಳಲ್ಲಿಯೂ ಜನ ಮಲಗಿದ್ದರು. ನಿಂಗ ಅವರ ಮೇಲೆ ಬಿದ್ದ. ಬಿದ್ದ ಭ್ರಮೆಯಲ್ಲಿ ತನ್ನ ಜನರೇ ಅಲ್ಲಿ ಮಲಗಿರುವರೆಂಬುದನ್ನು ಮರೆತ. ಮೇಲಿನಿಂದ ಬಿದ್ದ ಅವನನ್ನು ಉಳಿದ ಮೂರು ಜನರೂ ಸೇರಿ ದೆವ್ವವೆಂದುಕೊಂಡೇ ಚೆನ್ನಾಗಿ ತದಕಿದರು. ಮಲಗಿದರು. ಬೆಳಗ್ಗೆ ಎದ್ದು ನೋಡಲಾಗಿ ತಮ್ಮ ಗುಂಪಿನಲ್ಲಿದ್ದ ನಿಂಗನು ಸತ್ತಂತೆ ಬಿದ್ದಿದ್ದನು. ಎಲ್ಲರೂ ಯೋಚಿಸಿದರು. ಸುಮಾರು ನಾನೂರು–ಐನೂರು ರೂಪಾಯಿ ಕೂಲಿ ಕೆಲಸ ಮಾಡಿದ್ದರು. ಕೈಗೆ ಕಾಸು ಬಂದಿರಲಿಲ್ಲ. ಫರಂಗಿ ಸಾಬನಿಗೆ ಈ ಸುದ್ದಿ ತಿಳಿದರೆ ತಮ್ಮನ್ನು ಪಿಸ್ತೂಲಿನಿಂದ ಸುಡುವನೆಂದು ಬೆದರಿ ಹೇಳದೆ ಕೇಳದೆ ಊರುದಾರಿ ಹಿಡಿದು ಹಳ್ಳಿಯನ್ನು ಸೇರಿಕೊಂಡರು.

ಬೆಳಗಾಯಿತು. ಸಾಬನ ಕಡೆ ಆಳು ಬಂದು ಅವರನ್ನು ಕರೆದನು. ಜವಾಬಿಲ್ಲ. ಒಳಕ್ಕೆ ಬಂದು ನೋಡಿದನು, ಹೆಣ ಬಿದ್ದಿತ್ತು. ಸಾಬನಿಗೆ ತಿಳಿಯಿತು. ಸಾಬನು ಕೂಡಲೇ ತನ್ನ ವೈದ್ಯನನ್ನು ಕರೆಸಿ ನಿಂಗನನ್ನು ಪರೀಕ್ಷೆ ಮಾಡಿಸಿದನು. ನಿಂಗ ಸತ್ತಿರಲಿಲ್ಲ. ಒಂದು ತಿಂಗಳಿನೊಳಗೆ ಅವನು ಚೆನ್ನಾಗಿ ಚೇತರಿಸಿಕೊಂಡನು. ಅನಂತರ ಸಾಹೇಬನಿಂದ ಬರಬೇಕಾದ ಎಲ್ಲಾ ಹಣವನ್ನೂ ವಸೂಲ್ಮಾಡಿಕೊಂಡು ಊರಿಗೆ ಬಂದನು. ಅವನನ್ನು ಕಂಡು ಅವನ ಕೊಲೆಗಾರರು ಮೊದಲು ಸ್ವಲ್ಪ ಹೆದರಿದರು. ಆಮೇಲೆ ದುಡ್ಡಿನ ವಿಚಾರ ಚರ್ಚೆ ಬಂತು. ನಿಂಗನು ಒಂದು ಕಾಸನ್ನೂ ಕೊಡಲು ಒಪ್ಪಲಿಲ್ಲ. ಸಾಹೇಬನನ್ನೂ ಡಾಕ್ಟರನ್ನೂ ಸಾಕ್ಷಿ ಇಟ್ಟು, ನೀವು ಖೂನಿಮಾಡಲು ಪ್ರಯತ್ನಿಸಿದಿರೆಂದು

ಫಿರ್ಯಾದು ಮಾಡುತ್ತೇನೆ ಎಂದು ಹೆದರಿಸಿದನು. ಅವರು "ಅಲ್ಲಿ ದೆವ್ವ ಇದೆ, ಅದೇ ನಿನ್ನ ಹಿಡಿದಿತ್ತು. ನಮ್ಮ ಕಡೆಯ ಪುಂಡರನ್ನು ಕಂಡರೆ ಆ ಕಡೆ ಹೆಣ್ಣು ದೆವ್ವಗಳು ಅವರನ್ನು ಬಿಡುವುದಿಲ್ಲ" ಎಂದರು. ಸರಿ, ನಮ್ಮ ಮುಂದೆ ಪಂಚಾಯ್ತಿಗೆ ಬಂತು. ನಿಂಗನ ಆರೈಕೆಗೂ ಅವನು ಏಟು ತಿಂದುದಕ್ಕೂ ಅವನಿಗೆ ದಂಡವನ್ನು ಕೊಡಿಸಿ ಉಳಿದ ಹಣವನ್ನು ಅವರವರ ಹಿಸ್ಸೆಗೆ ತಕ್ಕಂತೆ ವಿಭಾಗ ಮಾಡಿಸಿ ಕೊಟ್ಟೆವು.

ನಮ್ಮ ಎದುರಿಗೆ ಬಂದಿದ್ದ ಎರಡನೆಯ ಪಂಚಾಯ್ತಿ ರಂಗನಬೆಟ್ಟದ ದೇವರದು. ರಂಗನಬೆಟ್ಟದ ದೇವರು ಪೂಜಾರಿಗಳೊಂದಿಗೆ ಇಲ್ಲಿಗೆ ಬಂದು ವರ್ಷಕ್ಕೆ ಒಂದು ತಿಂಗಳು, ಎರಡು ತಿಂಗಳು ಇರುವುದು ಪದ್ಧತಿ. ಈ ವರ್ಷ ಅವರು ಮೂರು ಪೂಜಾರಿಗಳೊಂದಿಗೆ ಬಂದಿದ್ದರು. ಪ್ರತಿಯೊಬ್ಬನ ಮನೆಯಲ್ಲಿಯೂ ಒಂದೊಂದು ದಿವಸ ಸೇವೆ. ಈ ದಿನದ ಸೇವೆ ಸುಬ್ಬಾಚಾರಿ ಮನೆಯದು. ಸುಬ್ಬಾಚಾರಿ ಈ ಬೆಳಿಗ್ಗೆ ತನ್ನ ಮಗನ ಕೈಲಿ ಮೂರು ಸೇರು ಅಕ್ಕಿ, ಮೂರು ತೆಂಗಿನಕಾಯಿ, ಮೂರು ಸೇರು ಬೆಲ್ಲ, ಮೂರಚ್ಚೇರು ಬೇಳೆ, ಮೂರು ಪಾವು ಕಡ್ಲೆ ಬೇಳೆ, ಒಂದು ಪಾವು ಸಂಬಾರ ಬೀಜ ಇವುಗಳನ್ನು ಹೊರಿಸಿಕೊಂಡು ಬಂದು ಅದನ್ನು ಅರ್ಚಕರ ಎದುರಿನಲ್ಲಿ ಇಟ್ಟು ಲೆಕ್ಕ ಒಪ್ಪಿಸಿಹೋದನು. ಅಲ್ಲಿಗೆ ಸೇವೆಯ ಪೂರ್ಣಾಂಕವು ಮುಗಿಯಿತು. ಒಬ್ಬ ಕುಳವಾಡಿಯು ದೇವರನ್ನು ಕಾಯುತ್ತಿರಲು ಪೂಜಾರಿಗಳು ತಮ್ಮ ಊಟ, ಉಪಚಾರ ತೀರಿಸಿಕೊಂಡು ಮಧ್ಯಾಹ್ನ ಮೂರು ಗಂಟೆಗೆ ಬರುವುದು ಮಾಮೂಲು.

ಆದರೆ ಈ ದಿನ ಪೂಜಾರಿಗಳು ಅಡಿಗೆ ಮಾಡಲಿಲ್ಲ. ಕಾರಣ "ಕುಳುವಾಡಿ ಸಾಕಾದಷ್ಟು ಸೌದೆ ತರಲಿಲ್ಲ. ಅಲ್ಲದೆ ಸುಬ್ಬಾಚಾರಿ 'ಪಡಿಭತ್ಯ' ಸರಿಯಾಗಿ ಕಳುಹಿಸಿಲ್ಲ. ಆದುದರಿಂದ ನಾವು ಬೇಸುವುದಿಲ್ಲ. ದೇವರು ಇರುವಷ್ಟು ದಿನ ವಿರಲಿ. ನಾವು ದೇವರ ಹೆಸರಿನ ಮೇಲೆ "ಉಪ್ಪೋಸ್ಯ' ಮಾಡುತ್ತೇವೆ. ಆ ದೇವರಿಗೆ ಸತ್ಯ ಇದ್ರೆ ನಮಗೆ ಹಸಿವಾಗಬೇಡ" ಎಂದು ಬಿಟ್ಟರು. ಪಂಚಾಯಿತಿ ಸೇರಿತು. ಪಟೇಲನು "ಈ ಪೂಜಾರಿ ಅಯ್ಯಗಳಿಗೆ ಹೇಳೋರು ಇಲ್ಲ, ಕೇಳೋರೂ ಇಲ್ಲ. ಈ ಪರಪಂಚದಲ್ಲಿ ದೈವಭಕ್ತಿ ಕಮ್ಮಿಯಾಗಿ ಬಿಟ್ಟಿದೆ. ಅಂಥಾದ್ದರಲ್ಲಿ ಏನ್ರಯ್ಯ ನೀವು, ರೈತರು 'ಪಡಿ' ಸರಿಯಾಗಿ ಕೊಡಲಿಲ್ಲವೆಂದು ಗೋಳಾಡಿಸ್ತೀರಿ. ಹೀಗೆಲ್ಲಾ ಮಾಡಿದರೆ ನಮಗೆ ದೇವರೂ ಬೇಡ, ದಿಂಡರೂ ಬೇಡ, ಗೋವಿಂದ, ಸಾಕು" ಎಂದನು. ಕೊನೆಗೆ ಎಲ್ಲರೂ ಸೇರಿ ಗ್ರಾಮದ ಪೂಜಾರಿಯು ಪ್ರತಿ ದಿವಸ ಬೆಳಿಗ್ಗೆ ಎದ್ದು ರೈತನ ಮನೆಗೆ ಹೋಗಿ, ರೈತನನ್ನು

ಒಪ್ಪಿಸಿ 'ಪಡಿ'ಯನ್ನು ತಾನೇ ತರಬೇಕೆಂದು ತೀರ್ಮಾನವಾಯಿತು. ಪಟೇಲ ತನ್ನ ಅಯ್ಯೇರು ತೀರ್ಮಾನ ಹೇಳಿದ. "ದೇವರ ಅಂಸದ ಪೂಜಾರಯ್ಯ ಉಪಾಸ ಮಾಡಿದ್ರೆ ನಮಗೆಲ್ಲಾ ಕೇಡು. ಪೂಜಾರಯ್ಯ ಇದ್ರೆ ಸರಿಯಾಗಿ ಅಡಿಗೆ ಮಾಡಿ ಕೊಂಡಿರಲಿ. ಇಲ್ಲದಿದ್ರೆ ಅವರನ್ನು ಕುಳುವಾಡಿಗಳು ಅವರ ದೇವರ ಸಮೇತ ಕಳಿಸಿ ಬಿಡಲಿ" ಎಂದ. ಪೂಜಾರಿಗಳು ಸಮಾಧಾನದಿಂದ ಒಪ್ಪಿಕೊಂಡರು.

೬

ನೆನ್ನೆ ಸಾಯಂಕಾಲದಿಂದಲೇ ಮಳೆ ಜೋರಾಗಿ ಬರುವ ಸೂಚನೆಗಳಿದ್ದವು.

ರಾತ್ರಿ ಆಕಾಶವು ಮೋಡಗಳಿಂದ ತುಂಬಿಕೊಂಡು ಕಪ್ಪಾಯಿತು. ಗುಡುಗು ಭಯಂಕರವಾಗಿ ಶಬ್ದ ಮಾಡುತ್ತಿದ್ದಿತು. ಮಿಂಚು ಅಪ್ಪಳಿಸುತ್ತಿದ್ದಿತು. ಈ ದೇವಸ್ಥಾನಕ್ಕೆ ಬಾಗಿಲು ಇಲ್ಲ. ಈಶಾನ್ಯ ದಿಕ್ಕಿನ ಮಿಂಚು ಪದೇ ಪದೆ ಕಣ್ಣನ್ನು ಕುಕ್ಕುವಂತೆ ಹೊಳೆಯುತ್ತಿದ್ದಿತು. ನೆನ್ನೆ ಮಧ್ಯಾಹ್ನ ಗಾವಿಬಿಯು ನಮ್ಮ ಊರಿಗೆ ಹೋದನು. ನಾಣಿಯೂ ನಾನೂ ಇಬ್ಬರೇ ದೇವಸ್ಥಾನದಲ್ಲಿ ರಾಯರು ಹಿಂದಲ ಮನೆಯಲ್ಲಿ ಮಲಗಿದ್ದರು. ಪದೇ ಪದೆ ಸಿಡಿಲು ಹೊಡೆಯುತ್ತಿದ್ದಿತು. ನಮ್ಮ ಕಡೆ ಸಿಡಿಲಿನ ಅವಾಂತರ ಬಹಳ ಹೆಚ್ಚು. ಅದು ವರುಷಕ್ಕೆ ಒಬ್ಬನ ಪ್ರಾಣವನ್ನು ತಿಂದೇ ತಿನ್ನುತ್ತದೆ. ನಮ್ಮ ಕಡೆಯಲ್ಲಿ ಸಿಡಿಲನ್ನು ಕಂಡರೆ ಎಲ್ಲರೂ ಹೆದರುತ್ತಾರೆ. ನಾಣಿಗೂ ನನಗೂ ಬಹಳ ಭಯವುಂಟಾಯಿತು. ದೇವಸ್ಥಾನಕ್ಕೆ ಬಾಗಿಲಿದ್ದಿದ್ದರೆ ಪರವಾಯಿರಲಿಲ್ಲ. ಆದರೆ ಬಾಗಿಲಿಲ್ಲದುದರಿಂದ ಯಾವಾಗ ಸಿಡಿಲು ಬಂದಿತೋ ಎಂದು ನಾವು ಬೆದರುತ್ತಿದ್ದೆವು. ಇದ್ದಕ್ಕಿದ್ದಂತೆಯೇ ಭಯಂಕರವಾದ ಬಿರುಗಾಳಿ ಎದ್ದಿತು. ದೇವಸ್ಥಾನದ ಒಲೆಯಲ್ಲಿದ್ದ ಬೂದಿಯು ನಮ್ಮ ಮುಖದ ಮೇಲೆ ಹಾರಿ ಬಂತು. ಒಮ್ಮಿಂದೊಮ್ಮೆ ಸಿಡಿಲು ಶಬ್ದ ಮಾಡಿತು. ದೇವಸ್ಥಾನದಲ್ಲಿ ಒಂದು ಗಳಿಗೆ ಪ್ರಚಂಡವಾದ ಹಳದಿಯ ಪ್ರಕಾಶವುಂಟಾಯಿತು. ನಮಗೆ ಅರೆಜೀವವುಂಟಾಯಿತು. ಅಂತೂ ಎಲ್ಲೋ ಆಗ ಸಿಡಿಲು ಬಡಿದಿದೆ ಯೆಂಬುದು ಖಂಡಿತವಾಗಿದ್ದಿತು. ಆ ರಾತ್ರಿಯೆಲ್ಲಾ ನಾವು ಹಾಗೂ ಹೀಗೂ ಕುಳಿತುಕೊಂಡೇ, ಯಮನ ದವಡೆಯಲ್ಲಿದ್ದಂತೆ ರಾತ್ರಿಯನ್ನು ಕಳೆದವು. ಬೆಳಗಾದ ಮೇಲೆ ರಾತ್ರಿ ಅಷ್ಟು ಹತ್ತಿರದಲ್ಲಿ ತೋರಿದ ಸಿಡಿಲು ಎಲ್ಲಿ ಬಿದ್ದಿದ್ದಿತೆಂದು ನೋಡಿದುದರಲ್ಲಿ ದೇವಸ್ಥಾನದ ಎದುರಿಗೆ ಎರಡು ಮೈಲಿ ದೂರದಲ್ಲಿದ್ದ

ಬೆಟ್ಟದ ಬಂಡೆಗೆ ಹೊಡೆದು ಒಂದು ಬಂಡೆಯನ್ನು ಚೂರು ಚೂರು ಮಾಡಿದ್ದಿತು.

ಬೆಳಗಾದ ಕೂಡಲೇ ನಾವು ಪದ್ಧತಿಯಂತೆ ಕೆರೆಗೆ ಹೋದೆವು. ಬಯಲ ಹಳ್ಳಿಯ ಚಿಕ್ಕ ತೊರೆಯು ತುಂಬಿ ತುಳುಕಾಡುತ್ತಾ, ಕುಣಿಯುತ್ತಾ, ಹರಿಯುತ್ತಿದ್ದಿತು. ಕಪ್ಪೆಗಳು ಎಲ್ಲಾ ಕಡೆಯೂ ಒಟಗುಟ್ಟುತ್ತಿದ್ದುವು. ಒಣಗಿದ್ದ ಭೂಮಿಯ ಮೇಲೆ ಮಳೆಯ ಹನಿಯು ಬಿದ್ದು ಸುವಾಸನೆಯು ಎಲ್ಲಾ ಕಡೆಗೂ ಹರಡುತ್ತಿದ್ದಿತು. ಹಕ್ಕಿಗಳು ಇಂಪಾಗಿ ಗಾನಮಾಡುತ್ತಿದ್ದುವು. ಬಯಲು ಹಳ್ಳಿಯ ಕಾಡಿನ ಚಿಕ್ಕ ಚಿಕ್ಕ ಹಳ್ಳಿಗಳೆಲ್ಲಾ ತುಂಬಿಹೋಗಿದ್ದುವು. ಮಳೆಯು ಬಿದ್ದುದರಿಂದ ಎಲ್ಲಾ ಕಡೆಯೂ ಹೊಸ ಜೀವವೂ ಹೊಸ ಚೈತನ್ಯವೂ ಉಂಟಾಗಿದ್ದಿತು. ಗುತ್ತಿಗಳಿಂದಲೆಲ್ಲಾ ಮಳೆಯ ಹನಿಗಳು ನೆಲಕ್ಕೆ ಬೀಳುತ್ತಿದ್ದುವು. ನಾವು ಆ ಆನಂದವನ್ನೆಲ್ಲಾ ನೋಡಿಕೊಂಡು ಮನೆಗೆ ಹಿಂದಿರುಗಿದೆವು.

ರಾಯರು ಮಾತನಾಡುವುದರಲ್ಲಿ ನಿಸ್ಸೀಮರಾಗಿದ್ದರು. ಅವರ ಹರಟೆಗಳೆಲ್ಲಾ ಬರಿಯ ಕೆಲಸಕ್ಕೆ ಬಾರದ ಹರಟೆಗಳೇ ಆಗಿದ್ದುವು. ಆದರೂ ಅವರು ಯಾವ ವಿಚಾರದಲ್ಲೂ ತಮಗೆ ತಿಳಿಯದುದೇ ಇಲ್ಲವೆಂಬ ರೀತಿಯಲ್ಲಿ ಮಾತನಾಡುತ್ತಿದ್ದರು. ಈ ದಿವಸ ನಾಣಿಯು ರಾಯರೊಂದಿಗೆ "ನಿನ್ನೆ ರಾತ್ರಿಯ ಸಿಡಿಲು ಬಹಳ ಭಯಂಕರವಾದುದು. ಬೆಟ್ಟದ ಬಂಡೆಯನ್ನೇ ಒಡೆದುಬಿಟ್ಟಿದೆ. ಯಾರಾರಿಗೆ ಏಟು ಬಿದ್ದಿದೆಯೋ" ಎಂದನು. ರಾಯರು ಕೂಡಲೇ "ಇಂಗ್ಲಿಷಿನವರಿಗೆ ತಿಳಿಯದ್ದೇ ಇಲ್ಲ. ಸಿಡಿಲನ್ನು ಹಿಡಿದಿದ್ದಾರೆ" ಎಂದರು. ನಾಣಿಯು "ಹಾ, ಹಾಗೆಯೇ?" ಎಂದನು. ರಾಯರ ಮಾತು ನನಗೆ ಬಹಳ ವಿನೋದವಾಗಿ ಕಂಡಿತು. ಸಿಡಿಲು ಒಂದು ವಿಧವಾದ ಶಕ್ತಿ. ಅದು ಭೂಮಿಯ ಕಡೆಗೆ ನುಗ್ಗುವಾಗ ದಾರಿಯಲ್ಲಿ ಏನು ಸಿಕ್ಕಿದರೆ ಅದನ್ನು ಭಸ್ಮಮಾಡುತ್ತದೆ. ಅವನ್ನೇ ಸಿಡಿಲು ಎನ್ನುವುದು, ಎಂದೂ ಮುಂತಾಗಿ ನಮ್ಮೂರಲ್ಲಿ ಇಂಗ್ಲಿಷ್ ಪಂಡಿತ ನೆನಿಸಿರುವ ವಾಸು ಹೇಳಿದ್ದನು. ನಾಣಿಗೆ ಈ ವಿಚಾರ ಗೊತ್ತಿತ್ತೋ ಇಲ್ಲವೋ ಕಾಣೆ. ಆದರೆ ಸಾಹೇಬರ ಭಾವನೆಯಲ್ಲಿ ಸಿಡಿಲು ಒಂದು ಪದಾರ್ಥ. ಅವರು ಈ ರೀತಿ ಹೇಳಿದರು "ಸಿಡಿಲು ಏನು ಬಲ್ಲಿರಾ? ಹಾರೆ" ಎಂದರು. ನಾಣಿಯೂ ಆಶ್ಚರ್ಯದಿಂದ "ಹಾಗೆಯೇ" ಎಂದನು. ರಾಯರು "ಸಿಡಿಲು ಮೇಲಿನಿಂದ ಹೊಡೆದು ಭೂಮಿಯನ್ನು ಹೊಕ್ಕು ತಳಕ್ಕೆ ಪಾತಾಳದವರೆಗೆ ಇಳಿದು ಬರುತ್ತದೆ" ಎಂದರು. ನಾಣಿಯು ಇದ್ದರೂ ಇರಬಹುದು' ಎಂದನು. ಅನಂತರ ಸಾಹೇಬರು "ವೈರ್‌ಲೆಸ್ ಟೆಲಿಗ್ರಫಿ ಎನ್ನುವುದು ಗೊತ್ತೆ" ಎಂಬುದಾಗಿ ಕೇಳಿದರು. ನಾನು "ಇದ್ಯಾಕೋ ವಿಜ್ಞಾನದ ಮೂಲಕ್ಕೆ ಬಂತು" ಎಂದುಕೊಂಡೆ. ನಾಣಿಯು

"ತಿಳಿಯದು" ಎಂದನು. ಸಾಹೇಬರು ನಾಲ್ಕು ಕಡೆಯೂ 'ಸದ್ದು' ಎಂದು ಹೇಳುವ ತೆರದಲ್ಲಿ ನೋಡಿದರು. ನಾಣಿಯಲ್ಲದೆ ಅವರ ಸುತ್ತ ಪದ್ಧತಿಯಂತೆ ಆರೇಳು ಮಂದಿ ಕುಳಿತಿದ್ದೆವು. ರಾಯರ ಮಾತನ್ನು ಕೇಳುವುದಕ್ಕಾಗಿ ಎಲ್ಲರೂ ಉಸಿರಾಡದೆ ನಿಶ್ಶಬ್ದರಾಗಿದ್ದರು. ಅನಂತರ ಸಾಹೇಬರು ಗಂಭೀರವಾಗಿ "ವೈರ್ ಲೆಸ್ ಎನ್ನುವುದು ಮತ್ತೇನೂ ಅಲ್ಲ. ಈ ಸಿಡಿಲು" ಎಂದರು. ನಾನು ಇದೇನೊ ಹೊಸವಿಚಾರ ಬರುತ್ತಿದೆಯೆಂದು ಬರುತ್ತಿದ್ದ ನಗುವನ್ನು ಕಷ್ಟದಿಂದ ತಡೆದು ಕೊಂಡೆನು. ಸಾಹೇಬರು ಗಂಟಲನ್ನು ಸರಿಮಾಡಿಕೊಂಡು "ಸಿಡಿಲು ಹಿಡಿಯುವ ವಿಧಾನವನ್ನು ಹೇಳುತ್ತೇನೆ ಕೇಳಿ. ಆದರೆ ಅದಕ್ಕಿಂತ ಮುಂಚೆ ಈ ವೈರ್‌ಲೆಸ್ ಎಂಬುದನ್ನು ಕುರಿತು ಹೇಳುತ್ತೇನೆ ಕೇಳಿ. ಈ ಸಿಡಿಲಿನ ಹಾರೆಯಿಂದ ತಂತಿ ಯನ್ನು ಮಾಡಿ ಅದನ್ನು ಮರಕ್ಕೆ ಸಿಕ್ಕಿಸುತ್ತಾರೆ. ಇಲ್ಲಿ ಒಂದು ತಂತಿಯನ್ನು ಕಟ್ ಎನ್ನಿಸಿದರೆ ಮದರಾಸಿನಲ್ಲಿರುವ ಇನ್ನೊಂದು ತಂತಿಯು ಕಟ್ ಎನ್ನುತ್ತದೆ. ಬೊಂಬಾಯಿನಲ್ಲಿರುವ ಇನ್ನೊಂದು ತಂತಿಯು ಕಟ್ ಎನ್ನುತ್ತದೆ" ಎಂದರು. ನಾನು "ಬಹಳ ಕಷ್ಟಪಟ್ಟು ಈ ಗೂಢವನ್ನು ಕಂಡುಹಿಡಿದಿದ್ದೀರಿ" ಎಂದೆ. ರೈತರೆಲ್ಲಾ "ಸ್ವಾಮಿಗಳಿಗೆ ತಿಳಿಯದುದಿಲ್ಲ" ಎಂದರು.

ಅನಂತರ ಸಾಹೇಬರು "ಶಿಡ್ಲು ಹಿಡಿಯಬೇಕಾದರೆ ಬಹಳ ಕಷ್ಟ. ಇಂಗ್ಲಿಷಿ ನವರಿಗೆ ಹೊರತು ಇತರರಿಗೆ ಸಾಧ್ಯವಿಲ್ಲ" ಎಂದರು. ನಾಣಿಯು ಆಶ್ಚರ್ಯದಿಂದ 'ಇಂಗ್ಲಿಷಿನವರು ಹೇಗೆ ಹಿಡಿಯುತ್ತಾರೆ' ಎಂದನು. ಸಾಹೇಬರು ಮೀಸೆಯನ್ನು ಹುರಿಮಾಡುತ್ತಾ 'ಒಂದು ಫರ್ಲಾಂಗ್ ಉದ್ದ, ಒಂದು ಫರ್ಲಾಂಗ್ ಅಗಲ, ಮೂವತ್ತು ಅಡಿ ಆಳವಾದ ಗುಂಡಿಯನ್ನು ತೆಗೆಯುತ್ತಾರೆ. ಅದರ ತುಂಬ ಸಗಣಿ ತುಂಬುತ್ತಾರೆ. ಶಿಡ್ಲು ಬಂದು ಅದಕ್ಕೆ ಬಿದ್ದ ಕೂಡಲೇ ತಣ್ಣಗಾಗುತ್ತದೆ. ಭೂಮಿ ಯೊಳಕ್ಕೆ ಹೋಗುವುದಿಲ್ಲ. ಅದರಿಂದ ವೈರ್‌ಲೆಸ್ ತಂತಿ ಮಾಡುತ್ತಾರೆ" ಎಂದರು. ನಾಣಿಯು "ಸಿಡಿಲು ಆ ಗುಂಡಿಯೊಳಕ್ಕೆ ಸರಿಯಾಗಿ ಹೇಗೆ ಬೀಳು ತ್ತದೆ" ಎಂದು ಕೇಳಿದನು. ಸಾಹೇಬರು "ಅದೆಲ್ಲಾ ಇಂಗ್ಲಿಷಿನವರ ಶಕ್ತಿ. ನಮಗೆಲ್ಲಾ ಹೊಳೆಯುವುದಿಲ್ಲ" ಎಂದರು. ಅನಂತರ ಸಾಹೇಬರು "ನನ್ನ ಈ ಸರ್ಕೀಟಿನಲ್ಲಿ ಎಷ್ಟು ವಿಚಾರಗಳನ್ನು ನೋಡಿದ್ದೇನೆ ಬಲ್ಲಿರಾ?" ಎಂಬುದಾಗಿ ಹೇಳಿ ನಿಧಾನವಾಗಿ ಎಲೆ, ಅಡಿಕೆ ಅಗಿಯುವುದಕ್ಕೆ ಪ್ರಾರಂಭಿಸಿದರು.

ಸಾಹೇಬರು ಯಾವ ವಿಷಯವನ್ನು ಹೇಳಬೇಕಾದರೂ ಉದಾಹರಣೆ ಗಳೊಂದಿಗೆ ಹೇಳುತ್ತಿದ್ದರು. ಹತ್ತು ಹದಿನೈದು ಸಲ ಹೇಳಿದ ಕತೆಗಳನ್ನೇ ಮತ್ತೆ ಮತ್ತೆ ಹೇಳುತ್ತಿದ್ದರೂ, ಅದರಲ್ಲಿ ಸ್ವಲ್ಪವೂ ವ್ಯತ್ಯಾಸಮಾಡದೆ, ಮೊದಲನೆಯ

ಸಲ ಹೇಳುವಂತೆಯೇ ವಿವರವಾಗಿ, ಅಷ್ಟೇ ಶ್ರದ್ಧೆಯಿಂದ ಹೇಳುತ್ತಿದ್ದರು. ಸ್ವಲ್ಪ ಹೊತ್ತು ವಿಳ್ಳೆದೆಲೆ ಅಗಿದನಂತರ ಸಾಹೇಬರು "ಲೋಹದ ಹತ್ತಿರ ನಾವಿದ್ದರೆ ಸಿಡಿಲು ಬಡಿಯುವುದಿಲ್ಲ" ಎಂದರು. ಉದಾಹರಣೆಗಾಗಿ ರಾಯರು ಒಂದು ಕತೆ ಹೇಳಿದರು. "ನಾನು ದೇವನೂರಿಗೆ ಸರ್ವೆ ಮಾಡಲು ಸರ್ಕೀಟ್ ಹೋಗಿದ್ದೆ. ದಾರಿಯಲ್ಲಿ ಮಳೆ ಹಿಡಿಯಿತು. ಅಲ್ಲೆ ಇದ್ದ ಒಂದು ದೇವಸ್ಥಾನದೊಳಕ್ಕೆ ಹೋದೆ. ಅಲ್ಲಿಗೆ ಹದಿನೈದು ಇಪ್ಪತ್ತು ಕೂಲಿಗಳು ಕುಕ್ಕೆಯಲ್ಲಿ ಹಾರೆ ಮತ್ತು ಗುದ್ದಲಿಗಳನ್ನು ಹಾಕಿಕೊಂಡು ಬಂದರು. ಅವರು ದೇವಸ್ಥಾನಕ್ಕೆ ಬಂದ ಕೂಡಲೆ ಒಂದು ಸಿಡಿಲು ಬಂದು ಅವರ ಸುತ್ತ ತಿರುಗಲು ಮೊದಲು ಮಾಡಿತು. ಆ ಸಿಡಿಲು ಆ ಗುಂಪಿನಲ್ಲಿ ಒಬ್ಬನಿಗೆ ಹೊಡೆಯುವ ಯೋಗವಿದ್ದಿತು. ಆದರೆ ಅವನ ಕೈಯಲ್ಲಿ ಹಾರೆ ಇದ್ದುದರಿಂದ ಸಿಡಿಲು ಹತ್ತಿರಕ್ಕೆ ಬರಲಿಲ್ಲ. ಒಂದು ಸಲ ಅವನು ದಟ್ಟಿಯನ್ನು ಸರಿಯಾಗಿ ಉಟ್ಟುಕೊಳ್ಳಲು, ಹಾರೆಯನ್ನು ಮತ್ತೊಬ್ಬನ ಕೈಗೆ ಕೊಟ್ಟನು. ಅದೇ ಸಮಯವನ್ನು ಕಾದುಕೊಂಡಿದ್ದ ಸಿಡಿಲು ಅವನಿಗೆ ಬಡಿದು ಅವನನ್ನು ಕೊಂದು ಹಾಕಿತು." ಸಿಡಿಲು ಯಾರ ಸುತ್ತಲೂ ಸುತ್ತುವುದಿಲ್ಲವೆಂಬುದು ನಾಣಿಗೆ ಚೆನ್ನಾಗಿ ಗೊತ್ತಾಗಿದ್ದಿತು. ಆದರೆ ಆ ರೀತಿಯಾಗಿ ಸಾಹೇಬರಿಗೆ ಪ್ರತಿ ಹೇಳಲು ಅವನಿಗೆ ಇಷ್ಟವಿರಲಿಲ್ಲ. ತಾನೇನಾದರೂ ಹೇಳಿದರೆ ಸಾಹೇಬರು ಎಲ್ಲಿ ಮುಂದೆ ಕತೆ ಹೇಳುವುದನ್ನೇ ನಿಲ್ಲಿಸಿಬಿಡುತ್ತಾರೋ ಎಂಬ ಭಯ. ನಾಣಿಯು—

ಹೊಡೆಯುತ್ತೆ ಶಿಡ್ಲು
ಸುಡುತ್ತೆ ಗುಡ್ಲು
ಹೊಡೀ ತಕೋಡು ಹಿಡ್ಲು
ಬೀಳ್ತದೆ ಕಡ್ಲು ಸಿಡ್ಲು

ಎಂದನು. ಸಾಹೇಬರು "ಹೌದು. ಶಿಡ್ಲನ್ನ ಕಡ್ಲಿಗೆ ಕೆಡಗಬೇಕು. ಇಲ್ದಿದ್ರೆ ನಮಗೆ ಉಳಿಗಾಲವಿಲ್ಲ" ಎಂದರು.

* * * *

ನೆನ್ನೆ ಸಾಯಂಕಾಲ ನಾವೆಲ್ಲಾ ಪದ್ಧತಿಯಂತೆ ಮಾತನಾಡುತ್ತಾ ಕುಳಿತಿರುವಾಗ ರಂಗಸಾಮಿಯು "ಈ ಅಡಿಗೆ, ತಿರಗಾಟ ಸಾಕಾಗಿದೆ. ನನಗಂತೂ ಒಳ್ಳೆ ಊಟ ಸಿಕ್ಕುತ್ಯೆ ಅನ್ನಿಸಿದೆ" ಎಂದನು. ರಾಯರು "ಸ್ವಲ್ಪ ಊರಕಡೆ ಹೋಗಿ ಬನ್ನಿ. ಒಂದು ಒಳ್ಳೆ ತುಪ್ಪದ ದೊನ್ನೆ ಬೀಳಬಹುದು" ಎಂದರು. ನಾನು "ಯಾರಾದರೂ ಇಲ್ಲಿಗೇ ಬಂದು ಊಟಕ್ಕೆ ಹೇಳಿದರೂ ಹೇಳಿಯಾರೆ, ನಿನ್ನ

ಅದೃಷ್ಟ" ಎಂದೆ. ನಾಣಿಯು "ಹು. ಇಲ್ಲಿ ಬಂದು ಹೇಳುತ್ತಾರೆ. ಕಾಯ್ಕೊಂಡಿರಲಿ? ಕೇಳಿಲ್ಲವೆ, ಬ್ರಾಹ್ಮಣಾರ್ಥಕ್ಕೆ ಹೇಳ್ತಾರೆ ಅಂತ ಒಬ್ಬ ಬ್ರಾಹ್ಮಣ ಮನೆಯಲ್ಲಿ ದೀಪ ಹಚ್ಚಿಟ್ಟು ಬಾಗಿಲಿನಲ್ಲಿ ಕಾಯುತ್ತಾ ಕುಳಿತಿದ್ದನಂತೆ. ರಾತ್ರಿ ಹನ್ನೆರಡು, ಒಂದು ಗಂಟೆಯಾದರೂ ಊಟಕ್ಕೆ ಹೇಳುವವರು ಬರಲಿಲ್ಲ. ಬ್ರಾಹ್ಮಣನಿಗೆ ತೂಕಡಿಕೆ ಬಂದು ಅರ್ಧ ನಿದ್ರೆ ಜೊಂಪು ಹತ್ತಿತ್ತು. ಆಗ ಬೀದಿಯ ಕಡೆಯಿಂದ ಒಂದು ಕತ್ತೆಯು ಇವನನ್ನು ಒದೆದುಕೊಂಡು ಮನೆಯೊಳಕ್ಕೆ ನುಗ್ಗಿತು. ನಿದ್ರೆಯಲ್ಲಿದ್ದ ಬ್ರಾಹ್ಮಣನಿಗೆ ಎಚ್ಚರವಾಗಿ, ನಿರೀಕ್ಷಿಸುತ್ತಿದ್ದವರೇ ಊಟಕ್ಕೆ ಹೇಳಲು ಬಂದು ಎಬ್ಬಿಸಿದರೆಂದುಕೊಂಡು ನಿದ್ರೆಯ ಗಾಬರಿಯಲ್ಲಿ 'ಆಗಲಿ ಆಗಲಿ ಬರುತ್ತೇನೆ, ಅದಕ್ಕೇನು' ಎಂದನು. ಹಾಗೆ ನೀನು ಕಾಯ್ತಾ ಕೂತಿರ್ಬೇಕಾಗುತ್ತೆ, ಅಷ್ಟೆ" ಎಂದನು.

ಸಾಹೇಬರು ಹುಡುಗಾಟಕ್ಕಾಗಿಯೇ "ಜಾತಿಯಲ್ಲಿ ಬ್ರಾಹ್ಮಣರಷ್ಟು ಕೆಟ್ಟವರು ಮತ್ತಾರೂ ಇಲ್ಲ. ಈಗ ಸಾಬರ್ನ ನೋಡಿ. ಎಲ್ಲಿದ್ರೂ ಸಕಾಲದಲ್ಲಿ ನಮಾಜ ಮಾಡುತ್ತಾರೆ. ಕಿರಿಸ್ತಾರ್ನನ್ನ ನೋಡಿ. ತಪ್ಪದೆ ಪ್ರತಿ ಭಾನುವಾರವೂ ಚರ್ಚಿಗೆ ಹೋಗುತ್ತಾರೆ. ಒಕ್ಕಲಿಗ ನಿತ್ಯ ಬೆಳಿಗ್ಗೆ ಮುಖ ತೊಳೆದುಕೊಳ್ಳುವುದಕ್ಕೆ ಮುಂಚೆ ದೇವರಿಗೆ ನಮಸ್ಕಾರ ಮಾಡುತ್ತಾನೆ. ಆದರೆ ಬ್ರಾಹ್ಮಣರನ್ನ ನೋಡಿ. ವರುಷಕ್ಕೆ ಒಂದು ದಿವಸ ಕೂಡ ದೇವರ ಧ್ಯಾನ ಮಾಡುವದಿಲ್ಲ. ಊಟದ ಧ್ಯಾನವೇ ಧ್ಯಾನ. ಈಗ ರಂಗಸ್ವಾಮಿಗಳನ್ನು ನೋಡಿ. ಹದಿನೈದು ದಿವಸದಿಂದ ಒಂದು ದಿವಸವೂ ದೇವರ ಧ್ಯಾನ ಮಾಡಲಿಲ್ಲ. ಈಗ, ಇವತ್ತೆಲ್ಲ ಊಟದ ಧ್ಯಾನ ಮಾಡುತ್ತಲೇ ಇದ್ದಾರೆ" ಎಂದರು.

ಸುಬ್ಬೇಗೌಡನು ಬ್ರಾಹ್ಮಣರ ಅಭಿಮಾನಿ. ಅವನಿಗೆ ಬ್ರಾಹ್ಮಣರ ವಿಚಾರದಲ್ಲಿ ಪೂರ್ವಕಾಲದ ಒಕ್ಕಲಿಗರಿಗೆ ಹೇಗೆ ದೇವರೆಂಬ ಭಾವನೆಯಿದ್ದಿತೋ ಅದೇ ಭಾವನೆ ಇದೆ. ಬ್ರಾಹ್ಮಣರನ್ನು ಬೈದರೂ ಅದನ್ನು ಅವನು ಸಹಿಸುವುದಿಲ್ಲ. ಮೋಜಿಣಿದಾರರ ಮಾತನ್ನು ಕೇಳಿ ಸುಬ್ಬೇಗೌಡನು "ಹಾಗಲ್ಲ ಬುದ್ಧಿ. ಬೆಂಕಿ ಯಾವತ್ತಿದ್ರೂ ಬೆಂಕೀನೆ. ಬ್ರಾಮ್ರು ಯಾವತ್ತಿದ್ರೂ ಬ್ರಾಮ್ರೆ. ಅನುಕೂಲ ಕಮ್ಮಿ ಬಿದ್ದರೆ ಹಾರುವವರ ಆಚಾರ ರವಷ್ಟು ಕಮ್ಮಿ ಬೀಳ್ತದೆ. ಅವರಷ್ಟು ಆಚಾರ ಯಾರಿಗೂ ಇಲ್ಲ. ಈ ಮಹಾರಾಜರ ಅಜ್ಜಂದಿರು ಇದ್ದರಲ್ಲ ಸಾಮಿ, ಕೃಷ್ಣರಾಜ ಒಡೇರು ರಾಜ್ಯ ಹಿಂದಕೆ ಬೇಕು ಅಂತ ಫರಂಗಿಯೋನ ಮೇಲೆ ಚರ್ಜಿ ಮಾಡಿದೋರು. ಅವರ ರಾಜ್ಯದಲ್ಲಿ ಒಂದು ಸಲ ಬ್ರಾಮರಿಗೆ ಗೌರವ

ಕಮ್ಮಿ ಆಯ್ತು. ಬ್ರಾಮ್ರು ಹೊಟ್ಟೆಗಿಲ್ದೆ ಕೂಲಿ ಮಾಡೊವಕ್ಕೆ ಮುಟ್ಕೊಂಡ್ರು. ಒಬ್ಬ ಬ್ರಾಮ್ರು ಕಾಡಿನಿಂದ ನಿತ್ಯ ಎರಡಾಣೆ ನಾಲ್ಕಾಣೆ ಸೌದೆ ತಂದು ಮೈಸೂರು ಬೀದೀಲಿ ಅದನ್ನ ಮಾರಿ ಹೊಟ್ಟೆ ಹೊರೆಕ್ಕೊತಾ ಇದ್ರು. ಒಂದು ದಿವಸ ದೊರೆಗಳು ಅರಮನೆ ಬಿಸಿಲು ಮಚ್ಚೆ ಮೇಲೆ ನಿಂತುಕೊಂಡು ಬೀದಿ ಕಡೆ ನೋಡ್ತಾ ಇದ್ದರು. ಒಬ್ಬ ಬ್ರಾಮ್ರು ತಲೆ ಮೇಲೆ ಕಾಡಿನಿಂದ ತಂದ ಸೌದೆ ಹೊತ್ತು ಕೊಂಡು ಅದನ್ನು ಮಾರೋದಕ್ಕೆ ಮನೆಮನೆ ಬಾಗಿಲಿಗೂ ಹೋಗತಾ ಇದ್ದರು. ಅವರ ಎಡಗೈಲಿ ಅವರು ಕಾಡಿನಿಂದ ತಂದಿದ್ದ ದಪ್ಪ ಸೀಬೆ ಹಣ್ಣಿತ್ತು. ಬ್ರಾಮ್ರು ತಾವು ಬ್ರಾಮ್ರು ಅನ್ನೋದನ್ನ ಮರೆತು ಆ ಸೀಬೆ ಹಣ್ಣನ್ನು ಬಲಗೈಲಿ ಕಚ್ಚಿ ಕೊಂಡು ಹೋಗತಾ ಇದ್ದರು. ತಿಂದು ಮೇಲೆ ಅದೇ ಕೈನ ತೊಳಕೊಳ್ಳದೆ ಬಟ್ಟೆಗೆ ಮೈಗೆ ತಿಕ್ಕೊಂಡು ಬಿಟ್ಟರು. ಮಹಾರಾಜರು ಇದನ್ನ ನೋಡಿದರು. ಮಂತ್ರಿನ ಕರೆದು "ನೋಡು, ನಿನ್ನ ಬ್ರಾಮ್ರು ಹೇಗಿದ್ದಾರೆ. ಎಡಗೈಲಿ ಬೀದೀಲಿ ಸೀಬೆ ಹಣ್ಣು ತಿಂದುಹಾಕಿ ಕೈನೂ ತೊಳಕೊಳ್ಳದೆ ಹೋಗತಾ ಇದಾನೆ" ಅಂದರು. ಮಂತ್ರಿ ಭಾರಿ ಚತುರ. ಅವನು ಮಹಾರಾಜರಿಗೆ "ಮಹಾಸ್ವಾಮಿ, ಈ ಬ್ರಾಮಣ ಹೊಟ್ಟೆಗಿಲ್ಲದೆ ಹೀಗಾಗಿದ್ದಾನೆ. ಇವನಿಗೆ ಮಾತ್ರ ಸ್ವಲ್ಪ ಅನುಕೂಲ ಮಾಡಿ ಕೊಟ್ಟರೆ ಆಗ ಇವನ ಜಪ, ತಪ, ಸ್ನಾನ, ಸಂಧ್ಯಾವನೆ ಕಂಡು ತಾವೇ ಮೆಚ್ಚ ತೀರಿ" ಅಂದ. ಮಹಾರಾಜರವು ದೊಡ್ಡ ನಪ್ತೆ. ಅವತ್ತಿನಿಂದಲೇ ಅರಮನೆಯಿಂದ ಆ ಬ್ರಾಮರಿಗೆ ನೂರು ರೂಪಾಯಿ ಸಂಬಳ ತಿಂಗಳಿಗೆ ಮಾಡಿಕೊಟ್ಟರು. ಬ್ರಾಮ್ರು ಯಾವತ್ತೂ ಬ್ರಾಮ್ರೆ. ಸಂಬಳ ಸಲೀಸಾದ ಕೂಡ್ಲೆ ಅವರು ನಿತ್ಯಾ ದೇವರು ಮೂಡೋದಕ್ಕೆ ಮುಂಚೆ ಮೈಸೂರಿಂದ ಪಟ್ಟಣಕ್ಕೆ ಹೋಗಿ ಸ್ನಾನ ಸಂಧ್ಯಾವನೆ ಮಾಡಿಕೊಂಡು ತಿರಗಿ ಮೈಸೂರಿಗೆ ನಡೆದುಕೊಂಡೇ ಬರುತ್ತಿದ್ದರು. ಬರಬರತಾ ಬ್ರಾಮ್ರ ಹೊತ್ತೆಲ್ಲ ಸ್ನಾನ, ಸಂಧ್ಯಾವಂದನೆಗೇ ಅಯ್ತು. ಒಂದು ದಿನ ದೇವರು ನೆತ್ತಿ ಮೇಲೆ ಬಂದಾಗ ಬ್ರಾಮ್ರು ಹೊಳೆ ದಡದಲ್ಲಿ ಜಪಮಾಡತಾ ನಿಂತಿದ್ದರು. ಬಿಸಿಲು ಬಾರಿ ಜೋರಾಗಿತ್ತು. ಬ್ರಾಮ್ರು ತಾವು ಮೈ ಒರಸಿ ಕೊಂಡಿದ್ದ ಚೌಕಾನ ಮೇಲೆ ಎಸೆದರು. ಅದು ಕೆಳಕ್ಕೆ ಬರದೆ ಅವರ ತಲೆಗೆ ಮರೆಯಾಗಿ ಅಲ್ಲೆ ಗಾಳಿಯಲ್ಲಿ ನಿಂತುಕೊಂಡಿತು. ಜಪಾ ಮುಗಿದ ಮೇಲೆ ಬ್ರಾಮ್ರು ಮತ್ತೆ ಕೈ ಮೇಲಕ್ಕೆ ನೀಡಿದರು. ಚೌಕ ಕೆಳಕ್ಕೆ ಬಂತು. ಅದನ್ನ ತಕೊಂಡು ಮೈಸೂರಿಗೆ ಹೋದರು. ಆ ಮೇಲೆ ಬ್ರಾಮ್ರು ನಿತ್ಯ ಸ್ನಾನಮಾಡಿ ಚೌಕನ ಗಾಳೀಲಿ ಬಿಸಾಕಿ ಜಪ ಮಾಡಿಕೊಂಡು ಹೋಗುವಾಗ ತಕೊಂಡು ಹೋಗುತ್ತಿದ್ದರು. ಒಂದು ದಿನ ಅವರು ಬಿಸಲಿನಲ್ಲಿ ಒಣಹಾಕಿದ ಚೌಕ

ತಕೊಳ್ಳೋದನ್ನ ಮರೆತು ಹಾಗೆ ಮೈಸೂರ ಕಡೆ ಹೊರಟುಬಿಟ್ಟರು. ಆ ಚೌಕ ಇವರ ನೇರದಲ್ಲಿ ಇವರ ತಲೆಮೇಲೆ ಗಾಳೀಲಿ ಉದ್ದಕ್ಕೂ ಬರತಾ ಇತ್ತು. ಬ್ರಾಮ್ರಿಗೆ ಇದು ಗೊತ್ತೆ ಇಲ್ಲ. ಅವರ ಪಾಡಿಗೆ ಅವರು ದೇವರ ಧ್ಯಾನ ಮಾಡತಾ ಇದ್ದರು. ಆದರೆ ಮೈಸೂರು ಪೇಟೆಗೆ ಅವರು ಹೋದ ಕೂಡಲೆ ಅವರನ್ನ ನೋಡಿ ಜನ ಅವರ ಸುತ್ತ ಸೇರಿಬಿಟ್ಟಿತು. ಈ ಸಂಗತಿ ದೊರೆಗಳ ಕಿವಿಗೂ ಬಿತ್ತು. ಅವರು ಬಂದು ನೋಡಿದರು. ಒಂದು ವರ್ಷ ಮುಂಚೆ ಎಡ ಗೈಲಿ ಸೀಬೆಹಣ್ಣು ಕಚ್ಚಿಕೊಂಡು ಪೇಟೇಲಿ ತಿರಗತಿದ್ದ ಬ್ರಾಮ್ರು ಅವರು ಅಂತ ತಿಳೀತು. ದೊರೆಗಳು ಮಂತ್ರಿಯನ್ನು ಕರೆದು "ನೀನು ಹೇಳಿದ ಮಾತೆ ದಿಟ. ಆ ಬ್ರಾಹ್ಮಣನಿಗೆ ಸಂಬಳ ಮಾಡಿ ಕೊಟ್ಟ ಮೇಲೆ ಅವನ ಶಕ್ತಿ ಹೆಚ್ಚಾಯಿತು. ಎಲ್ಲಾ ಬ್ರಾಮ್ರಿಗೂ ಜಮೀನು, ಜೋಡಿ, ಜಾಗೀರು, ಮಾನ್ಯ ಹಾಕಿಕೊಡು ಎಂದು ಹುಕ್ಕುಂ ಮಾಡಿದರು. ಈಗ ಎಲ್ಲೆಲ್ಲೂ ಇರುವ ಮಾನ್ಯಗಳೆಲ್ಲಾ ಅವರು ಹಾಕಿ ಕೊಟ್ಟೋವೆ" ಎಂದನು.

* * * *

ನೆನ್ನೆ ರಾತ್ರಿ ಸುಮಾರು ಹತ್ತು ಗಂಟೆಯಲ್ಲಿ ಕಪ್ಪು ಹಕ್ಕಿಯನ್ನು ಹೊಲದ ದಾರಿಯಲ್ಲಿ ಹಾವು ಕಡಿಯಿತು. ಕಪ್ಪು ಹಕ್ಕಿಯು ಕತ್ತಲೆಯಲ್ಲಿ ಕಾಣದೆ ಹಾವಿನ ಮೇಲೆ ಕಾಲಿಟ್ಟುಬಿಟ್ಟನಂತೆ. ಹಾವು ಸರ್ರನೆ ಅವನ ಕಾಲಿಗೆ ಸುತ್ತಿಕೊಂಡಿತು. ಕಪ್ಪು ಹಕ್ಕಿಯು ಅದನ್ನು ಅಲ್ಲೆ ಒದರಿ ಹೋ ಎಂದು ಕೂಗುತ್ತಾ ದೇವಸ್ಥಾನಕ್ಕೆ ಬಂದುಬಿಟ್ಟನು. ನಮ್ಮ ರಂಗಸಾಮಿಗೆ ಹಾವಿನ ವಿಚಾರ ಸ್ವಲ್ಪ ತಿಳಿದಿತ್ತು. ಮತ್ತು ಸುಬ್ಬೇಗೌಡನಿಗೂ ತಿಳಿದಿತ್ತು. ಮೊದಲು ಮೊದಲು ಎಲ್ಲರಿಗೂ ಗಾಬರಿಯಾಯಿತು. ಆದರೆ ಸ್ವಲ್ಪ ಹೊತ್ತಿನೊಳಗೆ ಅದು ನಾಗರಹಾವು ಇರಲಾರದೆಂದೂ ಕೆರೆಹಾವೇ ಇರಬೇಕೆಂದು ರಂಗಸಾಮಿಯು ಹೇಳಿದನು. ರಂಗಸಾಮಿಯು ತನಗೆ ತೋರಿದ ಯಾವುದೋ ಒಂದು ಔಷಧವನ್ನು ಮಾಡಿದನು. ಕಪ್ಪು ಹಕ್ಕಿಯು ಸ್ವಲ್ಪ ಧೈರ್ಯವನ್ನು ತಂದುಕೊಂಡು ಸಮಾಧಾನದಿಂದಿದ್ದನು. ಸಾಹೇಬರು "ದೇವರ ದಯ, ಸದ್ಯ ನಾಗರಹಾವು ಆಗಲಿಲ್ಲವಲ್ಲಾ. ನಾಗರ ಹಾವು ಆಗಿದ್ದರೆ ರಂಗಸಾಮಿಯ ವೈದ್ಯ ಅಳಲೆಕಾಯಿ ವೈದ್ಯವೆ. ನಾಗರ ಹಾವಿನ ಕಡಿತಕ್ಕೆ ಔಷಧಿಮಾಡುವವರು ಇನ್ನೂ ಹುಟ್ಟಲಿಲ್ಲ" ಎಂದರು. ಸುಬ್ಬೇಗೌಡನು ಈ ಮುಂದಲ ಅಭಿಪ್ರಾಯದ ಅನುಭವವನ್ನು ಹೇಳಿದನು. "ಸ್ವಾಮಿ ! ಈ ಊರಿನಲ್ಲಿದ್ದ ಹಾವಿನ ಸುಬ್ಬಯ್ಯನ ವಿಚಾರ ಅರ್ಕೆಮಾಡ್ಕೊತೀನಿ. ಹಾವಿನ ಸುಬ್ಬನಿಗೆ ಬರಾವು ಬರ್‍ತಿರಲಿಲ್ಲ. ಆದರೆ ಆ ಮುಂಡೆಗಂಡನಿಗೆ ಆ ಹಾವಿನ ವಿದ್ದೆ ಹೇಗೆ

ಸ್ವಾಧೀನವಾಯಿತೊ ದೇವರೇ ಬಲ್ಲ. ಯಾವ ವೇಳೆಯಲ್ಲಿ ಯಾವ ಬಣ್ಣದ ಎಷ್ಟು ದಪ್ಪದ ಯಾವ ಹಾವನ್ನು ನೋಡಬೇಕೆಂದು ಯಾರಿಗೆ ಆಸೆಯಾದರೂ ಸುಬ್ಬಯ್ಯನ ಬಳಿಗೆ ಹೋಗಿ ಹೇಳಿದರೆ ಅವನು ಕೂಡಲೆ ಎರಡು ಚಿಟಕೆಯನ್ನು ಹಾಕುತ್ತಿದ್ದನು. ಆಗ ಹಾವು ಎಲ್ಲಿಂದಲೊ ಬಂದು ಅವನ ಕಣ್ಣಿಗೆ ಕಾಣಿಸಿ ಕೊಳ್ಳುತ್ತಿದ್ದಿತು. ಹಾವಿಗೂ ಅವನಿಗೂ, ನಮಗೂ, ತಮಗೂ ಇರುವಷ್ಟು ದೋಸ್ತಿ, ಪರಿಚಿತಿ ಇತ್ತು. ಹಾವುಗಳನ್ನು ಅವನು ಅಧಿಕಾರಿಗಳು ಗುಮಾಸ್ತರನ್ನ ಹೆದರಿಸುವ ಹಾಗೆ ಹೆದರಿಸುತ್ತಿದ್ದನು. ಒಂದು ದಿವಸ ಅವನು ಮನೆಯಲ್ಲಿ ಏನೋ ದೇವರ ಪೂಜೆ ನಡೆಸುತ್ತಾ ಇದ್ದ. ನಾನೂ ಬಾಗಲಲ್ಲಿ ಕುಳಿತಿದ್ದೆ. ಇದ್ದಕ್ಕಿದ್ದಂತೆ ಒಂದು ದಪ್ಪ ನಾಗರ ಹಾವು ಮನೆಯೊಳಕ್ಕೆ ಬಂದುಬಿಟ್ಟಿತು. ಅದನ್ನು ಕಂಡು ನಾನು ಹೆದರಿ ಗಟ್ಟಿಯಾಗಿ ಕೂಗಿಕೊಂಡೆ. ನನ್ನ ಕೂಗು ಕೇಳಿ ಸುಬ್ಬಯ್ಯ ಹೊರಕ್ಕೆ ಬಂದ. ಹಾವು ಹೆಡೆಯಾಡಿಸಿತು. ಸುಬ್ಬಯ್ಯ ಕೋಪ ದಿಂದ 'ಯಾಕೆ ಬಂದ್ಯೋ ಇಲ್ಲಿ. ಯಾರೋ ನಿನ್ನ ಬರಹೇಳಿದವರು. ಇಲ್ಲಿ ಬಾ!' ಎಂದು ಹೇಳಿ ನೆಲದ ಮೇಲೆ ಒಂದು ಚೌಕ ಹಾಸಿದ. ಹಾವು ಕುರಿಮರಿ ಯಂತೆ ತೆಪ್ಪನೆ ಚೌಕದಮೇಲೆ ಮಲಗಿಕೊಂಡಿತು. ಸುಬ್ಬಯ್ಯ ಆ ಚೌಕದ ನಾಲ್ಕು ಮೂಲೆಗೂ ಸೇರಿಸಿ ಗಂಟುಹಾಕಿ ಹಾವನ್ನ ಒಂದು ಗೂಟಕ್ಕೆ ನೇತುಹಾಕಿಬಿಟ್ಟ. ಪೂಜೆ ಎಲ್ಲಾ ಮುಗಿದಮೇಲೆ ಊಟ ತೀರಿಸಿಕೊಂಡು ಮಧ್ಯಾಹ್ನ ನಾಲ್ಕು ಗಂಟೆಗೆ ಗಂಟನ್ನು ತೆಗೆದುಕೊಂಡು ಕೆರೆ ಕಡೆ ಹೊರಟ. ನಾನೂ ಅವನ ಜತೆ ಯಲ್ಲಿ ಹೋದೆ. ಕೆರೆ ಏರಿ ಮೇಲೆ ಹಾವನ್ನ ಕೆಳಕ್ಕೆ ಹಾಕಿದ. ಆಗ ಹಾವು ಒಂದು ಕಿರುಬೆರಳು ಗಾತ್ರವಾಗಿತ್ತು. ತಲೆ ಮಾತ್ರ ಮೊದಲಿನಂತೆ ದಪ್ಪವಾಗಿತ್ತು. ಹಾವಿನ ತ್ರಾಣವೆಲ್ಲಾ ಉಡುಗಿ ಅಲುಗಾಡುವುದಕ್ಕಾಗದೆ ಬಟ್ಟೆಹಾಗೆ ಸಪ್ಪಲಾಗಿ ಬಿದ್ದಿತು. ಸುಬ್ಬಯ್ಯ ಅದರ ಕಡೆ ನೋಡಿ, 'ಇನ್ನು ಮೇಲೆ ಜನ ಇರೋಕಡೆ ಬಂದು ಅವರಿಗೆ ಗಾಬರಿ ಮಾಡಬೇಡ' ಎಂದು ಹೇಳಿ ಒಂದು ಚಟಿಕಿ ಮಣ್ಣನ್ನು ತಂದು ಅದರ ಮೇಲೆ ಮಂತ್ರಿಸಿ ಹಾಕಿದ. ಹಾವು ಮೊದಲಿನಷ್ಟೆ ದಪ್ಪವಾಗಿ ಭರ್‍ರೆಂದು ಬೇಲಿಗೆ ಹರಿದುಹೋಯ್ತು.

ಸುಬ್ಬಯ್ಯ ಯಾವ ಹಾವು ಕಡಿದಿದ್ದರೂ ಬದುಕಿಸುತ್ತ ಇದ್ದ, ಸ್ವಾಮಿ. ಮಂತ್ರ ಅವನಿಂದ ಕಲೀಬೇಕು ಅಂತ ನಾನು ಬಲು ಪ್ರಯತ್ನಮಾಡಿದೆ. ಏನಾ ದರೂ ಅವನು ಹೇಳಿಕೊಡದೆ ಸತ್ತುಹೋದ—" ಎಂದು ಹೇಳಿದನು.

* * * *

ನೆನ್ನೆ ರಾತ್ರಿ ಕಾಸೆಗಿಡ್ಡನು ಸಾಹೇಬರ ಎದುರಿಗೆ ಕುಳಿತುಕೊಂಡನು ನಶ್ಯ

ತೀಡುತ್ತಿದ್ದ. ನಶ್ಯವೆಲ್ಲಾ ಮಾಡಿಯಾದ ಮೇಲೆ ಅದನ್ನು ಅಂಗೈಮೇಲೆ ಹರಡಿಕೊಂಡು ತೂರುತ್ತಿದ್ದ. ಆಗ ಗಾಳಿ ಬಂತು. ಸ್ವಲ್ಪ ನಶ್ಯ ಸಾಹೇಬರ ಕಣ್ಣಿಗೆ ಬಿದ್ದಿತು. ಸಾಹೇಬರು "ಏನಯ್ಯ ಹಾಳು ನಶ್ಯ, ಕಣ್ಣು ಹೋಯ್ತು, ನಶ್ಯದಿಂದ ಯಾರಿಗೂ ಯಾವಾಗಲೂ ಒಳ್ಳೆಯದಾಗಿಲ್ಲ. ಈಗ ನನಗೂ ಒಳ್ಳೆಯದಾಗಲಿಲ್ಲ' ಎಂದರು. ಸುಬ್ಬೇಗೌಡನು "ನಶ್ಯ ಏನೋ ಕೆಟ್ಟದ್ದೆ ಬುದ್ಧಿ. ಆದರೆ ಅದರಿಂದಲೂ ಉಪಕಾರ ಪಡೆದೋರು ಉಂಟು. ಎಲ್ಲಾ ಪದಾರ್ಥಗಳಲ್ಲೂ ಕೆಟ್ಟದ್ದು ಒಳ್ಳೇದು ಎರಡೂ ಸೇರಯ್ತೆ" ಎಂದನು. ಸಾಹೇಬರು "ನಶ್ಯ, ಹೆಂಡ, ಬೀಡಿ ಚುಟ್ಟಾ ಎಲ್ಲಾ ಒಂದೇ ತಾಯಿ ಮಕ್ಕಳು" ಎಂದರು. ಸುಬ್ಬೇಗೌಡ ಅದಕ್ಕೂ ಒಂದು ಕತೆ ಇಟ್ಟಿದ್ದ. ಅದರ ಸಾರಾಂಶವಿಷ್ಟು. "ನಮ್ಮಪ್ಪ ಹೇಳುತ್ತಿದ್ದ ಒಂದು ಕತೆ ಜ್ಞಾಪಕಕ್ಕೆ ಬರುತ್ತೆ. ಅವನ ಕಾಲದ ಅರಸರು ಬಹಳ ನಶ್ಯದ ಶೀಟೆಯವರು. ಅವರ ಅರಮನೆಯಲ್ಲಿ ನಶ್ಯದ ಡಿಪಾರ್ಟ್‌ಮೆಂಟ್ ಬಹಳ ಜೋರಾಗಿತ್ತು. ಮಹಾರಾಜರು ಬೇಟೆಗೆ ತೆರಕಣಾಂಬಿಗೆ ಹೊರಟಿದ್ದರು. ಆದರೆ ಜತೆಯಲ್ಲಿ ನಶ್ಯದ ಕಾರಕೂನರನ್ನು ತರುವುದನ್ನು ಮರೆತುಬಿಟ್ಟರು. ಬೇಟೆ ಮುಗಿಯಿತು. ಕೂಡಲೇ ಮಹಾರಾಜರಿಗೆ ನಶ್ಯದ ಶೀಟೆಯು ಹಿಡಿಯಿತು. ಮೂಗು ಜುಮುಜುಮೆನ್ನಲು ಪ್ರಾರಂಭವಾಯಿತು. ಆ ಉರುಬಿನಲ್ಲಿ ಅವರು ತಮ್ಮ ಶಿಬ್ಬಂದಿಯವರನ್ನು ಹಿಂದೂಡಿ ಮೈಸೂರು ದಾರಿ ಹಿಡಿದರು. ಆರು ಏಳು ಮೈಲಿ ಬಂದಿದ್ದರು. ಒಬ್ಬ ಸಂಕೇತಿ ಬ್ರಾಮ್ರು ಒಂದು ಮರದ ಕೆಳಗೆ ಸೊಗಸಾದ ತಾಯೂರು ಮಡ್ಡಿ ನಶ್ಯ ತೀಡುತ್ತಾ ನೇರಿಲೇ ಹಣ್ಣಿನ ಬಣ್ಣಕ್ಕೆ ಬಂದಿದ್ದ ಆ ಪುಡಿಯನ್ನು ನೋಡಿ ಆನಂದಿಸುತ್ತಾ ಚಿಟಕೆಮಾಡಿ ಒಂದು ಸಣ್ಣ ಡಬ್ಬಿಯೊಳಗೆ ಹಾಕುತ್ತಿರುವುದು ಅರಸರ ದೃಷ್ಟಿಗೆ ಬಿತ್ತು. ಸಾಹೇಬರೇ, ನೋಡಿ ಚಟ ಅನ್ನೋದು ಕೆಟ್ಟದ್ದು. ಅರಸರು ಏಕ್‌ದಂ ಕುದುರೆಯಿಂದ ಕೆಳಕ್ಕೆ ದುಮುಕಿ ಬ್ರಾಮ್ರನ್ನು ನಶ್ಯಕ್ಕಾಗಿ ಯಾಚಿಸಿದರು. ನಶ್ಯ ಒಳ್ಳೆಯ ಪರಮಾಶಿಯದು. ಮೇಲಾಗಿ ತೀಡಿದ್ದ ಬ್ರಾಮ್ರು ಬಹಳ ಅನುಭವಸ್ಥರು. ನಶ್ಯದಿಂದ ರಾಯರಿಗೆ ಬಹಳ ಸಂತೋಷವಾಯಿತು. ಅಷ್ಟು ಹೊತ್ತಿಗೆ ರಾಯರ ಪರಿವಾರವು ಅಲ್ಲಿಗೆ ಬಂತು. ಬ್ರಾಮ್ರು ಬೆದರಿದರು. ಅರಸರು ಅವನನ್ನು ಅರಮನೆಯಲ್ಲಿ ತಮ್ಮ ಮುಂದೆ ಹಾಜರ್ಮಾಡಲು ಹೇಳಿ ತಾವು ಮುಂದೆ ಹೊರಟು ಹೋದರು. ಅರಸರು ಬಂದಾಗ ಎದ್ದುನಿಂತು ಮಂತ್ರಗಳನ್ನು ಹೇಳಿ ಅವರನ್ನು ಆಶೀರ್ವದಿಸುವುದು ತನ್ನ ಕೆಲಸವಾಗಿದ್ದಾಗ ತಾನು ನಶ್ಯ ತೀಡುತ್ತಾ ಕುಳಿತಿದ್ದಕ್ಕಾಗಿ ಬ್ರಾಮ್ರು ಬೆದರಿದರು. ಸರಿ. ಬ್ರಾಮ್ರನ್ನು ಅರಸರ ಮುಂದೆ ಹಾಜರ್ಮಾಡಿದರು. ಅರಸರು ಆ ಬ್ರಾಮ್ರನ್ನು ನಲವತ್ತು

ವರಹ ಸಂಬಳದ ಮೇಲೆ ಅರಮನೆಯಲ್ಲಿ ನಶ್ಯದ ಇಲಾಖೆಗೆ ಯಜಮಾನನ್ನಾಗಿ ಮಾಡಿದರು.

* * * *

ಹಳ್ಳಿಯವನು ಸಂಸ್ಕೃತ, ಇಂಗ್ಲಿಷು, ಕನ್ನಡ ಎಲ್ಲವನ್ನೂ ಸೇರಿಸಿ ಮಾತನಾಡುತ್ತಾನೆ. ಸಂಸ್ಕೃತಕ್ಕೆ ಚಂಚ್ಕೃತ ಎನ್ನುತ್ತಾನೆ. ಚಂಚ್ಕೃತ ಎಂದರೆ ಸಂಸ್ಕೃತ ಎಂದು ಮಾತ್ರವೇ ಅಲ್ಲ. ತಲೆಹರಟೆ, ಅತಿಪರಟೆ, ಸುಳ್ಳು, ಜಂಭ ಇವುಗಳಿಗೆಲ್ಲಾ ಚಂಚ್ಕೃತವೆಂದೇ ಅವನು ಹೇಳುವುದು. ಯಾರಾದರೂ ಜಂಭ ಹೊಡೆಯುತ್ತಿದ್ದರೆ "ನಿನ್ನ ಚಂಚ್ಕೃತ ಇಲ್ಲಿ ಊದಬೇಡ, ಬಲ್ಲೆ" ಎನ್ನುತ್ತಾನೆ. ಬ್ರಾಹ್ಮಣರಾಗಲಿ ಜೋಡಿದಾರರಾಗಲಿ "ನಿನಗೆ ಹಾಗೆ ಮಾಡಿಬಿಡ್ತೇನೆ, ಹೀಗೆ ಮಾಡಿಬಿಡ್ತೇನೆ, ಕೋರ್ಟಿನಲ್ಲಿ ದಾವಾ ಹಾಕ್ತೇನೆ" ಎಂದು ಕೂಗಾಡಿದರೆ "ಅಯ್ಯ, ಬಾರಿ ಚಂಚ್ಕೃತ ಓದ್ತಾನ" ಎನ್ನುತ್ತಾನೆ. ಸುಬ್ಬೇಗೌಡನ ಈ ಮುಂದಲ ಸಂಭಾಷಣೆ ನೋಡಿ: "ಸ್ವಾಮಿ, ಪುತ್ತೂರುಗಟ್ಟದ ಕೆಳ್ಗೆ ಇದೆಯೆಲ್ಲಾ ಅಲ್ಲೊಬ್ಬ ಭಾರಿ ಸಾಹುಕಾರ; ಒಂದು ಎತ್ತು ತಂದಿದ್ದ. ಸುಮಾರು ಸಹಸ್ರ ರೂಪಾಯಿ ಬಾಳಬಹುದು. ಪುತ್ತೂರಿನ ಕೆರೆ ಕೆಳಗೆ ಆ ಸಾಹುಕಾರನಿಗೆ ಐದುನೂರು ಖಂಡುಗ ಭತ್ತ ಬರುತ್ತೆ. ಆ ಕೆರೆ ಮಳೇಲಿ ಒಡೆದುಹೋಯ್ತು. ಕಂತಲ್ ಫಸಲು (ಕಂಟ್ರಿಬ್ಯೂಷನ್) ಕಟ್ಟಿದರು. ಕೆರೆ ಆಯ್ತು. ಆ ಸಾವುಕಾರನ ಎತ್ತು ಎಲ್ಲೋ ಕದ್ದುಹೋಗಿ ಬಾರ ಬಂಗಾಳಿ ಯುದ್ಧವಾಗಿ ಕೊನೆಗೆ ಉದಯವಾರದ ಸಾವುಕಾರನ ಕೈಸೇರಿತು. ಉದಯವಾರದ ಸಾವುಕಾರ ಹನ್ನೆರಡು ವರ್ಷ ಹೊಡೆದ. ಪುತ್ತೂರು ಸಾವುಕಾರ ಅಲ್ಲಿಗೆ ಬಂದ. ಸಬ್ದ ಮಾಡಿದ (ಮಾತಾಡಿದ), ಎತ್ತು ತನ್ನದು ಅಂತ ತಿಳಿದುಹೋಯ್ತು. ಉದಯವಾರದೋನು ಕೊಡೋದಿಲ್ಲ ಅಂತ ಹೇಳಿದ. ಪುತ್ತೂರು ಸಾವುಕಾರ ಕಛೇರಿ ಹತ್ತತ್ತೇನೆ ಅಂದ. ಉದಯವಾರದವನು "ಈಶ್ವರನ ಇಷ್ಟವಿದ್ದಂತೆ ಆಗಲಿ" ಎಂದ. ಉದಯವಾರದವನು ಕಚೇರಿಯಲ್ಲೂ ಇದೇ ಶಬ್ದ ಮಾಡಿದ. ಪುತ್ತೂರಿನವ ಕೇಸು ಗೆದ್ದ. ಒಕ್ಕಲಿಗ ಜನಕೆ ಬುದ್ಧಿಯಿಲ್ಲ. ಕ್ರಿತ್ಮ (ಕೃತ್ರಿಮ) ಮಾಡಿಬಿಟ್ಟ. ಹಿಂದುಸ್ತಾನದವರು (ಹಿಂದಲವರು ಪೂರ್ವಿಕರು) ಬಾರಿ ಸಾಚಾ."

ಸುಬ್ಬೇಗೌಡನು ಮಾತುಗಳನ್ನು ಹಾಗೆಯೇ ಮುಂದುವರಿಸಿದನು. ಒಂದು ಸಲ ಲಾ ಪಾಯಿಂಟ್ ಎನ್ನುವುದಕ್ಕೆ ಬದಲಾಗಿ ಲಾಮೆಂಟ್, ಎಂದನು. ಮತ್ತೊಂದು ಸಲ ಸ್ಟ್ರಿಕ್ಟಂ ಎಂದನು. ಅದರ ಅರ್ಥವನ್ನು ತಿಳಿಯುವುದು ನನಗೆ ಬಹಳ ಕಷ್ಟವಾಯಿತು. ಆಮೇಲೆ ಕೆಲವು ಗಳಿಗೆ ಯೋಚಿಸಿದ ಮೇಲೆ ಅದು

ಸ್ಟ್ರಿಕ್ಟ್ ಮತ್ತು ಸಿಸ್ಟಮ್ ಎಂಬ ಎರಡು ಪದಗಳ ಪೂರ್ವ ಮತ್ತು ಉತ್ತರಾರ್ಧ ಗಳೆಂದು ಗೊತ್ತಾಯಿತು. ಹೀಗೆಯೇ ಸುಬ್ಬೇಗೌಡನು ಪ್ರಾಮಿಸರಿ ನೋಟು ಎನ್ನುವುದಕ್ಕೆ ಬದಲಾಗಿ ಟಾಂಪ್‌ಸರಿ ಎನ್ನುತ್ತಾನೆ. ಈ ಟಾಂಪುಸರಿ ಎನ್ನು ವುದು ಟಾಂಪ್ (ಸ್ಟಾಂಪ್) ಎಂಬ ಪದದಿಂದ ಹುಟ್ಟಿದುದು. ಕಾಗದಕ್ಕೆ ಟಾಂಪನ್ನು ಹಚ್ಚುವುದರಿಂದ ಅದಕ್ಕೆ ಟಾಂಪುಸರಿ ಎಂಬುದಾಗಿ ಹೆಸರಾಗಿದೆ. ಇದೇ ರೀತಿಯಾಗಿ 'ಸ್ಟ್ರಿಕ್ಟ್ ಮತ್ತು ಖಂಡಿತವಾಗಿಯೂ' ಎನ್ನುವುದರ ಬದಲು ಹಳ್ಳಿಗರು ಕಂಟೀಸ್ ಎಂದು ಹೇಳುತ್ತಾರೆ. ಬೈಲಹಳ್ಳಿಯಲ್ಲಿ ಸುಬ್ಬೇಗೌಡನಿಗಾ ಗಲಿ, ಮತ್ತಾರಿಗಾಗಲಿ, ಇಂಗ್ಲಿಷು ಬರುವುದಿಲ್ಲ. ಆದರೂ ಅವರು ಈ ಪದಗಳ ನ್ನೆಲ್ಲಾ ಹೇಗೋ ಉಪಯೋಗಿಸುತ್ತಾರೆ. ಸುಬ್ಬೇಗೌಡನು ಯಾರಿಗಾದರೂ ತಾನು ಕೊಡಬೇಕಾಗಿದ್ದ ಹಣದ ಸಾಲವನ್ನು ತೀರಿಸಿದರೆ "ಡಿಕ್ರಿ ಮಾಡಿಬಿಟ್ಟೆ" ಎನ್ನುತ್ತಾನೆ. ಬೈಲಹಳ್ಳಿ ಒಕ್ಕಲಿಗರು ತಾವು ತಾವು ಊಟಮಾಡುವುದಕ್ಕೆ "ವುಂಡಾಯಿತೇ" ಎಂದು ಹೇಳುತ್ತಾರೆ. ಆದರೆ ಬ್ರಾಹ್ಮಣರನ್ನು ಕೇಳಬೇಕಾದರೆ ಗೌರವಕ್ಕಾಗಿ "ಉಪ್ಪವಾಯಿತೆ" ಎಂದು ಕೇಳುತ್ತಾರೆ. ಪ್ರಜೆಗಳು ಎನ್ನುವುದಕ್ಕೆ ಬದಲಾಗಿ ಸಾಧಾರಣವಾಗಿ ಪ್ರಭೆಗಳು ಮತ್ತು ಪ್ರತಿಗಳು ಎನ್ನುತ್ತಾರೆ. ಇವು ಗಳೆಲ್ಲಾ ತಾವು ವಿದ್ಯಾವಂತರೆಂದು ತಿಳಿದುಕೊಂಡಿರುವವರ ಮಾತು. ಉಳಿದ ವರು ಸರಿಯಾಗಿಯೇ ಮಾತನಾಡುತ್ತಾರೆ.

೭

ರೈತರು ಮಳೆಗಳಿಗೆಲ್ಲಾ ಬೇರೆ ಬೇರೆ ಹೆಸರುಗಳನ್ನು ಇಟ್ಟಿದ್ದಾರೆ. ನಾವು ಹೇಳುವ ಹೆಸರುಗಳನ್ನು ಅವರು ಮಳೆಗಳಿಗೆ ಹೇಳುವುದಿಲ್ಲ. ಹೇಳಿದರೂ ಅವರಿಗೆ ತಿಳಿಯುವುದಿಲ್ಲ. ಅಶ್ವಿನಿ ಮಳೆ ಎನ್ನುವುದರಲ್ಲಿ ವಕಾರವನ್ನು ಹೊಡೆದು ಅಶಿನಿ ಎಂದು ಹೇಳುತ್ತಾರೆ. ಕೃತ್ತಿಕೆ ಮಳೆಯು ಕೀರ್ತಿ ಮಳೆಯಾಗುತ್ತದೆ. ಮೃಗಶಿರೆಯು ಮಿಕ್ಕಶಾಲೆ ಎಂದಾಗುತ್ತದೆ. ಆರ್ದ್ರೆ ಮಳೆಯು ಆದ್ರಿ ಅಥವಾ ಆರಿದ್ರೆ ಎಂದು ರೂಪಾಂತರವನ್ನು ಹೊಂದುತ್ತದೆ. ಪುನರ್ವಸು ಪುಣರಾಶಿ ಯಾಗುತ್ತದೆ. ಪುಷ್ಯವು ಪುಸ್ಸೇ ಮಳೆಯಾಗುತ್ತದೆ. ಪುಷ್ಯ ಮಳೆಯು ಪ್ರತಿವರ್ಷವೂ ಸಾಧಾರಣವಾಗಿ ಬಂದೇ ಬರುತ್ತದೆ. ಒಕ್ಕಲಿಗನು ಇವಕ್ಕೆ ಭಾಷೆ ಕೊಟ್ಟ ಮಳೆಯೆನ್ನುತ್ತಾನೆ. ಆಶ್ಲೇಷೆಗೆ ಅಶಿಲೆ ಮಳೆಯೆಂದು ಹೆಸರು. ಕೆಲ

ವರು ಇದನ್ನು ದೊಡ್ಡ ಹುಸೇನ್ ಮಳೆ ಎಂದು ಕರೆಯುತ್ತಾರೆ. "ಅಸ್ಲೆ ಮಳೆಗೆ ಸಸ್ಲೆ ಬೆಟ್ಟಕ್ಕೆ ನೆಗೀತು" ಎಂಬುದೊಂದು ಗಾದೆ. ಮಖೆ ಮಳೆಯು ಬಂದರೆ ಬಹಳ ಜೋರಾಗಿ ಬರುತ್ತದೆ. ಇಲ್ಲದಿದ್ದರೆ ಪೂರ್ಣವಾಗಿ ಬರದೆ ನಿಂತು ಹೋಗುತ್ತದೆ. ಆದುದರಿಂದ ಅದಕ್ಕೆ "ಬಂದರೆ ಮೊಗೆ ಹೋದರೆ ಹೊಗೆ" ಎಂಬುದಾಗಿ ಹೇಳುತ್ತಾರೆ. ಅಂದರೆ ಮಖೆ ಮಳೆಯು ಬಂದರೆ ಮೊಗೆಯಲ್ಲಿ ನೀರನ್ನು ಎತ್ತಿ ಸುರಿಯುವಷ್ಟು ಜೋರಾಗಿ ಬರುವುದೆಂದು ಅರ್ಥ. ಚಿತ್ತೆ ಮಳೆಯು, ಹುಯಿದ ಕಡೆಗೆ ಹುಯ್ಯುತ್ತದೆ. ಇಲ್ಲದ ಕಡೆಗೆ ಇಲ್ಲ. ಅದುದರಿಂದ ಅದಕ್ಕೆ ಕುರುಡುಚಿತ್ತೆ ಎಂದು ಹೆಸರು. "ಕುರುಡುಚಿತ್ತೆ ಎರಚಿದತ್ತ ಬೆಳೆ." ರೈತರು ಈ ಪದಗಳನ್ನೆಲ್ಲಾ ಸರಾಗವಾಗಿ ಹೇಳುತ್ತಿದ್ದರು. ಮೋಜಿನಿದಾರರಿಗೆ ಮೊದಲು ಮೊದಲು ಅವುಗಳೊಂದೂ ಅರ್ಥವಾಗುತ್ತಿರಲಿಲ್ಲ. ಆದರೆ ನಾವು ಆಯಾ ಪದಗಳ ಸರಿಯಾದ ರೂಪಗಳನ್ನು ತಿಳಿಸಿದ ಮೇಲೆ ಅವರೂ ಕೂಡ ಒಕ್ಕಲಿಗರ ಪದಗಳನ್ನೇ ಉಪಯೋಗಿಸಲು ಪ್ರಾರಂಭಿಸಿದರು.

* * * *

ಮಳೆ ಬಂದ ಮರುದಿವಸ ಅಳೆಯುವುದಕ್ಕೆ ಹೊಲಗಳ ಕಡೆಗೆ ಹೋಗಿದ್ದಾಗ ಹೊಲದಲ್ಲೆಲ್ಲಾ ಕಾಡು ಹಂದಿಗಳ ಹೆಜ್ಜೆ ಗುರುತು ಕಾಣಿಸಿತು. ರೈತರೆಲ್ಲಾ ಹಂದಿ ಬಂದಯ್ತೆ ಕಾಡು ಹಂದಿ ಎಂದು ಮಾತಾಡಿಕೊಂಡರು. ಅಳತೆ ಮುಗಿಸಿಕೊಂಡು ಮನೆಗೆ ಬಂದನಂತರ ಪಟೇಲ ಸುಬ್ಬೇಗೌಡನು ನನ್ನ ಬಳಿ ಬಂದು "ನಾಳೆ ರಾತ್ರಿ ಬೇಟೆ ಹೋಯ್ತೀವಿ. ನಾಡದು ಅಳ್ಯೋಕೆ ಬಿಡ್ತು ಕೊಡಿಸಿ" ಎಂದನು. ಬೇಟೆಯನ್ನು ನೋಡಬೇಕೆಂದೂ ನನಗೂ ಬಹಳ ಕುತೂಹಲವಿತ್ತು. "ಆಗಲಿ, ಸಾಹೇಬರಿಗೆ ಹೇಳಿ ರಜ ಕೊಡಿಸುತ್ತೇನೆ" ಎಂದೆ. ಪಟೇಲನು ಕುಳವಾಡಿಯನ್ನು ಕರೆದು ನಾಳೆ ರಾತ್ರಿ ಬೇಟೆಗೆ ಗಿಡ್ಕೆ ಹೋಗ್ಬೇಕು. ಮನೆಗೊಂದಾಳು, ಬಲೆ, ದೊಣ್ಣೆ, ನಾಯಿ, ಸಜ್ಜ ಮಾಡ್ಕೊಂಡು ಊರ್ಮುಂದ್ಲ ಹನುಮಂತ್ರಾಯನ ದೇವಸ್ಥಾನಕ್ಕೆ ಬರ್ಬೇಕು. ಬರ್ದೋರು ಇಪ್ಪತ್ತನಾಲ್ಕು ದುಡ್ಡು ದಂಡ ತರ್ಬೇಕಾಯ್ತದೆ" ಎಂಬುದಾಗಿ ಸಾರಿಸಿದನು. ಮೋಜಿನಿದಾರರು ಮೊದಲು ರಜಾ ಕೊಡುವುದಕ್ಕೆ ಒಪ್ಪಲಿಲ್ಲ. "ಈಚೆಗೆ ನೀವು ರಜಾ ಕೇಳುವುದು ಹೆಚ್ಚಾಯಿತು. ಹೀಗೆ ಮಾಡಿದರೆ ಕೆಲ್ಸ ಮುಗಿಯುವುದು ಯಾವತ್ತು ? ನಮ್ಮ ಆಫೀಸರು ನನ್ನ ಮೇಲೆ ಆಕ್ಷೇಪಿಸಿಯಾರು. ಹಾಗೆ ಹೀಗೆ" ಎಂದರು. ನಾನು ಅವರಿಗೆ ಬೇಟೆಯ ವಿನೋದಗಳನ್ನೆಲ್ಲಾ ಹೇಳಿ "ನೀವು ಬನ್ನಿ. ಬಹಳ ಚೆನ್ನಾಗಿರುತ್ತೆ ಎಂದೆ. ಸಾಹೇಬರು "ಆ ಹಂದಿ ಕೊಲ್ಲೋದ ನೋಡೋಕೆ

ನಾನು ಬರೋದಿಲ್ಲಯ್ಯ. ಚೆನ್ನಾಗಿರೋಕೆ ಅದೇನು ದೇವರ ಉತ್ಸವವೆ" ಎಂದರು.

ಅಷ್ಟು ಹೊತ್ತಿಗೆ ಅಲ್ಲಿಗೆ ಮೂಡ್ಲಗಿರಿಯು ಬಂದನು. ಸಾಹೇಬರನ್ನು ಕುರಿತು "ನನಗೆ ನಾಳೆ ನಾಡದು ಅಳೆಯೋಕೆ ಬಿಡುವು ಬೇಕು, ಬುದ್ಧಿ" ಎಂದನು. ಸಾಹೇಬರು "ನಾಳೆಯಾಕೊ ರಜ. ಬೇಟೆ ನಾಡದ್ದು ತಾನೆ. ನಾಡದು ರಜ ಕೊಡ್ತೀನಿ ಹೋಗು" ಎಂದರು. ಮೂಡ್ಲಗಿರಿಯು "ನನ್ನ ಮನೇಲಿ ಬಲೆ ಇಲ್ಲ ಸಾಹೇಬ್ರೆ, ಬಲೆ ನಮ್ಮ ಭಾವೈದ್ನ ಮನೆಯಿಂದ ತರ್ಬೇಕು. ನಮ್ಮ ಭಾವೈದ್ನ ಮನೆ ರಾಮಪ್ನೋರು ಕಂಡವ್ರೆ, ಇಲ್ಲಿಗೆ ನಾಲ್ಕು ಹರದಾರಿ ಆಗ್ತದೆ" ಎಂದನು. ಸಾಹೇಬರು "ಬಲೆ ಇಲ್ದಿದ್ರೆ ಬೇಡ, ದೊಣ್ಣೇ ತಕೊಂಡು ಹೋಗು. ದೊಣ್ಣೇಲಿ ಹೊಡದ್ರೆ ಹಂದಿ ಮಾಂಸ ಕೆಡೋದಿಲ್ಲ" ಎಂಬುದಾಗಿ ಗದರಿಸಿದರು. ಮೂಡ್ಲಗಿರಿಯು "ಹಂಗಾಗೊಕಿಲ್ಲ ಬುದ್ಧಿ, ಬಲೆ ಇಲ್ದಿದ್ರೆ ಮಾಂಸ ಕೊಡೋಕಿಲ್ಲ" ಎಂದನು. ಮಾಂಸದ ಮಾತನ್ನು ಕೇಳಿ ಸಾಹೇಬರಿಗೆ ಜಗುಪ್ಸೆಯುಂಟಾಯಿತು. ಆದರೂ ಆ ವಿವರ ಇನ್ನೂ ಸ್ವಲ್ಪ ಹೆಚ್ಚಾಗಿ ತಿಳಿದುಕೊಳ್ಳಬೇಕೆಂದು ಕುತೂಹಲವುಂಟಾಯಿತು. ಅವರು ನನ್ನ ಕಡೆ ತಿರುಗಿ "ಇದೇನ್ರಿ ಇವ ಹೇಳೋದು" ಎಂದರು. ಮೂಡ್ಲಗಿರಿಯು ರಾಮಪ್ಪನೋರ್ಗೆ ಗೊತ್ತಯ್ತೆ. ಬಲೆ ಇಲ್ದೆ ಆಳು ಹೋದ್ರೆ ಮಾಂಸ ಕಮ್ಮಿ. ಬಲೆ ಇಲ್ದಿದ್ರೆ ಎಲ್ಲಾದ್ರು ಹೊರಗಿನಿಂದಲಾದ್ರು ತರ್ಬೇಕು. ಹೋದ ಸಲ ಬೇಟೇಲಿ ಹಂದೀನ ನಾನೆ ಗುತ್ತಿಇಂದ ಹೊರಡಿಸಿದ್ರೂ ಬಲೆ ಇಲ್ಲ ಅಂತ ನನಗೆ ಮಾಂಸ ಕಮ್ಮಿ ಕೊಟ್ರು" ಎಂದ. ಸಾಹೇಬ್ರು ನಗುತ್ತಾ "ಚೆನ್ನಾಗಿದೆ" ಎಂದರು. ಬೈಲಹಳ್ಳಿಯಲ್ಲಿ ಬೇಟೆಗೆ ಹೋಗುವಾಗ ಮನೆಗೊಂದು ಬಲೆಯನ್ನು ಕಳುಹಿಸಲೇ ಬೇಕು. ಆಳಿಲ್ಲದವರು ಕೂಲಿ ಆಳನ್ನು ಮಾಡಬೇಕು. ಬಲೆಯಿಲ್ಲದವರು ಬೇರೆ ಕಡೆಯಿಂದ ಬಲೆ ತರಬೇಕು. ಸಾಹೇಬರು ನಾಯ್ಕರಹಳ್ಳಿಗೆ ಹೋಗಿ ಬಲೆಯನ್ನು ತರಲು ಮೂಡ್ಲಗಿರಿಗೆ ರಜ ಕೊಟ್ಟರು. ಅನಂತರ ನನ್ನೊಂದಿಗೆ "ರಜಾನೆ ಕೊಡಬಾರದು. ಅಳತೆ ಆದಷ್ಟು ಬೇಗ ಸ್ಟ್ರಿಕ್ಟ್ ಆಗಿ ಮುಗಿಸಿಬಿಡಬೇಕು ಅಂತ ಯೋಚನೆ ಮಾಡ್ತೀನಿ. ಆದರೆ ನಿಮ್ಮ ಹಳ್ಳಿಯ ವಿಚಿತ್ರವಾದ ಪದ್ಧತಿಗಳನ್ನು ನೋಡಿದರೆ, ಇಲ್ಲಿ ನಮ್ಮ 'ಸ್ಟ್ರಿಕ್ಟ್' ಆಷ್ಟೊಂದು ಪ್ರಯೋಜನಕಾರಿಯಾದುದಲ್ಲವೆಂದು ಕಾಣುತ್ತೆ" ಎಂದರು.

ಮರುದಿವಸ ರಾತ್ರಿ ಮನೆಗೊಂದು ಆಳಿನಂತೆ ದೇವಸ್ಥಾನದಲ್ಲಿ ಮುಪ್ಪತ್ತು

ಆಳುಗಳು ಬಂದು ಸೇರಿದರು. ಅವರ ಜತೆಯಲ್ಲಿ ಮುವ್ವತ್ತು ನಾಯಿಗಳು ಇದ್ದುವು. ಆ ನಾಯಿಗಳು ಬಹಳ ಚುರುಕಾದ ನಾಯಿಗಳಲ್ಲ. ನಮ್ಮ ಕಡೆ ಪ್ರತಿಯೊಬ್ಬ ಒಕ್ಕಲಿಗನ ಮನೆಯಲ್ಲಿಯೂ ಒಂದೊಂದು ನಾಯಿ ಇರುತ್ತದೆ. ಅವನು ತಾನು ಬೇಟೆಗೆ ಹೊರಟಾಗ ಅದನ್ನೂ ಜತೆಯಲ್ಲಿ ಕರೆದುಕೊಂಡು ಹೋಗುತ್ತಾನೆ. ಆಳುಗಳೆಲ್ಲಾ ಬುತ್ತಿಯನ್ನೂ, ರೊಟ್ಟಿಯನ್ನೂ ಮಾಡಿಸಿಕೊಂಡು ಬಂದಿದ್ದರು. ಪ್ರತಿಯೊಬ್ಬನ ಹತ್ತಿರವೂ ಒಂದೊಂದು ಈಟಿ ಇತ್ತು. ಬೈಲಹಳ್ಳಿಯ ಸುತ್ತ ಮೂರು ಮೈಲಿ ಸಾಧಾರಣ ಬಯಲುಸೀಮೆಯಾದರೂ ಆಚೆಗೆ ತಕ್ಕಮಟ್ಟಿಗೆ ಗಿಡ (ಕಾಡು) ಇದೆ. ಆ ಗಿಡದಲ್ಲಿ ಕಾಡು ಹಂದಿಗಳು ಬಂದು ಸೇರಿಕೊಳ್ಳುತ್ತವೆ. ರೈತರು ಆ ಹಂದಿಗಳ ವಿಚಾರದಲ್ಲಿ ಬಹಳ ಉತ್ಸಾಹದಿಂದ ಮಾತನಾಡಿಕೊಳ್ಳುತ್ತಿದ್ದರು. ಆ ಮಾತುಗಳನ್ನೆಲ್ಲಾ ನಾನು ವಿನೋದದಿಂದ ಕೇಳುತ್ತಿರುವಾಗ ಕುರಿ ತಿಮ್ಮನು, ಕಾಸೇ ಗಿಡ್ಡನ ಮಗನನ್ನು ಕುರಿತು "ಏ ಮೊಗಾ, ಹೋದ್ಬಾರಿ ಬೇಟೇಲಿ ತೆತ್ತ ದಂಡ ಜ್ಞಾಪಕ ಆಯ್ತು. ಇವತ್ತು ನಿದ್ದೆ ಗಿದ್ದೆ ಹೋದಿಯ, ಎಚ್ಚರ" ಎಂದನು. ನಾನು 'ಕಾಸೆ ಗಿಡ್ಡನ ಮಗ ಹೋದ್ಬಾರಿ ಯಾಕೆ ದಂಡ ತೆತ್ತ' ಎಂದೆ. ಆ ವಿಚಾರ ಊರಿನವರಿಗೆಲ್ಲಾ ಬಹಳ ವಿನೋದವನ್ನುಂಟು ಮಾಡುವ ಮಾತಾಗಿದ್ದಂತೆ ಕಂಡಿತು. ಅವರೆಲ್ಲ ಗಟ್ಟಿಯಾಗಿ ನಕ್ಕರು. ಅನಂತರ ಕಾಸೆಗಿಡ್ಡನು ಈ ರೀತಿ ಹೇಳಿದನು. "ಬುದ್ಧಿ, ಬೇಟೆಗೆ ಹೋಗೊ ಆಳುಗಳನ್ನೆಲ್ಲಾ ಉಳಿಯಾಳು, ಅಟ್ಟುಳಿಯಾಳು, ಅಂಚೆ ಆಳು ಅಂತ ವಿಭಾಗ ಮಾಡ್ತೀವಿ. ಇವ್ರೆಲ್ಲಾ ಗೊತ್ತಾದ್ಕಡೆ ಕೂತ್ಕೊಂಡು ಬೇಟೆಗೆ ಹೊಂಚು ಹಾಕ್ತಾ ಇರ್ತಾರೆ. ಕೆಲವು ಆಳುಗಳು ಮುಂದೆ ಹೋಗಿ ಪೊದೆನೆಲ್ಲಾ ಬಡಿದು ಹೊ ಅಂತ 'ತಲೆ ಕೂಗನ್ನು' ಎಬ್ಬಿಸುತ್ತಾರೆ. ಹಂದಿಯು ಯಾವುದೋ ಗಿಡದಲ್ಲಿ ಅಡಗಿರುವುದು, ಆ ಕೂಗನ್ನು ಕೇಳಿ ಹೊರೀಕೆ ಬರ್ತದೆ. ಸುತ್ತಾ ಇರೊ ಆಳ್ಗೊಳು ಅದು ಎಡ್ಕೆ ಬಲ್ಕೆ ಹೋಗ್ದಂಗೆ ದೊಣ್ಣೇನೂ ಈಟೀನೂ ಸದ್ದು ಮಾಡಿಕೊಂಡು ಅದನ್ನ ಬಲೆಕಡ್ಗೆ ಓಡಿಸಿಕೊಂಡು ಬರ್ತಾರೆ. ಅನಂತ್ರ ಅದ್ನ ಕೊಲ್ತೀವಿ. ಹೋದ ಬಾರಿ ಹಂದೀನ ಓಡಿಸ್ಕೊಂಡು ಬರೋವಾಗ ಹಂದಿ ಒಂದ್ಸಲ ಗಿಡ್ಡನ ಮಗ್ನ ಕಡೆ ನುಗ್ಗಿತು. ಅವ ಯಾವುದೋ ಜ್ಞಾನದಲ್ಲಿ ನಿಂತಿದ್ದೋನು ಈಟಿನ ತಿವಿದು ಹಂದಿನ ಹೆದರಿಸೋದ ಒಂದು ಗಳಿಗೆ ನಿದಾನ ಮಾಡ್ದ. ಹಂದಿ ಅವನ ಕಡೆ ನೆಗೆದು ಓಟ ಹಾಕಿ ಕಾಡ ಸೇರ್ಕೊಂಡ್ಬಿಟ್ತು" ಎಂದ. ನಾನು "ಅದು ಸರಿಯಯ್ಯ, ಆದರೆ ಗಿಡ್ಡನ ಮಗ ಯಾಕೆ ದಂಡ ತೆತ್ತ"

ಎಂದೆ. ಕುರಿ ತಿಮ್ಮನು "ಬೇಟೇನ ಯಾರು ಬಿಟ್ರೆ ಅದರ ಬೆಲೆ ಅವರು ಊರೊಟ್ಟಿನ ದುಡ್ಡಿಗೆ ಕಟ್ಟಿಕೊಡಬೇಕು" ಎಂದ. ವೋಜಿನಿದಾರರು "ಸರಿ ಹೋಯ್ತು. ಚೆನ್ನಾಗಿದೆ" ಎಂದರು.

ಆ ರಾತ್ರಿ ಪಟೇಲ, ಪೂಜಾರಿ ಐನೂರನ್ನು ದೇವಸ್ಥಾನಕ್ಕೆ ಕರೆಸಿ ನಿತ್ಯಕ್ಕಿಂತಲೂ ಹೆಚ್ಚು ವೈಭವದಿಂದ ಮಂಗಳಾರತಿ ಮಾಡಿಸಿ "ಸೋಮಿ ನಮ್ಮಪ್ಪ, ಬೇಟೆ ಕರುಣಿಸು" ಎಂಬುದಾಗಿ ಪ್ರಾರ್ಥಿಸಿದ. ಬೇಟೆಯು ದೊರೆತ ದಿವಸ ಐನೂರಿಗೆ ಆರು ದುಡ್ಡು ಕೊಡುವುದು ಪದ್ಧತಿ. ಐನೂರು ಬೇಟೆಯ ಮುಂದಾಳಾದ ಪಟೇಲನ ಕೊರಳಿಗೆ ಒಂದು ಹೂಮಾಲೆಯನ್ನು ಹಾಕಿ ಆಶೀರ್ವದಿಸಿದ. ಆ ಮೂವತ್ತು ಆಳುಗಳು ನಾಯಿಗಳೊಂದಿಗೆ ಹೊರಟರು. ಜತೆಯಲ್ಲಿ ನಾನೂ ನಾಣಿಯೂ ಹೊರಟೆವು. ವೋಜಿನಿದಾರರು ನಾನೂ ಬೇಟೆ ನೋಡಬೇಕೆಂದು ತಾವೂ ಹೊರಟರು.

ಕಾಡಿನಲ್ಲಿ ಒಂದು ಚಿಕ್ಕ ಗುಡ್ಡದ ಮೇಲೆ ಗಿಡಗಳು ವಿಶೇಷವಾಗಿದ್ದವು. ಅಲ್ಲಿಂದ ಕೆಳಗಡೆಗೆ ನೆಲವು ಇಳಿಜಾರಾಗಿ ಬಂದಿದ್ದಿತು. ಆ ಇಳಿಜಾರಿನ ಕೊನೆಯಲ್ಲಿಯೂ ಹೆಚ್ಚು ಗಿಡಗಳಿದ್ದುವು. ಆಳುಗಳು ಆ ಇಳಿಜಾರಿನ ಕೊನೆಯಲ್ಲಿ ಬಲೆಯನ್ನು ಬೀಸಬೇಕೆಂದು ನಿಶ್ಚಯಿಸಿದರು. ಬೇಟೆ ಕಾಯುವುದು ಇನ್ನೂ ಪ್ರಾರಂಭವಾಗಿರಲಿಲ್ಲವಾದರೂ ಅವರಾರೂ ಗಟ್ಟಿಯಾಗಿ ಮಾತನಾಡುತ್ತಿರಲಿಲ್ಲ. ಅವರಲ್ಲಿ ಪ್ರತಿಯೊಬ್ಬನಿಗೂ ತಾನು ಏನು ಮಾಡಬೇಕೆಂಬುದು ಗೊತ್ತಿದ್ದಂತೆ ತೋರಿತು. ಯಾವ ಯಾವ ಆಳು ಎಲ್ಲೆಲ್ಲಿ ಕೂರಬೇಕು, ಎಲ್ಲಿ ನಿಲ್ಲಬೇಕು, ಬಲೆ ಎಲ್ಲಿ ಬೀಸಬೇಕು ಎಂಬುದೆಲ್ಲಾ ಅವರಿಗೆ ತಾನೇತಾನಾಗಿ ಹೊಳೆದಿದ್ದಂತೆ ತೋರಿತು. ಆ ರಾತ್ರಿ ಬಹಳ ಕತ್ತಲೆಯಾಗಿದ್ದರೂ, ಅವರಿಗೆ ಆ ಕತ್ತಲೆಯಲ್ಲಿಯೂ ಕಣ್ಣು ಚೆನ್ನಾಗಿ ಕಾಣುತ್ತಿದ್ದಿತು. ಕಾಡಿನ ಭಯ ಅವರಾರಿಗೂ ಸ್ವಲ್ಪ ಇದ್ದಂತೆ ತೋರಲಿಲ್ಲ. ಅವರು ಬಲೆಗಳನ್ನೆಲ್ಲಾ ಒಂದರೊಂದಿಗೆ ಒಂದನ್ನು ಗಂಟು ಹಾಕಿ ಅದರ ಎರಡು ತುದಿಗಳಿಗೂ 'ಆಣಿ' (ಬಿದರಿನ ದೊಣ್ಣೆ)ಯನ್ನು ಹಾಕಿ, 'ಬಗ್ರಿ' ಹಗ್ಗವನ್ನು ಕಟ್ಟಿ ಆಚೆ ಈಚೆ ಗಿಡಗಳಿಗೆ ಬಿಗಿದರು. ಅದು ನೂರಾರು ಮಾರಿನ ಒಂದು ಬಲೆಯ ಗೋಡೆಯಾಯಿತು. ಬಲೆಯ ಎರಡು ಕಡೆಯೂ ಜನಗಳು ಗುತ್ತಿಗಳ ಮರೆಯಲ್ಲಿ ಕುಳಿತರು. ಗಂಡಾಳುಗಳು ಬೆಟ್ಟದ ಮೇಲೇರಿ ಹೋ ಎಂಬುದಾಗಿ ಕೂಗೆಬ್ಬಿಸಿದರು. ಜತೆಯಲ್ಲಿ ತೆಗೆದುಕೊಂಡು ಹೋಗಿದ್ದ ತಮಟೆಯನ್ನು ಬಡಿದು ಬಲವಾದ ಶಬ್ದ ಮಾಡಿದರು.

ಬಹಳ ಹೊತ್ತಿನವರೆಗೆ ಏನೂ ನಡೆಯಲಿಲ್ಲ. ನಾವು ಮರದ ಮೇಲೆ

ನಿಂತುಕೊಂಡು ಉಸಿರನ್ನು ಹಿಡಿದುಕೊಂಡು ನೋಡುತ್ತಿದ್ದೆವು. ಇದ್ದಕ್ಕಿದ್ದಂತೆ ಪೊದೆಯಿಂದ ಒಂದು ದೊಡ್ಡ ಹಂದಿ ಎದ್ದಿತು. ಅದು ತಲೆಯನ್ನೂ ಕೂದಲುಗಳನ್ನೂ ಕೊಡವಿಕೊಂಡು ಭಯಂಕರವಾಗಿ ಉಸಿರುಬಿಡುತ್ತಾ ಗುಡ್ಡದ ಕೆಳಗಡೆಗೆ ಓಡಲು ಪ್ರಾರಂಭಿಸಿತು. ಅದು ಎಡಬಲಕ್ಕೆ ತಿರುಗಲು ಪ್ರಯತ್ನಿಸಿದರೆ ಅಲ್ಲಿದ್ದ ಆಳುಗಳು ಸದ್ದುಮಾಡಿ ಅದನ್ನು ಮುಂದಕ್ಕೆ ತಿರುಗಿಸುತ್ತಿದ್ದರು. ಹಂದಿ ಎದ್ದಿದೆ ಬೇಟೆ ಸಿಕ್ಕಿದೆ ಎಂಬ ಕೂಗು ಕಾಡಿನಲ್ಲೆಲ್ಲಾ ಪ್ರತಿಧ್ವನಿಯಾಗುತ್ತಿತ್ತು. ಹಂದಿಯು ನೇರವಾಗಿ ಓಡುತ್ತಾ ಬಲೆಯ ಗೋಡೆಯ ಬಳಿಗೆ ಬಂದು ಬಲೆಯ ಮೇಲೆ ನುಗ್ಗಿತು. ಅದು ನುಗ್ಗಿದ ವೇಗಕ್ಕೆ ಬಲೆಯನ್ನು ಅಚೆ ಈಚೆ ಬಿಗಿದಿದ್ದ ಗಂಟು ಬಿಚ್ಚಿ ಹೋಗಿ ಬಲೆಯು ಅದರ ಮೇಲೆ ಕವಿದುಕೊಂಡಿತು. ಅನಂತರ ಆಳುಗಳು ದೊಣ್ಣೆಗಳಿಂದಲೂ, ಈಟಿಗಳಿಂದಲೂ ಅದನ್ನು ತಿವಿದು ಕೊಂದರು. ತಮಟೆ ವಾದ್ಯದೊಂದಿಗೆ ಅದನ್ನು ಹೊತ್ತುಕೊಂಡು ಊರಿನಲ್ಲಿ ಮೆರವಣಿಗೆ ಬಂದರು. ಆದರೆ ಬೇಟೆ ಸಿಕ್ಕದೆ ಹಿಂದಿರುಗಿದ್ದಾಗ ಹಿಂದಲ ವರ್ಷ ಯಾರಿಗೂ ಗೊತ್ತಾಗದಂತೆ ನಾಚಿಕೆಯಿಂದ ಸದ್ದಿಲ್ಲದೆ ಊರನ್ನು ಸೇರಿಕೊಂಡಿದ್ದರು.

* * * *

ಬೈಲಹಳ್ಳಿಯ ದೇವರಿಗೆ ಪ್ರತಿ ರಾತ್ರಿಯೂ ಬೈಲಹಳ್ಳಿ ಕುರುಬನ ನಾಯಿ ಸಿಂಗನೇ ಕಾವಲು. ಈ ನಾಯಿಯು ಈಗ ಆರು ಏಳು ವರ್ಷಗಳಿಂದಲೂ ದೇವಸ್ಥಾನವನ್ನು ಒಂದು ರಾತ್ರಿಯೂ ತಪ್ಪದೆ ಕಾಯುತ್ತಿದೆ. ಅದಕ್ಕೆ ಬೈಲಹಳ್ಳಿಯ ಜನವೆಲ್ಲಾ ಗೊತ್ತು. ಅವರಾರನ್ನು ಕಂಡರೂ ಅದು ಸಂಶಯದಿಂದ ಬಗಳುವುದಿಲ್ಲ. ಆದರೆ ಹೊರಗಿನವರು ದೇವಸ್ಥಾನದ ಹತ್ತಿರಕ್ಕೆ ಬಂದರೂ ಅವಾಂತರ ಮಾಡುತ್ತದೆ. ಮೋಜಿನಿದಾರನು ಮೊದಲು ದಿವಸ ಬೈಲಹಳ್ಳಿಗೆ ಬಂದಾಗ ಅವರ 'ಕೋಟು, ಬೂಟು, ಶರಟು, ಶರಾಯಿ' ನೋಡಿ ಅವರ ಮೇಲೆ ಬೀಳುವುದಕ್ಕೆ ಬಂದಿತು. ಅವರ ಮೀಸೆಯನ್ನು ಕಂಡರಂತೂ ಅದು ಗುರ್ ಎನ್ನುತ್ತಿದ್ದಿತು. ಮೋಜಿನಿದಾರರು ತಮ್ಮ ವೇಷಗಳನ್ನೆಲ್ಲಾ ತೆಗೆದುಹಾಕಿ ಪಂಚೆ ಉಟ್ಟುಕೊಂಡು ಕುಳಿತುಕೊಂಡಾಗ ನಾಯಿಯು ಸಮಾಧಾನದಿಂದ ಇರುತ್ತಿದ್ದಿತು.

ನೆನ್ನೆ ದಿವಸ ಮೋಜಿನಿದಾರರು 'ಐನೂರನ್ನು' ಕುರಿತು "ಈ ನಾಯಿಯನ್ನು ಯಾಕೆ ಇಲ್ಲಿ ಕಾವಲು ಹಾಕಿದ್ದೀರಿ" ಎಂಬುದಾಗಿ ಕೇಳಿದರು. ಐನೂರು 'ಸ್ವಾಮಿ, ಹಿಂದೆ ಈ ದೇವಸ್ಥಾನದಲ್ಲಿ ದೇವರ ಸಾಲಿಗ್ರಾಮದ ಸರ ಯಾರೋ

ದುರಾತ್ಮರು ಕದ್ದರು. ಆಗ ನಾನು ಇಲ್ಲಿ ಇರಲಿಲ್ಲ. ಕ್ಯಾತ್ನಳ್ಳಿ ಪೂಜಾರಿ ಅಯ್ಯ ಇದ್ದ. ಪೂಜಾರಿ ಅಯ್ಯ ದೇವರ ಮೈಗೆ ಮೆಣಸಿನಕಾಯಿ ಅರೆದು ಹಚ್ಚಿದ. ಪಾಪ, ನಮ್ಮಪ್ಪನ ಮೆಣಸಿನಕಾಯಿ ಖಾರಕ್ಕೆ ಬೆಂದುಹೋಯ್ತು. ಬೆಳಗಾಗವುದರೊಳಗಾಗಿ ನರಸೀಪುರದ ದಾರೀಲಿ ಸಾಲಿಗ್ರಾಮದ ಸರ ಎತ್ಕೊಂಡು ಹೋಗ್ತಾ ಇದ್ದ ಕಳ್ಳನ್ಗೆ ಹೊಟ್ಟೇಲಿ ತಡೀಲಾರದ ಉರಿ, ಸಂಕಟ ಎದ್ದು ಬಿಡ್ತು. ಆ ಪಾಪಿ ಬಡ್ಕೊತಾ ಓಡಿಬಂದ ದೇವರ ಪಾದಕ್ಕೆ ಬಿದ್ದ. ಆಮೇಲೆ, ನಮ್ಮೂರ ಹುಲ್ಲುಗಾವಲಿಗೆ ಆ ವೇಳೆಗೆ ಸರಿಯಾಗಿ ಮೇಯೋಕೆ ಬಂದಿದ್ದ ಅರಮನೆಯ ದೊಡ್ಡ ದನವಲ್ಲಿ ನೂರು ಬಿಂದಿಗೆ ಹಾಲು ಕರೆದು ಸ್ವಾಮಿಗೆ ಅಭಿಷೇಕ ಮಾಡಿದೆವು. ಅಲ್ಲಿಂದೀಚೆಗೆ ಈ ನಾಯಿ ಕಾವಲ್ಗೆ ಹಾಕಿದೀವಿ" ಎಂದನು.

ಪೂಜಾರಿಯ ಮಾತು ಮುಗಿಯುವುದರೊಳಗಾಗಿ ಸುಬ್ಬೇಗೌಡನು "ಈ ನಾಯಿ ಅಂದ್ರೆ ಸಾಮಾನ್ಯ ಅಲ್ಲ ಸಾಹೇಬ್ರೆ, ಒಂದ್ಸಲ ಇದ್ನ ಮುನ್ನೂರು ರೂಪಾಯ್ಗೆ ಕೇಳಿದ್ರು. ನಮ್ಮೂರ ಕುರುಬ ಒಂದ್ಸಲ ಪಡವಲಕಡೆಯಿಂದ ಮುನ್ನೂರ ಕುರಿ ಅಟ್ಕೊಂಡು ಬರ್‍ತಿದ್ದ, ದಾರೀಲಿ ಗಿಡದೊಳ್ಗೆ ಎರಡು ಕುರಿ ನುಗಚ್ಕಂಡು ತಪ್ಪಿಸಿಕೊಂಡ್ವು. ಕುರುಬನಿಗೆ ನಮ್ಮೂರ್‍ಗೆ ಬಂದ್ಮೇಲೆ ಆ ಇಚಾರ ಗೊತ್ತಾಯ್ತು. ಆದ್ರೂ ಏನ್ಮಾಡೋಕೂ ತೋಚದೆ ಸುಮ್ನೆ ಕೂತಿದ್ದ,ಆಮೇಲೆ ಕಟ್ಟೆಪುರತ್ತಾವ ಎರಡ್ಕುರಿ ಸಿಕ್ಕಯ್ತೆ ಅಂತ ವಾರ್ತೆ ಬಂತು. ನಮ್ಮ ಕುರುಬ ಈ ನಾಯಿನೂ ಕಟ್ಕೊಂಡು ಅಲ್ಲಿಗೆ ಹೋದ. ಕಟ್ಟೆಪುರದ ಕುರುಬನಿಗೆ ನಮ್ಮ ಕುರುಬನ ಕುರಿಗಳು ಸಿಕ್ಕಿದ್ದು ಸಾಜ. ಆದರೆ ಅವನು ಆ ಕುರಿಗಳ್ನ ತನ್ನ ನಾನೂರು ಕುರಿಗಳ ಮಂದೇಲಿ ಸೇರಿಸಿಬಿಟ್ಟಿದ್ದ, ನಮ್ಮ ಕುರುಬ ತನ್ನದು ಎರಡು ಕುರಿ ಹೋಗಯ್ತೆ ಅಂತ ಹೇಳೋತ್ಲು ಆ ಕುರುಬ ನಿಂದೇ ಹೋಗಿರೋ ಕುರಿ ಅನ್ನೋದು ನಂಗೆ ಹೇಗೆ ಗೊತ್ತಾಯ್ತದೆ. ನಿನ್ಕುರಿ ಯಾವುದೊ ಅದ್ನ ನೀನೆ ಆರಿಸ್ಕೊ ಅಂದ, ನಮ್ಮ ಕುರುಬನಿಗೆ ತನ್ನ ಕುರಿ ಯಾವುದು ಅನ್ನೋದು ಹೇಗೆ ಗೊತ್ತಾಯ್ತದೆ ? ಅವನ್ಗ ಮಂದೇಲಿ ಇರೊ ಕುರಿಗಳೆಲ್ಲಾ ತನ್ನ ಕುರಿಗಳಾಗಿ ಕಂಡುವು. ಆಗ, ನಮ್ಮ ಕುರುಬನಿಗೆ ಒಂದು ವೇಚನೆ ಹೊಳೀತು. ಅವ ಕಟ್ಟೇಪುರದ ಕುರುಬನ್ನ ನಮ್ಮ ಕುರಿ ಯಾವುದು ಅನ್ನೋದ ನನ್ನ ನಾಯಿ ಓಡದ್ರು ಒಪ್ಪಿಕೋತಿಯಾ" ಎಂದ. ಆ ಕುರುಬ ಬಾರಿ ಸಾಚಾ ಮನಸ. ಹೂ ಆಗ್ಲಿ ಅಂದ. ನಮ್ಮ ಕುರುಬ ನಾಯಿನ ಕರದು " ಸಿಂಗಾ, ಈ ಮಂದೇಲಿ ನಮ್ಮ ಕುರಿ ಹಿಡಿಯೊ ಮಗಾ" ಎಂದ. ಸಿಂಗ ಕೂಡ್ಲೆ ಆ ನಾನೂರು ಕುರಿಮಂದೆಗೆ ನುಗ್ಗಿತು. ವಾಸ್ನೆ ಇಂದು ಮೊದ್ಲು ಒಂದು ಕುರಿ ಹಿಡೀತು. ಆಮೇಲೆ ಇನ್ನೊಂದು

ಕುರಿ ಹಿಡೀತು. ಆವತ್ತೆ ಕಟ್ಟೆಪುರದ ಕುರುಬ ಈ ನಾಯಿಗೆ ಮುನ್ನೂರು ರೂಪಾಯಿ ಬೆಲೆ ಕಟ್ಟಿದ್ದು. ಆಮೇಲೆ ನಮ್ಮ ಕುರಬ್ನೂ, ಸಿಂಗನೂ, ಎರಡು ಕುರೀನೂ ಹೊಡ್ಕೊಂದು ಒಬ್ಬರ ಮುಖ ಒಬ್ಬರು ನೋಟ್ತಾ ನಗತಾ ಈ ಊರಿಗೆ ಸೇರಿದ್ರು. ನಮ್ಮಪ್ಪನ್ನ ಕಾವಲ್ಗೆ ಈ ನಾಯಿಯೇ ಸರಿ" ಎಂದ. ಮೋಜಿನಿದಾರರು "ಹೌದು, ಆದರೆ ಆ ನಾಯಿಗೆ ನನ್ನ ಮೀಸೆ ಮೇಲೆ ಕಣ್ಣಿದೆ ಯಾವತ್ತು ನನ್ನ ಮೇಲೆ ಬೀಳ್ತದೊ ಕಾಣೆ. ಅದರ ಕಣ್ಣನ್ನ ನೋಡಿದ್ರೆ ನನ್ಗೆ ಭಯವಾಗುತ್ತೆ" ಎಂದರು.

* * * *

ನಮ್ಮ ಕಡೆ ಕೆಲವರು ರೈತರನ್ನು ಸೀತೆ ದಂಡು ಎಂದು ಕರೆಯುತ್ತಾರೆ, ಈ ಪದವನ್ನು ಅವರಿಗೆ ನಾವೆಲ್ಲಾ ಉಪಯೋಗಿಸುತ್ತೇವಾದರೂ ಅದರ ಅರ್ಥ ವಾಗಲಿ ಅಥವಾ ಅವರಿಗೆ ಆ ಹೆಸರು ಯಾಕೆ ಬಂದಿರಬಹುದೆಂಬ ಕಾರಣವಾಗಲಿ ನನಗೆ ತಿಳಿದಿರಲಿಲ್ಲ, ಸರ್ವೆನಡೆಯುತ್ತಿರುವ ಕಾಲದಲ್ಲಿ ಒಂದು ದಿವಸ ನಮ್ಮೂರ ಶೇಕದಾರ್ರು ನಮ್ಮ ಹಳ್ಳಿಗೆ ಬಂದರು. ಬಂದವರೇ 'ಇನ್ನೇನು ಗಂಡಸರು ಸೀರೆ ಉಟ್ಟುಕೊಂಡು ಊರೂರು ಅಲೆಯುವ ಕಾಲ ಬಂತು. ನೀವೆಲ್ಲಾ ಹೆಂಗಸರ ಹಾಗೆ ಸೀರೆ ಉಟ್ಟುಕೋಬೇಕು' ಎಂದು ವಿನೋದ ಮಾಡಿದರು. ಅದರ ಅರ್ಥ ನಮಗೆ ಸರಿಯಾಗಿ ತಿಳಿಯಲಿಲ್ಲ. ಆದರೆ ಮೂರು ನಾಲ್ಕು ದಿವಸಗಳೊಳಗಾಗಿ ಅಂತಹ ಒಂದು ಪಟಾಲಂ ಬೈಲಹಳ್ಳಿಗೆ ಬಂದೇ ಬಂತು. ಬೈಲಹಳ್ಳಿ ರೈತರೆಲ್ಲಾ ಅಳೆಯುವುದಕ್ಕೆ ಎರಡು ದಿವಸ ವಿರಾಮ ಬೇಕೆಂದು ಬೇಡಿದರು. ಆ ಬಂದ ಗುಂಪಿನ ಜನಗಳ ಪೈಕಿ ಒಬ್ಬ ಮುದುಕ ಇದ್ದ, ಸೀತೆ ದಂಡಿನ ಕತೆಯನ್ನು ಅವನಿಂದ ತಿಳಿದುಕೊಳ್ಳಬೇಕೆಂದು ನಮಗೆ ಕುತೂಹಲವುಂಟಾಯಿತು. ಸಾಹೇಬರು ಅವನನ್ನು ಕರೆದು "ನಿನಗೆಷ್ಟೋ ವಯಸ್ಸು" ಎಂದು ಕೇಳಿದರು.

ಅವನು "ದಾತು ಈಶ್ವರ ಕ್ಷಾಮದಲ್ಲಿ ನಂಗೆ ಎರಡನೇ ಮದುವೆ ಆಯ್ತು, ಸ್ವಾಮಿ. ನನಗೆ ನನ್ನ ವಯಸ್ಸ ಗೊತ್ತಿಲ್ಲ. ನೀವೇ ಗೊತ್ತುಮಾಡಿಕೊಳ್ಳಿ" ಎಂದುಬಿಟ್ಟ. ಇದರಿಂದ ಅವನಿಗೆ ಪ್ರಾಯಶಃ ಎಂಭತ್ತು ವರ್ಷಕ್ಕೆ ಕಮ್ಮಿಯಿಲ್ಲ ವೆಂದು ತಿಳಿಯಿತು. ಸೀರೆ ಕತೆ ಗೌಡ ಈ ರೀತಿ ಹೇಳತೊಡಗಿದ. ಅದರ ಸಾರಾಂಶ ವಿದು, ಕೇಳಿ ಸ್ವಾಮಿ. ನೀವೆಲ್ಲ ಈಗಿನ ಕಾಲದ ಹುಡುಗರು. ದೇವರು ದೆವ್ವ ಗಳಿಗೆ ಹೆದರೋದಿಲ್ಲ. ನಾವು ಏನು ಹೇಳಿದರೂ ಹಾಸ್ಯಮಾಡಿ ಬಿಡುತ್ತೀರಿ. ನಮ್ಮ ಕಾಲದಲ್ಲಿ ದೇವರು ಬಂದು ಜನಕೆಲ್ಲಾ ತಿಳಿವಳಿಕೆ ಕಾಗದದ ಮೂಲಕ ಕೊಡತಾ ಇದ್ದರು. ಅದರಂತೆ ಸಿರಿಮುಖ ಸಂವತ್ಸರದಲ್ಲಿ ಗಂಡಸರು ಹೆಣ್ಣವೇಸ

ಹಾಕ್ಕೊಂಡು ಕುಣೀಬೇಕು. ಪ್ರತಿ ಒಂದು ಊರಿನಲ್ಲಿಯೂ ಗ್ರಾಮ ಶಾಂತಿ ಆಗುತ್ತೆ ಎಂದು ಎಲ್ಲರಿಗೂ ತಿಳಿವಳಿಕೆ ಬಂದಿತು. ನಮ್ಮ ಗೌಡ ಊರ ಆಂಜನೇಯ ದೇವಸ್ಥಾನದ ಮುಂದೆ ಕಟ್ಟೆಯ ಮೇಲೆ ಕೂತಿದ್ದ. ಬಿರುಗಾಳಿ ಹಾಗೆ ಗಾಳಿ ಬಂದು ಒಂದು ಕಾಜಗ ನಮ್ಮ ಗೌಡನ ಮುಂದೆ ಬಿತ್ತು. ಗೌಡ ನೋಡಿದ. ಕಾಗದದಲ್ಲಿ ಈ ರೀತಿ ಇತ್ತು ಸ್ವಾಮಿ.

"ಪ್ರಪಂಚದ ಜನಕ್ಕೆಲ್ಲಾ ದೇವರು ಕೊಟ್ಟಿರುವ ತಿಳಿವಳಿಕೆಯೇನೆಂದರೆ- ಈಗ ಪ್ರಾಪ್ತವಾಗಿರುವ ಶ್ರೀಮುಖ ಸಂವತ್ಸರದ ಆರುತಿಂಗಳಿನಲ್ಲಿ ಪ್ರತಿ ಒಂದು ಗ್ರಾಮದವರೂ ಸ್ತ್ರೀವೇಷಧರಿಸಿ ಕಡೇ ಪಕ್ಷ ಇಪ್ಪತ್ತು ಗ್ರಾಮಗಳನ್ನಾದರೂ ಸುತ್ತಿ ಆ ರೈತರಿಗೆ ಅವರು ಮುಂದಲ ತಮ್ಮ ಕರ್ತವ್ಯಕ್ಕೆ ಸೇರಿದ ಇಪ್ಪತ್ತು ಗ್ರಾಮಗಳನ್ನು ಸುತ್ತಲು ಹೇಳಬೇಕು. ಪ್ರತಿ ಒಂದು ಗ್ರಾಮಕ್ಕೂ ಪ್ರವೇಶ ಮಾಡಿದ ಇಂಥ ಹೆಂಗಸರ ಗುಂಪು ಆ ಊರಿನ ಮುಂದುಗಡೆ ಬಾಗಿಲಿನಲ್ಲಿ ಒಂದು ತೋರಣ ಕಟ್ಟಿಹೋಗಬೇಕು. ಯಾವ ಊರಿನಲ್ಲಿ ತೋರಣವಿದೆ ಆ ಊರಿಗೆ ಬೇರೆ ಸೀತೆ ದಂಡುಗಳು ಹೋಗಕೂಡದು. ಇದು ಸುಳ್ಳೆಂದು ಯಾರಾದರೂ ಉದಾಸೀನ ಮಾಡುವುದಾದರೆ ಅವರು ಗೋಮಾಂಸ ತಿಂದ ಹಾಗೆ, ನಿದ್ದೆಯಲ್ಲಿದ್ದವರನ್ನು ಕೊಂದ ಹಾಗೆ. ಪ್ರಪಂಚವೆಲ್ಲಾ ಇದರಂತೆ ಆಚರಿಸಲಿ" ಎಂದಿತ್ತು ಬುದ್ಧಿ. ಹಿಂದಲ ಶ್ರೀಮುಖ ಸಂವತ್ಸರದಲ್ಲೂ ನಾನು ಶಾಲೆ ಉಟ್ಟಿದ್ದೆ ಬುದ್ಧಿ, ಆದರೆ ಆಗ ನಡೆದ ಮರ್ಯಾದೆ, ಆಗ ಜನಗಳಲಿದ್ದ ದೈವಭಕ್ತಿ ಯಾವುದೂ ಈಗಿಲ್ಲ ಬುದ್ಧಿ. ನೋಡಿ ಆಗ ಪ್ರತಿ ಒಂದು ಗ್ರಾಮದಲ್ಲೂ ನಮಗೆ ಎಳನೀರು ವೀಳ್ಯ ಎಲ್ಲಾ ಸಿಕ್ಕುತ್ತಿತ್ತು. ಈಗ ನೀವೆಲ್ಲ ನಮ್ಮನ್ನು ಹಾಸ್ಯಮಾಡತೀರಿ. ಬುದ್ಧಿ, ಏನು ಮಾಡೋದು ? ಕಾಲ ಬದಲಾಯಿಸಿ ಹೋಯ್ತು. ಆ ದಿನ ಹೊತ್ತಾರೆ ಬೆಳಿಗ್ಯೆ ನಾವು ಆರು ಕೆಲಸ (ಬೇಸಾಯ) ಮಾಡೋದಿಲ್ಲ. ಎಷ್ಟೇ ಹೊಗೆಸೊಪ್ಪಿನ ಚಟದೋನಾದರೂ ಅದನ್ನ ಅಗಿಯೋದಿಲ್ಲ. ಊರು ಬಿಡುವಾಗ ಪ್ರತಿಯೊಬ್ಬರೂ ಮಡಿಯಾಗಿ ಸ್ನಾನ ಮಾಡಿ ದೇವರಿಗೆ ಕೈಮುಗಿದು ತಾವು ಎರವಾಗಿ ತಂದಿರುವ ಸೀರೇನ ಉಟ್ಟುಕೊಂಡು ಮನೆ ಬಿಡತಾರೆ. ಸಾಯುಂಕಾಲ ನಾವು ಗ್ರಾಮಗಳನ್ನು ಪ್ರದಕ್ಷಿಣ ಮಾಡಿಕೊಂಡು ಊರಿಗೆ ಹೋಗುವ ವೇಳೆಗೆ ನಮ್ಮ ಮನೆಗಳಲ್ಲಿ, ಸಾರಿಸಿ ರಂಗವಲ್ಲಿ ಇಟ್ಟು ಪಾಯಸ ತಂಬಿಟ್ಟುಮಾಡಿ ನಮಗಾಗಿ ಕಾಯುತ್ತಿರುತ್ತಾರೆ. ನಾವು ಹೋಗಿ ಗ್ರಾಮ ಪ್ರದಕ್ಷಿಣ ಮಾಡಿ ನಮ್ಮೂರ ಮುಂಭಾಗದಲ್ಲಿ ಒಂದು ತೋರಣ ಕಟ್ಟಿ ಅನಂತರ ಸ್ನಾನ ಮಾಡಿ ದೇವಸ್ಥಾನದಲ್ಲಿ ಮಂಗಳಾರತಿ ತಕ್ಕೊಂಡು ಮನೆಗಳಿಗೆ ಹೋಗತೇವೆ. ಪ್ರತಿ ಒಂದು ಗ್ರಾಮದಲ್ಲೂ ನಮಗೆ ಅಕ್ಕಿ ಮಡ್ಡು ಇವುಗಳನ್ನು ಕೊಡುವ ವಾಡಿಕೆ ಇದೆ. ಅದರಿಂದ ನಮ್ಮ ಊರಲ್ಲಿ ಒಂದು

ಹರಿಸೇವೆ ಮಾಡಿ ಬಿಡುತ್ತೇವೆ. ಇಷ್ಟು ಮಾಡೋದಕ್ಕೆ ನಮಗೇನು ಕಷ್ಟ ಬುದ್ಧಿ. ಸೀತಮ್ಮ ಜನರಿಂದ ಹೊರೇಗಿರಬೇಕೆಂದು ಶಾಲೆಉಟ್ಟುಕೊಂಡು ಒಂದು ಬಿಲದಲ್ಲಿ ಇದ್ದಳು . . ಊರಿನ ಒಬ್ಬ ಮನುಷ್ಯ ಅಕಸ್ಮಾತ್ತಾಗಿ ಅದನ್ನು ಅಗೆಯುವಾಗ ಸೀತಮ್ಮನ ಶಾಲೆ ಕೈಗೆ ಸಿಕ್ಕಿ ಅವರು ಮಾಯವಾದರು. ಅದೇ ದಿನ ರಾತ್ರಿ ಅವನಿಗೆ ಸ್ವಪ್ನವಾಯಿತು. ಅದರಲ್ಲಿ ದೇವರು 'ನೀವು ಮಾಡಿದ ತಪ್ಪನ್ನು ಮನ್ನಿಸಿದೆ. ನೀವು ಆ ಸೀರೆಯ ಮರ್ಯಾದೆಗಾಗಿ ಪ್ರಪಂಚದ ಗಂಡಸರೆಲ್ಲ ಸೀರೆ ಉಟ್ಟುಕೊಂಡು ಹೆಂಗಸರಂತೆ ಈ ವರ್ಷ ಆಚರಿಸಬೇಕು' ಎಂದು ಹೇಳಿಬಿಟ್ಟರಂತೆ. ಅವರಂತೆ ಈಗ ನಾಲ್ಕು ಸಿರಿಮುಖ ಕಳೆದಿರುವುದು ಸ್ವಾಮಿ."

ಸುಬ್ಬೇಗೌಡನು ಬಂದು ಮೋಜಿನಿದಾರರೊಂದಿಗೆ "ನಾವೂ ಹೊರಡಬೇಕು. ನಾನೂ ಶಾಲೆ ಉಟ್ಟುಕೋಬೇಕು. ಆದರೆ ದಣಿಗಳು, ನಮ್ಮೂರು ಬಿಟ್ಟು ಹೊರಟ ಮೇಲೆ ನಾವು ಹೊರಡತೇವೆ" ಎಂದನು.

* * * *

ಹದಿನೈದು ದಿನಗಳೊಳಗಾಗಿ ಸರ್ವೆಯು ಮುಗಿಯುತ್ತಾ ಬಂದಿತು. ಸರ್ವೆ ಮುಗಿಯುತ್ತಾ ಬಂದಂತೆ ನಮಗೂ ರೈತರಿಗೂ ಇದ್ದ ಬಾಂಧವ್ಯ ಹೆಚ್ಚು ಹೆಚ್ಚು ನಿಕಟವಾಗುತ್ತಾ ನಡೆದಿತ್ತು. ನಾವು ಅವರ ಜೀವನದ ಅವರು ನಮ್ಮ ಜೀವನದ ಒಂದು ಪಾಲಾಗಿದ್ದೆವು. ಪ್ರತಿಯೊಂದು ದಿವಸವೂ ಕಳೆದಂತೆಲ್ಲಾ ಈ ಈ ಉತ್ಸವವು ಕೊನೆಗಾಣುವುದಿಲ್ಲ. ಈ ರೈತರನ್ನು ಬಯಲಿನ ಜೀವಿಗಳನ್ನು ಬಿಟ್ಟು ನಮ್ಮ ಪಾಡಿಗೆ ನಾವು ಹೋಗಬೇಕಲ್ಲಾ ಎಂದು ಯೋಚನೆಯು ನಮ್ಮ ಮನಸ್ಸಿಗೆ ನೋವನ್ನುಂಟುಮಾಡುತ್ತಿದ್ದಿತು. ಸಾಹೇಬರು "ನಾನು ಈ ಊರಿನಲ್ಲಿ ಮಾಡಿದುದು ಕೆಲಸವಲ್ಲಯ್ಯ, ವಿನೋದ. ಇಂಥ ಗ್ರಾಮವನ್ನೇ ನಾನು ನೋಡಿಲ್ಲ. ಬಿಸಿಲು ಮಳೆಯಲ್ಲಿ ತಿರುಗಿ ಕೂಗಿ ಬೇಜಾರು ಹತ್ತಿಸಿಕೊಂಡು ಒಂದೊಂದು ಗ್ರಾಮವನ್ನೂ ಸರ್ವೆ ಮಾಡಿದನಂತರ ಒಂದು ತಿಂಗಳು ಖಾಯಿಲೆ ಬೀಳುತ್ತಿದ್ದೆ. ಆದರೆ ಇಲ್ಲಿ ಸರ್ವೆ ಆಟದಂತೆ ಇತ್ತು. ಎಲ್ಲಾ ನಾಣಿಯ ಪ್ರಭಾವ" ಎಂದರು.

* * * *

ಮರುದಿವಸ ರಾತ್ರಿ ಹಳ್ಳಿಯವರು ಸಾಹೇಬರನ್ನು ಸಾಗ ಕಳಿಸುವ ಆನಂದಕ್ಕಾಗಿ ಕೃಷ್ಣ ಚರಿತ್ರೆಯನ್ನು ಬೈಲಾಟವಾಡಲು ನಿಶ್ಚಯಿಸಿದರು.

ನಾವು ಬಯಲ ಹಳ್ಳಿಯಲ್ಲಿ ಇದ್ದ ಕಾಲದಲ್ಲಿ ಅಲ್ಲಿಯ ರೈತರು ಶ್ರೀಕೃಷ್ಣ ಚರಿತ್ರೆಯನ್ನು ಬಯಲಾಟ ಅಭ್ಯಾಸಮಾಡಿಕೊಳ್ಳುತ್ತಿದ್ದರು. ಪ್ರತಿದಿನವೂ ಅವರ

ಹಾಡುಗಳನ್ನು ಕೇಳಿ ಕೇಳಿ,ಮೋಜಿನಿದಾರರಿಗೆ ಆ ಹಾಡುಗಳು ಅಭ್ಯಾಸವಾದುವು. ಆಟಗಾರರಿಗೆ ಆಟವನ್ನು ಅಭ್ಯಾಸಮಾಡಿಸುತ್ತಿದ್ದವನೇ ಬಯಲು ಹಳ್ಳಿಯ ಅಕ್ಕ ಸಾಲೆ. ಅವರು ಹೇಳುತ್ತಿದ್ದ ಒಂದು ಹಾಡನ್ನು ಮೋಜಿನಿದಾರರೂ ಕಲಿತು ಕೊಂಡರು.

ಕಂದಾ ಮಗುವೆ ನೀನೆ ಲಾಲಿಸೊ ಹಾ ಹಾ ಹಾ ಹಾ
ಕಂದಾ ಮಗುವೆ ನೀನೆ ಲಾಲಿಸೊ
ದೇವಕಿಯೊಳಗ್ಹುಟ್ಟಿ ಮಾವ ಕಂಸನ ಕೊಂದೆ
ಮಾವ ಕಂಸನ ಕೊಂದೆ
ಧಾರುಣಿಯಲಿ ನಿನಗೆ ಜನನವಾಯಿತೆ
ಪರಸಿವನು ದಯದಿಂದಾ ಪೋಗಿಬಾರೆಲೊ ಕಂದಾ

ಮುಂತಾದ ಹಾಡುಗಳನ್ನು ರಾಯರು ಯಾವಾಗಲೂ ಹೇಳತೊಡಗಿದರು. ಆಗ ರಾಯರಿಗೆ ಅರ್ಥವಾಗದೆ ಹೋದ ಛತ್ರಿಯವರು (ಕ್ಷತ್ರಿಯರು) ಶಯನಾಧಿಪತಿ (ಸೇನಾಧಿಪತಿ) ಮುಂತಾದ ಮಾತುಗಳಿಗೆಲ್ಲಾ ನಾನೆ ಅರ್ಥವನ್ನು ಹೇಳಿದೆ. ರಾಯರಿಗೆ ಹಳ್ಳಿಯವರು ಆಡಿದ ಎಷ್ಟೋ ಪದಗಳು ತಿಳಿಯಲೇ ಇಲ್ಲ.

ಬೈಲಹಳ್ಳಿಯ ರೈತರು ಆಡಿದ ಕೃಷ್ಣ ಚರಿತ್ರೆಯಲ್ಲಿ ಒಂದು ಕಡೆ ಗರುಡನು ಭೂಮಿಯಮೇಲೆ ನಿಂತುಕೊಂಡು ವಿಷ್ಣುವನ್ನು ಪ್ರಾರ್ಥನೆ ಮಾಡಬೇಕಾಗಿದ್ದಿತು. ರಾಮಾಯಣದ ಆಟದಲ್ಲಿ ಹನುಮಂತನಿಗೆ ಹೇಗೋ ಹಾಗೆಯೇ ಕೃಷ್ಣ ಚರಿತ್ರೆ ಯಲ್ಲಿ ಗರುಡನಿಗೆ "ಆಟಾಟೋಪ" ಹೆಚ್ಚು. ಬಯಲಾಟವನ್ನು ಆಡುವುದು ಬಯಲಿನಲ್ಲಿ ಒಂದು ಚಪ್ಪರದಲ್ಲಿ ರಾಮಾಯಣದ ಆಟದಲ್ಲಿ ಚಪ್ಪರದ ಮೇಲೆ ನಾಲ್ಕು ಆಳುದ್ದ ಏಣಿಯನ್ನು ಕಟ್ಟಿರುತ್ತಾರೆ. ಹನುಮಂತನು ಅದರಮೇಲೆ ಹಾಡಿಗೆ ಸರಿಯಾಗಿ ಹೆಜ್ಜೆ ಹಾಕಿಕೊಂಡು ಕುಣಿಯುತ್ತಾ ಕೆಳಕ್ಕೆ ಬರುತ್ತಾನೆ. ಕೃಷ್ಣನ ಕತೆಯಲ್ಲಿ ಗರುಡನು ಬರುವಾಗ ಇದೇ ರೀತಿಯಾದ ಗದ್ದಲ. ಚಪ್ಪರದ ತುದಿಗೆ ಒಂದು ರಾಟೆಯನ್ನು ಕಟ್ಟಿ ಅದರಮೇಲೆ ಮೂರು ನಾಲ್ಕು ಹಗ್ಗಗಳನ್ನು ಇಳಿ ಬಿಟ್ಟು ಆ ಹಗ್ಗದ ತುದಿಯನ್ನು ಗರುಡನ ಸೊಂಟದಲ್ಲಿರುವ ಮತ್ತೊಂದು ಹಗ್ಗಕ್ಕೆ ಕಟ್ಟುತ್ತಾರೆ. ಅನಂತರ ಆ ಹಗ್ಗವನ್ನು ಮೇಲಕ್ಕೂ ಕೆಳಕ್ಕೂ ಬಿಡುತ್ತಾರೆ. ಗರುಡನಿಗೆ ರೆಕ್ಕೆ ಮುಂತಾದುವನ್ನು ಕಟ್ಟಿನೋಡುವುದಕ್ಕೆ ಹಕ್ಕಿಯಂತೆಯೇ ಕಾಣು ವಂತೆ ಮಾಡಿರುತ್ತಾರೆ. ಬೈಲಹಳ್ಳಿಯ ಆಟದಲ್ಲಿಯೂ ಗರುಡನಿಗೆ ವೇಷ ಚೆನ್ನಾಗಿ ಹಾಕಿದ್ದರು. ಮುಖಕ್ಕೆ ಭಯಂಕರವಾಗಿ ಕೆಂಪನ್ನು ಬಳಿದಿದ್ದರು. ಮೂಗಿಗೆ

ಏನನ್ನೋ ಸಿಕ್ಕಿಸಿ ಗಿಣಿಮೂಗನ್ನು ಮಾಡಿದ್ದರು. ಸಕಾಲದಲ್ಲಿ "ಧೀಂ ತಕ ಥಾ" ದೊಂದಿಗೆ ಗರುಡನು ಮೇಲಿನಿಂದ ಇಳಿಯಲು ಪ್ರಾರಂಭಿಸಿದನು. ಅವನು ಮೇಲಿನಿಂದ ಹಗ್ಗದಿಂದ ಬಿಡಲ್ಪಟ್ಟು ಕೆಳಕ್ಕೆ ಬರುತ್ತಿರುವಾಗ ಕೈಕಾಲುಗಳನ್ನು ಎಲ್ಲಾ ಕಡೆಗೂ ಆಡಿಸಿಕೊಂಡು ಪಕ್ಕಿಯಂತೆಯೇ ಬರುತ್ತಿದ್ದನು. ಅವನ ಮುಂದೆ ಆಟಗಾರರು ಪಂಜನ್ನು ಹಿಡಿದು ಅದಕ್ಕೆ ರಾಳನ್ನು ಹಾಕಿ ಅವನ 'ಜಬರ್ಬು' ಇನ್ನೂ ಹೆಚ್ಚಾಗಿ ತೋರುವಂತೆ ಮಾಡುತ್ತಿದ್ದರು. ಬರಬರುತ್ತಾ ಹಗ್ಗವನ್ನು ಹಿಡಿದಿದ್ದವನು ಹಗ್ಗವನ್ನು ಮೇಲಕ್ಕೂ ಕೆಳಕ್ಕೂ ಜೇಗಬೇಗ ಎಳೆದುಬಿಡಲು ಪ್ರಾರಂಭಿಸಿದನು. ಗರುಡನು ಕೈಕಾಲುಗಳನ್ನು ಜೋರಾಗಿ ಬಡಿದು ವೇಗವನ್ನು ತೋರಿಸುತ್ತಿದ್ದನು. ಒಂದುಸಲ ಗರುಡನು ಮೇಲಕ್ಕೆ ಹೋಗಿದ್ದಾಗ ಇದ್ದಕ್ಕಿದ್ದಂತೆ ಅವನ ಸೊಂಟದ ಹಗ್ಗವು ಕಿತ್ತುಹೋಯಿತು. ಗರುಡನು ಒಂದೇ ಏಟಿಗೆ ನೆಲಕ್ಕೆ ಠ್ಯಾಣ್ ಎಂದು ಶಬ್ದಮಾಡುತ್ತ ಬಿದ್ದನು. ಬಿದ್ದವನೇ ಭೂಮಿಯಲ್ಲಿ ಹೂಳಿಕೊಂಡು ಮಾಯವಾದನು !

ಅಗಿನ ರಂಗಸ್ಥಳದ ಏರ್ಪಾಡು ಈ ರೀತಿಯಾಗಿದ್ದಿತು. ಗರುಡನು ಆಕಾಶದಿಂದ ಕೆಳಗೆ ಇಳಿದು ರಂಗದಲ್ಲಿ ನಿಂತುಕೊಂಡು ದೇವರನ್ನು ಪ್ರಾರ್ಥಿಸಬೇಕಾಗಿದ್ದಿತು. ರಂಗಸ್ಥಳದಲ್ಲಿ ಒಂದು ಗುಂಡಿಯನ್ನು ತೋಡಿ ಅದರಲ್ಲಿ ವಿಷ್ಣುವು ಪರದೆ ಎತ್ತುವುದಕ್ಕೆ ಮುಂಚೆಯೇ ಬಂದು ಕುಳಿತಿರುತ್ತಿದ್ದನು. ರಂಗದ ನೆಲಕ್ಕಿಂತ ಗುಂಡಿಯು ಪಳ್ಳದಲ್ಲಿದ್ದುದರಿಂದ ಅವನು ಹೊರಕ್ಕೆ ಕಾಣುತ್ತಿರಲಿಲ್ಲ. ಪದ್ಧತಿಯಂತೆ ಗರುಡನ ಪ್ರಾರ್ಥನೆಯನ್ನು ಕೇಳಿ ವಿಷ್ಣುವು ಅವನಿಗೆ ಪ್ರತ್ಯಕ್ಷನಾಗಬೇಕಾಗಿತ್ತು. ಪ್ರತ್ಯಕ್ಷನಾದ ನಂತರ ವಿಷ್ಣುವು ಹಾಗೆಯೇ ಅದೇ ಗುಂಡಿಯಲ್ಲಿ ಅಂತರ್ಧಾನವನ್ನು ಹೊಂದಿ ಪರದೆಯನ್ನು ಕೆಳಕ್ಕೆ ಬಿಟ್ಟಮೇಲೆ ಎದ್ದುಹೋಗಬೇಕಾಗಿತ್ತು. ಇದು ಗರುಡನ "ಏಸದ ಮಾಮೂಲು." ಆದರೆ ಆ ದಿವಸ ಗರುಡನನ್ನು ಕೆಳಕ್ಕೆ ಇಳಿಸುವಾಗ ಸೊಂಟದ ಹಗ್ಗ ಕಿತ್ತುಹೋದುರಿಂದ ಅವನು ಕೆಳಕ್ಕೆ ಬೀಳುವಾಗ ವಿಷ್ಣುವು ಅಡಗಿದ್ದ ಗುಂಡಿಯೊಳಕ್ಕೆ ಬಿದ್ದನು. ವಿಷ್ಣುವಿನ ಭುಜಕೀರ್ತಿಯು ಡೊಂಕಾಯಿತು. ಕಿರೀಟವು ಮುರಿದು ಹೋಯಿತು. ಯಮನಂತಿದ್ದ ಗರುಡನು ಮೇಲೆ ಬಿದ್ದುದರಿಂದ ವಿಷ್ಣುವಿಗೆ ಅಸಾಧ್ಯವಾದ ಬಾಧೆಯುಂಟಾತು. ಅವನು ಗುಂಡಿಯಲ್ಲಿಯೇ ಒಂದುಸಲ 'ಕಿರೋ' ಎಂಬುದಾಗಿ ಕಿರುಚಿದನು. ಗರುಡನು ಮೇಲೆ ಬಿದ್ದುದರಿಂದ ವಿಷ್ಣುವಿಗೆ ಉಸಿರು ಕಟ್ಟಿದಂತೆ ಆದುದರಿಂದ ಅವನು ಗರುಡನನ್ನೂ ಹೊತ್ತುಕೊಂಡು ಗುಂಡಿಯಿಂದ ಮೇಲಕ್ಕೆ ಎದ್ದನು. ಗರುಡನು ವಿಷ್ಣುವನ್ನು ಹೊರುವುದು ಮಾಮೂಲು. ಆದರೆ ವಿಷ್ಣುವೇ ಗರುಡನನ್ನು

ಹೊತ್ತು ಕೊಂಡು ಎದ್ದುದನ್ನು ಕಂಡು ಜನರಿಗೆ ಆಶ್ಚರ್ಯವಾಯಿತು. ಸಾಹೇಬರು ನನ್ನನ್ನು "ಇದೇನಯ್ಯ ಈ ಗರುಡವಾಹನ" ಎಂಬುದಾಗಿ ಕೇಳಿದರು. ನಾನು ಏನೂ ಹೇಳುವುದಕ್ಕೆ ತೋಚದೆ ಸುಮ್ಮನಾದೆ.

ಮರುದಿವಸ ಸಾಯಂಕಾಲ ರಾಯರನ್ನು ಬೀಳ್ಕೊಳ್ಳಲು ಬೈಲಹಳ್ಳಿಯ ಗಂಡಸರು ಹೆಂಗಸರು ಮಕ್ಕಳೆಲ್ಲಾ ದೇವಸ್ಥಾನದಲ್ಲಿ ನೆರೆದಿದ್ದರು. ದೇವರಿಗೆ ಮಂಗಳಾರತಿಯಾದನಂತರ ಎಲ್ಲರಿಗೂ ಪ್ರಸಾದ ವಿನಿಯೋಗವಾಯಿತು. ರಾಯರು ನೆರೆದಿದ್ದವರೊಂದಿಗೆ ಈ ರೀತಿ ಹೇಳಿದರು. "ರೈತರೆ, ನಾನು ಸರ್ಕಾರದ ಪ್ರತಿನಿಧಿ. ನನ್ನ ಕರ್ತವ್ಯವನ್ನು ಮಾಡಿದ್ದೇನೆ. ಆದರೆ ನಿಮಗೆ ನಿಮ್ಮ ಜೋಡಿ ದಾರರೆ ಸರ್ಕಾರ. ನಿಮಗೆ ಜೋಡಿದಾರರು ಬೇಕು. ಜೋಡಿದಾರರಿಗೆ ನೀವು ಬೇಕು. ಜೋಡಿದಾರರೂ ನೀವೂ ಪದೇ ಪದೇ ಕಲೆತು ಒಂದು ತಿಂಗಳು ಎರಡು ತಿಂಗಳು ಒಟ್ಟಿಗೆ ಇರುವುದರಿಂದ ನಿಮ್ಮಿಬ್ಬರಲ್ಲೂ ಸ್ನೇಹ ಹೆಚ್ಚುತ್ತದೆ. ನಾನು ಇನ್ನೇನು ಹೆಚ್ಚಿಗೆ ಹೇಳಲಾರೆ" ಎಂದರು. ರೈತರು "ನಾವು ಮೂಢಜನ. ಆಳೆಯುವ ಕಾಲದಲ್ಲಿ ಏನು ತಪ್ಪಿದ್ದರೂ ಮಾಫ್‌ಮಾಡಬೇಕು" ಎಂದರು. ಸಾಹೇಬರು ನಾಣಿ, ರಂಗಸಾಮಿಗಳೊಂದಿಗೆ ಹೊರಟರು. ರೈತರೆಲ್ಲಾ ಅವರನ್ನು ಕಳುಹಿಸಲು ಸ್ವಲ್ಪದೂರ ಬಂದರು. ಅಣ್ಣ ತಮ್ಮಂದಿರನ್ನು ಅಗಲುವವರಂತೆ ರೈತರೆಲ್ಲ ಸ್ವಲ್ಪ ಪೆಚ್ಚಾಗಿಯೇ ಇದ್ದರು. ನಾಣಿಯು ಇದ್ದಕ್ಕಿದ್ದಂತೆ ಫಾಲ್‌ಇನ್ ಎಂದನು. ರೈತರು ಸಾಲಾಗಿ ನಿಲ್ಲಲು ಪ್ರಯತ್ನಿಸಿ ತಬ್ಬಿಬ್ಬಾಗಿ ತಿರುಗಿ ಸ್ವಲ್ಪ ಗೆಲುಮುಖವುಳ್ಳವರಾದರು. ಸಾಹೇಬರೂ,ನಾಣಿಯೂ,ಬೇಡವೆಂದರೂ ಕೇಳದೆ ಅವರು ಸುಮಾರು ಒಂದು ಮೈಲಿ ನಮ್ಮ ಜತೆಯಲ್ಲಿ ಬಂದರು. ಅವರಿಂದ ಬೀಳ್ಕೊಳ್ಳುವುದು ನಮಗೆಲ್ಲಾ ಅತ್ಯಂತ ಕಷ್ಟವಾಯಿತು. ಆ ರಾತ್ರಿಯೇ ನಾವೆಲ್ಲಾ ನಮ್ಮೂರನ್ನು ಸೇರಿದೆವು.

೮

ನಮ್ಮ ಊರಿಗೆ ಬಂದ ಮೇಲೆ ರಾಯರು ಜೋಡಿದಾರರೊಂದಿಗೆ "ನಾನು ಒಂದು ತಿಂಗಳು ರಜಾಕ್ಕೆ ಬರೆದು ಹಾಕಿದ್ದೇನೆ. ಮಂಗಳೂರಿಗೆ ಹೋಗಿ ನನ್ನ ತಮ್ಮನನ್ನು ನೋಡಿಕೊಂಡು ಬರಬೇಕು" ಎಂದರು. ನಮ್ಮ ಊರಸುತ್ತ ಅನೇಕ ಕಾಫಿ ತೋಟಗಳು ಇರುವುದು ಸರಿಯಷ್ಟೆ. ನಮ್ಮ ಕಡೆಯಿಂದ ಮಂಗಳೂರಿಗೆ ಪ್ರತಿ ವರುಷವೂ ಸಾವಿರಾರು ಎತ್ತಿನ ಗಾಡಿಗಳು ಕಾಫಿ ಮೂಟೆಗಳನ್ನು ಹೇರಿ ಕೊಂಡು ಹೋಗುತ್ತವೆ. ಮಂಗಳೂರನ್ನು ನಮ್ಮ ರೈತರು ಗಟ್ಟ ಎಂಬುದಾಗಿ ಹೇಳುತ್ತಾರೆ. ಗಟ್ಟಕ್ಕೆ ಹೋಗಿ ಬರುವುದು ಕಷ್ಟ. ದಾರಿ ಚೆನ್ನಾಗಿಲ್ಲ. ಹೋಗಿ

ಬರಲು ಒಂದು ತಿಂಗಳು ಬೇಕಾಗುತ್ತದೆ. ಹೊರಡುವಾಗ ರೈತರು ಬಹಳ ಉತ್ಸಾಹ ದಿಂದಲೇ ಹೊರಟುಬಿಡುತ್ತಾರೆ. ಆದರೆ ಬರುವ ಪೊತ್ತಿಗೆ ಅವರಿಗೆ ಅರಜೀವ ವಾಗಿರುತ್ತದೆ. ಆದರೆ ಅದೊಂದು ಸಾಧನೆ. ಆ ಸಾಧನೆಯನ್ನು ಬಿಡಲು ಯಾವ ರೈತನಿಗೂ ಇಷ್ಟವಿರುವುದಿಲ್ಲ. ಸರ್ವೆ ಮುಗಿಯುವ ಕಾಲಕ್ಕೆ ಸರಿಯಾಗಿ ಗಟ್ಟಕ್ಕೆ ಗಾಡಿಗಳು ಹೊರಟವು. ಬೈಲಹಳ್ಳಿ ಸಣ್ಣಪ್ಪನೂ ಗಟ್ಟಕ್ಕೆ ಗಾಡಿ ಹೂಡಿದ್ದ. ನಾಣಿಯು "ಸಾಹೇಬರು ಈ ಗಾಡಿಯಲ್ಲೇ ಹೋಗಬಹುದಲ್ಲಾ" ಎಂದನು. ಜೋಡಿದಾರರು "ಎಲ್ಲಾದರೂ ಉಂಟೇನಯ್ಯ. ಈ ಕಾಡು ದಾರಿ. ಇಪ್ಪತ್ತೆರಡು ದಿನದ ಪ್ರಯಾಣ. ಬಂಡಿ ಬಂಡಾಟ ಅಂತ ಕೇಳಿಲ್ಲವೇ ? ಮೈ ಕೈ ಕುಲಕಿ ನೋವು ಸುಧಾರಿಸಿಕೋಬೇಕಾದರೆ ಆರು ತಿಂಗಳು ಹಿಡಿಯುತ್ತೆ" ಎಂದರು. ನಾಣಿಯು "ಏನೂ ಇಲ್ಲ ಯಜಮಾನರೆ, ನಾನು ಹಿಂದೇ ಹೋಗಿ ಬರಲಿಲ್ಲವೆ ? ಪ್ರಯಾಣ ಬಹಳ ಚೆನ್ನಾಗಿರುತ್ತೆ" ಎಂದನು. ಜೋಡಿದಾರರು "ನೀನು ಬಿಡಯ್ಯ, ಎತ್ತು ಸೋತರೆ ಗಾಡೀನೆ ಎಳಕೊಂಡು ಹೋಗ್ತೀಯ. ನೀನೆಲ್ಲಿ ? ಸರ್ಕಾರಿ ಅಧಿ ಕಾರದಲ್ಲಿ ಜೀವನವನ್ನೆಲ್ಲ ಕಳೆದಿರುವ ಮೋಜಿನಿದಾರರೆಲ್ಲಿ ? ನೀವು ಖಂಡಿತ ಆ ಗಾಡಿಯಲ್ಲಿ ಹೋಗಬೇಡಿ" ಎಂದರು. ಮೋಜಿನಿದಾರರು "ನಾಣಿ ಹೋಗಿದ್ದ ಮೇಲೆ ನಾನೂ ಹೋಗುತ್ತೇನೆ. ಕಷ್ಟವಾದರೆ ಆಗಲಿ. ನನಗೆ ಇನ್ನು ಇಂತಹ ಅವಕಾಶ ಮತ್ತೆ ಸಿಕ್ಕುವುದೆಲ್ಲಿ ? ಸರ್ಕಾರಿ ಅಧಿಕಾರಿಯಾದರೂ ನಾನೂ ಮನುಷ್ಯ ತಾನೆ. ಈ ಇಪ್ಪತ್ತು ದಿವಸದಲ್ಲಿಯಂತೂ ನಾನು ಅಧಿಕಾರಿ ಎಂಬುದನ್ನು ಮರೆತು ಅಧಿಕಾರ ಮಾಡುವುದನ್ನು ಕಲಿತಿದ್ದೇನೆ" ಎಂದುಕೊಂಡು ತಮ್ಮ ಸಾಮಾನು ಗಳನ್ನು ಸಿದ್ಧಮಾಡಿಕೊಳ್ಳಲು ಹೊರಟುಹೋದರು. ಅನಂತರ ಜೋಡಿದಾರರು ನಾಣಿಯೊಂದಿಗೆ "ತಾನು ಮೊದಲು ಮನುಷ್ಯ. ಆಮೇಲೆ ಅಧಿಕಾರಿ ಎಂಬುದೇ ಇವರು ರೈತರನ್ನು ಕೈಯಲ್ಲಿಟ್ಟುಕೊಳ್ಳಲು ಅರಿತಿರುವ ಮುಖ್ಯಮಂತ್ರ" ಎಂದರು.

ಮರುದಿನ ಸಾಯಂಕಾಲ ಸಣ್ಣಪ್ಪನ ಗಾಡಿಯಲ್ಲಿ ಸಾಹೇಬರು ನಮ್ಮೂರಿ ನಿಂದ ಹೊರಟರು. ಆ ಗಾಡಿಯ ಜತೆಯಲ್ಲಿ ಇನ್ನೂ ನೂರಾರು ಗಾಡಿಗಳಿದ್ದುವು. ಸಾಹೇಬರು ಪ್ರಯಾಣ ಮಾಡಿದನಂತರ ಜೋಡಿದಾರರು "ಪಾಪ, ದಾರಿಯಲ್ಲಿ ಅವರಿಗೆ ಕಷ್ಟವಾಗುತ್ತೆ. ಇಂತಹ ಕಷ್ಟದ ಪ್ರಯಾಣ ಅವರಿಗೆ ಅನುಭವವಿಲ್ಲ" ಎಂದರು. ಆ ಪ್ರಯಾಣ ಅವರಿಗೆ ಕಷ್ಟವಾಯಿತೋ ಸುಖವಾಯಿತೋ ಎಂಬುದು ಸಾಹೇಬರು ಒಂದು ತಿಂಗಳನಂತರ ನಾಣಿಗೆ ಬರೆದ ಈ ಮುಂದಿನ ಕಾಗದದಿಂದ ಜೋಡಿದಾರರಿಗೆ ಗೊತ್ತಾಯಿತು.

ಶ್ರೀಮಾನ್ ನಾಣಿಯವರ ಸ॥ ಕ್ಕೆ ನಮಸ್ಕಾರ. ಸ್ವಾಮಿ—

ನಾನು ನಿಮ್ಮ ಊರಿನಿಂದ ಇಪ್ಪತ್ತೆರಡು ದಿವಸಗಳ ಹಿಂದೆ ಹೊರಟವನು ನೆನ್ನೆ ಸಾಯಂಕಾಲ ಇಲ್ಲಿಗೆ ಬಂದು ಸೇರಿದೆ. ನಿಮ್ಮ ಊರಿನಿಂದ ಹೊರಟಾಗ ನನಗೆ ಉಂಟಾದ ಅನುಭವಗಳೂ, ಈಚೆಗೆ ದಾರಿಯಲ್ಲಿ ನಾನು ಪಟ್ಟ ಆನಂದ ಗಳೂ ನನ್ನ ಮನಸ್ಸಿನಲ್ಲಿ ತುಂಬಿಕೊಂಡು ನಾನು ಆ ಸುಖಕ್ಕೆ ನಿಮ್ಮನ್ನು ಭಾಗಿ ಯನ್ನಾಗಿ ಮಾಡದಿದ್ದರೆ ನನ್ನ ಆನಂದವು ಪೂರ್ಣವಾಗುವುದಿಲ್ಲವಾಗಿ ಈ ಕಾಗದ ವನ್ನು ನಿಮಗೆ ಬರೆಯುವಂತೆ ಪ್ರೇರಿಸುತ್ತಿದೆ. ಈ ಇಪ್ಪತ್ತೆರಡು ದಿವಸಗಳಲ್ಲಿ ನಾನು ಒಂದು ಜೀವಮಾನದ ಅನುಭವಗಳನ್ನೇ ಸವಿದಿರುವೆನಾದುದರಿಂದ ಅವು ಗಳೆಲ್ಲಾ ಒಂದರ ಮುಂದೊಂದು ನನ್ನ ಮನಸ್ಸಿನಲ್ಲಿ ತುಂಬಿಕೊಂಡು ಯಾವು ದನ್ನು ಮೊದಲು ಬರೆಯಬೇಕು, ಯಾವುದನ್ನು ಆಮೇಲೆ ಬರೆಯಬೇಕು ಎಂಬುದೇ ನನಗೆ ತೋರುತ್ತಿಲ್ಲ. ಆದರೂ ನನ್ನ ಮನಸ್ಸಿನಲ್ಲಿರುವುದನ್ನೆಲ್ಲಾ ಒಂದಾದ ಮೇಲೆ ಒಂದರಂತೆ ಅವು ಬಂದಂತೆ ಬರೆಯುತ್ತೇನೆ. ಈ ಪ್ರಯಾಣ ದಲ್ಲಿ ನನಗೆ ಎಲ್ಲವೂ ಹೊಸದಾಗಿಯೆ ಕಂಡುದರಿಂದ ನಾನು ಬರೆದಿರುವ ವಿಷಯ ಗಳು ಒಂದಕ್ಕೊಂದಕ್ಕೆ ಸಂಬಂಧವಿಲ್ಲದಂತೆ, ದಿಕ್ಕಾಪಾಲಾಗಿ ತೋರಿದರೂ ಸೇರಿಸಿ ಕೊಂಡು ಓದಿಕೊಳ್ಳಬೇಕಾಗಿ ಪ್ರಾರ್ಥನೆ.

ಆ ರಾತ್ರಿ ನಾನು ನಿಮ್ಮೂರಿನಲ್ಲಿ ನದಿ ದಾಟಿ ನದಿಯ ಈಚೆ ತೀರಕ್ಕೆ ಬಂದುದು ಸರಿಯಷ್ಟೆ. ನಾವು ನದಿಯನ್ನು ದಾಟಿದಾಗ ಅರವತ್ತು ಗಾಡಿಗಳು ಮಾತ್ರ ಇದ್ದವು. ಆದರೆ ಗಟ್ಟಕ್ಕೆ ಹೋಗುವ ಇನ್ನೂ ನೂರಾರು ಗಾಡಿಗಳು ನದೀ ತೀರಕ್ಕೆ ರಾತಾ ರಾತ್ರಿ ಬಂದು ಸೇರಬೇಕಾಗಿದ್ದುದರಿಂದ ನಾವು ರಾತ್ರಿಯನ್ನು ನದಿಯ ತೀರದಲ್ಲೇ ಕಳೆಯಬೇಕಾಯಿತು. ಬೆಳದಿಂಗಳು ಚೆನ್ನಾಗಿ ಬಿದ್ದಿತ್ತು. ಎತ್ತುಗಳು ಕತ್ತಿಗೆ ಕಟ್ಟಿದ್ದ ಗಂಟೆಗಳನ್ನು ಒಂದೇ ಸಮವಾಗಿ ಇಂಪಾಗಿ ಸದ್ದು ಮಾಡುತ್ತಿದ್ದುವು. ಪ್ರಯಾಣದ ಆಯಾಸ ಪ್ರಾರಂಭವಾಗಿಲ್ಲದಿದ್ದುದರಿಂದ ಎತ್ತುಗಳು ಬಹು ಜೋರಾಗಿದ್ದುವು.

ಗಟ್ಟಕ್ಕೆ ಹೊರಡುವ ಗಾಡಿಗಳೆಲ್ಲಾ ಬಹಳ ಚೆನ್ನಾಗಿ ಹೊಸದಾಗಿರುತ್ತವೆ. ಎತ್ತುಗಳೂ ಕೂಡ ಗಾಡಿಯ ಭಾರದಿಂದಲೇ ನಿಲ್ಲುವ ಬಲರಾಮು ಗೋವು ಗಳಂತಲ್ಲದೆ ಬಹು ಜೋರಾಗಿದ್ದುವು. ಗಾಡಿಯವರೆಲ್ಲಾ ಗಾಡಿಯನ್ನು ಚೆನ್ನಾಗಿ ಅಲಂಕಾರ ಮಾಡಲು ಪ್ರಾರಂಭಿಸಿದರು. ಆ ರಾತ್ರಿ ಎಲ್ಲಿ ನೋಡಿದರೂ ಗಾಡಿಯ ಹಾಡುಗಳೇ, ಗಾಡಿ ಹೊಡೆಯುವವನ ಪ್ರಶಂಸೆಯೇ. ಸಣ್ಣಪ್ಪ ಅವನ ಮಗ ಅಳಿಯೋದಕ್ಕೆ ಬರುವಾಗ ಹಾಕಿಕೊಂಡು ಬರುತ್ತಿದ್ದ ಕೋಟನ್ನೇ ಹಾಕಿಕೊಂಡು ಬಂದಿದ್ದ. ಅದು ಅವನಿಗೆ ಸ್ವಲ್ಪ ಮೇಲಕ್ಕೆ ಬಿಗಿಯಾಗಿದ್ದಿತು. ನಾನು “ಗಟ್ಟಕ್ಕೆ

ಹೊರಡುವಾಗ ಒಳ್ಳೆಯ ಕೋಟು ಹೊಲಿಸಿಕೊಂಡು ಬರಬಾರದೆ ? ಮಗನ ಅಂಗೀನೆ ಹಾಕ್ಕೊಂಡು ಬಂದೆಯೆಲ್ಲಾ. ಈಗ ಅವನಿಗೆ ? ಎಂಬುದಾಗಿ ಕೇಳಿದೆ. ಸಣ್ಣಪ್ಪನು 'ಸ್ವಾಮಿ, ಒಬ್ಬೊಬ್ಬರಿಗೆ ಒಂದೊಂದು ಅಂಗಿ ಹೊಲಿಸೋಕೆ ಎಲ್ಲಾಯ್ತುದೆ. ಮನೇಲಿರೋದೆ ಒಂದಂಗಿ, ಒಂದು ಕಂಬಳಿ, ಒಂದು ಹಚ್ಚಡ. ಬಾಕಿ ಎಲ್ಲಾ ಹರಕಲು. ನಾನು ಮನೆಬಿಟ್ಟು ಹೊರಟಾಗ ನಾನು ಅಂಗಿ ಹಾಕಿಕೋತೇನೆ. ನಮ್ಮ ಮಗ ಮನೆ ಬಿಟ್ಟು ಹೊಂಟಾಗ ಅವ ಹಾಕ್ಕೋತಾನೆ. ಮನೆಯೋರೆಲ್ಲಾ ಅಂಗಿ ಹೊಲಿಸಿಕೊಂಡು ಮೋಜ ಮಾಡಿದರೆ ಕಂದಾಯ ಕೊಡೋರ್ಯಾರು? ಬುದ್ದಿ' ಎಂದನು. ಅಲ್ಲಿ ಬಂದಿದ್ದವರ ಸ್ಥಿತಿಯೆಲ್ಲ ಸ್ವಲ್ಪ ಹೆಚ್ಚು ಕಡಮೆ ಹಾಗೇ ಇದ್ದಿತು. ಆದರೆ ಕೋಟಿಲ್ಲದಿದ್ದರೂ ಗಾಡಿಪದಗಳಿಗೆ ದರಿದ್ರವಿರಲಿಲ್ಲ. ಒಬ್ಬ ಗಾಡಿಯುವನು ಒಂದು ಪದವನ್ನು ಹೇಳಿದರೆ 'ಮತ್ತೊಬ್ಬನು ಮತ್ತೊಂದು ಪದದಿಂದ 'ಜವಾಬ್' ಕೊಡುತ್ತಿದ್ದನು.

ಬಂಡೀಯ ತರಿಸೀರಿ ಹಿಂಡೆತ್ತ ಹಿಡಿಸೀರಿ
ಬಂಡಿಗೆ ಬಟ್ಟ ಇಡಿಸೀರಿ
ಬಂಡೀಗೆ ಬಟ್ಟ ಇಡಿಸೀರಿ ಗಟ್ಟದ
ಬಂಡಿ ಹರಿದವು ಊರ ಹೊರಗಾಗಿ

ಹೂಡೋದು ಹೊಸಬಂಡಿ ಹೊಡೆಯೋನು ಹೊಸಮಗ
ಲಾಲಿಸಿ ಕೇಳೋ ಬಸವಣ್ಣ
ಲಾಲಿಸಿ ಕೇಳೊ ಬಸವಣ್ಣ ನಿನ ಬಂಡಿ
ಭೂಮಿ ತಲ್ಲಣಿಸಿ ಹರಿದಾವೊ

ಬಂದಿದ್ದ ಎತ್ತುಗಳು ಬಲವಾಗಿದ್ದಂತೆ ಗಾಡಿ ಹೊಡೆಯುವವರೂ ಬಲವಾಗಿಯೇ ಇದ್ದರು. ಅವರೆಲ್ಲಾ ಪಡ್ಡೆ ಹುಡುಗರು, ಉತ್ಸಾಹಿಗಳು.

ಬಂಡಿ ಬಂಡಿ ಚೆಂದ ಬಂಡಿಯ ನೊಗ ಚಂದ
ಮುಂದ್ಲೋಟೇರಿ ಚಂದ ಮಕರೀಗೆ
ಮುಂದ್ಲೋಟೇರಿ ಚಂದ ಮಕರೀಗೆ ಗಟ್ಟಕೆ
ಬಂಡಿ ಹೊಡೆಯೋವನ ಮುಖ ಚೆಂದ

ಕಬ್ಬು ಕಾರುಳ್ಳವನೆ ಹುಬ್ಬು ನೇರುಳ್ಳವನೆ
ಗೊಬ್ಬರದ ಗಾಡಿ ಹೊಡೆಯುವವನೆ
ಗೊಬ್ಬರದ ಗಾಡಿ ಹೊಡೆಯೋ ನೀ ಅಣ್ಣಯ್ಯ
ಹುಬ್ಬು ತಿದ್ದ್ಯವ್ಳೆ ಸಿರಿಲಕ್ಷ್ಮಿ

ಆ ಗೊಬ್ಬರದ ಗಾಡಿಗಳೆಲ್ಲ ಈಗ ಅರಮನೆಯ ಗಾಡಿಗಳಂತಾಗಿದ್ದುವು.

ಸುಮಾರು ಬೆಳಗಿನ ಜಾವದ ಹೊತ್ತಿಗೆ ಮುನ್ನೂರು ಗಾಡಿಗಳು ಸೇರಿದವು. ಅವೇ ಒಂದು ದೊಡ್ಡ ಜಾತ್ರೆಯಂತೆ ತೋರಿತು. ಎಲ್ಲಿಂದ ಎಲ್ಲಿವರೆಗೆ ನೋಡಿದರೂ ಗಟ್ಟದ ಗಾಡಿಗಳೆ!

ಆರುಸಾವಿರ ಜಂಡಿ ಧೂಳದ್ದು ಹೋಗುವಾಗ
ಧೂಳು ಮುಟ್ಯಾತೆ ಮುಗಿಲೀಗೆ
ಧೂಳು ಮುಟ್ಯಾತೆ ಮುಗಿಲಿಗೆ ಬಸವನ
ಗೋಳು ಮುಟ್ಯಾತೆ ಶಿವನೀಗೆ

ಬೆಳಗಾಗುವ ವೇಳೆಗೆ ಗಾಡಿಗಳೆಲ್ಲಾ ಮಾರನಾಯ್ಕನ ಹಳ್ಳಿಯನ್ನು ಮುಟ್ಟಿದವು. ಅದು ಬರೀ ಒಕ್ಕಲಿಗರ ಊರು. ಅಲ್ಲಿಯ ಜನರಿಗೆ ಈ ಗಾಡಿಗಳನ್ನೂ ಗಾಡಿ ಹೊಡೆಯುವವರನ್ನೂ ಕಂಡರೆ ಏನು ಉತ್ಸಾಹ! ಗಟ್ಟಕ್ಕೆ ಹೊರಡುವ ಎತ್ತುಗಳಿಗೂ, ಗಾಡಿಗಳಿಗೂ ಅಲ್ಲಿ ಒಕ್ಕಲುಗಿತ್ತಿಯರಿಂದ ಪೂಜೆಯಾಗುತ್ತದೆ. ಗಾಡಿಯವರೆಲ್ಲಾ ಊರಮುಂದಲ ಹನುಮಂತರಾಯನಿಗೆ ಅಲ್ಲಿ ಹಣ್ಣು ಕಾಯಿ ಮಾಡಿಸುತ್ತಾರೆ. ಗಟ್ಟದಿಂದ ಬರುವಾಗಲೂ ಇಲ್ಲಿ ಹನುಮಂತರಾಯನಿಗೆ ಹಣ್ಣು ಕಾಯಿ ಆಗುತ್ತಂತೆ. ವಾಪಸು ಬರುವಾಗಲೂ ಹೀಗೆ ನದೀ ತೀರದಲ್ಲಿ ಗಾಡಿ ಬಿಟ್ಟುಕೊಂಡು ಸುಧಾರಿಸಿಕೊಂಡು ಎತ್ತುಗಳ ಮೈಯ್ಯನ್ನೂ ತಮ್ಮ ಮೈಯನ್ನೂ ಚೆನ್ನಾಗಿ ತೊಳೆದುಕೊಂಡು ಗಾಡಿಯವರು ಅವರವರ ಊರಿಗೆ ಮುಟ್ಟುತ್ತಾರೆ ಎಂದು ಸಣ್ಣಪ್ಪ ಹೇಳಿದ.

ನಾನು ನಿಮ್ಮ ಊರು ಹೆಂಗಸರನ್ನು ನೋಡಿ "ಅವರು ಎಷ್ಟು ಚೀಕಲು. ಒಬ್ಬರಾದರೂ ಕೈಕಾಲು ಬೀಸಿಕೊಂಡು ಗಟ್ಟಿಗಡತವಾಗಿ ಇಲ್ಲವಲ್ಲ" ಎಂಬುದಾಗಿ ಹೇಳುತ್ತಿದ್ದುದು ಸರಿಯುಷ್ಟೆ. ಆದರೆ ಅದು ಕೇವಲ ನಿಮ್ಮ ಬ್ರಾಹ್ಮಣರಿಗೆ ಅನ್ವಯಿಸುವ ಮಾತು. ನಿಮ್ಮ ಊರು ಬ್ರಾಹ್ಮಣರ ಪೈಕಿ ಪೂರ್ಣವಾಗಿ ಬೆಳೆದ ಒಬ್ಬ ಹೆಂಗಸನ್ನೂ ನಾನು ನೋಡಲಿಲ್ಲ. ೧೫-೧೬ ವರುಷಕ್ಕೇ ಅವರ ಬೆಳವಣಿಗೆ ನಿಂತುಹೋಗುತ್ತದೆ. ಆದರೆ ಮಾರನಾಯಕನಹಳ್ಳಿ ಒಕ್ಕಲಿಗರ ಹೆಂಗಸರು ಒಳ್ಳೆ ಜೋರಾಗಿದ್ದಾರೆ; ಬೈಲಹಳ್ಳಿಯವರಂತೆ! ಒಟ್ಟಿನಲ್ಲಿ ಒಕ್ಕಲಿಗರ ಹೆಂಗಸರು ನಿಮ್ಮ ಹೆಂಗಸರಿಗಿಂತ ಹೆಚ್ಚು ತ್ರಾಣವುಳ್ಳವರು. ಮರಳು ಕಾಡಿನಲ್ಲಿಯೂ ನೀರನ್ನು ಹುಟ್ಟಿಸುವ ಶೂರರಾದ ಶಕ್ತರಾದ ದೃಢಕಾಯರಾದ ಮಕ್ಕಳು ಹುಟ್ಟಬೇಕಾದರೆ ಅವರಿಗೇನೆ.

ಮಾರನಾಯಕನ ಊರ ಮುಂದೆ ಭಾರಿ ತೋಪು ಇರುವದು ಸರಿಯುಷ್ಟೆ. ಆ ತೋಪಿನಲ್ಲಿ ಮರಗಳಿಗೆ ಎರಡು ತೂಗೇಣಿಗಳು ಯಾವಾಗಲೂ ಕಟ್ಟಿರುತ್ತವೆ.

ಅಲ್ಲಿ ದನಗಳನ್ನು ಕಾಯುವ ಹೆಂಗಸರೂ, ಗಂಡಸರೂ ಏಣಿಯ ಮೇಲೆ ಯಾವಾಗಲೂ ತೂಗಾಡುತ್ತಿರುತ್ತಾರೆ. ಅದಕ್ಕೆ ಊರುಮುಂದಲ ಉಯ್ಯಾಲೆ ಎಂದೇ ಹೆಸರು. ಒಂದು ಉಯ್ಯಾಲೆಯಂತೂ ಬಹಳ ಎತ್ತರದಲ್ಲಿದೆ. ನೋಡಿದರೇ ಭಯವಾಗುತ್ತದೆ. ಅಷ್ಟು ಎತ್ತರದಲ್ಲಿ ತೂಗುವಾಗ ಏನಾದರೂ ಅಪಾಯವಾದರೂ ಎಂಬ ಗಾಬರಿ ನಮಗೆ ಉಂಟಾಗುತ್ತದೆ. ಆದರೆ ಉಯ್ಯಾಲೆ ಆಡುವವರಿಗೆ ಅದರ ಖುಷಿಯ ಹೊರತು ಮತ್ತೇನೂ ಅನುಭವವಾಗುವಂತೆ ತೋರುವುದಿಲ್ಲ.

ತೋಪಿನ ಕೆಳಗೆ ಒಂದೇ ಗಳಿಗೆ ಗಾಡಿಗಳನ್ನು ನಿಲ್ಲಿಸಿದ್ದರು. ಎರಡು ಉಯ್ಯಾಲೆಗಳ ಮೇಲೂ ಒಂದು ಕಡೆ ಹುಡುಗರೂ ಮತ್ತೊಂದು ಕಡೆ ಹುಡುಗಿಯರೂ ಕುಳಿತು ಆಡುತ್ತಿದ್ದರು. ಪ್ರತಿಯೊಂದು ಸಲ ಮೀಟುವಾಗಲೂ ಹುಡುಗಿಯರು ಒಂದು ನುಡಿ ಹಾಡನ್ನು ಹೇಳುತ್ತಾ ಭರ್ ಎಂದು ಏಣಿಯನ್ನು ತೂರುತ್ತಿದ್ದರು. ಆ ಹಾಡಿನ ನುಡಿಗಳ ಪದ ಮಾಧುರ್ಯವನ್ನು ಕಂಡು ನಾನು ಬೆರಗಾದೆ. ಗಂಡಸರು ಹೇಳುತ್ತಿದ್ದ ನುಡಿಗಳು ಕೆಲವು ಇಲ್ಲಿವೆ—

ಉಯ್ಯಾಲೆ ನಾಡೋಳೆ ಉಯ್ಯಾಲೆ ಪಾಡೋಳೆ ಉಯ್ಯಾಲೆ ಸಣ್ಣ ದನಿಯೋಳೆ
ಜೀಕಾಲೆ ನಾಡೋಳೆ ಜೀಕಾಲೆ ಪಾಡೋಳೆ ಜೀಕಾಳೆ ಸಣ್ಣ ದನಿಯೋಳೆ
ಮಾವಿನ ಮರದಡಿ ಮಾನಿದ್ರೆ ಮಾಡೋಳೆ ಮಾರುದ್ದ ಮಂಡೆ ಮುಡಿಯೋಳೆ
ಬೀದಿ ಮನೆಯೋಳೆ ಬೀಸಣಿಗೆ ನೆರಿಗ್ಯೋಳೆ ಜಾಜಿಸೂವಿನ ಮುಡಿಯೋಳೆ
ಕಾಡುಗಣ್ಣಿನೋಳೆ ಕೂಡಿದ ಹುಬ್ಬಿನೋಳೆ ಕೋಡೀಲಿ ನೀರವೊಗೆಯೋಳೆ
ಪಿಲ್ಲಿ ಕಾಲಿನೋಳೆ ಚೆಲ್ಲಿದ ನೆರಿಗಯೋಳೆ ತಲ್ಲಣಿಸಿ ನೀರವೊಗೆಯೋಳೆ
ಹಾಸನದ ಹಾದೀಲಿ ಕ್ಯಾಸಕ್ಕಿ ತೊಳಿಸೋಳೆ ದಾಸ್ವಾಣದ್ಹೂವಿನ ನೆರಿಗ್ಯೋಳೆ
ಪಟ್ಟಣದ ಹಾದೀಲಿ ಕುಟ್ಟಕ್ಕಿ ತೊಳಸೋಳೆ ಪಟ್ಟೆಸೀರೆಯನುಡುವೋಳೆ
ಉತ್ತಾ ಹೊಲದಲ್ಲಿ ಪತ್ತಾರೆ ಕುಯ್ಯೋಳೆ ಮುತ್ತಿಕ್ಕಿದ ಓಲೆ ಕಿವಿಯೋಳೆ
ಹರಗಿದ ಹೊಲದಲ್ಲಿ ಮರಗುವ ಕುಯ್ಯೋಳೆ ಹರಳಿಕ್ಕಿದ್ವಾಲೆ ಕಿವಿಯೋಳೆ
ಕೈಯ್ಯ ಕಂಕಣದೋಳೆ ಮೈಯ ಭೂಷಣದೋಳೆ ವೈಯಾರಿ ಸಣ್ಣ ದನಿಯೋಳೆ

ಹುಡುಗಿಯರೂ ಕೂಡ ಇದಕ್ಕೆ ಪ್ರತಿಯಾಗಿ ಅಲ್ಲಲ್ಲೆ ಹಾಡುತ್ತಿದ್ದರು. ಆ ನುಡಿಗಳೆಲ್ಲಾ ನನಗೆ ಚೆನ್ನಾಗಿ ತಿಳಿಯಲಿಲ್ಲ. ಒಂದೆರಡು ನುಡಿಗಳು ಮಾತ್ರ ಜ್ಞಾಪಕವಿದೆ.

ಉದ್ದೀನ್ಕಾಯ್ನ್ಹಂಗೆ ತಿದ್ದಿದ ನೀಲಿನಾಮ ವಿಪ್ರರ ಬೀದಿಂದ ಬರುವ್ರೋನೆ
ಬಾಳೆಕಾಯ್ನ್ಹಂಗೆ ತೋಳಲಿ ನೀಲಿ ನಾಮ ಬಾಲೇರ ಬೀದೀದ ಬರುವ್ರೋನೆ
ಎಳನೀರು ಪುಜ್ಜನ ಎದೆಯಲ್ಲಿ ತಂಬೂರಿ ತೆಲುಗಾರ ಬೀದಿಂದ ಬರವ್ರೋನೆ

ಆ ಹಾಡುಗಳನ್ನೆಲ್ಲಾ ಕೇಳುತ್ತಾ ನಾವು ಗಾಡಿಗಳನ್ನು ಬಿಟ್ಟುಕೊಂಡು ಮುಂದೆ

ನಡೆದೆವು.

ನೀವು, ಹಳ್ಳಿಯಲ್ಲಿ ಕೈಕಾಲು ಧೂಳು ತುಂಬಿಕೊಂಡು ಗಡ್ಡ ಮೀಸೆ ಬೆಳೆದು ಮುಖ ಜೋಲು ಬಿದ್ದಿದ್ದರೆ ಗಟ್ಟಕ್ಕೆ ಹೋಗಿ ಬಂದವನಂತೆ ಕಾಣುತ್ತೀಯಲ್ಲೊ ಎಂದು ಹಾಸ್ಯ ಮಾಡುತ್ತಾ ಇದ್ದಿರಿ. ಆ ಅದರ ಅರ್ಥ ನನಗೆ ಅಷ್ಟು ಚೆನ್ನಾಗಿ ತಿಳಿದಿರಲಿಲ್ಲ. ಗಟ್ಟದ ದಾರಿ ಬಲು ಕೆಟ್ಟದಾರಿ. ದಾರಿಯಲ್ಲಿ 'ಚಡಾವು ಉತಾರು ಇಳಾಲು' ಬಹಳ ಜಾಸ್ತಿ. ರಸ್ತೆ ಉದ್ದಕ್ಕೂ ಹಳ್ಳ ಕೊಳ್ಳ. ದಾರಿ ಬೆಟ್ಟದ ಮೇಲೆ ಹಾವಿನಂತೆ ಬಳಸಿಕೊಂಡು ಹೋಗುತ್ತದೆ. ರಸ್ತೆಯ ಎರಡು ಕಡೆಗಳಲ್ಲಿಯೂ ನೂರಾರು ಅಡಿ ಆಳದ ಕಮರಿಗಳು. ಇಂತಹ ದಾರಿಯಲ್ಲಿ ಹಿಂದಲ ಎತ್ತುಗಳು ಮುಂದಲ ಎತ್ತುಗಳನ್ನು ನೋಡಿಕೊಂಡು ಆಚೆ ಈಚೆ ತಿರುಗದೆ ಹೋಗುತ್ತವೆ. ಆ ದಾರೀಲಿ ಗಾಡಿ ಕುಲುಕಾಡುವುದು ಹೆಚ್ಚು. ಕುಲಕಾಡಿ ಗಾಡಿಯವನ ಮೈಯೆಲ್ಲ ನೋವಾಗುತ್ತದೆ. ಆ ರಸ್ತೆಯ ಧೂಳು, ದೀರ್ಘ ಪ್ರಯಾಣ ಕುಲುಕಾಟ ಇವು ಗಟ್ಟಕ್ಕೆ ಹೋಗಿ ಬಂದವನನ್ನೂ, ಎತ್ತುಗಳನ್ನೂ ಹಣ್ಣು ಮಾಡುತ್ತವೆ.

ಒಂದೊಂದು ಸಲ ಎತ್ತು ಎಷ್ಟೇ ಜೋರಾಗಿರಲಿ, ಚಡಾವಿನಲ್ಲಿ ಮುಂದಕ್ಕೆ ಹೋಗದೆ ನಿಂತುಬಿಡುತ್ತಿದ್ದಿತು. ಆಗ ಎತ್ತು ಗಾಡಿಯವನ ಯಾವ ಏಟಿಗೂ ಹೆದರುತ್ತಿರಲಿಲ್ಲ. ಆಗ ಪಾಪ ಗಾಡಿಯವನ ಪೇಚಾಟ ಹೇಳುವುದಕ್ಕಿಲ್ಲ. ಎತ್ತುಗಳು ಪದೆ ಪದೆ 'ಕಣೆಹಾಕಿ' ಬಿಡುತ್ತಿದ್ದವು. (ಈ ಪದಗಳನ್ನೆಲ್ಲಾ ನಾನು ಸಣ್ಣಪ್ಪನಿಂದ ಕಲಿತೆ. ನಿಮಗೆ ತಿಳಿದೇ ಇದೆ.)

ಬಂದಿಕಾರಣ್ಣನ ಬೀಡಾಟ ನೋಡಿರೊ
  ಬಾರು ಕೋಲವನ ಬಲಗೈಲಿ
ಬಾರು ಕೋಲವನ ಬಲಗೈಲಿ ಹಿಡಕೋಡು
  ಬೋರಾಡಿ ಬಂಡಿ ಹೊಡೆದವನೆ

ಸ್ವಾಮಿ, ಗಟ್ಟದ ದಾರೀಲಿ ರೈತ ಅಡಿಗೆ ಮಾಡುವುದಿಲ್ಲ. ಮೊದಲು ಸಣ್ಣಪ್ಪ ನನಗೆ ಆ ಮಾತನ್ನು ಹೇಳಿದಾಗ ನಾನು ನಂಬಲಿಲ್ಲ. ಆದರೆ ಈಚೆಗೆ ನಂಬಬೇಕಾಯಿತು. ರೈತರೆಲ್ಲಾ ಊರಿನಿಂದ ಬರುವಾಗಲೆ ಒಂದೊಂದು ಗಂಟು ರೊಟ್ಟಿಯನ್ನು ಮಾಡಿಕೊಂಡು ಬಂದಿದ್ದರು. ಆ ರೊಟ್ಟಿಗಳಿಗೆ ಗಟ್ಟದ ರೊಟ್ಟಿಗಳೆಂದೇ ಹೆಸರು. ಆ ರೊಟ್ಟಿಗಳು ಒಂದು ತಿಂಗಳಕಾಲ ಕೆಡದೆ ನಿಂತುದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಒಕ್ಕಲಿಗರು ಆ ರೊಟ್ಟಿಗಳನ್ನು ಗಟ್ಟಕ್ಕೆ ಹೋಗು

ವಾಗ ಮಾತ್ರ ಮಾಡುತ್ತಾರಂತೆ. ನವಧಾನ್ಯಗಳನ್ನು ಒಂದು ಅಳತೆಯಲ್ಲಿ ಸೇರಿಸಿ ಅದಕ್ಕೆ ತಕ್ಕಷ್ಟು ಮೆಣಸು, ಜೀರಿಗೆ, ಉಪ್ಪು, ಸೇರಿಸಿ ಆ ರೊಟ್ಟಿಗಳನ್ನು ಮಾಡುತ್ತಾರೆ. ಆ ರೊಟ್ಟಿಯಲ್ಲಿ ನೀರಿನ ಅಂಶ ಸ್ವಲ್ಪವೂ ಇರುವುದಿಲ್ಲ. ಅವು ಘಂ ಎಂದು ಸುವಾಸನೆಯುಳ್ಳವುಗಳಾಗಿರುತ್ತವೆ. ನನಗೆ ದಾರಿಯಲ್ಲಿ ಅಡಿಗೆ ಮಾಡಿಕೊಳ್ಳಲು ಬೇಜಾರಾಗಬಹುದೆಂದು ನೀವು ಹೇಳಲಿಲ್ಲವೆ? ನಿಜ, ಮೊದಲ ದಿವಸವೇ ನನಗೆ ಬೇಜಾರಾಯಿತು. ಮತ್ತು ನನ್ನ ಮೊದಲ ದಿನದ ಅಡಿಗೆಗಿಂತ ಸಣ್ಣಪ್ಪನ ರೊಟ್ಟಿಯೇ ಹೆಚ್ಚು ರುಚಿಯಾಗಿರಬೇಕೆಂದು ನನಗೆ ತೋರಿತು. ನಮ್ಮ ರಂಗಸ್ವಾಮಿ ಹೇಳಿದುದು ಜ್ಞಾಪಕವಿದೆಯೆ ? 'ಘೃತ ಪಕ್ವವಾದುದಕ್ಕೆ ದೋಷವಿಲ್ಲ'; ನೀರು ಯಾವುದರಲ್ಲಿ ಸೇರಿಲ್ಲವೋ ಅದಕ್ಕೆ ದೋಷವಿಲ್ಲ. ರಂಗ ಸ್ವಾಮಿಯು ಒಕ್ಕಲಿಗರ ಮನೆಯ ಸುಣ್ಣದ ಮೇಲೆ, ಮಜ್ಜಿಗೆಯನ್ನು ತೊಟ್ಟಿಸಿ ದರೆ (ಮಜ್ಜಿಗೆಯೂ ಅವರ ಮನೆಯದೆ) ಅದರ ದೋಷ ನಿವಾರಣೆಯಾಯಿ ತೆಂದು ಹೇಳಿ ಉಪಯೋಗಿಸುತ್ತಿದ್ದರಲ್ಲಾ ? ಈ ಗಟ್ಟದ ರೊಟ್ಟಿಗಳಲ್ಲಿ ನೀರಿನ ಅಂಶ ಸುತರಾಂ ಇಲ್ಲ. ಇದ್ದರೆ ಅವು ಒಂದು ತಿಂಗಳು ನಿಲ್ಲುವ ಸಂಭವ ಎಲ್ಲಿ ಯಾದರೂ ಉಂಟೆ? ರುಚಿಯಲ್ಲಿ ಅವು ಚೆನ್ನಾಗಿಲ್ಲದಿದ್ದರೆ ಆ ರೈತ, ಹಗಲೂ ರಾತ್ರಿ ಆ ಗಟ್ಟದ ದಾರಿಯಲ್ಲಿ ದುಡಿಯುವವನು, ಅದನ್ನು ತಿಂದು ಉತ್ಸಾಹಿ ಯಾಗಿರುತ್ತಿದ್ದನೇ ?

ಗಟ್ಟಕೆ ಹೊಯ್ತಿನಿ ಕಟ್ಟೆಣ್ಣೆ ಬುತ್ತೀಯಾ
 ಕಟ್ಬಾಣಿ ಚೆಲುವೆ ಕಡುಚೆಲುವೆ
ಕಟ್ಬಾಣಿ ಚೆಲುವೆ ಕಡುಚೆಲುವೆ ಕಟ್ಟಿದ
 ಬುತ್ತಿ ಪಟ್ಟಣಕೆಲ್ಲ ಪರಿಮಾಳ

ಬಂಡೀಲಿ ಹೊಯ್ತೀನಿ ಗಿಂಡಿ ತಂಬಿಗೆ ತಾರೆ
 ನಂಬಿಕೆ ತಾರೆ ಬಲಗಯ್ಯ
ನಂಬಿಕೆ ತಾರೆ ಬಲಗಯ್ಯ ಮಾವನ ಮಗಳೆ
 ಬಾಸೆಯ ಕೊಡೆ ಬಲಗಯ್ಯ

ಗಟ್ಟಕ್ಕೆ ಹೋಗುವ ಯಾವ ರೈತನೂ ಗಾಡಿಯಲ್ಲಿ ಹೆಚ್ಚು ಸಾಮಾನು ತೆಗೆದು ಕೊಂಡು ಬರುವುದಿಲ್ಲ. ಅವನು ತರುವ ಸಾಮಾನು ಇಷ್ಟೆ. ಒಂದು ಮಚ್ಚು, ಒಂದು ಉಳಿ, ಒಂದು ಅಳತೆಯ ಸೇರು, ಹುರುಳಿ ಮತ್ತು ರೊಟ್ಟಿಯ ಬುತ್ತಿ. ಗಟ್ಟದ ದಾರಿ ಕಷ್ಟದ ದಾರಿಯಾದುದರಿಂದ ರಸ್ತೆಯಲ್ಲಿ ಗಾಡಿಯ ಗೂಟ, ನೊಗ, ಕಮಾನು, ಕಡಾಣಿ ಮುಂತಾದವುಗಳು ಮುರಿಯುವ ಸಂಭವವಿದೆ. ಆಗ ರೈತನಿಗೆ

ನಿಂತಲ್ಲಿ ಗಾಡಿಯನ್ನು ಸರಿಮಾಡಿಕೊಡಲು ಯಾವ ಬಡಗಿಯೂ ಇರುವುದಿಲ್ಲ. ಅಲ್ಲದೆ ಬಡಗಿಗೆ ದುಡ್ಡು ಕೊಡಲು ಅವನಿಗೆ ಸುತರಾಂ ಇಷ್ಟವಿಲ್ಲ. ಪ್ರತಿಯೊಬ್ಬ ಒಕ್ಕಲಿಗನಿಗೂ ನೇಗಲನ್ನು ಕೆತ್ತುವುದು, ಗಾಡಿಯ ಗೂಟ ನೊಗಗಳನ್ನು ಸರಿ ಮಾಡುವುದು ಬಂದೇಬರುತ್ತದೆ. ಒಂದು ಸಲ ಕೇದಗೆಗೆರಿಯ ಹತ್ತಿರ ಸಣ್ಣಪ್ಪನ ಗಾಡಿಯ ನೊಗ ಮುರಿದೇ ಹೋಯಿತು. ಮೋಟಾರು ಕೆಟ್ಟರೆ ನಾಲ್ಕು ಗಂಟೆ ಆರು ಗಂಟೆ ನಿಲ್ಲುತ್ತಲ್ಲ, ಹಾಗೆ ಆಗಬಹುದೆಂದು ನಾನು ನಿರುತ್ಸಾಹದಿಂದ ಕೆಳಗಿಳಿದೆ. ಸಣ್ಣಪ್ಪ ಸ್ವಲ್ಪವೂ ಗಾಬರಿಗೊಳ್ಳಲಿಲ್ಲ. ಅಲ್ಲೆ ಇದ್ದ ಮರವನ್ನು ಹತ್ತಿ ಕೊಂಬೆಗೆ ಮಚ್ಚಿನಿಂದ ಎರಡು ಬಿಟ್ಟ. ಅರ್ಧಗಂಟೆಯೊಳಗಾಗಿ ನೊಗವು ಸಿದ್ಧವಾಗಿ ಎತ್ತುಗಳು ಮೊದಲಿನಂತೆ ಮುಂದೆ ಹೊರಟವು. ರೈತ ಮರೆಯದೆ ಮಚ್ಚನ್ನೂ ಉಳಿಯನ್ನೂ ತೆಗೆದುಕೊಂಡೇ ತೆಗೆದುಕೊಳ್ಳುತ್ತಾನೆ. ಅವನಿಗೆ ದಾರಿಯಲ್ಲಿ ಕುಡಿಯಲು ನೀರು ಬೇಕಾದುದರಿಂದ ನೀರನ್ನು ತೆಗೆದುಕೊಳ್ಳುತ್ತಾನೆ. ನಾನು ಸಣ್ಣಪ್ಪನನ್ನು "ನೀರು ಕುಡಿಯೋಕೆ ಸೇರು ಯಾಕೆ. ಬೇರೆ ಯಾವುದಾದರೂ ಪಾತ್ರೆ ಆಗದೆ" ಎಂಬುದಾಗಿ ಕೇಳಿದೆ. ಅವನು "ಬುದ್ಧಿ, ನಮಗೆ ಸೇರು ಬೇಕೇ ಬೇಕು. ಎತ್ತಿಗೆ ಹುರುಳಿ ಅಳತೆ ಮಾಡಿಯೇ ಹಾಕಬೇಕು. ಅಳತೆ ಮಾಡದೆ ಬರಿ ಬೊಗಸೇಲೂ ಕಣ್ಣ ಅಳತೇಲೂ ಹಾಕೋನು ಸಾಚಾ ಒಕ್ಕಲಿಗನೇ ಅಲ್ಲ. ಹುರಳಿ ಅಳದ ಮೇಲೆ ಅದ್ನೆ ನೀರು ಕುಡಿಯೋಕೆ ಇಟ್ಕೊ ಬಯ್ದು, ಇಲ್ದಿದ್ರೆ ಇನ್ನೊಂದು ಪಾತ್ರೆ ಸುಮ್ನೆ ತರಬೇಕಾಗ್ತದೆ" ಎಂದನು.

ಗಟ್ಟದ ದಾರಿಯಲ್ಲಿ ಸಣ್ಣಪ್ಪ ಮತ್ತು ಇತರ ರೈತರ ಊಟದ ಕ್ರಮ ಈ ರೀತಿ. ಅವರು ತಮಗೆ ರೊಟ್ಟಿ ಎಷ್ಟು ಬೇಕೊ ಅಷ್ಟನ್ನೇ ಮನೆಯಲ್ಲಿ ಲೆಕ್ಕ ಮಾಡಿ, ಮಾಡಿಸಿ ತೆಗೆದುಕೊಂಡು ಬಂದಿರುತ್ತಾರಷ್ಟೆ. ಆ ರೊಟ್ಟಿ ಒಣಗಿ ಕಡಪಾ ಕಲ್ಲಿನಂತೆ ಇರುತ್ತದೆ. ಅದು ಕೆಡದಂತೆ ನಿಲ್ಲಬೇಕಾದರೆ ಅದಕ್ಕೆ ಎಣ್ಣೆ, ತುಪ್ಪ 'ಸುತರಾಂ' ಸೋಕಿಸಕೂಡದು. ಗಾಡಿಯವನು ಆ ರೊಟ್ಟಿಯಲ್ಲಿ ನಿಯಮಿತವಾದ ಭಾಗವನ್ನು ಮಚ್ಚಿನಿಂದ 'ಖಣ್' ಎಂದು ಕತ್ತರಿಸಿ ಕಲ್ಲಿನ ಮೇಲಿಟ್ಟು ಚೆನ್ನಾಗಿ ಪುಡಿಮಾಡುತ್ತಾನೆ. ಆ ಪುಡಿಯನ್ನು ಅರ್ಧ ನೀರಿರುವ ಸೇರಿಗೆ ಹಾಕುತ್ತಾನೆ. ಸ್ವಲ್ಪ ಹೊತ್ತಿಗೆ ಆ ರೊಟ್ಟಿ ಕಷ್ಟದಿಂದ ಅಗಿಯಲು ಸಾಧ್ಯವಾದಷ್ಟು ಮೆತ್ತಗಾಗುತ್ತದೆ. ಅನಂತರ ಗಾಡಿಯವನು ಆ ರೊಟ್ಟಿಯನ್ನು ನಿಧಾನವಾಗಿ ಚೆನ್ನಾಗಿ ಅಗಿದು ತಿಂದು ತಿಂದು ಆ ನೀರನ್ನೆ ಕುಡಿದುಬಿಡುತ್ತಾನೆ. ಅಂತಹ ಗಟ್ಟಿ ಪದಾರ್ಥದಲ್ಲಿ ದೋಷವುಂಟೆ? ಅಂದರೆ ನಾನೇನೊ ಆ ರೊಟ್ಟಿಯನ್ನು ತಿನ್ನಲಿಲ್ಲ.

ಕೊಡಗಿನ ಗಡಿಗೆ ತಲಪುತ್ತಾ ಬಂದಂತೆ ರೈತರ ಉತ್ಸಾಹ ಹೆಚ್ಚುತ್ತದೆ.

ಮಂಗಳೂರು ಹತ್ತಿರವಾಗುತ್ತಾ ಬರುವುದೇ ಅದಕ್ಕೆ ಮುಖ್ಯ ಕಾರಣ. ಆ ಕೊಡಗಿನ ಗಡಿಯಲ್ಲಿಯೂ ಜನರಿಗೆ ಈ ಸಾವಿರಾರು ಬಂಡಿಗಳನ್ನು ಕಂಡರೆ ಉತ್ಸಾಹ. ಅಲ್ಲಿ ಎಷ್ಟೋ ಹೆಂಗಸರು ಒಳ್ಳೆಯ ಗಾಡಿಯ ಎತ್ತುಗಳ ನೆತ್ತಿಗೆ ಕುಂಕುಮ ಅರಸಿನ ಇಟ್ಟು ಅಲಂಕಾರ ಮಾಡಿ ಮೊರದಲ್ಲಿ ಅಕ್ಕಿ ಬೆಲ್ಲ ತಿನ್ನಿಸುತ್ತಾರೆ. ಸಣ್ಣಪ್ಪನ ಎತ್ತುಗಳು ಜೋರು ನೀವು ನೋಡಿಯೇ ಇದ್ದೀರಿ. ಅವುಗಳ ಪೂಜೆ ನಡೆಯಿಸುತ್ತಿರುವಾಗ ಸಣ್ಣಪ್ಪನು—

ಗಟ್ಟಕೆ ಹೋಗೋವು ಎತ್ತೆಲ್ಲ ನಮ್ಮಾವು
  ಗಟ್ಟದ ಕೆಳಗಿನ ಕೊಡಗರು
ಗಟ್ಟದ ಕೆಳಗಿನ ಕೊಡಗರು
  ನಮ್ಮೆತ್ತಿಗಾರತಿ ಬೆಳಗ್ಯಾರು
ಎತ್ತಿಗೆ ಬೆಳಗಿದರೆ ಎತ್ತೇನ ಕೊಟ್ಟಾವು
  ಎತ್ತಿನ ಮೇಲಿರುವ ಘನಸೆಟ್ಟಿ
ಎತ್ತಿನ ಮೇಲಿರುವ ಘನಸೆಟ್ಟಿಗೆ ಬೆಳಗಿದರೆ
  ಓಲೆಗೆ ವಜ್ರದ ಬಿಗಿಸ್ಯಾನು

ಎಂದು ಹಾಡಿದನು. ಗಾಡಿಯವರೆಲ್ಲಾ ಹೊ ಎಂಬುದಾಗಿ ಕೇಕೆ ಹಾಕಿದರು. ಪೂಜೆ ಮಾಡುತ್ತಿದ್ದ ಹುಡುಗಿಯರ ಪೈಕಿ ಬಹು ಜೋರಾದ ಹೆಣ್ಣೊಂದಿತ್ತು. ಅದು.

ಹಾಡು ಹಾಡೋದು ಬಲ್ಲೊ ಹಾಡ ಮುಗಚೋದು ಬಲ್ಲೊ
  ಕಾಡವರೆಕಾಯ ಕುಯಬಲ್ಲೊ
ಕಾಡವರೆಕಾಯ ಕುಯಬಲ್ಲೊ ನಿಮ್ಮೂರ
  ಕೋರ್ಲುಡುಗರ ನಾವು ತರಬಲ್ಲೊ

ಎಂಬುದಾಗಿ ಹಾಡಿತು.

ಕೊಡಗು ನಿಮ್ಮ ಸೀಮೆಗಿಂತ ಮಲೆನಾಡು. ಪ್ರತಿವರುಷವು ಗಟ್ಟಕ್ಕೆ ಗಾಡಿ ಬರುವ ಪರಿಚಯದ ಮೇಲೆ ಈ ಕಡೆಯವರಿಗೂ ನಿಮ್ಮ ಕಡೆಯವರಿಗೂ ಮದುವೆಗಳಾಗುತ್ತವೆಂದು ಸಣ್ಣಪ್ಪ ಹೇಳಿದನು. ಆದರೆ ಸಣ್ಣಪ್ಪನ ಅಭಿಪ್ರಾಯದಲ್ಲಿ ಇಲ್ಲಿಯ ಹುಡುಗಿಯರು ಅತಿ ಗಂಡುಬೀರೆಯರು, ಜೋರಾದ ಆಸಾಮಿಗಳು, ಥಳಕಿನವರೂ ಹೌದು. 'ಮದುವೆಯಾಗದ ಹುಡುಗರು ಗಟ್ಟಕ್ಕೆ ಗಾಡಿ ಹೊಡೆದುಕೊಂಡು ಬಂದರೆ ಅವರು ಹಿಂದಿರುಗುವುದರಲ್ಲಿ ಎಲ್ಲಿ ಒಂದು ಹುಡುಗೀನ ಗಾಡೀಲಿ ಕೂರಿಸಿಕೊಂಡು ಬರುತ್ತಾರೊ ಎಂದು ಗಾಬರಿಯಾಗುತ್ತೆ' ಎಂಬುದಾಗಿ ಸಣ್ಣಪ್ಪ ಹೇಳಿದ. ಸಣ್ಣಪ್ಪನೇ ಮುಂತಾದ ನಿಮ್ಮ ಕಡೆಯವರಿಗೆ ಕೊಡಗರ

ವಿಚಾರದಲ್ಲಿ ಇರುವಂತೆಯೇ ಅವರಿಗೂ ನಿಮ್ಮ ವಿಚಾರದಲ್ಲಿ ನೀವೂ ಮಲೆನಾಡಿನವರೇ ಆದರೂ ಕೊಡಗರು ನಿಮಗಿಂತ ಮಲೆನಾಡಿನಲ್ಲಿರುವುದರಿಂದ ಅವರ ಅಭಿಪ್ರಾಯದಲ್ಲಿ ನೀವು ಮೂಡಸೀಮೆಯವರು. ಕೊಡಗಿನ ಹೆಣ್ಣು ಥಳಕಿನವಳೆಂದು ನೀವು ಹೇಳುವಂತೆಯೇ ಕೊಡಗರೂ ಮೂಡಸೀಮೆಯವರಾದ ನಿಮ್ಮ ಹೆಣ್ಣುಗಳು ಗಂಡುಬೀರಿಯರೆಂದು ಹೇಳುತ್ತಾರೆ.

ಮೂಡಸೀಮೆಯ ಹೆಣ್ಣು ಬೇಡಕಸಣ್ಣಯ್ಯ
 ನೀಡಿದ ಕಾಲ ತೆಗೆಯಾಳು
ನೀಡಿದ ಕಾಲ ತೆಗೆಯಾಳು ಆ ಬಾಲೆ
 ನೆರೆಯರಿಗೆ ಅಂಜಿ ಬಾಳ್ಯಾಳೆ

ಸಣ್ಣಪ್ಪ ಒಂದು ದಿನ ರಾತ್ರಿ—

ಊಟದಾಳು ಹದಿನೇಳು ಸಮಾಳು
 ತೋಟದೊಳು ವನದೊಳು ನಕಾಳು
ಏಳು ವರ್ಷ ಜಗದೊಳ್ ಅಲೆದಾಳು
 ಕೇಳು ನೀನು ನರಸಿಂಗ ದಯಾಳು

ಎಂದು ಹಾಡುತ್ತಿದ್ದ. ನನಗೆ ಸ್ವಲ್ಪಸ್ವಲ್ಪ ನಿದ್ರೆ ಜೊಂಪು ಹತ್ತಿತ್ತು. ಆದರೂ ಎಚ್ಚರವಾಗಿ ಮತ್ತೊಂದು ಸಲ ಆ ಪದವನ್ನೇ ಹಾಡು ಎಂಬುದಾಗಿ ಕೇಳಿದೆ. ಸಣ್ಣಪ್ಪ ಪುನಃ ಹಾಡಿದ. ಅನಂತರ ಅದರ ಅರ್ಥವನ್ನು ಅವನಿಂದ ತಿಳಿದುಕೊಂಡೆ. ಅದರ ಸಾರಾಂಶವಿದು : ಸ್ವಾಮಿ, ನಮ್ಮಪ್ಪನ ಬಾಯಿಂದ ಈ ಪದ ನಾನು ಕೇಳಿದೆ. ಹೋದ ಧಾತು ಸಂವತ್ಸರಕ್ಕೆ ಏಳು ವರ್ಷ ಮುಂಚಿನಿಂದಲೇ ಮಳೆಯಿಲ್ಲದೆ ಕ್ಷಾಮ ಪ್ರಾರಂಭವಾಗಿತ್ತಂತೆ. ಆದರೆ ಧಾತು ಈಶ್ವರಗಳಲ್ಲಿ ಅದರ ಪ್ರಾಬಲ್ಯ ಅತಿಯಾಗಿ ಜನ ಹುಣಸೆ ಬಿತ್ತಾನೂ ಹುಲ್ಲನ್ನೂ ತಿನ್ನಲು ಮೊದಲು ಮಾಡಿದರಂತೆ. ಆಗ ಮಹಾರಾಜರ ಸವಾರಿ ನಮ್ಮೂರ ಕಡೆಗೆ ದಯಮಾಡಿಸಿತಂತೆ. ಮಹಾರಾಜರು ಹೋದ ಕಡೆಯಲ್ಲೆಲ್ಲಾ ಜನರು ಅವರನ್ನು ಪ್ರಾರ್ಥಿಸುತ್ತಿದ್ದರು. ಕಂತೆ ಕಂತೆ ಅರ್ಜಿ ಬರೆದು ಅವರ ಎದುರಿಗೆ ಓದುತ್ತಿದ್ದರು. ಆದರೆ ನಮ್ಮೂರ ದೊಡ್ಡ ಕಾಳಪ್ಪನು ಮಹಾರಾಜರ ಮುಂದೆ ಹೇಳಿದ ಈ ಪದ ಮಹಾರಾಜರ ಮನಸ್ಸಿಗೆ ಬಹಳ ತಟ್ಟಿತು. ಕಾಳನ ಮನೆಯಲ್ಲಿ ಹದಿನೇಳು ಜನ ಇದ್ದರು. ಕಾಳ ಆರೇಳು ವರ್ಷಗಳಿಂದ ಹೊಟ್ಟೆಗಾಗಿ ದೇಶವೆಲ್ಲಾ ಅಲೆಯುತ್ತಿದ್ದ. ಅದನ್ನೇ ಒಂದು ಪದ ಮಾಡಿ ಮಹಾರಾಜರ ಎದುರಿಗೆ ಹಾಡಿದ. ಅಲ್ಲಿಯೇ ಅವನ ದಾರಿದ್ರ್ಯ ನಿವಾರಣೆಯಾಯಿತೆಂದು ಹೇಳಬೇಕಾದುದಿಲ್ಲ.

ದೇವರಲ್ಲಿ ಸಣ್ಣಪ್ಪನ ಭಕ್ತಿ ನಿಮಗೆ ಗೊತ್ತಿದೆ. ಸಣ್ಣಪ್ಪ ಗಟ್ಟದ ದಾರಿ

ಯಲ್ಲಿಯೂ ನಿತ್ಯ ದೇವರ ಪೂಜೆ ತಪ್ಪದೆ ಮಾಡುತ್ತಿದ್ದ. ಅವನು ಕತ್ತಿನಲ್ಲಿ ಕಟ್ಟಿಕೊಂಡಿದ್ದ ಆ ಚೌಕವಲ್ಲಿ ಈ ಕಳಗಿನ ದೇವರುಗಳಿದ್ದವು. ಇಗ್ನ (ವಿಘ್ನೇಶ್ವರ) ಈರ (ವೀರಭದ್ರ) ದೊಣ್ಣೆಕೇಸವ (ಕೇಶವದೇವರು) ಬಳಾಪಿನ ಬಸವ. ಸಣ್ಣಪ್ಪ ಈ ದೇವರುಗಳಿಗೆ ನಮಸ್ಕಾರ ಮಾಡದೆ ಯಾವತ್ತೂ ಊಟ ಮಾಡುತ್ತಿರಲಿಲ್ಲ. ಉಪ್ಪಿನ ಅಂಗಡಿ ಆಚೆ ಒಂದು ಭಾರಿ ಇಳಾಲಿದೆ. ಆ ಇಳಾಲಿನಿಂದ ಎತ್ತುಗಳು ಗಾಡಿಯನ್ನು ಧಡಧಡನೆ ಎಳೆದುಕೊಂಡು ಹೋದುವು. ಸಣ್ಣಪ್ಪನ ಮೈಯೆಲ್ಲಾ ಕುಲುಕಾಡಿತು. ಆ ಇಳಾಲು ಮುಗಿದ ಮೇಲೆ ಅಲ್ಲೊಂದು ಕೊಳದ ಬಳಿ ಗಾಡಿಗಳೆಲ್ಲಾ ತಂಗಿದವು. ಗಾಡಿಯವರೆಲ್ಲಾ ಕೈಕಾಲು ತೊಳೆದುಕೊಂಡು ಸೂರ್ಯನಿಗೆ ಕೈ ಮುಗಿದು ಊಟಕ್ಕೆ ಸಿದ್ಧರಾದರು. ಸಣ್ಣಪ್ಪ ಕತ್ತಿನಲ್ಲಿದ್ದ ದೇವರ ಪೂಜೆ ಮಾಡದೆ ಯಾವತ್ತು ಊಟ ಮಾಡುತ್ತಿರಲಿಲ್ಲ. ಆ ದಿವಸವೂ ಅವನು ದೇವರಿಗೆ ದಣ್ಣಿಕ್ಕಲು ಕತ್ತಿನಲ್ಲಿದ್ದ ಬಟ್ಟೆಯ ಗಂಟನ್ನು ಬಿಚ್ಚಿದ. ಬಿಚ್ಚಿದ ಕೂಡಲೆ ಸಣ್ಣಪ್ಪನಿಗೆ ಗಾಬರಿಯಾಯಿತು. ವಿಘ್ನೇಶ್ವರ, ವೀರಭದ್ರ, ಕೇಶವ ಈ ಮೂರು ದೇವರೂ ಮೊದಲಿನಂತೆ ಇದ್ದು ಬಸವೇಶ್ವರನು ಮಾತ್ರ ಅರ್ಧವಾಗಿದ್ದಂತೆ ತೋರಿತು. ಬಸವೇಶ್ವರನ ಆಕೃತಿಯೆಲ್ಲ ಸವೆದು ಹೋಗಿ ಅದು ನುಣ್ಣನೆಯ ಸಣ್ಣಕಲ್ಲಾಗಿತ್ತು. ಅದನ್ನು ನೋಡಿ ದೈವಭಕ್ತನಾದ ಸಣ್ಣಪ್ಪನ ಮನಸ್ಸು ಪಿಚ್ಚೆಂದಿತು. ಅವನು ಬೈಲಹಳ್ಳಿಯ ಕಾಸೆ ಗಿಡ್ಡನ ಮಗನನ್ನು ಕುರಿತು "ಏ ಮಗಾ ನೋಡ್ದ್ಯಾ ಈ ಇಗ್ಣ ಈರ ದೊಣ್ಣೆಕೇಶವಾ ಮೂರಾಳೂ ಸೇರಿಕೊಂಡು ಬಳಾಪಿನ ಬಸಪ್ಪನ್ನ ನುಣ್ಣಗೆ ಮಾಡುವವರೆಲ್ಲಾ" ಎಂದನು. ವಿಚಾರವೇನೆಂದರೆ ವಿಘ್ನೇಶ್ವರ ವೀರಭದ್ರ ಕೇಶವ ಇವರು ಒರಟು ದೇವರು. ಆದರೆ ಬಳಾಪಿನ ಬಸವನನ್ನು ಮೃದುವಾದ ಬಳಾಪು ಕಲ್ಲಿನಲ್ಲಿ ಚೆನ್ನಾಗಿ ಮಾಡಿರುತ್ತಾರೆ. ಅವರ ಕೈಕಾಲು ಕಣ್ಣು ಕೂಡ ಕಾಣುತ್ತದೆ. ಆದರೆ ಈಗ ಆ ಮೂರು ಒರಟರೂ ಸೇರಿಕೊಂಡು ಬಳಾಪಿನ ಬಸವನನ್ನು ಸಣ್ಣಗೆ ನುಣ್ಣಗೆ ಮಾಡಿದ್ದರು.

ನಾವು ಇಳಿದುಕೊಂಡಿದ್ದ ಕಡೆ ಒಳ್ಳೆ ತಾಳೆ ತೋಟ ಇದ್ದಿತು. ಕೆಂದಾಳೆ ಹೂವು ಅರಳಿ ಘಂ ಎಂದು ವಾಸನೆ ಹೊಡೆಯುತ್ತಿದ್ದಿತು. ಸಣ್ಣಪ್ಪ ಪೂಜೆಗಾಗಿ ಕಾಡುಮಲ್ಲಿಗೆ ಹೂವುಗಳನ್ನು ಹುಡುಕಿಕೊಂಡು ಅಲೆಯುತ್ತಿದ್ದ. ನಾನು ಅವನಿಗೆ ಆ ಅರಳಿದ್ದ ತಾಳೆಯ ಹೂವುಗಳನ್ನು ತೋರಿಸಿದೆ. ಸಣ್ಣಪ್ಪ 'ನಾನು ತಾಳೆ ಹೂವಿನಲ್ಲಿ ಪೂಜೆ ಮಾಡೊಲ್ಲ. ತಾಳೆ ಹೂವು ಶಿವನಿಗೆ ಹೇಳಿಲ್ಲ' ಎಂದುಬಿಟ್ಟ. ಅವನ ಆಚರಣೆಗೆ ಇದೇ ಅವನಿಗೆ ಆಧಾರವಾಗಿರುವ ವೇದವೆಂಬುದು ನನಗೆ ಅನಂತರ ತಿಳಿಯಿತು.

ಒಳ್ಳೆ ತಾಳೆಯ ಹೂವೆ ಮುಳ್ಳಲ್ಲಿ ಮೂಡಿದೆ
ಎಲ್ಲ ದೇವರಿಗೆ ಸಲುವಾದೆ
ಎಲ್ಲ ದೇವರಿಗೆ ಸಲುವಾದೆ ತಾಳೆಯ ಹೂವೆ
ಮಲ್ಲಯ್ಯಗ್ಯಾಕೆ ಮರವಾದೆ
ಮರವಾದೆ ಮರವಾದೆ ಅದು ಒಂದು ಕಾರಣದಿಂದ
ತೊಡಕೀದ ಮುಳ್ಳ ಬಿಡಿಸ್ಹೋದೆ
ತೊಡಕಿಡ ಮುಳ್ಳ ಬಿಡಿಸದಿರೊ ಹೊತ್ತಿಗೆ
ಮಲ್ಲಯ್ನಗೆ ನಾನು ಮರವಾದೆ

ಸ್ವಾಮಿ ಗಾಡಿಯ ಪದಗಳನ್ನು ಕೇಳಬೇಕಾದರೆ ಗಟ್ಟದ ದಾರಿಗೇ ಬರಬೇಕು. ನನಗಂತೂ ದಾರಿಯಲ್ಲಿ ಮೂನ್ನೂರು ಗಾಡಿಯವರೂ ಮೂನ್ನೂರು ತರಹದ ಕವಿಗಳಾಗಿ ತೋರಿದರು. ಒಬ್ಬ ಎಲ್ಲೊ ಒಂದು ಪದ ಹಾಡಿದರೆ ಅರ್ಧ ಪರಲಾಂಗ್ ಮುಂದೆ ಇನ್ನೊಬ್ಬ ಎಲ್ಲೊ ಅದಕ್ಕೆ ಉತ್ತರವನ್ನು ಕೊಡುತ್ತಿದ್ದ. ಅನೇಕ ಪದಗಳ ಮಾತುಗಳು ಸರಿಯಾಗಿ ಅರ್ಥವಾಗುತ್ತಿರಲಿಲ್ಲ. ನೀವು ಅಲ್ಲಿ ಇದ್ದಿದ್ದರೆ ನಿಮಗೆ ಎಲ್ಲಾ ಬಾಯಿಗೇ ಬಂದು ಬಿಡುತ್ತಿದ್ದರಲ್ಲಿ ಸಂದೇಹವಿಲ್ಲ. ಅಲ್ಲಿ ಹಾಡು ಕೇಳುತ್ತಿದ್ದವರೆಲ್ಲಾ ಯುವಕರೆ. ಆದುದರಿಂದ ಅದರಲ್ಲಿ ಶೃಂಗಾರವೇ ಹೆಚ್ಚಾಗಿತ್ತು.

ಚಿಕ್ಕತ್ತೆ ಮಗಳೆ ಚಿನ್ನದುಂಗರದವಳೆ
ಸುತ್ತೇಳ ಪೌಳಿ ಮನೆಯವಳೆ
ಸುತ್ತೇಳ ಪೌಳಿ ಮನೆಯವಳೆ ನನ ಹೆಣ್ಣೆ
ಸುತ್ತಿ ಬರತೀನಿ ದನಿದೋರೆ
ದನಿಹೆಂಗೆ ತೋರಲಿ ಕದಹೆಂಗೆ ತೆಗೆಯಲಿ
ಮಗ್ಗಲಲಿ ಮನಗವನೆ ಮನೆ ಪುರುಸ
ಮಗ್ಗಲಲಿ ಮನಗವನೆ ಮನೆ ಪುರುಸ ನೀ
ಮುಗ್ಗಾಗಿ ಬಾರೋ ತುರುಬೀಗೆ
ಸಂತೇಗ್ಹೋಗೋಣ ಬಾರೆ ಸಣ್ಣನಾಮದ ಹೆಣ್ಣೆ
ಸಂಜೆಯಾದಾತಾವ ತಳಗೋನ
ಸಂಜೆಯಾದಾತಾವ ತಳಗೋನ ನಿನ್ನ
ಸಣ್ಣನಾಮಾವೆಲ್ಲ ಬೆವರಾತು
ಹಸನಾದ ಹೆಣ್ಣೆ ಹಸಿರುತೋಟಕೆ ಬಾರೇ
ರಸಮೆಟ್ಟಿದಲೆಯ ಕುಯಿಸೇನು
ರಸಮೆಟ್ಟಿದೆಲೆಯ ಕುಯಿಸೇನು ಎಲೆ ಹೆಣ್ಣೆ
ಹಸನಾದ ನಗೆಯ ನಗಿಸೇನು

ಕಲ್ಲಮೇಲೆ ಕಲ್ಲೊಡ್ಡಿ ಮಲ್ಲಿಗೆ ಕುಯ್ಯುವಳೆ
 ನಿಲ್ಲಲ್ಲೆ ಹೇಳೆ ಮಾತುಂಟು
ನಿಲ್ಲಲೇ ಹೇಳೆ ಮಾತುಂಟು ನೀ ಕೂದ
 ಸಣ್ಣ ಮಲ್ಲಿಗೆ ಸರಿಪಾಲು

ಕುಂಬಾರನ ಕುಟ್ಟಾಡಿ ಗುಂಬ ಮಾಡೋದ ಕಲಿತೆ
 ಎಲೆಯ ತೋಟದ ಬಣಜಿಗ
ಎಲೆಯ ತೋಟದ ಬಣಜಿಗನ ಕುಟ್ಟಾಡಿ
 ಎಲೆಗೊಂದು ಹಾಡ ಕಲಿತೇನು

ಸಂತೆ ದಾರೀಲಿ ಸಾಲು ಗೋಣಿಯಮರ
 ಕಳುಹಿ ಬರುವಾಗ ಕಣ್ಣೀರು ಕಣ್ಣೀರು
ಕಳುಹಿ ಬರುವಾಗ ಕಣ್ಣೀರು
 ಜಾಲಾದ ಹೂವಾಗಿ ಸುರಿದಾವು

ಆಯಿತಾರ ಸಂತೇಲಿ ಅಗ್ಗೀನೆ ತಗ್ಗೀನೆ
 ಬಗ್ಗಿ ಸಣ್ಣಕ್ಕಿ ಆಳೆವವಳೇ
ಬಗ್ಗಿ ಸಣ್ಣಕ್ಕಿ ಅಳೆವವಳೆ ಮಡಲಲ್ಲಿ
 ಹುಬ್ಬು ಹಾಕ್ಯಾವೆ ಚಿಗುರೆಲೆ

ಕಾಡುಗಣ್ಣಿನವಳೆ ಕೂಡಿದ್ದುಬ್ಬಿನವಳೇ
 ಕೋಡೀಲಿ ನೀರ ಮಗೆಯುವಳೇ
ಕೋಡೀಲಿ ನೀರ ಮಗೆಯೋ ಬಾಲೇಯ ಕಂಡು
 ಕೋಗಿಲೆ ಮೇವ ಮರೆತಾವೋ

ನೀರಿಗ್ಹೋಗೋಳೆ ನೀಲದುಂಗುರದವಳೇ
 ವೈಯ್ಯಾರಿ ಸಣ್ಣ ದನಿಯವಳೇ
ವೈಯ್ಯಾರಿ ಸಣ್ಣ ದನಿಯ ಮಾವನ ಮಗಳೆ
 ವೈಯ್ಯಾರ ಬಿಟ್ಟು ತೆರ ಹೇಳೆ

ಕೂಡಿದರೆ ಕೂಡಬೇಕು ಕುಪ್ಪಳ್ಳಿ ಹುಡುಗನ
 ಕುಪ್ಪಳಿಸಿ ಕುದುರೆ ನೆಗೆಸೋನ
ಕುಪ್ಪಳಿಸಿ ಕುದುರೆ ನೆಗೆಸೋನ ಕೂಡಿದರೆ
 ಕೊಪ್ಪು ಬಂಗಾರ ದರಿಸ್ಯಾನು

ಹೋರಿಮೇಲೆ ಕೂತುಕೊಂಡು ಕೋರುಡಿಗಿನಾ ಕಂಡೆ
 ಊರು ವಸಿಯಂತ ಮೊಗದವಳ
ಊರು ವಸಿಯಂತ ಮೊಗದವಳನಾ ಕಂಡು
 ಹೋರಿ ಹೊಡೆಯೋಕೆ ಮನಸಿಲ್ಲ

ಕಗ್ಗಲ್ಲ ಕಣಿವೇಲಿ ಚುಜ್ಜಲ ಬೋರೇಲಿ
ಕದ್ದು ಬತ್ತೀನಿ ನಿನಗಾಗಿ
ಕದ್ದು ಬತ್ತೀನಿ ನಿನಗಾಗಿ ಮಾವನ ಮಗಳೆ
ಕಗ್ಗಲ್ಲ ಕುಟಿಕಿ ದನಿತೋರೆ

ಚಿನ್ನನ ಕುಟ್ವಾಡಿ ಗೆಂಡೆ ಕೀಳೋದು ಕಲಿಕೆ
ಹಬ್ಬಿಗೆಲಿ ಮರೆತೆ ಹವಳಾವ
ಹಬ್ಬಿಗೆಲಿ ಮರೆತೆ ಹವಳಾವ ಗೆಳೆಯುನ
ಮಗ್ಗಲಲ್ಲಿ ಮರೆತೆ ಚವಲೀಯ

ಚಿನ್ನದ ಚೀಲಕ್ಕೆ ರನ್ನದ ಬಾಯ್ದಾರ
ನಿನ್ನಂತನೊಬ್ಬ ಗೆಣೆಕಾರ
ನಿನ್ನಂತನೊಬ್ಬ ಗೆಣೆಕಾರನ ಕುಟ್ವಾಡಿ
ನೆನ್ನಿಂದ ನೀರ ತರಲಿಲ್ಲ

ಆಕಳಿಕೆ ತೂಕಳಿಕೆ ದೇವಲೋಕದ ಕನಸು
ಯಾವ ರಾಣಿ ಕಾಣೆ ನೆನೆದಾಳೊ
ಯಾವ ರಾಣಿ ಕಾಣೆ ನೆನೆದಾಳೊ ಮೈಸೂರು
ದೊರೆಸಾನಿ ನಮ್ಮ ಕರಸ್ಯಾಳು

ಪಳ್ಳಿಕಾತರ ಹುಡುಗ ಇಳ್ಳಿದ್ದು ಬರುವಾಗ
ಬೆಳ್ಳಿ ಉಂಗುರದ ಬೆಳಕೀಗೆ
ಬೆಳ್ಳಿ ಉಂಗುರದ ಬೆಳಕೀಲೆ ಬರುವಾಗ
ಬೆಳ್ಳಕ್ಕಿ ಹಿಂಡು ಬೆದರ್‍ಯಾವೊ

ಕಾಕು ಹಾಕುತ ಬಂದ ಕಡೆಯುಬಾಗಿಲ ಗೆಣೆಯ
ಉದ್ದೂರ ಸೀಮೆ ದೊರೆ ಮಗ
ಉದ್ದೂರ ಸೀಮೆ ದೊರೆ ಮಗ ಹಾಕಿದ
ಕಾಕು ಕಡೆಬಾಗಿಲಿಗೆ ಕದವಾದೋ

ದಂಡೀಸ ಹಾದೀಲಿ ಗೊಂಡೇವ ಮಾರುವಳೆ
ಕೋಂಡು ಕೊಂಡೇನು ಬೆಲೆ ಹೇಳೆ
ಕೋಂಡು ಕೊಂಡೇನು ಬೆಲೆ ಹೇಳೆ ಮಾವನ ಮಗಳೇ
ತಂದುಕೊಂಡೇನು ತೆರಹೇಳೆ

ಅರಕಲಗೂಡು ಪೇಟೆಯುವಳೆ ನೆರಕೆಯು ಮನೆಯುವಳೆ
ಸರಕೆಂದರೆ ಕದವ ತೆಗೆಯುವಳೆ
ಸರಕೆಂದರೆ ಕದವ ತೆಗೆಯೊ ಮಾವನ ಮಗಳೆ
ಸೈಕನೆ ನಿನ್ನ ಗೆಳೆತನ

ಕೆಂಪಿನ ಹೆಣ್ಣಿಗೂ ಸಂಪಿಗೆಯು ಹೂವಿಗೂ
ಅಂತರಾಟದಲ್ಲಿರುವ ಹುಣಸೇಯು
ಅಂತರಾಟದಲ್ಲಿರುವ ಹುಣಸೇಯು ಚಿಗುರಿಗೂ
ಎಂತವರು ಬಾಯಿ ಬಿಡುವಾರು

ಆದರೆ ನಿಮ್ಮ ಸಣ್ಣಪ್ಪನಿಗೆ ಈ ಹಾಡುಗಳಲ್ಲಿ ಅಷ್ಟು ಉತ್ಸಾಹವಿರಲಿಲ್ಲ. ಈ ಹಾಡುಗಳೊಂದಕ್ಕೂ ಅವನು ಪ್ರತಿ ಹಾಡನ್ನೂ ಹೇಳುತ್ತಿರಲಿಲ್ಲ. ಅವನ ಹಾಡೆಲ್ಲ ನೀತಿಯ ಪದಗಳೇ.

ಸೂಳೆಗೆ ಹೋದವನು ಏನಾದ ಎಂತಾದ
ಕಾಡುನಾಯಾದ ಕಪಿಯಾದ
ಕಾಡು ನಾಯಾದ ಕಪಿಯಾದ ಆ ಮುರುವ
ಸೂಳೆಕಾಲಿಗೆ ಕೆರವಾದ

ಗಂಡನುಳ್ಳ ಗರತಿಯು ಸಂಗವ್ಯಾಕಣಯ್ಯ
ಅವಳಂಗ ಬೇರೆ ಗುಣ ಬೇರೆ
ಅವಳಂಗ ಬೇರೆ ಗುಣ ಬೇರೆ ಅಡಕೆಯ
ಹೊಂಬಾಳೆ ಬೇರೆ ಸುಳಿ ಬೇರೆ

ಹರವು ತಪ್ಪಿದ ಮೇಲೆ ಹವಳದುಂಗುರವ್ಯಾಕೊ
ನೆರೆ ಬಂದ ಮೇಲೆ ಕೊನವ್ಯಾಕೊ
ನೆರೆ ಬಂದ ಮೇಲೆ ಕೊನೆವ್ಯಾಕೊ ಎಲೆ ಮುರುವ
ಜೋಳದರಿ ಬಿದ್ದಮೇಲೆ ಕವಣ್ಯಾಕೊ

ಗಂಡನ ಕಾಣೆರೋ ಗೇಡ್ಹೊಟ್ಟೆ ಮುರುವಾನ
ಉಂಡೇಳು ಮನೆ ತಿರುಗುವನ
ಉಂಡೇಳು ಮನೆ ತಿರುಗೊ ಗಂಡಯ್ಯನ
ಕುಂಡೋದರು ನಿನ್ನೆ ಬರದಲ್ಲಿ

ಗಂಡಸತ್ತವಳಿಗೆ ಎಂಟೆಂಟು ದಿನ ಸಂತೆ
ಹಣತೆಯ ಎಣ್ಣೆ ಬೊಕ್ಕುತಲೆ
ಹಣತೆಯ ಎಣ್ಣೆ ಬೊಕ್ಕುತಲೆ ತಕೋಂಡು
ಬಾಳೊ ಹುಡುಗರ ಬಾಳ ಹರಿದಾಳೊ

ಮುಕ್ಕ ನೀಕೇಳೋ ಮೂದೇವಿ ನೀಕೇಳೊ
ಬಿಚ್ಚೋಲೆಗ್ಯಾಕೆ ಬಿಡಿಮುತ್ತು
ಬಿಚ್ಚೋಲೆಗ್ಯಾಕೆ ಬಿಡಿಮುತ್ತು ಸಣ್ಣಮುತ್ತು
ಬಿಟ್ಟ ಹೆಣ್ಣಿನ ಸಂಗ ನಿನಗ್ಯಾಕೊ

ನಾಯಿನೇರಿಲಹಣ್ಣು ನಾಲಿಗೆಗೆ ಕಡುರುಚಿ
ಕೊಂಬೆ ಜಾರಿದರೆ ದುಸುಮಾನ
ಕೊಂಬೆ ಜಾರಿದರೆ ದುಸುಮಾನ ಮೇಗಳ ಕೇರಿ
ರಂಭೆಗಾಡಿದವನ ತಲೆ ಎರವು

ಆದರೆ ಸಣ್ಣಪ್ಪನಿಗೆ ದೇವರ ಹಾಡುಗಳು ಈ ನೀತಿ ಹಾಡುಗಳಿಗಿಂತ ಪ್ರಿಯವಾಗಿದ್ದವು. ಅವನು ನಿತ್ಯ ಈ ಪದವನ್ನು ಹೇಳದೇ ಇರುತ್ತಿರಲಿಲ್ಲ.

ಆರು ಹೇಳಿದರೇನು ಮೂರು ಹೇಳಿದರೇನು
ನಾರಾಯಣಸಾಮಿ ನೆನೆ(ಯು)ದಂತ
ನಾರಾಯಣಸಾಮಿ ನೆನೆ(ಯು)ದಂತ ಪದಗಳ
ನೂರೆಂಟು ಹೇಳಿ ಫಲವೇನು

ಮುಂಗೋಳಿ ಕೂಗ್ಯಾವು ಮೂಡ ಕೆಂಪೇರ್ಯಾವು
ನಾರಾಯಣಸ್ವಾಮಿ ರಥವೇರಿ
ನಾರಾಯಣಸ್ವಾಮಿ ರಥವೇರಿ ಬರುವಾಗ
ನಾವೆದ್ದು ಕೈಯ್ಯ ಮುಗಿದೇವು

ಈ ಪದಗಳೆಲ್ಲ ನಿಮಗೆ ತಿಳಿಯದವುಗಳಲ್ಲ. ನನಗೆ ತಿಳಿದಿದೆ ಎಂಬುದನ್ನು ತೋರಿಸುವುದಕ್ಕೆ ಬರೆದಿದ್ದೇನೆ. ವಿಚಾರಗಳನ್ನು ದಿಕ್ಕಾಪಾಲಾಗಿ ನನಗೆ ತೋರಿದಂತೆ ಬರೆದಿದ್ದೇನೆ. ಇಂತಹ ಸಾವಿರಾರು ಪದಗಳನ್ನು ಸಣ್ಣಪ್ಪ ಹಾಡಬಲ್ಲ. ನೀವು ಅವುಗಳನ್ನೆಲ್ಲಾ ಶೇಖರಿಸಿ ನನಗೆ ಕಳುಹಿಸಿ. ವಿರಾಮವಾದಾಗ ಹಾಡಿಕೊಳ್ಳುತ್ತೇನೆ. ನನ್ನ ಇಪ್ಪತ್ತು ವರ್ಷದ ಅನುಭವದಲ್ಲಿ ನೂರಾರು ಗ್ರಾಮಗಳನ್ನು ನೋಡಿದ್ದೇನೆ, ಅಳೆದಿದ್ದೇನೆ. ಎಲ್ಲ ಕಡೆಯೂ ಒಂದೇ ಸಮ ಒಂದೇ ಗೋಳು, ಒಂದೇ ದಾರಿದ್ರ್ಯ, ಒಂದೇ ಕೊಳಕು, ಅಜ್ಞಾನ. ಬೈಲಹಳ್ಳಿಯಲ್ಲೂ ಅದೇ ಅಜ್ಞಾನ, ಅದೇ ಗೋಳು. ಆದರೆ ನಿಮ್ಮ ಉತ್ಸಾಹದಿಂದ ಆ ಗೋಳು ಸ್ವಲ್ಪ ತಲೆ ತಗ್ಗಿಸಿತು. ಅಳುವುದಕ್ಕೆ ಸಾವಿರ ಕಾರಣಗಳಿದ್ದು ನಗುವುದಕ್ಕೆ ಒಂದು ಕಾರಣವಿದ್ದರೆ ಆಒಂದು ಕಾರಣವನ್ನೇ ನೀವು ಬಲಪಡಿಸಿ ನಗುತ್ತಿದ್ದೀರಿ. ನೋವು ಗೋಳುಗಳು ಹಿಂದೆ ಹೊಂಚು ಹಾಕುತ್ತಿರುವ ನಗೆಯನ್ನು ಹಿಡಿಯುವುದೇ ಜೀವನದ ತಿರುಳು. ಅದೇ ನಮ್ಮ ಮುಂದಲ ಉತ್ಸಾಹಕ್ಕೆ ದಾರಿ. ಲೋಕವನ್ನು ಸೃಷ್ಟಿಸಿದ ಭಗವಂತನ ಗುರಿಯೂ ಅದೇ ಅಂತ ಕಾಣುತ್ತದೆ. ಅದನ್ನು ನೀವು ನನಗೆ ತೋರಿಸಿದ ದಾರಿಯನ್ನು ನಾನೆಂದೂ ಮರೆಯಲಾರೆ. ನೀವು ನನ್ನನ್ನು ಮರೆತರೂ ಮರೆಯಬಹುದು. ನಾನೇನೋ ಈ ಪ್ರಯಾಣ,

ನಿಮ್ಮೂರು, ಈ ಪದಗಳು, ಆ ಕತೆಗಳು, ಸುಬ್ಬೇಗೌಡ, ಸಣ್ಣಪ್ಪ ಯಾರನ್ನೂ ಮರೆಯುವಂತೆ ಇಲ್ಲ. ಕೊನೆಯಲ್ಲಿ ಸಣ್ಣಪ್ಪ ಹೇಳಿದ ಈ ಪದವನ್ನೂ ಮರೆಯುವಂತಿಲ್ಲ.

ಅಂದಕೆ ಅರಕಲ್ಗೂಡು ಚಂದಕೆ ನರಸೀಪುರ
ಚಿತ್ತರದ ಗೊಂಬೆ ಗೊರವೂರು
ಚಿತ್ತರದ ಗೊಂಬೆ ಗೊರವೂರು ಬೀದಿಯ
ಹದಿನಾರು ತೇರು ಹರಿದಾವು.

●

......ಬೈಲಹಳ್ಳಿ ಸರ್ವೆಯಲ್ಲಿ ಶ್ರೀ ಅಯ್ಯಂಗಾರ್ಯರು ಈ ಅಂಶಗಳನ್ನು ಮನೋಜ್ಞವಾಗಿ ವಿವರಿಸಿದ್ದಾರೆ. ಬರೆದಿರುವುದು ಪ್ರಬಂಧವಲ್ಲ; ಅನುಭವ ವಿವರಣೆ. ಹೇಳಿರುವುದು ಕತೆಯಲ್ಲ; ಸಹಜಸ್ಥಿತಿ, ಅನುಭವ ರಸಾಯನ. ಹಳ್ಳಿಯವರ ಜೀವನದಲ್ಲಿರುವ ಜೀವ ಪರಿಚಯ ಮಾಡಿಕೊಡುತ್ತಿದೆ ಬೈಲಹಳ್ಳಿ ಸರ್ವೆ. ಹಳ್ಳಿಯವರೊಡನೆ ಬೆರೆತು ಅವರ ಜೀವನದ ಗತಿಯರಿಯಲು ದುಡಿಯುವ ಮಹನೀಯರು ಪದಗಳಿಗಾಗಿ ಸಂಕಟಪಡಬೇಕಾದುದಿಲ್ಲ. ಶ್ರೀ ಅಯ್ಯಂಗಾರ್ಯರ ಈ ಗ್ರಂಥವೇ ಉದಾಹರಣೆ. ಇಂತಹ ಗ್ರಂಥಗಳಿಂದ ಪಾರಿಭಾಷಿಕ ಮತ್ತು ಪರ್ಯಾಯ ಪದಗಳಿಗೆ ನಮ್ಮವರು ಪಡುತ್ತಿರುವ ತೊಂದರೆಯೂ ಬಹಳ ಮಟ್ಟಿಗೆ ನಿವಾರಣೆಯಾಗುತ್ತದೆ.

ಶ್ರೀ ಅಯ್ಯಂಗಾರ್ಯರು ತಾವು ಕೈಕೊಂಡ ಕೆಲಸವನ್ನು ಎಷ್ಟು ದಕ್ಷತೆಯಿಂದ ಚತುರತೆಯಿಂದ ನಿರ್ವಹಿಸಬಲ್ಲರೆಂಬುದಕ್ಕೆ ಈ ಹೊತ್ತಿಗೆಯೇ ಸಾಕ್ಷಿ. ಹಳ್ಳಿಯ ಜೀವನದಲ್ಲಿ ಅವರು ಕಂಡಿರುವ ಉಜ್ವಲ ಬೆಳಕು. ಸಾಹಿತಿಗಳ ಜೀವನ ಕನ್ನಡ ಸಂಸ್ಕೃತಿ ಸ್ವರೂಪವನ್ನು ಸಂದರ್ಶಿಸಲು ತವಕಪಡುತ್ತಿರುವವರಿಗೆ ಅಮರಜ್ಯೋತಿ.

— ತಿರುಮಲೆ ತಾತಾಚಾರ್ಯ ಶರ್ಮ

'ಬೈಲಹಳ್ಳಿ ಸರ್ವೆ'ಯು ಹಳ್ಳಿಗರ ಸಂಸ್ಕೃತಿಯ ಕೈಪಿಡಿಯಾಗಿದೆ. ಗೊರೂರರ ಗ್ರಂಥಗಳಲ್ಲಿ ಚಿತ್ರಿತವಾದ ಹಳ್ಳಿಗರ ಭಾವ, ಭಾಷೆ, ವಿಚಾರ, ನಂಬಿಕೆ ಅನುಭವಗಳೂ ಹಾಗೂ ಸ್ವಭಾವ ನಿರೂಪಣ, ಹಾಸ್ಯದ ಬುಗ್ಗೆಗಳೂ ಆಧುನಿಕ ಕನ್ನಡ ಸಾಹಿತ್ಯಕ್ಕೆ ಉತ್ತಮ ಕಾಣಿಕೆಗಳಾಗಿವೆ.

— ಸ. ಸ. ಮಾಳವಾಡ

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009